
ಸಾಹಿತ್ಯ ದಾಸೋಹ – ೨೧೦

ಸಂಚಿಕೆ ೩೪ – ಮಾರ್ಚ್ ೨೦೨೩


೧೧.೦೨.೨೦೨೩ರ ದಾಸೋಹದ ಬರಹಗಳ ಸಂಕಲನ

ಎಚ್ಚೆಸ್ಕೆ ಬೆಳಕು – ೮ ಪುಸ್ತಕ ಬಿಡುಗಡೆ





ಖೋ ಕಾದಂಬರಿ ಬಿಡುಗಡೆ







ಸಮನ್ವಯ ಸಮಿತಿ * ಕನ್ನಡವೇ ಸತ್ಯ

ನೋಡಿಯೋ ಸಾಹಿತ್ಯ ವೇದಿಕೆ

ಪ್ರಾ. ಎಚ್ಚೆಸ್ಕೆಯವರಿಗೆ ನಮ್ಮ ನಮನ



ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

ಸಾಹಿತ್ಯ ದಾಸೋಹ 210ರಲ್ಲಿ ಪ್ರಸ್ತುತಪಡಿಸಲಾದ ಎಲ್ಲ ಬರಹಗಳು ಹಾಗೂ ಸಾಹಿತ್ಯ ದಾಸೋಹ 209 ಮತ್ತು 210ರ ನಡುವೆ ನಡೆದ ವಿವಿಧ ಕಾರ್ಯಕ್ರಮಗಳ ವಿವರಗಳುಳ್ಳ ಸಂಚಿಕೆ ಇಲ್ಲಿದೆ.

210ನೆಯ ಸಾಹಿತ್ಯ ದಾಸೋಹವು 11 ನೆಯ ಫೆಬ್ರವರಿ 2023ರಂದು ಶನಿವಾರ ನಮ್ಮ ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ಅಂತರಜಾಲ ಮುಖೇನ ನಡೆಯಿತು. ದಾಸೋಹದ ಅಧ್ಯಕ್ಷತೆಯನ್ನು ಲೇಖಕ, ಕವಿ ಶ್ರೀ ಪೋಲೇನಹಳ್ಳಿ ಎಸ್. ರಮೇಶ್ ಅವರು ವಹಿಸಿದ್ದರು. ಒಟ್ಟು 19 ಜನ ಲೇಖಕರು ತಮ್ಮ ವಿವಿಧ ಪ್ರಸ್ತುತಿಗಳನ್ನು ಮಂಡಿಸಿದರು.

ಈ ಬಾರಿಯ ವಿಶೇಷವೆಂದರೆ ಒಂದು ತಿಂಗಳಿನ ಅವಧಿಯಲ್ಲಿ ದಾಸೋಹ ಮಾತ್ರವಲ್ಲದೆ ಇತರ ಮೂರು ಪ್ರಮುಖ ಕಾರ್ಯಕ್ರಮಗಳು ನಡೆದವು. ಅವುಗಳೆಂದರೆ, ನಮ್ಮ ವೇದಿಕೆಯ 27 ಲೇಖಕರು, ಒಟ್ಟು 27 ಅಧ್ಯಾಯಗಳಲ್ಲಿ ರಚಿಸಿದ 'ಪಲ್ಲಟ' ಖೋ ಕಾದಂಬರಿಯ ಬಿಡುಗಡೆ ಸಮಾರಂಭ ಮತ್ತು ನಮ್ಮೆಲ್ಲರ ಗುರುಗಳೂ, ಸದಾ ಸ್ಮರಣೀಯರೂ ಆದ ಪ್ರಾಚಾರ್ಯ ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್ಚೆಸ್ಕೆ) ಅವರ ಸ್ಮರಣಾರ್ಥ ಪ್ರತಿ ವರ್ಷವೂ ನಡೆಸುವ 'ಎಚ್ಚೆಸ್ಕೆ ಬೆಳಕು' ಕಾರ್ಯಕ್ರಮ. ಈ ಸಂದರ್ಭದಲ್ಲಿ ನಮ್ಮ ಕೋರಿಕೆಯ ಮೇರೆಗೆ ಡಾ. ಪ್ರಧಾನ ಗುರುದತ್ತರು ರಚಿಸಿದ "ಎಚ್ಚೆಸ್ಕೆ ಬದುಕು–ಬರೆಹ–ಸಂದರ್ಶನ' ಎಂಬ ಬೃಹತ್ ಕೃತಿಯ ಲೋಕಾರ್ಪಣೆಗೊಂಡಿತು. ಇದಲ್ಲದೆ ನಮ್ಮ ವೇದಿಕೆಯ ಸದಸ್ಯರಾದ ಶ್ರೀಮತಿ ಸರಸ್ವತಿ ನಟರಾಜ್ ಅವರು ರಚಿಸಿದ ವಿಶಿಷ್ಟ ಕಾದಂಬರಿ 'ಸೊನ್ನೆ ಮತ್ತು ಒಂದು' ಕೃತಿಯ ಬಿಡುಗಡೆಯೂ ಈ ತಿಂಗಳು ನಡೆಯಿತು. ಈ ಎಲ್ಲ ಕಾರ್ಯಕ್ರಮಗಳ ವರದಿಗಳು, ಚಿತ್ರಗಳು ಹಾಗೂ ಕೃತಿಗಳ ಪರಿಚಯವನ್ನು ಈ ಸಂಚಿಕೆಯಲ್ಲಿ ನೀಡಲಾಗಿದೆ.

ಸಾಹಿತ್ಯ ದಾಸೋಹದ ಅಧ್ಯಕ್ಷತೆಯನ್ನು ವಹಿಸಿ, ದಾಸೋಹದಲ್ಲಿ ಓದಲಾದ ಎಲ್ಲ ಬರಹಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ವಿವರವಾಗಿ ದಾಖಲಿಸಿದ ಶ್ರೀ ಪೋಲೇನಹಳ್ಳಿ ಎಸ್.ರಮೇಶ್ ಅವರಿಗೂ, ಎಲ್ಲ ಲೇಖಕರಿಗೂ, ದಾಸೋಹ ಮತ್ತು ಇತರ ಸಮಾರಂಭಗಳನ್ನು ಯಶಸ್ವಿಯಾಗಿ ನಡೆಸಲು ಸಹಕರಿಸಿದ ಎಲ್ಲ ಸದಸ್ಯರಿಗೂ ಹಾಗೂ ಈ ಸಂಚಿಕೆಯನ್ನು ರೂಪಿಸಿದ ಶ್ರೀ ಎಸ್.ಶೃಂಗೇಶ್ವರ ಶರ್ಮ ಅವರಿಗೂ ಸಂಚಾಲಕ ಸಮಿತಿಯು ಆಭಾರಿಯಾಗಿದೆ.

ಈ ಸಂಚಿಕೆಯ ಬಗ್ಗೆ ಓದುಗರ ಸಲಹೆ, ಅಭಿಪ್ರಾಯಗಳಿಗೆ ಸದಾ ಸ್ವಾಗತ.

ಧನ್ಯವಾದಗಳು.

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ದಾಸೋಹ ವೇದಿಕೆ, ಬೆಂಗಳೂರು 25.03..2023

ದಾಸೋಹದ ಪುಟಗಳಲ್ಲಿ ...

ಸಮನ್ವಯ ಸಮಿತಿ - ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ 210

ಕಾರ್ಯಕ್ರಮ ವರದಿ: ಎಸ್.ಶೃಂಗೇಶ್ವರ ಶರ್ಮ

210ನೇ ಸಾಹಿತ್ಯ ದಾಸೋಹವು 11, ಫೆಬ್ರವರಿ 2023ರಂದು ಶನಿವಾರ ಮಧ್ಯಾಹ್ನ 3.30ಕ್ಕೆ 'ನೋಡಿಯೋ ಸಾಹಿತ್ಯ ದಾಸೋಹ' ಅಂತರಜಾಲ ವೇದಿಕೆಯಲ್ಲಿ ಆರಂಭವಾಯಿತು. ದಾಸೋಹದ ಅಧ್ಯಕ್ಷತೆಯನ್ನು ಶ್ರೀ ಪೋಲೇನಹಳ್ಳಿ ಎಸ್.ರಮೇಶ್ ಅವರು ವಹಿಸಿದ್ದರು.

ಸಾಹಿತ್ಯ ದಾಸೋಹದ ಸಂಚಾಲಕರಾದ ಶ್ರೀ ಕೆ.ಎನ್. ಮಹಾಬಲ ಅವರು, ಅಧ್ಯಕ್ಷತೆ ವಹಿಸಿರುವ ಶ್ರೀ ಪೋಲೇನಹಳ್ಳಿ ರಮೇಶ್ ಅವರನ್ನು ಸ್ವಾಗತಿಸಿ ಪರಿಚಯಿಸಿದರು. ಮದರಾಸಿನ ಐಐಟಿಯಲ್ಲಿ ಎಂ.ಟೆಕ್ ಪದವಿ ಪಡೆದ ನಂತರ ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್‌ನಲ್ಲಿ ತಮ್ಮ ವೃತ್ತಿ ಜೀವನ ಆರಂಭಿಸಿದ ರಮೇಶ್ ಅವರು, ಮಲೇಷ್ಯಾದ ಬ್ರಿಟಿಷ್ ಏರ್‌ವೇಸ್ ಸಂಸ್ಥೆಯಲ್ಲಿ ಉನ್ನತ ಹುದ್ದೆಯಲ್ಲಿ ಸೇವೆ ಸಲ್ಲಿಸಿದ್ದು, ಪ್ರಸಕ್ತ ಬೆಂಗಳೂರಿನ ಡೈನಾಮೆಟಿಕ್ ಏರೋಸ್ಪೇಸ್ ಸಂಸ್ಥೆಯಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದಾರೆ. ಕಾರ್ಪೋರೇಟ್ ಮೀಡಿಯಾ ಹಾಗೂ ಹಲವು ಚಲನಚಿತ್ರಗಳಿಗೆ ಚಿತ್ರಕಥೆ ಬರೆಯುವುದರ ಮೂಲಕ ಸಾಹಿತ್ಯದಲ್ಲಿ ತೊಡಗಿಕೊಂಡ ಅವರು ಪ್ರಧಾನವಾಗಿ ಓರ್ವ ಕವಿ. ಈಗಾಗಲೇ ಎರಡು ಕವನ ಸಂಕಲನಗಳನ್ನು ಪ್ರಕಟಿಸಿರುವ ರಮೇಶ್, ನಮ್ಮ ವೇದಿಕೆಯಲ್ಲಿ ಸದಾ ಸಕ್ರಿಯರಾಗಿದ್ದು, ಇಂದಿನ ದಾಸೋಹದ ಅಧ್ಯಕ್ಷರಾಗಿ ಎಲ್ಲರ ಪ್ರಸ್ತುತಿಗಳನ್ನು ವಿಶ್ಲೇಷಿಸಲಿರುವುದು ಸಂತಸದ ಸಂಗತಿ ಎಂದ ಮಹಾಬಲ ಅವರು, ದಾಸೋಹದಲ್ಲಿ ಭಾಗವಹಿಸಿರುವ ಎಲ್ಲ ಪ್ರಸ್ತುತಿಕಾರರನ್ನೂ, ವೀಕ್ಷಕರನ್ನೂ ಸ್ವಾಗತಿಸಿದರು.



ನಂತರ ಪ್ರಾಸ್ತಾವಿಕ ನುಡಿಗಳನ್ನಾಡಿದ ಪ್ರಧಾನ ಸಂಚಾಲಕ ಶ್ರೀ ಬೆಂ.ಶ್ರೀ.ರವೀಂದ್ರ ಅವರು, ನಮ್ಮ ವೇದಿಕೆಯ ಬಹಳ ದಿನಗಳ ಶ್ರಮ ಒಂದೊಂದಾಗಿ ಫಲ ಕೊಡುತ್ತಿದ್ದು, ಮುಂದಿನ ಒಂದು ತಿಂಗಳಲ್ಲಿ ಎರಡು ಪ್ರಮುಖ ಸಭಾ ಕಾರ್ಯಕ್ರಮಗಳು ನಡೆಯಲಿವೆ. ಮೊದಲನೆಯದಾಗಿ ಕಳೆದ ವರ್ಷ ಇದೇ ವೇಳೆಗೆ ವೇದಿಕೆಯ 27 ಲೇಖಕರು ಪ್ರತಿ ವಾರಕ್ಕೊಂದರಂತೆ 27 ಅಧ್ಯಾಯಗಳಲ್ಲಿ ರಚಿಸಿದ 'ಪಲ್ಲಟ' ಖೋ ಕಾದಂಬರಿಯು ಫೆಬ್ರವರಿ 26ರಂದು ಬಿಡುಗಡೆ ಆಗಲಿದೆ. ಕನ್ನಡ ಸಾರಸ್ವತ ಲೋಕದಲ್ಲಿ ಖೋ ಕಾದಂಬರಿ ರಚನೆಯ ಪ್ರಯೋಗವು ಹೊಸತೇನಲ್ಲ. ಆದರೆ 27 ವಿವಿಧ ದೃಷ್ಟಿಕೋನವುಳ್ಳ ಲೇಖಕರು ಒಂದೇ ಕಾದಂಬರಿಯ ರಚನೆಯಲ್ಲಿ ತೊಡಗಿರುವುದು ಒಂದು ದಾಖಲೆಯೇ ಸರಿ. ಖೋ ಕಾದಂಬರಿ ಸಂಚಾಲಕ ಸಮಿತಿ ಸದಸ್ಯರು ಅಪಾರ ಶ್ರಮವಹಿಸಿ, ಪ್ರತಿ ವಾರವೂ ನಿಗದಿತ

ದಿನದಂದು ನಿಗದಿತ ಲೇಖಕರಿಂದ ಬರಹವನ್ನು ತರಿಸಿಕೊಂಡು, ವಿವಿಧ ಲೇಖಕರಿಂದ ರೂಪುಗೊಂಡ ಇಡೀ ಕಾದಂಬರಿ ಒಂದೇ ಎಳೆಯಲ್ಲಿ ಬರುವಂತೆ ಸಾಕಾರಗೊಳಿಸಿರುವುದನ್ನು ಶ್ಲಾಘಿಸಿದರು. ಕಾದಂಬರಿಯನ್ನು ಸ್ನೇಹಾ ಪಬ್ಲಿಷರ್ಸ್‌ನ ಶ್ರೀ ಪರಶಿವಪ್ಪ ಅವರು ಪ್ರಕಟಿಸಲು ಒಪ್ಪಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು.

ಸಮನ್ವಯ ಸಮಿತಿಯ ಎಲ್ಲಾ ಚಟುವಟಿಕೆಗಳಿಗೂ ಪ್ರೇರಕ ಶಕ್ತಿಯೂ, ನಮ್ಮೆಲ್ಲರ ಗುರುಗಳೂ ಆದ ಪ್ರಾಚಾರ್ಯ ಎಚ್.ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್ಚೆಸ್ಕೆ) ಅವರ ಬದುಕು-ಬರಹಗಳನ್ನು ಕುರಿತ ಪುಸ್ತಕವನ್ನು ಹೊರತರಬೇಕು ಎಂಬ ನಮ್ಮ ಹಲವು ವರ್ಷಗಳ ಕನಸು ಈಗ ನನಸಾಗುತ್ತಿದೆ. ಎಚ್ಚೆಸ್ಕೆಯವರಿಗೆ ತುಂಬಾ ಆತ್ಮೀಯರಾದ ಡಾ.ಪ್ರಧಾನ್ ಗುರುದತ್ತ ಅವರು ನಮ್ಮ ಕೋರಿಕೆಯ ಮೇರೆಗೆ ಸುಮಾರು 500 ಪುಟಗಳ 'ಎಚ್ಚೆಸ್ಕೆ ಬದುಕು-ಬರಹ-ಸಂದರ್ಶನ' ಎಂಬ ಬೃಹತ್ ಗ್ರಂಥವನ್ನು ರಚಿಸಿದ್ದು ಅದನ್ನು ರಾಜ್ಯದ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಯಾದ ಸಪ್ನ ಬುಕ್ ಹೌಸ್ ಅವರು ಪ್ರಕಟಿಸಲಿದ್ದಾರೆ. ಪ್ರತಿ ಬಾರಿಯಂತೆ ಈ ಬಾರಿಯೂ 11ನೆಯ ಮಾರ್ಚ್ 2023ರಂದು ನಡೆಯಲಿರುವ 'ಎಚ್ಚೆಸ್ಕೆ ಬೆಳಕು-8' ಕಾರ್ಯಕ್ರಮದಲ್ಲಿ ಪುಸ್ತಕ ಬಿಡುಗಡೆಯಾಗಲಿದೆ. ಸಮಾರಂಭದ ರೂಪುರೇಷೆಗಳನ್ನು ಅಂತಿಮಗೊಳಿಸಲಾಗುತ್ತಿದ್ದು, ವಿವರಗಳನ್ನು ವೇದಿಕೆಯಲ್ಲಿ ಪ್ರಕಟಿಸಲಾಗುವುದು ಎಂದ ರವೀಂದ್ರ ಅವರು, ಖೋ ಕಾದಂಬರಿ ಬಿಡುಗಡೆ ಹಾಗೂ ಎಚ್ಚೆಸ್ಕೆ ಬೆಳಕು ಈ ಎರಡೂ ಕಾರ್ಯಕ್ರಮಗಳು ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ಜರುಗಲಿದ್ದು, ಈ ಎರಡೂ ಸಮಾರಂಭಗಳಲ್ಲಿ ವೇದಿಕೆಯ ಸದಸ್ಯರೆಲ್ಲರೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು. .

ಇದಲ್ಲದೆ, ನಮ್ಮ ವೇದಿಕೆಯ ಸದಸ್ಯರಾದ ಶ್ರೀಮತಿ ಸರಸ್ವತಿ ನಟರಾಜ್ ಅವರು ರಚಿಸಿದ 'ಸೊನ್ನೆ ಮತ್ತು ಒಂದು' ಎಂಬ ವಿಭಿನ್ನ ರೀತಿಯ ಕಾದಂಬರಿಯನ್ನು ನಮ್ಮ ವೇದಿಕೆಯ ಇನ್ನೊಬ್ಬ ಸದಸ್ಯರೂ, ಪ್ರಮುಖ ಕಾದಂಬರಿಕಾರರೂ ಆದ ಶ್ರೀ ಶಶಿಧರ ಹಾಲಾಡಿಯವರು, 19ನೆಯ ಫೆಬ್ರವರಿ 2023ರಂದು ಸಂಜೆ 5.00 ಗಂಟೆಗೆ ಬಿಡುಗಡೆ ಮಾಡಲಿದ್ದಾರೆ. ಶ್ರೀ ಕೆ.ಎನ್. ಮಹಾಬಲ ಅವರು ಕೃತಿಯ ಬಗ್ಗೆ ಮಾತನಾಡಲಿದ್ದಾರೆ. ನಮ್ಮ 'ನೋಡಿಯೋ ಸಾಹಿತ್ಯ ದಾಸೋಹ'ವೇದಿಕೆಯಲ್ಲಿ ಅಂತರ್ಜಾಲ ಮುಖೇನ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ವೇದಿಕೆಯ ಸದಸ್ಯರೆಲ್ಲರೂ ಪಾಲ್ಗೊಂಡು ಕೃತಿ ರಚನೆಕಾರರನ್ನು ಪ್ರೋತ್ಸಾಹಿಸಬೇಕು ಎಂದೂ ರವೀಂದ್ರ ಕೋರಿದರು.

ನಂತರ 19 ಜನ ದಾಸೋಹಿಗಳು ತಮ್ಮ ಸ್ವರಚಿತ ಬರಹಗಳನ್ನು ಪ್ರಸ್ತುತಿಪಡಿಸಿದರು. ದಾಸೋಹದ ಅಧ್ಯಕ್ಷತೆ ವಹಿಸಿದ್ದ ಶ್ರೀ ಪೋಲೇನಹಳ್ಳಿ ಎಸ್.ರಮೇಶ್ ಅವರು ಪ್ರತಿಯೊಂದು ಪ್ರಸ್ತುತಿಗಳನ್ನೂ ವಿಶ್ಲೇಷಿಸಿ, ಇಲ್ಲಿನ ರಚನೆಗಳಲ್ಲಿ ನೋವು-ನಲಿವು, ಬಡವ-ಶ್ರೀಮಂತ, ಮೇಲು-ಕೀಳು, ಗಂಡು-ಹೆಣ್ಣು ಹೀಗೆ ಹಲವು ಜಿಜ್ಞಾಸೆಗಳ ಸುತ್ತ ಹೆಣೆದ ಸಮಾಜಮುಖಿ ರಚನೆಗಳಿದ್ದು, ಎಲ್ಲವನ್ನು ಪ್ರಶ್ನಿಸುವ, ವಿಶ್ಲೇಷಿಸುವ ಮನೋಧರ್ಮದ, ಎಲ್ಲ ಸಂವೇದನೆಗಳಿಗೆ ಸ್ಪಂದಿಸುವ ವಿವಿಧ ರಚನೆಗಳನ್ನು ಓದಿ ಆನಂದಿಸಿದ್ದೇನೆ. ಇಲ್ಲಿನ ಬರಹಗಳಲ್ಲಿ ಮನುಷ್ಯನ ಅತಿಸೂಕ್ಷ್ಮ ಭಾವನೆಗಳು ಅಭಿವ್ಯಕ್ತಗೊಂಡಿವೆ ಎಂದು ತಿಳಿಸಿದರು.

ಕೊನೆಯಲ್ಲಿ ಶ್ರೀ ಗುರುರಾಜ ಶಾಸ್ತ್ರಿಯವರು 'ಸಾಹಿತ್ಯ ದಾಸೋಹ 209'ರ ಮಾಸಿಕ ಸಂಚಿಕೆಯನ್ನು ಪಿಡಿಎಫ್ ರೂಪದಲ್ಲಿ ಬಿಡುಗಡೆ ಮಾಡಿದರಲ್ಲದೆ, ದಾಸೋಹದ ಅಧ್ಯಕ್ಷತೆ ವಹಿಸಿದ ಶ್ರೀ ಪೋಲೇನಹಳ್ಳಿ ರಮೇಶ್ ಅವರಿಗೆ ಎಲ್ಲ ಪ್ರಸ್ತುತಿಕಾರರಿಗೆ, ಸಂಚಾಲಕರಿಗೆ ಮತ್ತು ತಾಂತ್ರಿಕ ಸಹಾಯ ನೀಡಿದವರಿಗೆ ವಂದನೆಗಳನ್ನು ಸಲ್ಲಿಸಿದರು.


***

ಸಮನ್ವಯ ಸಮಿತಿ - ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

'ಪಲ್ಲಟ' ಖೋ ಕಾದಂಬರಿ:ಮುಖಪುಟ ಭಿತ್ತಿಚಿತ್ರ ಅನಾವರಣ

– ಕಾರ್ಯಕ್ರಮ ವರದಿ: ಮಹಾಬಲ

ನಮ್ಮ ವೇದಿಕೆಯ ಹೆಮ್ಮೆಯ ಸೃಷ್ಟಿ, "ಪಲ್ಲಟ" ಖೋ ಕಾದಂಬರಿಯ ಮುಖಪುಟದ ಭಿತ್ತಿಪತ್ರವನ್ನು 16ನೆಯ ಫೆಬ್ರವರಿ 2023ರಂದು ಸಂಜೆ ಅನಾವರಣಗೊಳಸಲಾಯಿತು. ಬೆಂಗಳೂರಿನ ಪುಷ್ಪಗಿರಿ ನಗರದಲ್ಲಿರುವ ನಾಡಿನ ಖ್ಯಾತ ಕವಿ, ಸಾಹಿತಿ, ವಿಮರ್ಶಕ, ಸಾಹಿತ್ಯ ಚಿಂತಕ ಹಾಗೂ ಜನಪ್ರಿಯ ಅಧ್ಯಾಪಕ ಡಾ.ಎಚ್.ಎಸ್. ವೆಂಕಟೇಶಮೂರ್ತಿಯವರ ನಿವಾಸದಲ್ಲಿ ನಡೆದ ಸರಳ, ಸುಂದರ ಹಾಗೂ ಸ್ಮರಣೀಯ ಸಮಾರಂಭದಲ್ಲಿ ಸ್ವತಃ ಎಚ್ಎಸ್‌ವಿಯವರೇ 'ಪಲ್ಲಟ' ಕಾದಂಬರಿಯ ಮುಖಪುಟ ಭಿತ್ತಿಪತ್ರವನ್ನು ಬಿಡುಗಡೆ ಮಾಡಿದ್ದು ಸಂತಸಕರ ವಿಷಯ.



ಈ ಸಂದರ್ಭದಲ್ಲಿ ಮಾತನಾಡಿದ ಡಾ. ಎಚ್ಎಸ್‌ವಿಯವರು, ಹಿಂದೆ ಅರವತ್ತರ ದಶಕದಲ್ಲಿ ಮನೋಹರ ಗ್ರಂಥಮಾಲೆಯವರು ಇಂಥದೇ ಒಂದು ಪ್ರಯತ್ನ ಮಾಡಿದ್ದರು ಎಂದು ತಿಳಿಸಿ, ಈಗ ಅದೇ ಪರಂಪರೆಯ ಮುಂದುವರಿಕೆಯಾಗಿ ಸ ಸ ಕ ಸ ವೇದಿಕೆಯ ಇಪ್ಪತ್ತೇಳು ಸದಸ್ಯರು ಪಲ್ಲಟ ಕಾದಂಬರಿಯನ್ನು ಯಶಸ್ವಿಯಾಗಿ ರೂಪಿಸಿರುವ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ವೇದಿಕೆಯ ಇತರ ಚಟುವಟಿಕೆಗಳ ಬಗ್ಗೆಯೂ ಮಾಹಿತಿ ಪಡೆದುಕೊಂಡ ಎಚ್ಚೆಸ್ವಿಯವರು ವೇದಿಕೆಗೆ ಶುಭ ಹಾರೈಸಿದರು.

ಈ ಸಮಾಗಮದಲ್ಲಿ ವೇದಿಕೆಯ ಸದಸ್ಯರುಗಳಾದ ಸರ್ವಶ್ರೀ ಬಿ.ಎಸ್.ರವೀಂದ್ರ, ಎಚ್.ಎಲ್.ಗುರುಪ್ರಸಾದ್, ಜಿ.ವಿ.ಅರುಣ, ಕೆ.ಎನ್.ಮಹಾಬಲ, ಗುರುರಾಜ ಶಾಸ್ತ್ರಿ ಹಾಗೂ ಶ್ರೀಮತಿ ಶಾಂತಿ ವಾಸು ಅವರು ಭಾಗವಹಿಸಿದ್ದರು.

"ಪಲ್ಲಟ" ಕಾದಂಬರಿಯ ಪ್ರಕಾಶಕರಾದ ಸ್ನೇಹ ಬುಕ್ ಹೌಸ್‌ನ ಮಾಲೀಕರೂ, ಸಾಹಿತ್ಯಪ್ರಿಯರೂ ಆದ ಶ್ರೀ ಪರಶಿವಪ್ಪ ಅವರು ಕಾರ್ಯಕ್ರಮವನ್ನು ಸಂಯೋಜಿಸಿದ್ದರು.

***

ಖೋ ಕಾದಂಬರಿ 'ಪಲ್ಲಟ' ಬಿಡುಗಡೆಗೆ ಬನ್ನಿ, ಸಂಚಾಲಕ ಸಮಿತಿಯ ಕರೆಯೋಲೆ

ಪ್ರಿಯ ಶ್ರೀ_________________ ಅವರಿಗೆ ನಮಸ್ಕಾರಗಳು.

ಮೊತ್ತ ಮೊದಲನೆಯದಾಗಿ, ಒಂದು ಸಾಹಸವೆಂದೇ ಹೇಳಬಹುದಾದ ಪಲ್ಲಟ 'ಖೋ ಕಾದಂಬರಿ"ಯು ಫಲಪ್ರದವಾಗಿ ಬೆಳಕು ಕಾಣುತ್ತಿರುವ ಈ ಸುಸಂದರ್ಭದಲ್ಲಿ ಸಮನ್ವಯ ಸಮಿತಿ ಕನ್ನಡವೇ ಸತ್ಯ ಹಾಗೂ ಅದರ ಉಪವೇದಿಕೆಯಾದ ಖೋ ಸಂಚಾಲಕ ಸಮಿತಿ ಹಾಗೂ 27 ಖೋ ಲೇಖಕರ ಪರವಾಗಿ ತಮಗೆ ಹಾರ್ದಿಕ ಸ್ವಾಗತ.

2021-22ನೆಯ ಇಸವಿಯಲ್ಲಿ ಸತತವಾಗಿ 27 ವಾರಗಳಲ್ಲಿ ಖೋ ಕಾದಂಬರಿಯು ನಮ್ಮ ವಾಟ್ಸಾಪ್ ವೇದಿಕೆಯಲ್ಲಿ ಪ್ರಸ್ತುತವಾಗಿ, ಇಂದಿನ ಸ್ವರೂಪವನ್ನು ಪಡೆಯಿತು. 27 ಜನರು ಬರೆದ 27 ಅಧ್ಯಾಯಗಳ ಕಾದಂಬರಿ ರಚನೆ ಮುಕ್ತಾಯವಾದ ನಂತರ ಅದಕ್ಕೆ "ಪಲ್ಲಟ" ಎಂದು ಹೆಸರಿಡಲಾಯಿತು. 'ಪಲ್ಲಟ' ರೂಪಿಸುವಲ್ಲಿ ಲೇಖಕರ ಶ್ರಮ, ಅನುಸರಣ ಮತ್ತು ಸಾಹಿತ್ಯ ದೇಣಿಗೆಯು ಅಪೂರ್ವವಾದುದು. ಅವರ ಸಂಪೂರ್ಣ ಸಹಕಾರದಿಂದಲೇ ಈ ವಿಶಿಷ್ಟ ಹಾಗೂ ವಿನೂತನವಾದ ಕಾದಂಬರಿ ಯಶಸ್ಸಿನ ಘಟ್ಟ ತಲುಪಿತು ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ.

ಇನ್ನೊಮ್ಮೆ ಪುನರಾವರ್ತಿಸಲಾಗದ ಘಟನೆ ಇದು. ಕಾದಂಬರಿ ಆರಂಭವಾದ ಗಳಿಗೆಯಿಂದ ಕೊನೆಯವರೆಗೂ ಗೋಚರವಾದ ಪ್ರಯೋಗಶೀಲತೆ, ತೊಡಗಿಸಿಕೊಳ್ಳುವಿಕೆ, ಒಳಗೊಳ್ಳುವಿಕೆ, ಲೇಖಕರು ತಮ್ಮನ್ನು ತಾವು ಪರೀಕ್ಷೆಗೆ ಒಡ್ಡಿಕೊಂಡಂತಹ ರೀತಿ ಅನನ್ಯವಾದುದು. ಮುಂದಿನವಾರ ಏನು?, ಮುಂದಿನ ಅಧ್ಯಾಯದ ತಿರುವೇನು? ಎಂಬುದು ಖೋ ಕಾದಂಬರಿ ಕರ್ತೃಗಳು, ಓದುಗರು, ಎಲ್ಲರನ್ನೂ ತುದಿಗಾಲಿನಲ್ಲಿ ನಿಲ್ಲಿಸಿತ್ತು.

ಸಂಚಾಲಕ ಸಮಿತಿಯ ಕೆಲಸವೂ ಬಹಳ ಆನಂದದಾಯಕ ಹಾಗೂ ಸವಾಲಿನದ್ದಾಗಿತ್ತು. ನಾವೂ ಹಲವಾರು ಸಭೆಗಳನ್ನು ನಡೆಸುತ್ತಿದ್ದೆವು. ಓಡುತ್ತಿದ್ದ ಗಾಡಿಯ ವೇಗವನ್ನು ಹೆಚ್ಚಿಸುವ, ಕಡಿಮೆ ಮಾಡುವ, ಒಂದು ದಾರಿಗೆ ತರುವಂತಹ ಚಟುವಟಿಕೆಗಳ ಅನುಭವ, ಅನುಭವಿಸಿಯೇ ಹೇಳುವಂತಹದು.

ಬಿಡುಗಡೆಯ ಕಾರ್ಯಕ್ರಮಕ್ಕೆ, ಬನ್ನಿ. ನಿಮ್ಮ ಸಂತಸದ ಬಟ್ಟಲ ಜೇನನ್ನು ನಮಗೆಲ್ಲಾ ಹಂಚಿರಿ.

ಫೆಬ್ರವರಿ 26ರ ಬೆಳಗು ಹತ್ತು ಗಂಟೆಗೆ ಬೆಂಗಳೂರು ಬಸವನಗುಡಿಯ ವಾಡಿಯಾ ರಸ್ತೆಯಲ್ಲಿರುವ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ನಲ್ಲಿನಾವು ರಚಿಸಿದ ಖೋ ಕಾದಂಬರಿ 'ಪಲ್ಲಟ'ದ ಬಿಡುಗಡೆ. ಪ್ರಕಾಶಕರಾದ ಸ್ನೇಹಾ ಬುಕ್ ಹೌಸ್‌ನ ಮಾಲೀಕರಾದ ಶ್ರೀ ಪರಶಿವಪ್ಪ ಅವರಿಗೆ ನಮ್ಮ ಧನ್ಯವಾದಗಳು.

ಬನ್ನಿ, ಈ 'ಪಲ್ಲಟ' ಕಾದಂಬರಿಯನ್ನು ನಿಮ್ಮ ಗೆಳೆಯರಿಗೆ, ಬಂಧುಗಳಿಗೆ ಇದೊಂದು ಕನ್ನಡ ಸಾಹಿತ್ಯ ಪ್ರಯೋಗ ಶಾಲೆಯ ಹೆಮ್ಮೆಯೆಂದು ಪರಿಚಯಿಸಿ.

ವಂದನೆಗಳೊಂದಿಗೆ, ವಿಶ್ವಾಸ ಪೂರ್ವಕವಾಗಿ

ಖೋ ಸಂಚಾಲಕ ಸಮಿತಿಯ ಸದಸ್ಯರು
(ಬೆಂ ಶ್ರೀ ರವೀಂದ್ರ, ಕೆ ಎನ್ ಮಹಾಬಲ, ಬಿ ಎಸ್ ಶ್ರವಣಕುಮಾರಿ,
ಎಚ್ ಆರ್ ಗುರುರಾಜ್ ಶಾಸ್ತ್ರಿ, ಎಸ್ ಶೃಂಗೇಶ್ವರ ಶರ್ಮ ಪು ವಾ ಶ್ರೀಪ್ರಕಾಶ್)

ಸಮನ್ವಯ ಸಮಿತಿ - ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಕನ್ನಡ ಸಾಹಿತ್ಯ ಲೋಕದಲ್ಲಿ ವಿಶಿಷ್ಟ ವಿನೂತನ ಪ್ರಯೋಗ

ಖೋ ಕಾದಂಬರಿ "ಪಲ್ಲಟ" ಬಿಡುಗಡೆ ಸಮಾರಂಭ

ಕಾರ್ಯಕ್ರಮ ವರದಿ: ಹು.ವಾ.ಶ್ರೀಪ್ರಕಾಶ್

ನಮ್ಮ ವೇದಿಕೆಯ ಸದಸ್ಯರೇ ರಚಿಸಿದ ಖೋ ಕಾದಂಬರಿ "ಪಲ್ಲಟ"ದ ಬಿಡುಗಡೆ ಕಾರ್ಯಕ್ರಮ 26ನೆಯ ಫೆಬ್ರವರಿ 2023ರಂದು ಬೆಳಗ್ಗೆ 10.00 ಗಂಟೆಗೆ ಬೆಂಗಳೂರಿನ ಇಂಡಿಯನ್ ಇನ್ಸಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ಜರುಗಿತು.



ಕಾದಂಬರಿಯನ್ನು ಲೋಕಾರ್ಪಣೆಗೊಳಿಸಿದ ಖ್ಯಾತ ಕಾದಂಬರಿಕಾರ್ತಿ ಶ್ರೀಮತಿ ಜಯಶ್ರೀ ದೇಶಪಾಂಡೆ ಮತ್ತು ಪತ್ರಕರ್ತ, ಸಾಹಿತಿ ಶ್ರೀ ಎನ್.ಎಸ್.ಶ್ರೀಧರಮೂರ್ತಿ, ಪ್ರಕಾಶಕರಾದ ಸ್ನೇಹ ಬುಕ್ ಹೌಸ್‌ನ ಶ್ರೀ ಪರಶಿವಪ್ಪ, ಸಸಕಸ ವೇದಿಕೆಯ ಪ್ರಧಾನ ಸಂಚಾಲಕ ಶ್ರೀ ಬೆಂ.ಶ್ರೀ.ರವೀಂದ್ರ, ಕಾದಂಬರಿಯ ಪ್ರಧಾನ ಸಂಪಾದಕ ಶ್ರೀ ಕೆ.ಎನ್.ಮಹಾಬಲ ಹಾಗೂ ಕಾದಂಬರಿಯ ಮೊದಲ ಅಧ್ಯಾಯ ಬರೆದ ಶ್ರೀ ಗೋನವಾರ ಕಿಶನ್‌ರಾವ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಶ್ರೀಮತಿ ರಾಧಿಕಾ ಗುಜ್ಜರ್‌ರವರು ಎಲ್ಲರನ್ನೂ ಸ್ವಾಗತಿಸಿ, ಅತಿಥಿಗಳನ್ನು ಪರಿಚಯಿಸಿದರು. ಶ್ರೀ ಶೃಂಗೇಶ್ವರ ಶರ್ಮ ಅವರು ಸಮನ್ವಯ ಸಮಿತಿ ಕನ್ನಡವೇ ಸತ್ಯ ಹಾಗೂ ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಗಳ ಹುಟ್ಟು, ಬೆಳವಣಿಗೆ ಮತ್ತು ವಿವಿಧ ಚಟುವಟಿಕೆಗಳ ಬಗ್ಗೆ ವಿವರಿಸಿದರು.

ವೇದಿಕೆಯ ಮೇಲಿದ್ದ ಗಣ್ಯರು ದೀಪ ಬೆಳಗಿಸುವುದರ ಮೂಲಕ ಔಪಚಾರಿಕವಾಗಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಖೋ ಕಾದಂಬರಿಯ ಪ್ರಧಾನ ಸಂಪಾದಕರಾದ ಶ್ರೀ ಕೆ.ಎನ್.ಮಹಾಬಲರವರು ಖೋ ಕಾದಂಬರಿ ರೂಪುಗೊಂಡ ಬಗೆಯನ್ನು ಕೆಲವೇ ಮಾತುಗಳಲ್ಲಿ ತೆರೆದಿಟ್ಟರು. ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಸದಸ್ಯರಾದ 27 ಬರಹಗಾರರು ರಚಿಸಿದ, 27 ಅಧ್ಯಾಯಗಳನ್ನು ಒಳಗೊಂಡ ''ಪಲ್ಲಟ' ಖೋ ಕಾದಂಬರಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಶ್ರೀಮತಿ ಜಯಶ್ರೀ ದೇಶಪಾಂಡೆ ಅವರು, ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಸಂಚಾಲಕರುಗಳಾದ ಶ್ರೀ ಬೆಂ.ಶ್ರೀ.ರವೀಂದ್ರ ಹಾಗೂ ಶ್ರೀ ಕೆ ಎನ್.ಮಹಾಬಲ ಅವರು ಖೋ ಕಾದಂಬರಿಯ ಪ್ರೇರಕ ಶಕ್ತಿಯಾಗಿರುವುದು ನನಗೆ ಸಂತಸ ತಂದಿದೆ. ಈ ವೇದಿಕೆಯು ಅನೇಕ ವರ್ಷಗಳಿಂದ ಹೊಸ ಹೊಸ ಪ್ರಯೋಗಗಳೊಂದಿಗೆ ಕನ್ನಡ ಸೇವೆ ನಡೆಸುತ್ತಿರುವುದು ಪ್ರಶಂಸನೀಯ ಎಂದರು.

'ಪಲ್ಲಟ' ಎಂಬ ಪದವೇ ಅನೇಕ ಹೊಳಹುಗಳನ್ನು ಮೂಡಿಸುತ್ತದೆ. ಮೂರು ತಲೆಮಾರುಗಳ ಕೂಡು ಕುಟುಂಬದ ಕಥೆ, ಕೌಟುಂಬಿಕ ಮೌಲ್ಯ ಇಲ್ಲಿ ಬಿಂಬಿತವಾಗಿದೆ. ಕುಟುಂಬವೊಂದು ಪಲ್ಲಟಕ್ಕೆ, ಸಮಾಜದ ಬದಲಾವಣೆಗೆ ಒಳಗಾಗುತ್ತದೆ. ಕಥಾನಾಯಕ 'ತಾನು ಚಿಕ್ಕವನಿದ್ದಾಗ ತಾತನ ಜೊತೆಗೆ ಹೋಗುತ್ತಿರುವಾಗ ಸೂರ್ಯೋದಯ ನೋಡುವ ಸಂಭ್ರಮ ನನ್ನಲ್ಲಿರುತ್ತಿತ್ತು ಈಗ ಸೂರ್ಯಸ್ತವನ್ನು ಕಾಣುತ್ತಿದ್ದೇನೆ' ಎನ್ನುವ ಮಾತು ರೂಪಕದಂತಿದೆ. ಈ ಕಥೆ ಒಂದು ಜೀವನದ ಪಯಣ. ಅನೇಕ ಘಟನೆಗಳು, ಅನೇಕ ಪಾತ್ರಗಳು ಅನುಭವಿಸುವ ಸೂತ್ರವನ್ನು 27 ಲೇಖಕರು ಹಿಡಿದಿಡುವುದು ಸುಲಭವಲ್ಲ. ಖೋ ಕಾದಂಬರಿಗಳು ಹಿಂದೆಯೂ ಬಂದಿವೆ. ಈ ಕಾದಂಬರಿ ಪ್ರಚಲಿತ ಸಮಾಜದ ಬಗೆಗಿನ ಕಾದಂಬರಿ. ಈಗ ಯುವಜನತೆ ಹೆಚ್ಚಿನ ಅವಕಾಶಗಳು ಸಿಕ್ಕಿ ವಿದೇಶಗಳಿಗೆ ಹೋಗುತ್ತಿದ್ದಾರೆ. ಕಥೆಯಲ್ಲಿ ಪ್ರಾಂಜಲ, ಪ್ರಕೃತಿ ಪಾತ್ರಗಳು



ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ. ಪ್ರಕೃತಿಯು ತನ್ನ ನಕಾರಾತ್ಮಕ ಧೋರಣೆಗಳಿಂದ ನಿರಾಶೆ, ಸೋಲು ಅನುಭವಿಸುತ್ತಾಳೆ. ಇಂದು ಸಮಾಜದಲ್ಲಿ ಇಂತಹ ಬೆಳವಣಿಗೆಗಳು ತುಂಬಾ ಹೆಚ್ಚುತ್ತಿರುವುದನ್ನು ಕಾಣುತ್ತಿದ್ದೇವೆ. ವೃದ್ಧಾಶ್ರಮಗಳು ಹೆಚ್ಚುತ್ತಿವೆ. ಅಲ್ಲಿ ಎಲ್ಲ ಸೌಲಭ್ಯಗಳು ಇವೆ, ಹಣ ಕಳಿಸುತ್ತೇವೆ ಎಂಬ ಧೋರಣೆ ಎಲ್ಲೆಡೆ ಕಂಡುಬರುತ್ತಿದೆ. ಇಂತಹ ಬೆಳವಣಿಗೆಗಳು ಅನಿವಾರ್ಯವೂ ಇರಬಹುದೇನೋ.

ಕೂಡು ಕುಟುಂಬ ಈಗಲೂ ಇರಬೇಕೆಂದು ಬಯಸುವುದು ಸಾಧ್ಯವಿಲ್ಲ. ಆದರೆ ಆಗುತ್ತಿರುವ ಪರಿವರ್ತನೆ ಮಾನಸಿಕ ನೆಮ್ಮದಿ ನೀಡುತ್ತಿದೆಯೇ ಎಂಬ ಪ್ರಶ್ನೆಯನ್ನು ಬರಹಗಾರರು ಎತ್ತಿ ಉತ್ತರಿಸುವ ಪ್ರಯತ್ನವನ್ನು ಇಲ್ಲಿ ಮಾಡಿದ್ದಾರೆ. ಈ ಪಲ್ಲಟ ಖೋ ಕಾದಂಬರಿ ಒಂದು ಉತ್ತಮ ಪ್ರಯತ್ನವಾಗಿದೆ ಎಂದು ಶ್ರೀಮತಿ ಜಯಶ್ರೀ ದೇಶಪಾಂಡೆಯವರು ಕಾದಂಬರಿಯ ಉತ್ತಮ ಅಂಶಗಳನ್ನು ಗುರುತಿಸಿದರು.


'ಪಲ್ಲಟ' ಕಾದಂಬರಿ ರಚಿಸಿದ ವಿವಿಧ ಲೇಖಕರು ಮುಖ್ಯ ಅತಿಥಿಗಳೊಂದಿಗೆ



'ಪಲ್ಲಟ' ಕೃತಿಯ ಬಗ್ಗೆ ಮಾತನಾಡಿದ ಶ್ರೀ ಎನ್.ಎಸ್.ಶ್ರೀಧಮೂರ್ತಿಯವರು, ಖೋ ಕಾದಂಬರಿಯ ಬಗ್ಗೆ ಈಗಾಗಲೇ ಮುನ್ನುಡಿಯಲ್ಲಿ ನಾನು ಸಾಕಷ್ಟು ಹೇಳಿದ್ದೇನೆ. ಬಹಳ ಹಿಂದೆ ಮನೋಹರ ಗ್ರಂಥ ಮಾಲೆಯವರು ಈ ರೀತಿ ಪ್ರಯೋಗ ಮಾಡಿದ್ದಾರೆ. ತಾನು ಈ ಹಿಂದೆ 'ಮಲ್ಲಿಗೆ' ಮಾಸಪತ್ರಿಕೆಯ ಸಂಪಾದಕನಾಗಿದ್ದಾಗ ಇಂಥದೊಂದು ಪ್ರಯೋಗ ಮಾಡಿದ್ದೆ. ಅದರ ಕೊನೆಯ ಅಧ್ಯಾಯವನ್ನು ಬರೆಯಲು ಓದುಗರಿಗೇ ಬಿಟ್ಟ ಪ್ರಸಂಗವನ್ನು ಸ್ಮರಿಸಿದರು.

ಏಕವ್ಯಕ್ತಿಕೃತವಾದದ್ದು ಮಾತ್ರ ಸಾಹಿತ್ಯ ಎಂಬ ಅಭಿಪ್ರಾಯ ಇತ್ತು. ಚಲನಚಿತ್ರ ಗೀತೆಯೊಂದರಲ್ಲಿ ಗೀತ ರಚನೆ, ಸಂಗೀತ, ಗಾಯನ ಒಬ್ಬೊಬ್ಬರದಾಗಿ ಅದು ಬಹುವ್ಯಕ್ತಿ ಕೃತವಾದುದರಿಂದ ಅದು ಸಾಹಿತ್ಯವಲ್ಲ ಎಂಬ ಅಭಿಪ್ರಾಯವೂ ಇತ್ತು. ಅನುಭವಗಳನ್ನು ಹೇಳುವುದಕ್ಕೆ ಭಾಷೆ, ಪರಿಣತಿ ಬೇಕು, ಸಂವೇದನೆ ಬೇಕು. ಎಲ್ಲರ ಮೆದುಳು ಒಂದೇ ಎರಕದಲ್ಲಿ ಅಚ್ಚು ಹೊಯ್ದದ್ದಲ್ಲ. ಎಲ್ಲರೂ ಒಂದೇ ರೀತಿ ಯೋಚನೆ ಮಾಡಲಾರರು. ಹೀಗಿರುವಾಗ ಎಲ್ಲರೂ ಸೇರಿ ಕಥೆ ಬರೆಯುವುದು ಹೇಗೆ? ಅದು ಸಾಹಸವೇ ಸರಿ ಎಂದ ಶ್ರೀಧರಮೂರ್ತಿಯವರು, ಗಂಟೆ ಹೊಡೆದರೆ ದೇವಸ್ಥಾನದ ಕಲ್ಪನೆ ನಮಗೆ ಬರುತ್ತದೆ. ದಕ್ಷಿಣ ಆಫ್ರಿಕಾದವನಿಗೆ ಬರುವುದಿಲ್ಲ. ಆತನ ಸಂಸ್ಕೃತಿ ಬೇರೆ. ನಮ್ಮ ಸಂವೇದನೆಗಳಿಗೂ, ನಮ್ಮ ಸಂಸ್ಕೃತಿಗೂ, ನಮ್ಮ ಪರಿಸರಕ್ಕೂ ಒಂದು ಸಂಬಂಧವಿದೆ. ಕೆಲವರಿಗೆ ಸಂವೇದನೆ ಇರುತ್ತದೆ, ಭಾಷೆ ಇರುವುದಿಲ್ಲ ಕೆಲವರಿಗೆ ಭಾಷೆ ಇರುತ್ತದೆ, ಸಂವೇದನೆ ಇರುವುದಿಲ್ಲ. ಒಂದು ಪ್ರಜ್ಞೆ ಪರಿಸರವನ್ನು ಆಳುತ್ತದೆ. ಪರಿಸರಕ್ಕೆ ಒಂದು ಶಕ್ತಿ ಇದೆ, ಪ್ರಜ್ಞೆ ಮುಖ್ಯವಾದರೆ ಒಬ್ಬನೇ ಕಥೆ ಬರೆಯಲು ಸಾಧ್ಯ. ಪರಿಸರ ಮುಖ್ಯವಾದರೆ ಎಲ್ಲರೂ ಸೇರಿ ಕಥೆ ಬರೆಯಲು ಸಾಧ್ಯ ಎಂದು ಹೇಳಿದರು.

ಈ ಕಥೆಯಲ್ಲಿ ಅನುಭವ ಒಂದೇ, ಸ್ವರೂಪ ಬೇರೆ ಬೇರೆ. ಇದು ಎರಡು ತಲೆಮಾರಿನ ಕಥೆ. ಮೂರನೇ ತಲೆಮಾರಿನ ಉಲ್ಲೇಖ ಇದೆ. ಅಮೆರಿಕಾದಲ್ಲಿ ನೆಲೆಸಿರುವ ಭಾರತೀಯರ ತಳಮಳ, ಅಲ್ಲೇ ಇರಬೇಕೋ, ಇಲ್ಲಿಗೆ ಬರಬೇಕೋ ಎಂಬ ಸಂದಿಗ್ಧಗಳು ಇಲ್ಲಿ ಮುಖ್ಯವಾಗಿವೆ. ಪ್ರೀತಿ ಪ್ರೇಮದ ಬಗ್ಗೆ ಹೆಚ್ಚೇನೂ ಇಲ್ಲ. ಇದರಿಂದ ಇಲ್ಲಿನ ಬಹುತೇಕ ಬರಹಗಾರರು ಅರವತ್ತರ ಆಚೆಯವರು ಎಂಬುದು ಗೊತ್ತಾಗುತ್ತದೆ. ಕೌಟುಂಬಿಕ ಚೌಕಟ್ಟಿನಲ್ಲಿ ಮುಖ್ಯ ವಾದ ಅಂಶ ಯಾವುದು. ಗಂಡ ಹೆಂಡತಿಯರ ನಂಬಿಕೆಯೋ, ಭದ್ರತೆಯೋ, ವಿಶ್ವಾಸವೋ ಅಥವಾ ಅದರ ಆಚೆಗೆ ಏನೋ ಇದೆಯೋ? ಎಂಬ ಜಿಜ್ಞಾಸೆ



ಕಾಡುತ್ತದೆ. ಕಾದಂಬರಿಯಲ್ಲಿ ಯಾವ ಸಂಘರ್ಷವೂ ನಂಬಿಕೆಯ ನೆಲೆಯನ್ನು ಅಲುಗಾಡಿಸುವುದಿಲ್ಲ. ಇಂತಹ ಸಂಘರ್ಷ ಇಲ್ಲದೆ ಇರುವುದು ಕಾದಂಬರಿಯ ಒಂದು ಕೊರತೆ. ಇದರಲ್ಲಿ ಸಣ್ಣಪುಟ್ಟ ಸಂಘರ್ಷಗಳಗೂ ಬೇಗ ಪರಿಹಾರ ಸಿಗುತ್ತದೆ ಎಂದ ಶ್ರೀಧರಮೂರ್ತಿಯವರು, ಈ ಖೋ ಕಾದಂಬರಿಯಲ್ಲಿ ಕಥೆಯ ನೆಲೆಯನ್ನು ಮೊದಲೇ ಮಾಡಿದಂತಿಲ್ಲ. 27 ಜನ ಲೇಖಕರು ಇರುವುದರಿಂದ ಕಥೆಯಲ್ಲಿ ಕೇಂದ್ರ ಪ್ರಜ್ಞೆ ಅಷ್ಟಾಗಿ ಕಂಡುಬರುವುದಿಲ್ಲ. ಆದರೆ ಈ ಹೊಸ ಪ್ರಯೋಗವು ಹೊಸ ಪರಂಪರೆಯೊಂದನ್ನು ಕೊಟ್ಟಿದೆ. ಒಂದು ಗುಂಪಿನಲ್ಲಿ ಹೀಗೆ ಖೋ ಕಾದಂಬರಿ ಮಾಡಿರುವುದು ದೊಡ್ಡ ಕೆಲಸ. ಕನ್ನಡ ಸಾಹಿತ್ಯದಲ್ಲಿ ಆಗಬೇಕಾಗಿರುವುದೇ ಈ ತರಹದ ಕೆಲಸ. ಅಕಾಡೆಮಿ, ಪರಿಷತ್ತುಗಳು ಮಾಡುವ ಕೆಲಸಕ್ಕೆ ನಿಯಮದ ಚೌಕಟ್ಟು ಇರುತ್ತದೆ. ನಿಯಮಗಳ ಚೌಕಟ್ಟು ಇಲ್ಲದಿರುವಾಗಲೇ ಗಟ್ಟಿ ಕೆಲಸಗಳು ಆಗುತ್ತವೆ. ಈ ಪರಂಪರೆ ನೀವು ಮುಂದುವರಿಸಬೇಕು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. .

ಖೋ ಕಾದಂಬರಿ ರಚನೆಯಲ್ಲಿ ಪಾಲ್ಗೊಂಡ ಲೇಖಕರ ಪರವಾಗಿ ಮಾತನಾಡಿದ ಶ್ರೀ ಗೋನಾವರ ಕಿಷನ್ ರಾವ್, ಶ್ರೀ ಜಿ.ವಿ.ಅರುಣ ಹಾಗೂ ಶ್ರೀಮತಿ ಶಾಂತಾ ನಾಗಮಂಗಲ ಅವರು, ಖೋ ಕಾದಂಬರಿ ಅಭಿಯಾನದಲ್ಲಿ ಭಾಗಿಯಾದ ತಾವು ಪ್ರತಿಯೊಂದು ಅಧ್ಯಾಯವೂ ಕೊಡುವ ತಿರುವನ್ನು ಗಮನಿಸಿ, ಮುಂದಿನ ಅಧ್ಯಾಯ ಬರೆಯುವಲ್ಲಿ ಎದುರಿಸಿದ ಸವಾಲುಗಳು, ವಿದೇಶಿದಲ್ಲಿನ ಜೀವನ ವಿಧಾನದ ಬಗ್ಗೆ ಅಧ್ಯಯನ ನಡೆಸಲೇಬೇಕಾದ ಅನಿವಾರ್ಯತೆ, ಸಂಚಾಲಕ ಸಮಿತಿಯ ಮಾರ್ಗದರ್ಶನ ಮುಂತಾದ ಸಂಗತಿಗಳನ್ನು ವಿವರಿಸಿ, ಅಂತಿಮವಾಗಿ ಕಾದಂಬರಿಯು ನಿರ್ದಿಷ್ಟ ರೂಪ ಪಡೆದು ಮುಕ್ತಾಯವಾದುದಕ್ಕೆ ತಮ್ಮ ಸಂತಸ ವ್ಯಕ್ತಪಡಿಸಿದರು.

ಎರಡು ಉತ್ತಮ ವಿಮರ್ಶೆಗಳಿಗೆ ಬಹುಮಾನ: ಸ್ನೇಹ ಪಬ್ಲಿಷಿಂಗ್ ಹೌಸ್‌ನ ಶ್ರೀ ಪರಶಿವಪ್ಪರವರು ಮಾತನಾಡಿ, ಪುಸ್ತಕದ ಪ್ರತಿಗಳಿಗೆ ಉತ್ತಮ ಬೇಡಿಕೆ ಬರುತ್ತಿರುವುದು ಶ್ಲಾಘನೀಯ ಎಂದು ಹೇಳಿ, ಈ ಕಾದಂಬರಿಯ ಲೇಖಕರನ್ನು ಹೊರತುಪಡಿಸಿ, ಇತರರು ಬರೆಯುವ ಎರಡು ಉತ್ತಮ ವಿಮರ್ಶೆಗಳಿಗೆ ತಮ್ಮ ಪ್ರಕಟಣಾ ಸಂಸ್ಥೆಯ ವತಿಯಿಂದ ಬಹುಮಾನ ನೀಡುವುದಾಗಿ ಘೋಷಿಸಿದರು.

ಪ್ರಧಾನ ಸಂಚಾಲಕರಾದ ಶ್ರೀ ಬೆಂ.ಶ್ರೀ.ರವೀಂದ್ರರವರು ಸಮನ್ವಯ ಸಮಿತಿಯ ಚಟುವಟಿಕೆಗಳ ಬಗ್ಗೆ ಸಂಕ್ಷಿಪ್ತವಾಗಿ ಹೇಳಿ, ಇದೇ ಮಾರ್ಚ್ 11 ರಂದು ಶ್ರೀ ಪ್ರಧಾನ ಗುರುದತ್ತರವರು ಬರೆದ 'ಎಚ್ಚೆಸ್ಕೆ ಬದುಕು ಬರೆಹ' ಎಂಬ ಕೃತಿ ಇದೇ ಸ್ಥಳದಲ್ಲಿ ಬಿಡುಗಡೆಯಾಗುತ್ತಿದೆ. ಸಭಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿಬೇಕು ಎಂದು ವಿನಂತಿಸಿದರು.

ಕೊನೆಯಲ್ಲಿ ಶ್ರೀಮತಿ ರತ್ನಾಮೂರ್ತಿಯವರು ವಂದನಾರ್ಪಣೆ ಮಾಡಿದರು. ಡಾ ಶುಭಶ್ರೀ ಪ್ರಸಾದ್‌ರವರು ಸೊಗಸಾಗಿ ಕಾರ್ಯಕ್ರಮ ನಿರೂಪಣೆ ಮಾಡಿದರು.

***

ಖೋ ಕಾದಂಬರಿ 'ಪಲ್ಲಟ' ಬಿಡುಗಡೆಯ ವಿಶಿಷ್ಟತೆ, ಕಾವ್ಯಮಾಲೆ

ಖೋ ಕಾದಂಬರಿ 'ಪಲ್ಲಟ'ವನ್ನು ರಚಿಸಿದವರು 27 ವಿವಿಧ ಲೇಖಕರು. ಇದೊಂದು ರೀತಿ ಸಾಹಿತ್ಯಿಕ 'ಖೋ ಖೋ' ಆಟ. ಮೊದಲ ಅಧ್ಯಾಯವನ್ನು ಬರೆದವರು ಕಾದಂಬರಿಯನ್ನು ಒಂದು ಘಟ್ಟಕ್ಕೆ ತಂದು ಮುಂದಿನವರಿಗೆ 'ಖೋ' ಕೊಡುತ್ತಾರೆ. ಹೀಗೆ 'ಖೋ' ಪಡೆದುಕೊಂಡವರು ತಮ್ಮದೇ ಕಲ್ಪನೆ, ದೃಷ್ಟಿಕೋನದಲ್ಲಿ ಕಾದಂಬರಿಯ ಎರಡನೇ ಕಂತನ್ನು ಬರೆದು, ಮೂರನೆಯವರಿಗೆ 'ಖೋ' ಕೊಡುತ್ತಾರೆ. ಹೀಗೆಯೇ ಒಬ್ಬರಿಂದ ಇನ್ನೊಬ್ಬರಿಗೆ 'ಖೋ' ಕೊಡುತ್ತಾ ಮುಂದುವರೆದಂತೆ ಕಾದಂಬರಿ ಹಲವು ಕುತೂಹಲಕರ ತಿರುವುಗಳನ್ನು ಪಡೆದು, ಕೊನೆಯದಾಗಿ 'ಖೋ' ಪಡೆದ 27ನೆಯ ವ್ಯಕ್ತಿ ಕಾದಂಬರಿಯನ್ನು ಸುಖಾಂತ್ಯಗೊಳಿಸುತ್ತಾರೆ.

ಕಾದಂಬರಿ ಬಿಡುಗಡೆ ಸುಸಂದರ್ಭದಲ್ಲಿ ಸಭಾಂಗಣದುದ್ದಕ್ಕೂ 'ಖೋ ಖೋ' ಅನುರಣಿಸುತ್ತಿತ್ತು. ಸಭಾಂಗಣದ ಮುಖ್ಯ ದ್ವಾರದಿಂದ ವೇದಿಕೆವರೆಗೆ 'ಖೋ' ಬರಹಗಾರರೆಲ್ಲರೂ ಒಬ್ಬರ ಪಕ್ಕ ಒಬ್ಬರು ಸಾಲಾಗಿ ನಿಂತಿದ್ದರು. 'ಪಲ್ಲಟ' ಕಾದಂಬರಿಯ ಪ್ರತಿಗಳನ್ನು ಹೊಂದಿದ್ದ ಕರಂಡಕವನ್ನು ಸಭಾಂಗಣದ ಮುಖ್ಯ ದ್ವಾರದಲ್ಲಿ ಮೊದಲನೆಯವರಾಗಿ ನಿಂತಿದ್ದ ಲೇಖಕರು ಹಿಡಿದಿದ್ದು, 'ಖೋ' ಎನ್ನುತ್ತ ಅದನ್ನು ಎರಡನೆಯವರಿಗೆ ಹಸ್ತಾಂತರಿಸಿದರು. ಅವರು 'ಖೋ' ಎಂದು ಮೂರನೆಯವರೆಗೆ, ಹೀಗೆ 27 ಬಾರಿ 'ಖೋ.. ಖೋ' ಮೊಳಗಿ, ಕೈಯಿಂದ ಕೈಗೆ ದಾಟಿ ಬಂದ ಕರಂಡಕವು ವೇದಿಕೆಯನ್ನು ತಲುಪಿತು. ಕೊನೆಯದಾಗಿ ಕರಂಡಕವನ್ನು ಸ್ವೀಕರಿಸಿದ ಮುಖ್ಯ ಅತಿಥಿಗಳಾದ ಶ್ರೀಮತಿ ಜಯಶ್ರೀ ದೇಶಪಾಂಡೆಯವರು ಕಾದಂಬರಿಯ ಲೋಕಾರ್ಪಣೆ ಮಾಡಿದರು. 'ಪಲ್ಲಟ' ರಚನೆ ಮತ್ತು ಲೋಕಾರ್ಪಣೆ ಕುರಿತಂತೆ ಮಹಾಬಲ, ರಾಜನ್, ಮಾಲತಿ ಶ್ರೀನಿವಾಸನ್, ಹಾಗೂ ಶಾಂತಾ ನಾಗಮಂಗಲ ಹೆಣೆದ ಕಾವ್ಯಮಾಲೆ ಇಲ್ಲಿದೆ:

ಪಲ್ಲಟದ ಲೋಕಾರ್ಪಣೆ

– ಮಹಾಬಲ

ಪಲ್ಲಟದ ಲೋಕಾರ್ಪಣೆಗೆ ಅತಿಥಿಗಳು ಸಿದ್ಧ
ಕರತಾಡನ ಸಂಭ್ರಮಕೆ ಸಭಾಸದರೂ ಬದ್ಧ
ಎಲ್ಲಿಹುದು ನಮ್ಮ ಅಭಿಮಾನದ ಕೂಸು ಪಲ್ಲಟ?
ಆ ಸುಂದರ ಕರಂಡದಲಿ ಹೊದ್ದಿದೆ ಕನ್ನಡ ಬಾವುಟ
ವರ್ಣಮಯ ಪುಷ್ಪಾಲಂಕಾರದಲಿ ಸೆಳೆದಿದೆ ನೋಟ
ಆರಂಭವೀಗ ಅಲಂಕೃತ ವೇದಿಕೆಯತ್ತ ಅದರ ಓಟ

ನಭಕೆ ಎತ್ತಿ ಪಲ್ಲಟದ ಕರಂಡವ ತೋರಿದರು 'ಪ್ರಕಾಶ'
ಸರದಿಯಲಿ ಸಾಗಿತು ಜತೆಗೆ ಖೋ ಎನ್ನುವ ಘೋಷ
ಬಹುಪಾಲು ಹಿರಿಯ ಪ್ರಜೆಗಳೇ ಇಲ್ಲಿಯ ಲೇಖಕರು
ಹಾಗೆನ್ನಬೇಡಿ, ಅವರೀ ಸಂಭ್ರಮದಲಿ ನವತರುಣರು
ಜನ ನಿಬ್ಬೆರಗು: ನವನವೀನ ಈ ಪರಿಯ ಲೋಕಾರ್ಪಣೆ
"ಸಂಘಶಕ್ತಿ ಕಲೌಯುಗೇ" ಮಾತಿಗಿದು ಶ್ರೇಷ್ಠ ಉದಾಹರಣೆ

ಎಲ್ಲ ಲೇಖಕರ ಮಮತೆಯ ಸ್ಪರ್ಶಪಡೆದ ಪಲ್ಲಟ
ತಲುಪಿದೆ ಗಮ್ಯಸ್ಥಾನ: ಜಯಶ್ರೀಯವರ ಕರಕಮಲ

***

ಪಲ್ಲಟ

– ರಾಜನ್

ಸೇರಿದೆವು ಸಸಕಸ ವೇದಿಕೆಯ ಸದಸ್ಯರು
ಖೋ ಕಾದಂಬರಿಯ ಸಂಭ್ರಮದ ಬಿಡುಗಡೆಗೆ
ಕಂಡೆವು ಸಮಾರಂಭದ ಸಭಾಂಗಣದೊಳಗೆ
ಹೊಳೆವ ಇಪ್ಪತ್ತೇಳು ತಾರೆಗಳ ಮೇಳವನು

ಏಳು ತಿಂಗಳ ವಿನೂತನ ಕಾದಂಬರಿ ಪಯಣದಲಿ
ಒಂದೊಂದೇ ಅಧ್ಯಾಯಗಳ ಕೊಂಡಿ ಜೋಡಿಸುತ
ಯಾರು ಬರೆಯುವರು ಎಂಬ ನಿಗೂಢತೆಯಲಿ
ಹೊಸ ಪಾತ್ರ, ಕೋನ, ಆಯಾಮಗಳ ಬೆಳೆಸುತ

ಹೂಗಳ ಜೋಡಿಸಿ ಹೆಣೆದ ತೋಮಾಲೆ ತಯಾರು
ಸರಸತಿಯ ಸಿಂಗರಿಸಲು ವೇದಿಕೆಯ ಜನ ನಿಂತರು
ಖೋ ಖೋ ತೆಗೆದುಕೋ ಕೈಯಿಂದ ಕೈಗೆ ಸಾಗಿತು
ಸಂತಸದ ಮನಗಳ ನಡುವೆ ಬಿಡುಗಡೆಯಾಯಿತು

ಆಗದೆಂಬುದಿಲ್ಲ, ಎಲ್ಲವೂ ಸಾಧ್ಯವು ಈ ಗುಂಪಿಗೆ
ನೀಡುವರು ಸಾಹಿತ್ಯ ಪುಷ್ಪಗಳ ಕನ್ನಡದ ಕಂಪಿಗೆ

***

"ಖೋ ಕಾದಂಬರಿ"

– ಮಾಲತಿ ಶ್ರೀನಿವಾಸನ್

ಕೊಕ್ ಕೊಟ್ಟು ಕೊಕ್ ಕೊಟ್ಟು
ಸಾಗಿತ್ತು"ಖೋ ಕಾದಂಬರಿ"ಯ ತೇರು.
ಎಬ್ಬಿಸುತ ನಮ್ಮ ವೇದಿಕೆಯಲಿ
ವಾದ ವಿವಾದಗಳ ಚರ್ಚೆ ಬಲು ಜೋರು.

ತೇರ ಮೊದಲೆಳದ ಸಂಚಾಲಕರು
ಬಲು ಗಟ್ಟಿಗರು, ಮಹಾಬಲರು
ಧೀರೇಂದ್ರರು, ಗುರುಪೂಜ್ಯರು,

ಸೆಳೆದೊಯ್ದರು ನಮ್ಮೆಲ್ಲರ ಮನದಾಳದ
ಭಾವ, ಕಥೆ, ಪಾತ್ರಗಳ ಜೊತೆಗೆ.
ಮಮತೆ, ಪ್ರೀತಿ, ದ್ವೇಷ, ರೋಷ,
ಶಾಂತ, ಕರುಣ, ಶೃಂಗಾರ, ಒಲವು
ಪ್ರತಿ ಕಂತಿನಲಿ ರಸದೌತಣ,
ಕುಣಿಸಿತ್ತು ಓದುಗರ ಮನ
ರೋಚಕ ಕಥೆ, ಕಲ್ಪನಾಲಹರಿಯ ಅನಾವರಣ.

ಕಾದಂಬರಿಯ ಕಂತುಗಳ
ಮುಂದಿಟ್ಟ ದಿಗ್ಗಜರು ನಮ್ಮೆಲ್ಲರಿಗೂ
ಚಿರಪರಿಚಿತರು.
ಸಾಧಕರಿವರು, ಕಲೆ ಸಾಹಿತ್ಯ ಲೋಕದಲಿ
ಛಾಪು ಮೂಡಿಸಿದ ಗಣ್ಯರಿವರು.

ಅವರೊಡನೆ ನಾನು ಹೂವಿನೊಡನೆ
ನಾರು ಸಗ್ಗ ಸೇರಿ ಹೆಜ್ಜೆ ಇಟ್ಟಂತಿತ್ತು.
ಹೊಸ ಭಾವ, ಹೊಸ ಆಶಯಗಳ
ಹೊತ್ತು ನೂರಾರು.

ಕೊಕ್ ಕೊಟ್ಟು ಕೊಕ್ ಕೊಟ್ಟು
ಭರದಿಂದ ಸಾಗಿತ್ತು
"ಖೋ ಕಾದಂಬರಿ"ಯ ತೇರು,
ಸಂತಸದಿ ಗಮ್ಯದೆಡೆಗೆ

***

ಪಲ್ಲಟಕೆ ಪಲ್ಲಕ್ಕಿ

– ಶಾಂತಾ ನಾಗಮಂಗಲ

ಎನಿತು ಪಲ್ಲಟಗಳ ಹೊರಳ ಬಂದಿಹುದೊ, ಬೀಜ–
ವನು ಬಿತ್ತಿದವರು ಕಲ್ಪಿಸಿದ ಫಲವೇನೊ
ತನಿಹಣ್ಣ ತರಲೆಂದು ಮನಸುಗಳು ಹೊಗುತನ್ನ
ಮನದ ಹೊಲದಲ್ಲಿ ನೇಗಿಲಾಡಿಸಿದಾಗ //

ಒಮ್ಮೆ ಹದವಾದ ಮಳೆ ಸರಿಯಾದ ದಿಕ್ಕು ದೆಸೆ
ಒಮ್ಮೊಮ್ಮೆ ಬಿರುಗಾಳಿ ತತ್ತರದ ಹಾದಿ/
ಒಮ್ಮೊಮ್ಮೆ ಹೊಂಬಿಸಿಲು ನಲಿದುಕ್ಕಿ ಪಲ್ಲವಿಸಿ
ಒಮ್ಮನದಿ ಮೇಲೊಯ್ದರೀ ಬೆಳೆಯನು//

ಮಳೆಯ ನಕ್ಷತ್ರಗಳು ತಮ್ಮ ಕಂಟದಿ ವರ್ಣ
ಮಳೆ ಸುರಿಸೆ ವಾರಕೊಮ್ಮೆ ಹುಲುಸಾಗಿ ಹೊಲ
ಬೆಳೆ ಬರಲು ಕಳೆ ಕಿತ್ತು ಕೊಳೆತೆಗೆದು ಜತನದಲಿ
ಹುಳು ತಿನ್ನಲೀಯದ ಪಣತ ಪಲ್ಲಟವು //

***

****

ವಿಶಿಷ್ಟವಾಗಿ, ವಿನೂತನವಾಗಿ ಲೋಕಾರ್ಪಣೆಗೊಂಡ 'ಪಲ್ಲಟ' ಖೋ ಕಾದಂಬರಿಯ ಚಿತ್ರಣವನ್ನು ಈ ಕೆಳಕಂಡ ಯುಟ್ಯೂಬ್ ವಿಳಾಸದಲ್ಲಿ ವೀಕ್ಷಿಸಬಹುದು.

https://youtu.be/ptGM3hvqUFU

****

'ಪಲ್ಲಟ' ಕಾದಂಬರಿ ಲೋಕಾರ್ಪಣೆಗೊಳಿಸಿದ ಶ್ರೀಮತಿ ಜಯಶ್ರೀ ದೇಶಪಾಂಡೆ ಅವರಿಂದ ಕೃತಿಯ ಬಗ್ಗೆ ಲಿಖಿತ ಅಭಿಪ್ರಾಯ

ಪಲ್ಲಟ (ಕಾದಂಬರಿ)

ಕಾದಂಬರಿಯ ಪ್ರಕಾರಗಳಲ್ಲಿ 'ಖೋ' ವಿಧಾನ ಈ ಹಿಂದೆ ಕನ್ನಡದಲ್ಲಿ ಹೇಗೆ ಕೆಲವಾರು ಬಾರಿ ಬರೆಯಲ್ಪಟ್ಟಿತ್ತು. ಅದನ್ನು ಬೆಳಸುವಲ್ಲಿ ಎಂಥ ಖ್ಯಾತನಾಮರಾದ ಲೇಖಕರೆಲ್ಲ ಭಾಗವಹಿಸಿದ್ದರು ಎಂದು ಯೋಚಿಸಿದರೆ ಲೇಖಕರು ಮತ್ತು ಸಂಪಾದಕರು ಇಬ್ಬರಿಗೂ ಸವಾಲೇ ಅನಿಸಿಕೊಳ್ಳಬಹುದಾದ ಈ ಬರವಣಿಗೆಯಲ್ಲಿ ಆರಂಭದ ಅಧ್ಯಾಯವನ್ನು ಹೇಗೆ ಅಂತ್ಯದವರೆಗೂ ಒಂದು ನಿರಂತರ ಧಾರೆಯ ಹಾಗೆ ಕೊಂಡೊಯ್ಯುತ್ತಾರೆ ಎನ್ನುವುದು ಒಂದು ಬೆರಗಿನ, ವಿಸ್ಮಯದ ಸಂಗತಿ. ಇದರ ವೈಶಿಷ್ಟ್ಯವೇ ಬೇರೆ. ಸಾಂಘಿಕ ಪ್ರಯತ್ನದ ಅತ್ಯಂತ ಸಫಲ ಪ್ರಯತ್ನ ಇದು.

'ಪಲ್ಲಟ' ಖೋ ಕಾದಂಬರಿಯ ಅಂತರಂಗವನ್ನು ಹೊಕ್ಕು ನೋಡುವುದಾದರೆ ಅಲ್ಲಿ ನಾವು, ನೀವು, ಅವರು, ಇವರು ಎಲ್ಲಾ ಕಾಣಿಸಿಕೊಳ್ಳೇವಿ. ಇದು ನಮ್ಮ ನಿಮ್ಮೆಲ್ಲರ ಕಥೆ, ಸಹಜ ಜೀವನ, ಅದರಲ್ಲೂ ಮಧ್ಯಮ, ಮೇಲ್ಮಧ್ಯಮ ಜೀವನದ ಜನರ ಕಥೆ ಇದು. ಇದನ್ನು ಬರೆದ ಇಪ್ಪತ್ತೇಳು ಜನರೂ ಬದುಕನ್ನು ಕಂಡ ಇಪ್ಪತ್ತೇಳು ಆಯಾಮಗಳು ಒಟ್ಟುಗೂಡಿ ಒಂದು ಶಬ್ದಚಿತ್ರವನ್ನು ರಚಿಸಿದಂತೆ ಈ ಕಾದಂಬರಿ ಮೂಡಿಬಂದಿದೆ.

ಇದರ ಕಥಾವಸ್ತುವಿನಲ್ಲಿ ತುಂಬಿಕೊಂಡಿರುವ ಒಂದು ಮುಖ್ಯ ಅಂಶ ಕಥೆಯ ಬಗೆಗಿನ ಸಿನ್ಸಿಯಾರಿಟಿ ಅಥವಾ ಪ್ರಾಮಾಣಿಕತೆ. ಯಾಕೆಂದರೆ ಇಲ್ಲಿನ ಎಲ್ಲ ಪಾತ್ರಗಳೂ ತಾವು ನಂಬಿಕೊಂಡ ಭಾವಗಳಿಗೆ, ಭಾವನೆಗಳಿಗೆ ಕೊನೆಯವರೆಗೂ ಬದ್ಧರಾಗಿಯೇ ಉಳಿಯುತ್ತಾರೆ. ನೆಲದಲ್ಲೇ ಆಳವಾಗಿ ಬೇರೂರಿದ ಸಂಬಂಧಗಳು, ಮತ್ತು ಮೌಲ್ಯಗಳಿಗೆ ಪ್ರಾಧಾನ್ಯ ಕೊಟ್ಟಂಥ ಹಿರಿತಲೆಗಳಿಂದ ಹಿಡಿದು ಮರಿಮೊಮ್ಮಕ್ಕಳು ಹುಟ್ಟಿ ಬೆಳೀತಾ ಇದ್ದಂಥ ವಿದೇಶೀ ನೆಲ ಅಮೇರಿಕದವರೆಗಿನ ಅನೇಕ ಜೀವಗಳ ಇಂಥ ಒಂದು ದೀರ್ಘಕಾಲದ ಪಯಣದ ಕಥೆಯನ್ನು 'ಪಲ್ಲಟ' ನಮಗೆ ಹೇಳುತ್ತದೆ.

'ಪಲ್ಲಟ' ಕಾದಂಬರಿ ಸುಮಾರು ಮೂರು ತಲೆಮಾರುಗಳು ಅಂದರೆ ಕೇಶವರಾಯರು, ಸಾಂಬಶಿವರಾಯರು, ನಾರಾಯಣರಾಯರು, ಮಾಧವ, ಗೋವಿಂದ, ರುಕ್ಮಿಣಮ್ಮ,, ಲಕ್ಷ್ಮೀದೇವಿಯವರಂಥ ಅನೇಕ ಹಿರಿಯರು ಬದುಕಿ ಬಾಳಿದ್ದನ್ನು ಹೇಳುತ್ತ ನಮ್ಮದೇ ನೆಲ, ಇಲ್ಲಿನ ನದೀನೀರು, ಸಮೃದ್ಧ ಮಣ್ಣಿನ ಸಂಗತಿಗಳನ್ನು ಆರು ದಶಕಗಳ ಕಾಲಘಟ್ಟದಲ್ಲಿನ ಆ ಸರಳ ಸುಂದರ ಸಂಗತಿಗಳಾಗಿ ಕಥಿಸುತ್ತ ಹೋಗುತ್ತದೆ. ಇಲ್ಲಿ ಸಮಸ್ಯೆಗಳು ಇಲ್ಲ ಅಂತಲ್ಲ, ಸಮಸ್ಯೆಗಳಿಲ್ಲದ ಬದುಕು ಬದುಕೇ ಅಲ್ಲ ಅಲ್ಲವೇ? ಆದರೂ ಇಲ್ಲಿ ಹಿರಿಯರು ಮತ್ತು ಕಿರಿಯರಿಬ್ಬರೂ ಅವನ್ನು ದಾಟುವಲ್ಲಿ ತೋರಿಸುವ ವಿವೇಚನೆ ಈ ಕಾದಂಬರಿಯ ಮುಖ್ಯ ಅಂಶ ಅಂತ ನನಗೆ ಅನಿಸಿತು.

ಅಚ್ಯುತ ಮತ್ತು ಅನುರೂಪಿಣಿ ಇವರಿಬ್ಬರದ್ದೇ ಪ್ರಮುಖ ಭಾಗ ಆಗಿದ್ದರೂ ಅವರೊಂದಿಗೇ ಬೆಳೆಯುವ ಅನೇಕ ಪಾತ್ರಗಳು ತಮ್ಮ ಶಕ್ತ್ಯಾನುಸಾರ ಕಥೆಯನ್ನು ಬೆಳೆಸಿವೆ.

ಅಚ್ಯುತ ಮತ್ತು ಅನುರೂಪಿಣಿಯರು ತಮ್ಮ ಬದುಕನ್ನು ಕಟ್ಟಿಕೊಂಡ ರೀತಿ, ಎಡರುತೊಡರುಗಳನ್ನು ನಿಭಾಯಿಸುವಲ್ಲಿ ತೋರಿಸಿದ ಆತ್ಮವಿಶ್ವಾಸ ಮತ್ತು ಅವರ ಸ್ವಸ್ಥ ಮನಸ್ಸು, ಇವೆರಡೂ ಹೇಗೆ ಸಹಾಯ ಮಾಡುತ್ತವೆ, ಅವಳು ತನ್ನ ಅನಾರೋಗ್ಯವನ್ನು ಹೇಗೆ ಗೆದ್ದುಕೊಳ್ತಾಳೆ ಮತ್ತು ಸ್ಥಿತಪ್ರಜ್ಞತೆಯನ್ನು ಸಾಧಿಸ್ತಾಳೆ ಎಂಬ ಅಂಶಗಳು ಕಥೆಯ ಬೆಳವಣಿಗೆಗೆ ಪೂರಕವಾಗಿವೆ.

ಇವರಿಬ್ಬರೂ ಹಿರಿಯರ ಮಾತು, ಆದೇಶಗಳನ್ನು ಮೀರದೆ ಅವರ ಸ್ಥಾನಕ್ಕೆ ಗೌರವವನ್ನು ಕೊಟ್ಟಂತಹ ರೀತಿ ನಿಜಕ್ಕೂ ಮನಸ್ಸನ್ನು ತಾಕುತ್ತದೆ. ಇದರ ಜೊತೆ ಜೊತೆಯಲ್ಲೇ ಸಾಗುವ ಸುಬ್ರಹ್ಮಣ್ಯನ ಸ್ವಭಾವದ ಏರಿಳಿತಗಳು, ಅವನ ಬದುಕು, ಕಟ್ಟಿದ ಮನೆ ಬಿಟ್ಟು ಹೊರಬೀಳಬೇಕಾದ ಅವನು ವೃದ್ಧಾಶ್ರಮಲ್ಲಿದ್ದು ಅನುಭವಿಸುವ ಕೊನೆಯ ದಿನಗಳ ಆ ಅಸಹಾಯಕ ಸಂಕಟ ಕೂಡ ಅಷ್ಟೇ ಪ್ರಮಾಣದ ನೋವನ್ನು ತುಂಬುತ್ತದೆ. ಮಕ್ಕಳಿಗಾಗಿ ತಾಯ್ತಂದೆ ಮಾಡುವ ತ್ಯಾಗವೇ ತಪ್ಪೋ ಅಥವಾ ಇಂಥ ಕೆಲವು ಉದಾಹರಣೆಗಳಿಂದ ಎಲ್ಲ ಮಕ್ಕಳನ್ನೂ, ಎಲ್ಲಾ ಸಂಬಂಧಗಳನ್ನೂ ಅಳೆಯುವುದೇ ತಪ್ಪಾ ಎಂಬ ಜಿಜ್ಞಾಸೆ ಇಲ್ಲಿ ನಮಗೆ ಎದುರಾಗುತ್ತದೆ.

ಯಾಕೆಂದರೆ ಮುಂದಿನ ಹಂತಗಳಲ್ಲಿ, ಅಂದರೆ ಮುಂದಿನ ಎರಡು ದಶಕಗಳ ಸಮಯದಲ್ಲಿ ವಿದೇಶ ಅದರಲ್ಲೂ ಮುಖ್ಯವಾಗಿ ಅಮೇರಿಕ ಎಂಬ ಅವಕಾಶಗಳ ನೆಲಕ್ಕೆ ಹೋಗಿ ಕೂತ ಮಕ್ಕಳು ಮತ್ತು ಇಲ್ಲೇ ಉಳಿದ ಇಳಿವಯಸ್ಸಿನ ತಾಯ್ತಂದೆಯರ ನಡುವೆ ಉಂಟಾದ ಎರಡು ಬಗೆಯ ದೂರದ ವಿಷಯವನ್ನು 'ಪಲ್ಲಟ' ಚರ್ಚಿಸುತ್ತದೆ. ಮಕ್ಕಳಿಂದ ಇಂಥ ಪ್ರಸಂಗಗಳ ಕಾರಣದಿಂದ ತಾಯಿತಂದೆಯರಲ್ಲಿ ಉಂಟಾಗುವ 'ಎಂಪ್ಟಿನೆಸ್ಟ್ ಸಿಂಡ್ರೋಮ್' ಎಂಬ ಸಂಗತಿ ಎಲ್ಲ ಕಡೆ ಚರ್ಚೆಗೆ ಒಳಗಾಗ್ತಾ ಇದೆ. ಆದರೆ ಹೊಸನೀರು ಬಂದಾಗ ಹಳೆನೀರು ಸರಿದು ಹೋಗುವಂಥ ಸಾಮಾಜಿಕ ಸ್ಥಿತ್ಯಂತರಗಳಲ್ಲಿ ಇದು ಈಗ ಮನೆಮನೆಯ ಕಥೆ ಆಗ್ತಾ ಇದೆ.

ನಮ್ಮಲ್ಲಿ ಅನಾದಿ ಕಾಲದಿಂದಲೂ ಕುಟುಂಬ ಅನ್ಯೋನ್ಯದು ಕೂಡಿ ಬಾಳುವ ಸುಂದರ ವ್ಯವಸ್ಥೆ, ಸಾಮಾನ್ಯವಾಗಿ ಮಕ್ಕಳನ್ನು ಹೊತ್ತು, ಹೆತ್ತು ಬೆಳೆಸಿದ ಅಪ್ಪ ಅಮ್ಮ ಅವರಿಂದ ಕೆಲವು ಸಂಗತಿಗಳನ್ನು ನಿರೀಕ್ಷಿಸ್ತಾರೆ. ಮುಖ್ಯವಾಗಿ ಮುಪ್ಪಿನಲ್ಲಿ. ವಿದೇಶಗಳದ್ದು ಒಂದು ರೀತಿಯಲ್ಲಿ ಹಕ್ಕಿಗಳ ಜೀವನದ ಹಾಗೆ. ರೆಕ್ಕೆ ಮೂಡಿತೋ ಮರಿಗಳು ಹಾರಿ ಹೋಗಿಬಿಡ್ತವೆ... ಅದೇ ಅವರ ಸಮಾಜ.

ಮುಂದಿನ ಪೀಳಿಗೆಯ ಪ್ರಾಂಜಲ, ಪ್ರಕೃತಿ, ಇವರಿಬ್ಬರೂ ಸಕಾರಾತ್ಮಕತೆ ಮತ್ತು ನಕರಾತ್ಮಕತೆಯ ನಿದರ್ಶನಗಳು. ಇಲ್ಲಿ ಇನ್ನೂ ಒಂದು ಮುಖ್ಯ ಅಂಶ ನಮ್ಮ ಕಣ್ಣಿಗೆ ಎದ್ದು ಕಾಣುತ್ತದೆ. ಹಲವಾರು ವರ್ಷಗಳ ಹಿಂದೆ ಹುಟ್ಟಿ ಬೆಳೆದ ಮಕ್ಕಳು ಉದ್ಯೋಗ ನಿಮಿತ್ತ ಬೇರೆ ಊರಿಗೆ ಹೋಗಿ ಇದ್ದುಬಿಡ್ತಾ ಇದ್ದದ್ದು ಅಪರೂಪ ಏನಿರಲಿಲ್ಲ. ಯಾಕೆಂದರೆ ಬೇಕೆನಿಸಿದಾಗ, ಅವಶ್ಯಕತೆ ಇದ್ದರೆ ತಾಯಿತಂದೆ, ಬಂಧು ಬಳಗದ ಜೊತೆ ಭೇಟಿ, ಪ್ರಯಾಣ, ಹಬ್ಬ ಹರಿದಿನ, ಜಾತ್ರೆ, ಮದುವೆಗಳು ಇದೆಲ್ಲಾ ಸಹಜವಾಗಿ ಸಾಧ್ಯವಾಗಿತ್ತು.

ಕೆಲವು ಮಕ್ಕಳು ತಮ್ಮ ಪಯಣವನ್ನು ಸಾರ್ಥಕಪಡಿಸಿಕೊಂಡರೆ ಪ್ರಕೃತಿಯಂಥ ದಿಟ್ಟ ಹುಡುಗಿ ಇಲ್ಲಿ ವಿರೋಧಾಭಾಸಗಳ ಮತ್ತು ವಿಚಿತ್ರ ಹಠಮಾರಿತನದ ಪ್ರತೀಕವಾಗ್ತಾಳೆ. ಇಲ್ಲಿ ಯೌವನ ಮತ್ತು ಸ್ವಾತಂತ್ರ್ಯ ಇವೆರಡರದ್ದೂ ದುರುಪಯೋಗವನ್ನು

ಮಾಡಿಕೊಳ್ಳುವ ಅವಳು ಓದುಗರಲ್ಲಿ ಯಾವುದೇ ಸಹಾನುಭೂತಿಯನ್ನು ಗಳಿಸದ ನತದೃಷ್ಟೆ ಅನ್ನಬಹುದು. ಆದರೆ ಇಲ್ಲಿ ನಾವು ಗಮನಿಸಬೇಕಾದ ಒಂದು ಅಂಶ ಕೂಡ ಇದೆ. ಸಮಯ ಇರುವಾಗಲೇ ಪ್ರಕೃತಿ ತಾನು ಮಾಡಿಕೊಂಡ ಅನಾಹುತದ ಬಗ್ಗೆ ಅರ್ಥ ಮಾಡಿಕೊಳ್ಳುತ್ತಾಳೆ.

ಅನುರೂಪಿಣಿ, ಅಚ್ಯುತರು ತಮ್ಮ ಮಗಳು ಮತ್ತಷ್ಟು ಬಿದ್ದು ಹೋಗದಂತೆ ನೆರಳಾಗಿ ಉಳಿದು ತಾಯ್ತಂದೆಯರ ಕ್ಷಮಾಗುಣಕ್ಕೆ ನಿದರ್ಶನ ಆಗುತ್ತಾರೆ. ಪ್ರಾಂಜಲ ತಂಗಿಯನ್ನು ಯಾವತ್ತೂ ಬಿಟ್ಟುಕೊಡುವುದಿಲ್ಲ.. ಇದೂ ಸಮಾಧಾನಕರ ವಿಷಯವೇ. ಡೇವಿಡ್‌ನ ಅಗಾಧ ಕ್ಷಮಾಗುಣದ ವ್ಯಕ್ತಿತ್ವ ಓದುಗರಲ್ಲಿ ಅವನ ಬಗ್ಗೆ ಗೌರವ ಮೂಡಿಸೋದು ಸುಳ್ಳಲ್ಲ.

ಕೇಶವರಾಯರು ಮೊಮ್ಮಗನ ಜೀವನಕ್ಕೆ ಶಿಕ್ಷಣದ ಶ್ರೀಕಾರವನ್ನು ಇಡುವ ಸಂದರ್ಭದೊಂದಿಗೆ ಆರಂಭವಾಗುವ 'ಪಲ್ಲಟ' ಕಾದಂಬರಿಯ ಕಥೆ ಅವರ ಮರಿಮಗಳು ಪ್ರಕೃತಿಯು 'ಮರಳಿ ಮಣ್ಣಿಗೆ' ಬಂದಿಳಿಯುವ ಸಂದರ್ಭದಲ್ಲಿ ಮುಕ್ತಾಯವಾಗುತ್ತದೆ.

ಈ ಕಾದಂಬರಿ ನಮ್ಮಲ್ಲಿ ಹಲವಾರು ಜಿಜ್ಞಾಸೆಗಳು ಮತ್ತು ಪ್ರಶ್ನೆಗಳನ್ನು ಹುಟ್ಟಿಸುತ್ತದೆ. ಇಲ್ಲಿ ಇಪ್ಪತ್ತೇಳು ಅನುಭವೀ ಲೇಖಕರು ತಮ್ಮ ಲೇಖನಿಯಿಂದ ಇಂಥ ಜಿಜ್ಞಾಸೆಗಳು ಮತ್ತು ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿಯುವ ಪ್ರಯತ್ನ ಮಾಡಿದ್ದಾರೆ, ಮತ್ತದು ಒಂದು ಹಂತದ ಮಟ್ಟಿಗೆ ಸಫಲವೂ ಆಗಿದೆ.

ನಮ್ಮ ನಿಮ್ಮೆಲ್ಲರ ಜೀವನಕ್ಕೆ ತುಂಬ ಹತ್ತಿರವಾಗುತ್ತ ಇಂದಿನ ದಿನಗಳ ಕಥೆಯನ್ನು ಹೇಳುತ್ತ ವಿಭಿನ್ನ ಓದಿನ ಅನುಭವ ಕೊಡುವ ಈ ಕಾದಂಬರಿಯನ್ನು ಓದುವುದೇ ಒಂದು ಅಪರೂಪದ ಅನುಭವ.

–ಜಯಶ್ರೀ ದೇಶಪಾಂಡೆ
9986379024


ಸಮನ್ವಯ ಸಮಿತಿ – ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಎಚ್ಚೆಸ್ಕೆ ಬೆಳಕು ೦೮

ಡಾ ಪ್ರಧಾನ್ ಗುರುದತ್ತ ವಿರಚಿತ 'ಎಚ್ಚೆಸ್ಕೆ ಬದುಕು – ಬರೆಹ – ಸಂದರ್ಶನ' ಪುಸ್ತಕದ ಲೋಕಾರ್ಪಣೆ ಸಮಾರಂಭ

ಕಾರ್ಯಕ್ರಮ ವರದಿ: ಹು ವಾ ಶ್ರೀಪ್ರಕಾಶ್

ಸಮನ್ವಯ ಸಮಿತಿ (ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು) ಆಶ್ರಯದಲ್ಲಿ, ಸಮನ್ವಯ ಸಮಿತಿ ಕನ್ನಡವೇ ಸತ್ಯ ವಾಟ್ಸಾಪ್ ಸಾಂಸ್ಕೃತಿಕ ವೇದಿಕೆ ಹಾಗೂ ಮೈಸೂರು ಬ್ಯಾಂಕ್ ಕನ್ನಡ ಬಳಗದ ಸಹಯೋಗದೊಂದಿಗೆ ಈ ವರ್ಷದ "ಎಚ್ಚೆಸ್ಕೆ ಬೆಳಕು" ಕಾರ್ಯಕ್ರಮ 11.03.2023ರಂದು ಶನಿವಾರ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನ ಬಿ.ಪಿ.ವಾಡಿಯಾ ಸಭಾಂಗಣದಲ್ಲಿ ಜರುಗಿತು.



ಬೆಳಗ್ಗೆ 10.00 ಗಂಟೆಗೆ ವಿದುಷಿ ಶ್ರೀಮತಿ ವೆಂಕಟಲಕ್ಷ್ಮಿ (ಭಾರತೀಯ ಸ್ಟೇಟ್ ಬ್ಯಾಂಕಿನ ಶ್ರೀ ಶ್ರೀಧರ ಕೊಮರವಲ್ಲಿಯವರ ಪತ್ನಿ) ಅವರ ವೀಣಾವಾದನ ದೊಂದಿಗೆ ಕಾರ್ಯಕ್ರಮ ಆರಂಭವಾಯ್ತು. ಹೆಸರಾಂತ ಚಿಂತನಪಲ್ಲಿ ಸಂಗೀತ ಕುಟುಂಬದ ಶ್ರೀ ಬಾಲಸುಬ್ರಹ್ಮಣ್ಯಂ (ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿದ್ದ ಶ್ರೀ ಜಿ.ವಿ. ಹನುಮಂತ ಭಟ್ಟರ ಪುತ್ರರು) ಮೃದಂಗ ನುಡಿಸಿದರು.


ಸ್ವಾಗತ ಭಾಷಣ ಮಾಡಿದ 'ಸಮನ್ವಯ ಸಮಿತಿ ಕನ್ನಡವೇ ಸತ್ಯ" ವೇದಿಕೆಯ ಪ್ರಧಾನ ಸಂಚಾಲಕರಾದ ಶ್ರೀ ಬೆಂ ಶ್ರೀ ರವೀಂದ್ರ ಅವರು ಎಲ್ಲರನ್ನೂ ಸ್ವಾಗತಿಸಿ ವೇದಿಕೆಯಲ್ಲಿನ ಗಣ್ಯರನ್ನು ಪರಿಚಯಿಸಿದರು. ಎಚ್ಚೆಸ್ಕೆಯವರನ್ನು ಕುರಿತಂತೆ ಸಮಗ್ರವಾದ ಪುಸ್ತಕವೊಂದನ್ನು ತರಬೇಕೆಂಬುದು ನಮ್ಮ ಸುದೀರ್ಘ ಕನಸು. ನಮ್ಮ ಕೋರಿಕೆಯನ್ನು ಒಪ್ಪಿದ ಡಾ ಪ್ರಧಾನ ಗುರುದತ್ತರವರು "ಎಚ್ಚೆಸ್ಕೆ ಬದುಕು-ಬರಹ-ಸಂದರ್ಶನ" ಎಂಬ ಬೃಹತ್ ಗ್ರಂಥವನ್ನು ರಚಿಸಿ ನಮ್ಮ ಕನಸನ್ನು ಸಾಕಾರ ಮಾಡಿದ್ದಾರೆ ಎಂದರು.

ಸಮನ್ವಯ ಸಮಿತಿ (ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು) ಗೆ ಐವತ್ತು ವರ್ಷಗಳ ಇತಿಹಾಸವಿದೆ. ಎಪ್ಪತ್ತರ ದಶಕದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕಿನ ಪ್ರಧಾನ ಕಛೇರಿ ಮದರಾಸಿನಲ್ಲಿದ್ದು ಬ್ಯಾಂಕಿನಲ್ಲಿ ಅನ್ಯಭಾಷಿಕರ ಪ್ರಾಬಲ್ಯ ಬಹಳವಾಗಿತ್ತು. ಬ್ಯಾಂಕಿನ ವಾತಾವರಣದಲ್ಲಿ ಕನ್ನಡತನ ಇರಲೇ ಇಲ್ಲ. ಆ ಸಂದರ್ಭದಲ್ಲಿ ಕರ್ನಾಟಕದಲ್ಲಿ ಹಲವಾರು



ಕನ್ನಡಪರ ಚಳುವಳಿಗಳು ನಡೆಯುತ್ತಿದ್ದವು. ಆ ಪ್ರಭಾವದಿಂದ 1972ರಲ್ಲಿ ಬ್ಯಾಂಕಿನ ಬೆಂಗಳೂರು ನಗರ ಶಾಖೆಯಲ್ಲಿ ಕನ್ನಡ ಸಂಘ ಆರಂಭವಾಯ್ತು. ಪಾ.ರಾಜಗೋಪಾಲ್ ಅದರ ಕಾರ್ಯದರ್ಶಿಯಾಗಿದ್ದರು. ನಮ್ಮ ಚಟುವಟಿಕೆಗಳೆಲ್ಲ ಬಹಳ ಕ್ರಿಯಾಶೀಲವಾಗಿದ್ದವು. ಸಾಹಿತ್ಯಿಕ ಸಾಂಸ್ಕೃತಿಕ ಚಟುವಟಿಕೆಳ ಜೊತೆಗೇ "ಹಣ ಮತ್ತು ಬ್ಯಾಂಕಿಂಗ್" ವಿಚಾರಗಳಿಗೆ ಮೀಸಲಾದ "ಬ್ಯಾಂಕಿಂಗ್ ಪ್ರಪಂಚ"' ಎಂಬ ನಿಯತಕಾಲಿಕವನ್ನು ಹೊರತರಲು ನಿರ್ಧರಿಸಿದೆವು. ಇದಕ್ಕಾಗಿ ಆರ್ಥಿಕ ವಿಚಾರಗಳನ್ನು ಕನ್ನಡದಲ್ಲಿ ಸಮರ್ಥವಾಗಿ ಹೇಳಬಲ್ಲ ಸಂಪಾದಕರನ್ನು ಅರಸುತ್ತಿದ್ದಾಗ ರಿಸರ್ವ್ ಬ್ಯಾಂಕ್ ಕನ್ನಡ ಸಂಘದ ಅಧ್ಯಕ್ಷರಾಗಿದ್ದ ಶ್ರೀ ಸೂ ಸುಬ್ರಹ್ಮಣ್ಯಂರವರು ಪ್ರಾಚಾರ್ಯ ಎಚ್ಚೆಸ್ಕೆಯವರನ್ನು ಪರಿಚಯಿಸಿದರು.

'He came He saw, He conquered' ಎಂಬಂತೆ ಆಯಿತು. ಪ್ರಾ. ಎಚ್ಚೆಸ್ಕೆಯವರು ಭಾರತೀಯ ಭಾಷೆಗಳಲ್ಲೇ ಮೊದಲನೆಯದಾದ ಹಣ ಮತ್ತು ಬ್ಯಾಂಕಿಂಗ್‌ಗೆ ಮೀಸಲಾದ 'ಬ್ಯಾಂಕಿಂಗ್ ಪ್ರಪಂಚ' ಪತ್ರಿಕೆಯ ಸಾರಥ್ಯವಹಿಸಿದರು. 1980ರಲ್ಲಿ ಇದರ ಮೊದಲ ಸಂಚಿಕೆ ಪ್ರಕಟವಾಗಿ ಯಶಸ್ಸು ಕಂಡಿತು. ಸಂಚಿಕೆಗಳಿಗೆ ಆರ್ಥಿಕ ವಿಷಯಗಳ ಬಗ್ಗೆ ಕನ್ನಡದಲ್ಲಿ ಲೇಖನಗಳನ್ನು ಸಂಗ್ರಹಿಸುವುದು ಕಷ್ಟವಾಗಿತ್ತು. ಆ ಕಾರಣ ವಿವಿಧ ಬ್ಯಾಂಕುಗಳಲ್ಲಿದ್ದ ಕನ್ನಡದ ಆಸಕ್ತರನ್ನು ಸೇರಿಸಿ, ಎಚ್ಚೆಸ್ಕೆ ಅವರ ನೇತೃತ್ವದಲ್ಲಿ ವಿವಿಧ ಊರುಗಳಲ್ಲಿ 'ಬ್ಯಾಂಕಿಂಗ್ ಕಮ್ಮಟ' ಗಳನ್ನು ನಡೆಸಿ, ಅಭ್ಯರ್ಥಿಗಳಿಗೆ ಸೂಕ್ತ ತರಬೇತಿಯನ್ನು ನೀಡಲಾಯಿತು. ಅನೇಕರು ಆರ್ಥಿಕತೆ, ವಾಣಿಜ್ಯ ಮತ್ತು ಬ್ಯಾಂಕಿಂಗ್ ಕುರಿತ ಲೇಖನಗಳನ್ನು ಬರೆದರು. ಅನುವಾದ, ವಿಮರ್ಶೆಗಳು ನಡೆದವು. ಹೀಗೆ ಎಚ್ಚೆಸ್ಕೆಯವರು ಬ್ಯಾಂಕಿಂಗ್, ಆರ್ಥಿಕ ವಿಚಾರ, ಕನ್ನಡ ಬಳಕೆ, ಜೊತೆಗೆ ಬದುಕುವ ಕಲೆಯನ್ನು ನಮಗೆ ಹೇಳಿಕೊಟ್ಟರು. ಅದರ ಪರಿಣಾಮವಾಗಿಯೇ ನಾವಿಂದು ಅವರ ಸ್ಮರಣೆಯಲ್ಲಿ ಇಲ್ಲಿ ಸೇರಿದ್ದೇವೆ.



"ಬ್ಯಾಂಕಿಂಗ್ ಪ್ರಪಂಚ" ಮೊದಲು ಅರ್ಧವಾರ್ಷಿಕವಿದ್ದದ್ದು ತ್ರೈಮಾಸಿಕವಾಗಿ 2003ರವರೆಗೂ ನಡೆಯಿತು. ಆಗ ಎಚ್ಚೆಸ್ಕೆ ಅವರಿಗೆ ಅರವತ್ತು ದಾಟಿದ್ದರೂ ಯುವಕರ ಉತ್ಸಾಹ ಕಂಡು, 'ಮುದುಕರ ಜೊತೆ ಸೇರಿದರೆ ನನಗೆ ವಯಸ್ಸಾಗುತ್ತದೆ' ಎನ್ನುತ್ತಿದ್ದ ಅವರು ಕಮ್ಮಟ ನಡೆಯುವ ಸ್ಥಳಗಳಲ್ಲಿ ಸರಿಯಾದ ಅನುಕೂಲತೆಗಳಲ್ಲದಿದ್ದರೂ ಹೊಂದಿಕೊಂಡು ಎಲ್ಲರೊಂದಿಗೆ ಇರುತ್ತಿದ್ದರು. ಕಮ್ಮಟದ ಕುಲುಮೆಯಲ್ಲಿ ಅಪಾರ ಶಿಸ್ತು, ನಿಯಮಪಾಲನೆ ಇರುತ್ತಿತ್ತು. ಬೆಳಗ್ಗೆ ಐದು ಗಂಟೆಗೇ ಏಳುತ್ತಿದ್ದ ಅವರದು ಬಹಳ ಶಿಸ್ತಿನ ಜೀವನ. ಎಚ್ಚೆಸ್ಕೆಯವರ ನೇತೃತ್ವದಲ್ಲಿ ಪಾರಿಭಾಷಿಕ ಪದಗಳಿಗೆ ಮೀಸಲಾದ 'ಇಂಗ್ಲಿಷ್-ಕನ್ನಡ ಬ್ಯಾಂಕಿಂಗ್ ನಿಘಂಟು' 1985ರಲ್ಲಿ ಪ್ರಕಟಗೊಂಡಿತು. ಇದು ಕೂಡ ಭಾರತೀಯ ಭಾಷೆಗಳಲ್ಲಿ ಬ್ಯಾಂಕಿಂಗ್ ಬಗ್ಗೆ ಬಂದ ಮೊದಲ ನಿಘಂಟು. ಅದನ್ನು ಪರಿಷ್ಕರಿಸುವ ಕೆಲಸ ಇನ್ನೂ ಆಗಬೇಕಾಗಿದೆ. ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಬ್ಯಾಂಕಿಂಗ್ ನಿಘಂಟನ್ನು ಬಿಡುಗಡೆ ಮಾಡಿದರು. ಹೆಗಡೆಯವರನ್ನು ಒಪ್ಪಿಸಿ ಕರೆತಂದಿದ್ದ ಶ್ರೀ ಪಿ.ಜಿ.ಆರ್.ಸಿಂಧ್ಯರವರು ಇಂದಿನ ಸಭೆಯ ಅಧ್ಯಕ್ಷತೆ ವಹಿಸಿದ್ದಾರೆ ಎಂದು ಬೆಂ.ಶ್ರೀ. ರವೀಂದ್ರ ಅವರು ನಮ್ಮ ಸಂಘಟನೆಗೆ ಪ್ರಾ.ಎಚ್ಚೆಸ್ಕೆಯವರ ಕೊಡುಗೆಯನ್ನು ಸ್ಮರಿಸಿದರು.

2008ರಲ್ಲಿ ಎಚ್ಚಸ್ಕೆಯವರು ನಮ್ಮನ್ನಗಲಿದರು. 2014ರಿಂದ ಎಚ್ಚೆಸ್ಕೆಯವರ ಸ್ಮರಣೆಗಾಗಿ ಪ್ರತಿವರ್ಷವೂ "ಎಚ್ಚೆಸ್ಕೆ ಬೆಳಕು" ಕಾರ್ಯಕ್ರಮವನ್ನು ಏರ್ಪಡಿಸುತ್ತಿದ್ದು, ಇಂದಿನದು ಎಚ್ಚೆಸ್ಕೆ ಬೆಳಕು ಕಾರ್ಯಕ್ರಮದ ಎಂಟನೆಯ ಆವೃತ್ತಿ.. 2019ರಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಚ್ಚೆಸ್ಕೆಯವರ ಶಿಷ್ಯರೂ, ಸಹೋದ್ಯೋಗಿಯೂ, ನಿಕಟವರ್ತಿಯೂ ಆಗಿದ್ದ ಶ್ರೀ ಪ್ರಧಾನ್ ಗುರುದತ್ತ ಅವರು ಬಂದಿದ್ದರು. ನಾವು ಎಚ್ಚೆಸ್ಕೆಯವರನ್ನು ಬ್ಯಾಂಕಿನ ಕನ್ನಡ ಸಂಘದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಒಂದು ಕೋನದಿಂದ ಮಾತ್ರ ನೋಡಿದ್ದು, ಸಮಗ್ರವಾಗಿ ಎಚ್ಚೆಸ್ಕೆಯವರ ಬಗ್ಗೆ ತಿಳಿದುಕೊಳ್ಳಬೇಕು ಮತ್ತು ಅದು ದಾಖಲೆಯಾಗಬೇಕು ಎಂದು ಡಾ. ಪ್ರಧಾನ್ ಗುರುದತ್ತರ ಬಳಿ ಎಚ್ಚೆಸ್ಕೆಯವರ ಬಗ್ಗೆ ಪುಸ್ತಕ ಬರೆಯಲು ಮನವಿ ಮಾಡಿಕೊಂಡೆವು. ಅವರು ಕೂಡಲೇ ಒಪ್ಪಿದರು. ಎಚ್ಚೆಸ್ಕೆಯವರು ಬರೆದ ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸುವ ಪ್ರಯತ್ನದಲ್ಲಿ 69 ಪುಸ್ತಕಗಳು ಮಾತ್ರ ಲಭ್ಯವಾದವು. ಈ ಎಲ್ಲ ಪುಸ್ತಕಗಳನ್ನೂ ಓದಿ, ಅಧ್ಯಯನ ಮಾಡಿ ಗುರುದತ್ತರು "ಎಚ್ಚೆಸ್ಕೆ–ಬದುಕು–ಬರಹ–ಸಂದರ್ಶನ" ಎಂಬ ಸುಮಾರು 500 ಪುಟಗಳ ಬೃಹತ್ ಗ್ರಂಥವನ್ನು ಬಹಳ ಶ್ರಮಪಟ್ಟು ನಮಗಾಗಿ ರಚಿಸಿದ್ದಾರೆ. ಇದಕ್ಕಾಗಿ ಡಾ. ಗುರುದತ್ತರಿಗೆ ಹೇಗೆ ಕೃತಜ್ಞತೆ ಹೇಳಬೇಕೆಂದು ತಿಳಿಯುತ್ತಿಲ್ಲ. ಪುಸ್ತಕ ಹೆಚ್ಚು ಜನರನ್ನು ತಲುಪಬೇಕೆಂಬ ಉದ್ದೇಶದಿಂದ ಕರ್ನಾಟಕದ ಹೆಸರಾಂತ ಪ್ರಕಾಶಕರಾದ ಸಪ್ನಾ ಬುಕ್ ಹೌಸ್‌ನವರನ್ನು ಕೇಳಿದಾಗ ಅವರು ಒಪ್ಪಿಕೊಂಡು ಪ್ರಕಟಿಸಿದ್ದಾರೆ ಎಂದ ಶ್ರೀ ಬೆಂ.ಶ್ರೀ.ರವೀಂದ್ರ ಅವರು, ಶ್ರೀ ಪ್ರಧಾನ ಗುರುದತ್ತರವರಿಗೂ ಅವರ ಶ್ರೀಮತಿಯವರಿಗೂ ಸ್ವಾಗತ ಕೋರಿದರು.

ಕನ್ನಡದ ಹೆಸರಾಂತ ದಿನಪತ್ರಿಕೆ 'ಪ್ರಜಾವಾಣಿ' ಬಳಗಕ್ಕೂ, ಎಚ್ಚೆಸ್ಕೆಯವರಿಗೂ ಅವಿನಾಭಾವ ಸಂಬಂಧ. ಈ ಪತ್ರಿಕೆಯಲ್ಲಿ ಎಚ್ಚೆಸ್ಕೆಯವರು ಹಲವು ವರ್ಷ ಆರ್ಥಿಕ ಅಂಕಣಗಳನ್ನು ಅದ್ಭುತವಾಗಿ ಬರೆಯುತ್ತಿದ್ದರು. ಅವುಗಳ ಸಂಗ್ರಹವೇನಾದರೂ ಇದ್ದಿದ್ದರೆ ಅದೊಂದು ಭಾರತದ ಆರ್ಥಿಕ ಇತಿಹಾಸದ ದಾಖಲೆಯಾಗುತ್ತಿತ್ತು. ಅಲ್ಲದೆ, 'ಸುಧಾ' ವಾರಪತ್ರಿಕೆಯಲ್ಲಿಯೂ

ವಿಚಾರಪ್ರಿಯ, ಸಮದರ್ಶಿ ಎಂಬ ಹೆಸರಿನಲ್ಲಿ 'ವಾರದಿಂದ ವಾರಕ್ಕೆ' ಹಾಗೂ 'ವಾರದ ವ್ಯಕ್ತಿ' ಎಂಬ ಜನಪ್ರಿಯ ಅಂಕಣ ಗಳನ್ನು ಎಚ್ಚೆಸ್ಕೆಯವರು ಬರೆಯುತ್ತಿದ್ದರು. ಹಾಗಾಗಿ ಇಂದು ಎಚ್ಚೆಸ್ಕೆಯವರ ಪುಸ್ತಕ ಬಿಡುಗಡೆಗೆ ಪ್ರಜಾವಾಣಿಯ ಕಾರ್ಯನಿರ್ವಾಹಕ ಸಂಪಾದಕರಾದ ಶ್ರೀ ರವೀಂದ್ರ ಭಟ್ಟರವರೇ ಸೂಕ್ತ ವ್ಯಕ್ತಿಯೆಂದು ಆಹ್ವಾನಿಸಿದೆವು. ಅವರು ಒಪ್ಪಿ ಬಂದಿರುವುದು ಸಂತೋಷ ಎಂದು ಹೇಳಿ ಅವರಿಗೆ ಸ್ವಾಗತ ಬಯಸಿದರು.

ಶ್ರೀ ಪಿ.ಜಿ.ಆರ್.ಸಿಂಧ್ಯರವರು ಕರ್ನಾಟಕದಲ್ಲಿ ಸುಪರಿಚಿತರು. ವಿದ್ಯಾರ್ಥಿ ಚಳುವಳಿಯ ನಾಯಕರಾಗಿ, ಎಮರ್ಜೆನ್ಸಿಯಲ್ಲಿ ಜೈಲಿಗೆ ಹೋಗಿರುವವರಲ್ಲದೆ, ಸುಮಾರು ಹದಿನೆಂಟು ವರ್ಷಗಳ ಕಾಲ ಕ್ಯಾಬಿನೆಟ್ ದರ್ಜೆಯ ಸಚಿವರಾಗಿ, ದಕ್ಷ, ಪ್ರಾಮಾಣಿಕ ಆಡಳಿತಗಾರರಾಗಿ ಕನ್ನಡ ಜನಮಾನಸದಲ್ಲಿದ್ದಾರೆ. ಪ್ರಸಕ್ತ ಕರ್ನಾಟಕ ಸೌಟ್ಸ್‌ನ ಮುಖ್ಯಸ್ಥರಾಗಿರುವ ಸಿಂಧ್ಯರಿಗೂ, ಎಚ್ಚೆಸ್ಕೆಯವರಿಗೂ ಒಳ್ಳೆಯ ಸ್ನೇಹ. 1968ರಿಂದಲೂ ಸಿಂಧ್ಯ ಅವರು ನನ್ನ ವೈಯುಕ್ತಿಕ ಸ್ನೇಹಿತರೂ ಹೌದು. ಇಂದಿನ ಸಮಾರಂಭದ ಅಧ್ಯಕ್ಷತೆ ವಹಿಸಲು ಅವರು ತುಂಬು ಹೃದಯದಿಂದ ಒಪ್ಪಿಕೊಂಡು ಆಗಮಿಸಿರುವುದು ಸಂತೋಷ ಎಂದ ಶ್ರೀ ರವೀಂದ್ರ ಅವರು ಶ್ರೀ ಪಿಜಿಆರ್ ಸಿಂಧ್ಯ ಅವರಿಗೆ ಸ್ವಾಗತ ಕೋರಿದರು.

ಕಾರ್ಯಕ್ರಮಕ್ಕೆ ಆಗಮಿಸಿರುವ ಎಚ್ಚೆಸ್ಕೆಯವರ ಪುತ್ರರಾದ ಶ್ರೀ ಎಚ್.ಕೆ.ಪಾರ್ಥಸಾರಥಿಯವರನ್ನೂ, ಮಾಧ್ಯಮ ಮಿತ್ರರನ್ನೂ ಸ್ವಾಗತಿಸಿದ ಶ್ರೀ ರವೀಂದ್ರ ಅವರು, ವಿವಿಧ ಕಮ್ಮಟಗಳಲ್ಲಿ ಭಾಗವಹಿಸಿ ಎಚ್ಚೆಸ್ಕೆಯವರ ಗರಡಿಯಲ್ಲಿ ಕಮ್ಮಟಿಗರಾಗಿ ತರಬೇತಿ ಪಡೆದು, ಅವರ ಮೇಲಿನ ಅಭಿಮಾನದಿಂದ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವ ಹಲವು ಮಿತ್ರರಿಗೂ ಮತ್ತು ಇತರರಿಗೂ ಹಾರ್ದಿಕ ಸ್ವಾಗತ ಕೋರಿದರು.

ವೇದಿಕೆಯಲ್ಲಿದ್ದ ಗಣ್ಯರು ದೀಪ ಬೆಳಗಿಸುವ ಮೂಲಕ ಔಪಚಾರಿಕವಾಗಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಂತರ ಶ್ರೀ ರವೀಂದ್ರ ಭಟ್ಟರವರು 'ಎಚ್ಚೆಸ್ಕೆ ಬದುಕು-ಬರಹ-ಸಂದರ್ಶನ' ಕೃತಿಯನ್ನು ಬಿಡುಗಡೆ ಮಾಡಿದರು. ಶ್ರೀ ರವೀಂದ್ರ ಭಟ್ಟರು ಮಾತನಾಡಿ, ಎಚ್ಚೆಸ್ಕೆ ಬದುಕು ಬರಹ ಸಂದರ್ಶನ ಕೃತಿಯನ್ನು ಕೊಟ್ಟು ಶ್ರೀ ಪ್ರಧಾನ್ ಗುರುದತ್ತರವರು ಮಹದುಪಕಾರ ಮಾಡಿದ್ದಾರೆ. ಎಚ್ಚೆಸ್ಕೆಯವರ ಜೊತೆ ನನಗೆ ಇನ್ನೂ ಹೆಚ್ಚಿನ ಸಂಬಂಧ ಇತ್ತು. ಅವರು ತೀರಿಕೊಂಡ ನಂತರ ಅವರ ಹೆಸರಿನಲ್ಲಿ ಮಾಡಿದ ಎಚ್ಚೆಸ್ಕೆ ಪ್ರತಿಷ್ಠಾನದಿಂದ ಪತ್ರಕರ್ತರಿಗೆ ನೀಡಲಾಗುವ ಮೊದಲ ಪ್ರಶಸ್ತಿ ನಾನು ಪಡೆದಿದ್ದೆ. ಎಚ್ಚೆಸ್ಕೆಯವರ ಬಹುತೇಕ ಬರಹಗಳನ್ನು ಪರಿಚಯಿಸಿರುವ ಈ ಕೃತಿ ಇವತ್ತಿನ ಕಾಲಕ್ಕೆ ಬಹಳ ಮುಖ್ಯ. ಏಕೆಂದರೆ ಒಬ್ಬ ಪತ್ರಕರ್ತ ಹೇಗಿರಬೇಕು, ಹೇಗಿದ್ದ ಎಂಬ ಬಗ್ಗೆ ಈ ಪುಸ್ತಕ ಹೇಳುತ್ತದೆ. ಅಕ್ಷರ ಸಂತನ ಬಗೆಗಿನ ಅಪೂರ್ವ ಅಕ್ಷರಧಾರೆ ಎಂದಿರುವಲ್ಲಿ ಸಂತ ಎಂಬ ಪದಕ್ಕೆ ವೈರಾಗ್ಯ ಎಂಬ ಅರ್ಥವೂ ಇರುವುದರಿಂದ ಅಕ್ಷರಗಳನ್ನು ನಂಬಿ ಅದರಿಂದಲೇ ಬದುಕಿದ ಎಚ್ಚೆಸ್ಕೆಯವರನ್ನು 'ಅರ್ಥಸಂತನ ಬಗೆಗಿನ ಅಪೂರ್ವ ಅಕ್ಷರ ಧಾರೆ' ಅನ್ನುವುದು ಹೆಚ್ಚು ಸೂಕ್ತ ಎಂದರು. ಎಚ್ಚೆಸ್ಕೆಯವರಿಗೆ ಪಿಂಚಣಿ ಸಿಗದ ವಿಚಾರ ತಿಳಿದು ನಾನೂ ಒಂದು ಲೇಖನ ಬರೆದಿದ್ದೆ. ವಿಷಯ ವಿಧಾನಸಭೆಯಲ್ಲಿ ಪ್ರಸ್ತಾಪವಾದರೂ ಅವರಿಗೆ ಹಣ ಬರಲಿಲ್ಲ ಎಂದೂ ರವೀಂದ್ರ ಭಟ್ಟರು ವಿಷಾದಿಸಿದರು.

ಎಚ್ಚೆಸ್ಕೆಯವರು ಯಶಸ್ವೀ ಪತ್ರಕರ್ತ ಮಾತ್ರವಲ್ಲ ಬಹಳ ಒಳ್ಳೆಯ ಪತ್ರಕರ್ತರೂ ಆಗಿದ್ದರು. ಇಂದು ಸಮಾಜದಲ್ಲಿ ಯಶಸ್ವೀ ಪತ್ರಕರ್ತರು ನೂರಾರು ಜನ ಸಿಗಬಹುದು. ಆದರೆ ಒಬ್ಬ ಒಳ್ಳೆಯ ಪತ್ರಕರ್ತ ಸಿಗುವುದಿಲ್ಲ. ಇಂದಿನ ಪತ್ರಕರ್ತರಿಗೆ ಎಚ್ಚೆಸ್ಕೆ ಯವರನ್ನು ಪರಿಚಯಿಸದಿದ್ದರೆ ಅದು ದುರಂತವಾಗುತ್ತದೆ. ಎಚ್ಚೆಸ್ಕೆಯವರು ಪೇಪರ್ ಹಂಚುತ್ತಾ ಕಷ್ಟದಲ್ಲಿ ಬೆಳೆದು ಬಂದವರು. ಪತ್ರಕರ್ತ 'ಜಾಕ್ ಆಫ್ ಆಲ್ ಮಾಸ್ಟರ್ ಆಫ್ ಒನ್' ಆಗಿರಬೇಕು ಎಂದವರು. ಹಾಗೆಯೇ ಅರ್ಥಶಾಸ್ತ್ರದಲ್ಲಿ

ಮಾಸ್ಟರ್ ಆಗಿದ್ದರು. ಕರ್ನಾಟಕದಲ್ಲಿರುವ ಎಲ್ಲ ಪತ್ರಿಕೋದ್ಯಮ ವಿಭಾಗದವರಿಗೆ ಈ ಪುಸ್ತಕ ತಲುಪಬೇಕು. ನಮಗೆ ಏನೂ ಗೊತ್ತಿಲ್ಲ ಅನ್ನುವುದು ಇವತ್ತಿನ ಪತ್ರಕರ್ತರಿಗೆ ಗೊತ್ತಾಗಬೇಕು. ಎಚ್ಚೆಸ್ಕೆಯವರದು ಬಹಳ ಸರಳವಾದ ಸೊಗಸಾದ ಭಾಷೆ. ಇಂದು ಪತ್ರಕರ್ತನಿಗೆ ಐವತ್ತು ಕನ್ನಡ ಶಬ್ದ, ಅದರಲ್ಲಿ ಇಪ್ಪತ್ತೈದು ವಿಶೇಷಣಗಳು ಗೊತ್ತಿದ್ದರೆ ಸಾಕು ಎಂಬಂತಾಗಿದೆ. ಪತ್ರಿಕೋದ್ಯಮದಲ್ಲಿ ಭಾಷೆಯಾಗಲೀ, ಇತಿಹಾಸವಾಗಲಿ ಒಂದು ಸಬ್ಜೆಕ್ಟ್ ಅಲ್ಲ. ಹಾಗಾಗಿ ಕಲಿಯುವುದೇ ಇಲ್ಲ. ಈ ಪದ್ಧತಿ ಬದಲಾಗುವುದಕ್ಕೆ ಎಚ್ಚೆಸ್ಕೆಯವರ ಈ ಪುಸ್ತಕ ಕಾರಣವಾಗುತ್ತದೆ ಎಂದು ಭಾವಿಸುವೆ. ಅದಕ್ಕಾಗಿ ಈ ಪುಸ್ತಕ ತಂದ ಪ್ರಧಾನ ಗುರುದತ್ತರವರನ್ನೂ ಸಮನ್ವಯ ಸಮಿತಿಯ ಒಕ್ಕೂಟದ ಎಲ್ಲ ಸದಸ್ಯರನ್ನೂ ಅಭಿನಂದಿಸುತ್ತೇನೆ ಎಂದು ಹೇಳಿದ ರವೀಂದ್ರ ಭಟ್ಟರು ತಮ್ಮ ಮಾತು ಮುಗಿಸಿದರು.


ನಂತರ ಡಾ ಪ್ರಧಾನ್ ಗುರುದತ್ತ ದಂಪತಿಗಳನ್ನು ಸನ್ಮಾನಿಸಲಾಯ್ತು. ಅಭಿನಂದನಾ ಪತ್ರವನ್ನು ಶ್ರೀ ಎಂ ಎಲ್ ಎಸ್ ಸುದರ್ಶನರವರು ಓದಿದರು.



ಶ್ರೀ ಪ್ರಧಾನ ಗುರುದತ್ ದಂಪತಿಗಳಿಗೆ ಸನ್ಮಾನ

ಡಾ ಪ್ರಧಾನ್ ಗುರುದತ್ತರು ಮಾತನಾಡಿ, ಇಂದಿನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿರುವ ಶ್ರೀ ಪಿ ಜಿ ಆರ್ ಸಿಂಧ್ಯರವರು ರಾಜಕೀಯದಲ್ಲಿ ಮೌಲ್ಯನಿಷ್ಠವಾಗಿ ಸೇವೆಯಲ್ಲಿ ತೊಡಗಿಕೊಂಡವರು, ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಸದಾ ಕಾಲ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಕನಕಪುರದಲ್ಲಿ ಶ್ರೀ ಭೈರಪ್ಪನವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಮ್ಮೇಳನವನ್ನು ಅತ್ಯಂತ ಅಚ್ಚುಕಟ್ಟಾಗಿ ವ್ಯವಸ್ಥಿತವಾಗಿ ನಡೆಸಿದ್ದನ್ನು ಮರೆಯಲಾಗದು. ಹಾಗೆಯೇ ಇಂದು ಪುಸ್ತಕ ಬಿಡುಗಡೆ ಮಾಡಿದ ರವೀಂದ್ರ ಭಟ್ಟರೂ ಸಾಮಾನ್ಯ ಪತ್ರಕರ್ತರಲ್ಲ. ನಿಮಗೆಲ್ಲ ಮೂರನೇ ಕಣ್ಣು ಇರುವ ಶಿವನ ಬಗ್ಗೆ ಗೊತ್ತು. 'ಮೂರನೇ ಕಿವಿ' ಎಂಬ ಅದ್ಭುತ ಗ್ರಂಥವನ್ನು ಇವರು ಬರೆದಿದ್ದಾರೆ. ಆ ಮೂಲಕ ಸಮಾಜಕ್ಕೆ ಒಂದು ಆದರ್ಶವನ್ನು ಕೂಡಾ ನಿರೂಪಿಸಿದ್ದಾರೆ. ಮಾತು ಬಾರದ ಕಿವಿ ಕೇಳದ ಒಂದು ಮಗುವನ್ನು ಸಮಾಜದಲ್ಲಿ ಆದರಣೀಯ ವ್ಯಕ್ತಿಯನ್ನಾಗಿಸಲು ಶ್ರೀ ರವೀಂದ್ರ ಭಟ್ಟ ದಂಪತಿಗಳು ವಹಿಸಿರುವ ಪಾತ್ರ ಆದರ್ಶಪ್ರಾಯ ಎಂದು ಡಾ.ಪ್ರಧಾನ ಗುರುದತ್ತರು ಹೇಳಿದರು.

ಮೈಸೂರು ಮಲ್ಲಿಗೆಯ ಕವಿ ಕೆ ಎಸ್ ನ ರವರ ಪುತ್ರರಾದ ಮಹಾಬಲರವರು ತಮ್ಮದೇ ಆದ ರೀತಿಯಲ್ಲಿ ಸಾಹಿತ್ಯ ಸೇವೆ ಮಾಡುತ್ತಾ ಬಂದಿದ್ದಾರೆ. ಶ್ರೀ ಬೆಂ.ಶ್ರೀ.ರವೀಂದ್ರರವರು ಇಂದಿನ ಕಾರ್ಯಕ್ರಮಕ್ಕೆ ಸ್ಫೂರ್ತಿಯಾದವರು. ಅವರು ಇಂದಿನ ಕಾರ್ಯಕ್ರಮಕ್ಕೆ ಬರೆದಿರುವ ಕರೆಯೋಲೆಯ ಪದ್ಯ ಓದಿದರೆ ಮತ್ತೆ ಎಚ್ಚೆಸ್ಕೆಯವರ ಬಗ್ಗೆ ಏನೂ ಹೇಳಬೇಕಾಗಿಲ್ಲ. ಅಷ್ಟು ಆತ್ಮೀಯವಾಗಿ ಬರೆದಿದ್ದಾರೆ. ಅವರೂ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯವಾದ ಕೊಡುಗೆ ನೀಡಿದ್ದಾರೆ. ಎಚ್ಚೆಸ್ಕೆಯವರ ಪುತ್ರರಾದ ಶ್ರೀ ಪಾರ್ಥಸಾರಥಿ ಹಾಗೂ ಅವರ ಶ್ರೀಮತಿಯವರು ಸಮಾರಂಭದಲ್ಲಿರುವುದು ಸಂತಸ ತಂದಿದೆ. ಲಭ್ಯವಾದ ಎಚ್ಚೆಸ್ಕೆಯವರ 69 ಕೃತಿಗಳಲ್ಲಿ ಸುಮಾರು 50 ಕೃತಿಗಳನ್ನು ಜೋಪಾನವಾಗಿರಿಸಿದವರು ಎಚ್ಚೆಸ್ಕೆಯವರ ಸೊಸೆ.


ಶ್ರೀ ಪ್ರಧಾನ ಗುರುದತ್ ಅವರ ಭಾಷಣ

ಎಚ್ಚೆಸ್ಕೆಯವರ ಜೊತೆ ಸುಮಾರು ಎರಡು ದಶಕಗಳ ಕಾಲ ಬೆರೆಯುವ ಪುಣ್ಯ ನನ್ನದಾಗಿತ್ತು. ಅವರದು ಅಸಾಮಾನ್ಯ ಸಾಧನೆ. ಸಂತರಂತೆ ಅವರು ಯಾವ ಆಮಿಷಗಳಿಗೂ ಒಳಗಾಗದ ವ್ಯಕ್ತಿ. ರವೀಂದ್ರರವರು ಎಚ್ಚೆಸ್ಕೆಯವರ ಶತಮಾನೋತ್ಸವ ಸಂಧರ್ಭದಲ್ಲಿ ಉಪನ್ಯಾಸ ನೀಡಲು ಆಹ್ವಾನಿಸಿದರು. ಅಲ್ಲಿ ನಾನು ಮಾತಾನಾಡಿದ್ದನ್ನು ಕೇಳಿ ಎಚ್ಚೆಸ್ಕೆಯವರ ಬಗ್ಗೆ ಪುಸ್ತಕ ಬರೆದುಕೊಡಲು ಕೇಳಿದಾಗ ಒಪ್ಪಿಕೊಂಡೆ. ಲಭ್ಯವಿದ್ದ 69 ಕೃತಿಗಳ ತೌಲನಿಕ ವಿಮರ್ಶೆ ಮಾಡಿದ್ದೇನೆ. ನೂರಿನ್ನೂರು ಪುಟ ಆಗಬಹುದೆಂದು ಕೊಂಡಿದ್ದ ಕೃತಿ 500 ಪುಟಗಳಷ್ಟು ವಿಸ್ತರಿಸಿಕೊಂಡಿದೆ. ಆಕಾಶವಾಣಿಗೆ ಮಾಡಿದ ಸಂದರ್ಶನದ 74 ಪುಟಗಳು ಇದರಲ್ಲಿದೆ. ಎಚ್ಚೆಸ್ಕೆಯವರು ಕನ್ನಡದ ಹಿತವನ್ನು ಸದಾ ಕಾಯುತ್ತಿದ್ದರು. ಸಂಪಾದನಾ ಕಾರ್ಯ ಹೇಗಿರಬೇಕು ಎಂಬುದನ್ನು ಬನುಮಯ್ಯ ಕಾಲೇಜಿನಲ್ಲಿರುವಾಗ ನನಗೆ ಕಲಿಸಿಕೊಟ್ಟರು. ಹೇಗೆ ಪ್ರಚಾರೋಪನ್ಯಾಸ ಮಾಡಬೇಕೆಂದು ಕಲಿಸಿಕೊಡುತ್ತಿದ್ದರು. ವ್ಯಾವಹಾರಿಕವಾಗಿ ಬ್ಯಾಂಕಿಗ್, ಕಾನೂನು ಇತ್ಯಾದಿ ಕ್ಷೇತ್ರದಲ್ಲಿ ಕನ್ನಡವನ್ನು ಹೇಗೆ ಬಳಸಬೇಕೆಂದು ತೋರಿದ್ದು ಅವರ ಆದ್ಯ ಕಾರ್ಯ. ನಮ್ಮನ್ನು ತಿದ್ದಿ ತೀಡಿದ ಎಚ್ಚೆಸ್ಕೆಯವರಿಗೆ ಈ ಪುಸ್ತಕ ನಾವು ಸಲ್ಲಿಸುವ ಕೃತಜ್ಞತೆ ಎಂದು ಭಾವಿಸುತ್ತೇನೆ ನಾನು ಹೇಳಬೇಕಾದ್ದನ್ನೆಲ್ಲ ಈ ಕೃತಿಯಲ್ಲಿ ಹೇಳಿದ್ದೇನೆ. ಇದು ಎಚ್ಚೆಸ್ಕೆಯವರನ್ನು ಹೊಗಳುವುದಕ್ಕಾಗಿ ಬರೆದ ಕೃತಿಯಲ್ಲ. ಸಪ್ನಾ ಬುಕ್ ಹೌಸ್‌ನವರು ಪ್ರಕಟಿಸಿದ ಈ ಕೃತಿ ಎಲ್ಲ ಜನರನ್ನು ತಲುಪುವಂತಾಗಿದೆ. ಅವರಿಗೂ ಇಂತಹ ಗ್ರಂಥ ಹೊರತರಲು ಕಾರಣರಾದ ತಮಗೆಲ್ಲರಿಗೂ ವಂದನೆಗಳನ್ನು ಅರ್ಪಿಸುತ್ತೇನೆ ಎಂದು ಹೇಳಿ ಡಾ.ಪ್ರಧಾನ ಗುರುದತ್ತರು ತಮ್ಮ ಮಾತು ಮುಗಿಸಿದರು.

ಶ್ರೀ ಪ್ರಧಾನ್ ಗುರುದತ್ತರವರು ರಚಿಸಿರುವ "ಎಚ್ಚೆಸ್ಕೆ ಬದುಕು-ಬರಹ-ಸಂದರ್ಶನ" ಕೃತಿಯ ಕುರಿತು ಮಾತನಾಡಿದ ಶ್ರೀ ಕೆ.ಎನ್.ಮಹಾಬಲರವರು, ಕನ್ನಡದ ಅನೇಕ ಸಾಹಿತ್ಯ ಪ್ರಕಾರಗಳ ಮೇರು ಸಾಧನೆಗಳ ಗೌರಿಶಂಕರರೆನಿಸಿದ್ದ ಪ್ರಾಚಾರ್ಯ ಎಚ್ಚೆಸ್ಕೆಯವರ ಲಭ್ಯವಿರುವ ಎಲ್ಲ ಕೃತಿಗಳನ್ನೂ ಕೂಲಂಕಷವಾಗಿ ಅಧ್ಯಯನ ನಡೆಸಿ ಐನೂರು ಪುಟಗಳ ಈ ಬೃಹತ್ ಹೊತ್ತಿಗೆಯಲ್ಲಿ ಪರಿಚಯಿಸಿದ್ದಾರೆ. ಕೃತಿಯ ಮೊದಲ ಭಾಗದಲ್ಲಿ ಎಚ್ಚೆಸ್ಕೆಯವರ ಬಾಲ್ಯ, ಓದು, ಉದ್ಯೋಗ ಮುಂತಾದವುಗಳ ವಿವರಗಳು ಹಾಗೂ ಎಚ್ಚೆಸ್ಕೆಯವರ ಬದುಕಿನುದ್ದಕ್ಕೂ ನಡೆದ ಹಲವು ಘಟನೆಗಳನ್ನು ಬಹಳ ಸ್ವಾರಸ್ಯಕರವಾಗಿ ಚಿತ್ರಿಸಿದ್ದು, ಇವು ಪ್ರಾಚಾರ್ಯರ ಧೈರ್ಯ ಹಾಗೂ ಪ್ರತಿಭೆಗಳಿಗೆ ಸಾಕ್ಷಿಯಾಗಿದೆ. ಎಚ್ಚೆಸ್ಕೆಯವರು ನಾಲ್ಕು ದಶಕಗಳ ಕಾಲ ದೇಶಬಂಧು, ಛಾಯಾ, ನುಡಿ, ಸುಧಾ, ಪ್ರಜಾವಾಣಿ ಮುಂತಾದ ಜನಪ್ರಿಯ ಪತ್ರಿಕೆಗಳಿಗೆ ಅಂಕಣ ಬರಹಗಳನ್ನು ಬರೆದಿದ್ದಾರೆ. ಅಂತರ್ಜಾಲದಂತಹ ಸೌಲಭ್ಯಗಳು ಇಲ್ಲದಿದ್ದ ಆ ಕಾಲದಲ್ಲಿ ಅವರು ವಿವಿಧ ವ್ಯಕ್ತಿಗಳು ಮತ್ತು ವಿಷಯಗಳ ಬಗ್ಗೆ ನಿಖರವಾದ ಮಾಹಿತಿ ಸಂಗ್ರಹಿಸುತ್ತಿದ್ದ ರೀತಿ ಬೆರಗು ಹುಟ್ಟಿಸುತ್ತದೆ. ಅವರು ರಚಿಸಿರುವ

ಏಕೈಕ ನಾಟಕ 'ದೀನಬಂಧು ರಾಮಾನುಜ' ಬಗ್ಗೆಯೂ ಒಂದು ಅರ್ಥಪೂರ್ಣ ವಿಶ್ಲೇಷಣೆ ಈ ಕೃತಿಯಲ್ಲಿದೆ. ಭಾರತೀಯ ಸ್ಟೇಟ್ ಬ್ಯಾಂಕಿನ ಅಧಿಕೃತ ಭಾಷಾ ವಿಭಾಗ ಹೊರತಂದ ಪು.ತಿ.ನ. ಅವರ ಬಗೆಗಿನ ಕೃತಿಯನ್ನು ಎಚ್ಚೆಸ್ಕೆಯವರು ಬರೆದಿದ್ದಾರಲ್ಲದೆ, ಅವರ 'ವ್ಯಾವಹಾರಿಕ ಕನ್ನಡ' ಕೃತಿ ಬಹಳ ಜನಪ್ರಿಯವಾಗಿದೆ. ಭಾರತದ ಭಾಷಾ ಸಮಸ್ಯೆಯ ಬಗ್ಗೆ ಎಚ್ಚೆಸ್ಕೆಯವರು ರಚಿಸಿದ ಕೃತಿಯಲ್ಲಿ ಚರ್ಚಿತವಾಗಿರುವ ಅಂಶಗಳ ಬಗ್ಗೆ ಗುರುದತ್ತ ಅವರು ವಿವರವಾಗಿ ಬೆಳಕು ಚೆಲ್ಲಿದ್ದಾರೆ. ಅವರಿಗೆ ಸಮನ್ವಯ ಸಮಿತಿಯ ಎಲ್ಲ ಚಟುವಟಿಕೆಗಳ ಬಗ್ಗೆ ಸಮಗ್ರ ಮಾಹಿತಿ ಇದೆ ಎಂದು ಹೇಳಿದ ಕೆ.ಎಸ್.ಮಹಾಬಲ ಅವರು ಕೃತಿಯ ಪರಿಚಯವನ್ನು ಸವಿಸ್ತಾರವಾಗಿಯೇ ಮಾಡಿಕೊಟ್ಟರು. (ಅವರು ಪ್ರಸ್ತುತಪಡಿಸಿದ ಕೃತಿ ಪರಿಚಯದ ಸಂಪೂರ್ಣ ಬರಹವನ್ನು ಈ ಸಂಚಿಕೆಯಲ್ಲಿ ಪ್ರತ್ಯೇಕವಾಗಿ ನೀಡಲಾಗಿದೆ)

ಅಧ್ಯಕ್ಷ ಭಾಷಣ ಮಾಡಿದ ಶ್ರೀ ಪಿ.ಜಿ.ಆರ್. ಸಿಂಧ್ಯರವರು, ಸಮನ್ವಯ ಸಮಿತಿಯ ಕೋರಿಕೆಯ ಮೇರೆಗೆ ಎಚ್ಚೆಸ್ಕೆಯವರ ಬಗ್ಗೆ ಸಮಗ್ರ ಚಿತ್ರಣವನ್ನು ನೀಡುವ ಪುಸ್ತಕವನ್ನು ರಚಿಸಿದ ಡಾ. ಪ್ರಧಾನ ಗುರುದತ್ತ ಅವರಿಗೆ ಅಭಿನಂದನೆ ಸಲ್ಲಿಸಿದರು. ಕಾರ್ಯಕ್ರಮ ಅರ್ಥಪೂರ್ಣವಾಗಿ ಸುಶ್ರಾವ್ಯವಾದ ವೀಣಾವಾದನದ ಮೂಲಕ ಪ್ರಾರಂಭವಾಗಿದೆ. ನನ್ನ ಐದು ದಶಕಗಳಿಂದಲೂ ಹೆಚ್ಚು ಕಾಲದಿಂದ ಸ್ನೇಹಿತರಾದ, ಕ್ರಿಯಾಶೀಲ ವ್ಯಕ್ತಿತ್ವವನ್ನು ಹೊಂದಿದ, ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡುತ್ತಿರುವ ರವೀಂದ್ರರವರಿಗೆ ವೀಣಾವಾದನದಿಂದ ಕಾರ್ಯಕ್ರಮ ಆರಂಭಿಸುವಂತೆ ಸಲಹೆ ನೀಡಿದ್ದೆ. ಇದಕ್ಕೆ ಕಾರಣ ಸುಮಾರು 52 ವರ್ಷದ ಹಿಂದೆ ಕಾರ್ಯಕ್ರಮವೊಂದಕ್ಕೆ ಕರೆಯಲು ಎಚ್ಚೆಸ್ಕೆಯವರನ್ನು ಭೇಟಿಮಾಡಲು ಹೋದಾಗ ಅವರು ಸಿತಾರ್ ನುಡಿಸುತ್ತಿದ್ದರು.

ಈ ಪುಸ್ತಕ ಎಚ್ಚೆಸ್ಕೆಯವರನ್ನು ನೆನಪಿಸಿಕೊಳ್ಳಲಿಕ್ಕೆ, ಅವರ ಮೌಲ್ಯಗಳನ್ನು ಸಾರ್ವಜನಿಕ ಜೀವನದಲ್ಲಿ ಅಳವಡಿಸಿಕೊಳ್ಳಲಿಕ್ಕೆ ಪ್ರೇರಣೆಯನ್ನು ನೀಡುತ್ತದೆ ಎಂದ ಸಿಂಧ್ಯರವರು, ಪುಸ್ತಕದಲ್ಲಿ ತಮ್ಮ ಗಮನ ಸೆಳೆದ ಪ್ರಣಯ ಹಾಗೂ ವಿಶ್ವದ ಧರ್ಮಗಳನ್ನು ಕುರಿತ ಕೆಲವು ಸಾಲುಗಳನ್ನು ಓದಿದರು. ಎಚ್ಚೆಸ್ಕೆಯವರು ರಚಿಸಿದ ರಾಮಾನುಜ ನಾಟಕ ಎಲ್ಲರೂ ಓದಲೇಬೇಕಾದುದು. ಸಾವಿರ ವರ್ಷಗಳ ಹಿಂದೆ ರಾಮಾನುಜರು ಸಾರಿದ ಮೌಲ್ಯಗಳು ಹಾಗೂ ಜಾತ್ಯತೀತ ಮನೋಭಾವವನ್ನು ಎಚ್ಚೆಸ್ಕೆಯವರು ನಾಟಕದ ಸಂಭಾಷಣೆಯ ರೂಪದಲ್ಲಿ ಸೊಗಸಾಗಿ ಬರೆದಿದ್ದಾರೆ. ಎಚ್ಚೆಸ್ಕೆಯವರ ಈ ಪುಸ್ತಕವನ್ನು ಇವತ್ತಿನ ಪೀಳಿಗೆಯ ಮಕ್ಕಳು ಓದುವಂತಾಗಬೇಕು. ವಾಟ್ಸಪ್ ಆಗಲಿ ಟೀವಿ ಆಗಲೀ ಇಲ್ಲದ ಅಂದಿನ ಕಾಲದಲ್ಲಿ 'ವಾರದ ವ್ಯಕ್ತಿ' ಅಂಕಣಕ್ಕಾಗಿ ವಿಷಯ ಸಂಗ್ರಹಿಸಿ ಪ್ರತಿ ವಾರವೂ ತಪ್ಪದೇ ಬರೆಯುತ್ತಿದ್ದ ಎಚ್ಚೆಸ್ಕೆಯವರ ಅಂಕಣ ನಿಷ್ಠೆಯನ್ನು ಶ್ರೀ ಸಿಂಧ್ಯ ಶ್ಲಾಘಿಸಿದರು.

ನನಗೆ ಕಾಲೇಜು ದಿನಗಳಿಂದಲೂ ಸ್ನೇಹಿತರಾಗಿರುವ ಬಿ.ಎಸ್. ರವೀಂದ್ರ ಬ್ಯಾಂಕಿನಿಂದ ನಿವೃತ್ತರಾದರೂ ಸಾಹಿತ್ಯ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ. ಯಾವುದೇ ಸಂಘಟನೆಯಲ್ಲಿ ಎಲ್ಲರೂ ಒಗ್ಗಟ್ಟಿನಿಂದಿರುವುದು ಬಹಳ ಕಷ್ಟವಾಗಿರುವ ಇತ್ತೀಚಿನ ದಿನಗಳಲ್ಲಿ ಸಮನ್ವಯ ಸಮಿತಿಯು ಒಗ್ಗಟ್ಟಿನಿಂದ ಒಳ್ಳೆಯ ಕೆಲಸ ಮಾಡುತ್ತ ಬಂದಿದೆ. ಎಚ್ಚೆಸ್ಕೆಯವರು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮಾಡಿರುವ ಕೆಲಸವನ್ನು ಜನರಿಗೆ ತಾವು ತಿಳಿಯಪಡಿಸುತ್ತಿರುವುದು ಸಂತೋಷದ ಸಂಗತಿ. ನಿಮ್ಮ ಕೆಲಸ ಮುಂದುವರೆಸುತ್ತಾ ಹೋಗಿ ಎಂದೂ ಶ್ರೀ ಸಿಂಧ್ಯಾ ತಿಳಿಸಿದರು.

ಎಚ್ಚೆಸ್ಕೆಯವರನ್ನು ನೆನೆಸಿಕೊಳ್ಳುವುದೇ ಸೌಭಾಗ್ಯ. ಅವರ ನೆನಪು ಪ್ರೇರಣೆ ನೀಡುತ್ತದೆ. ಸದಾ ನಗುಮುಖದಿಂದ ಇರುತ್ತಿದ್ದ ಅವರು ಏನೇ ತೊಂದರೆ ಇದ್ದರೂ ಯಾವತ್ತೂ ಕೈಚಾಚಿದವರಲ್ಲ. ಎಚ್ಚೆಸ್ಕೆಯವರಿಗೆ ಬನುಮಯ್ಯ ಕಾಲೇಜಿನಲ್ಲಿ ನ್ಯಾಯ



ಎಚ್ಚೆಸ್ಕೆ ಪುತ್ರ ಶ್ರೀ ಪಾರ್ಥಸಾರಥಿಯವರಿಗೆ ಸನ್ಮಾನ

ಸಿಗಲಿಲ್ಲ. ನ್ಯಾಯ ಸಿಕ್ಕಿದ್ದರೆ ಅದು ಸಮನ್ವಯ ಸಮಿತಿಯಲ್ಲಿ ಮಾತ್ರ ಎಂದ ಶ್ರೀ ಸಿಂಧ್ಯ ಅವರು ಇಂತಹ ಮೌಲ್ಯಯುತ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವ ಅವಕಾಶ ಒದಗಿಸಿದ್ದಕ್ಕಾಗಿ ಕೃತಜ್ಞತೆ ಅರ್ಪಿಸಿದರು.

ಎಚ್ಚೆಸ್ಕೆಯವರ ಪುತ್ರರಾದ ಶ್ರೀ ಪಾರ್ಥಸಾರಥಿ, ಹಾಗೂ ಸಮನ್ವಯ ಸಮಿತಿಯ ಶ್ರೀ ಪಾ. ರಾಜಗೋಪಾಲ, ಎಚ್.ಎಲ್.ಗುರುಪ್ರಸಾದ್, ರವೀಂದ್ರ ಬಾಳಹಳ್ಳಿ, ಮೈಸೂರು ಬ್ಯಾಂಕ್ ಕನ್ನಡ ಬಳಗದ ಅಧ್ಯಕ್ಷರಾದ ಶ್ರೀ ಹೆಚ್.ಸಿ. ನೇಮಿರಾಜ ಅವರುಗಳನ್ನು ಶ್ರೀ ಪಿ.ಜಿ.ಆರ್. ಸಿಂಧ್ಯರವರು ಗೌರವಿಸಿದರು. ಎಚ್ಚೆಸ್ಕೆಯವರ ಪುತ್ರಿ ಶ್ರೀಮತಿ ಗೀತಾ ಅವರ ಪರವಾಗಿ ಶ್ರೀಮತಿ ಪಾರ್ಥಸಾರಥಿಯವರು ಗೌರವ ಸ್ವೀಕರಿಸಿದರು.

ಕೊನೆಯಲ್ಲಿ ಶ್ರೀ ಶೃಂಗೇಶ್ವರ ಶರ್ಮರವರು ನಾವು ಯಾವದೇ ಕಾರ್ಯಕ್ರಮ ಮಾಡಿದರೂ ಅದಕ್ಕೆ ಹಿಂದಿನ ಪ್ರೇರಣೆ ಪ್ರಾಚಾರ್ಯ ಎಚ್ಚೆಸ್ಕೆಯವರು. ಹಲವು ವರ್ಷಗಳಿಂದ ನಮ್ಮ ನಂಟು ಹಾಗೇ ಇದೆ. ಸದಾ ಕಾಲ ಇರುತ್ತದೆ ಎಂದು ಹೇಳ ಪ್ರಾಚಾರ್ಯರಿಗೆ ನಮನ ಸಲ್ಲಿಸಿ, ನಂತರ ವೇದಿಕೆಯಲ್ಲಿ ಆಸೀನರಾಗಿದ್ದ ಎಲ್ಲ ಗಣ್ಯರಿಗೆ ಹಾಗೂ ಮಾಧ್ಯಮದವರಿಗೆ, ಪುಸ್ತಕ ಪ್ರಕಟಣೆಗೆ ದೇಣಿಗೆ, ಸಹಕಾರ ನೀಡಿದ ಮತ್ತು ಆಗಮಿಸಿದ ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು.




ಶ್ರೀ ಪಾರ್ಥಸಾರಥಿಯವರಿಗೆ ಸನ್ಮಾನ

ಶ್ರೀ ರಂಗರಾಜನ್‌ರವರು ಸುಂದರವಾಗಿ ಕಾರ್ಯಕ್ರಮದ ನಿರೂಪಣೆ ಮಾಡಿದರು. ಸಮಾರಂಭದಲ್ಲಿ ಕೃತಿಯನ್ನು ವಿಶೇಷ ಬೆಲೆ ರೂ 350/-ಕ್ಕೆ ಮಾರಾಟ ಮಾಡಲಾಯ್ತು.. .

***

ಸಮನ್ವಯ ಸಮಿತಿ – ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಶ್ರೀಮತಿ ಸರಸ್ವತಿ ನಟರಾಜ್ ವಿರಚಿತ
"ಸೊನ್ನೆ ಮತ್ತು ಒಂದು"
ಕಾದಂಬರಿ ಬಿಡುಗಡೆ



ಕಾರ್ಯಕ್ರಮ ವರದಿ: ಹು ವಾ ಶ್ರೀಪ್ರಕಾಶ್

ಸಮನ್ವಯ ಸಮಿತಿ ಕನ್ನಡವೇ ಸತ್ಯ ನೋಡಿಯೋ ದಾಸೋಹ ಅಂತರಜಾಲ ವೇದಿಕೆಯಲ್ಲಿ ದಿನಾಂಕ 19.02.23ರಂದು ಸಂಜೆ 5.00 ಗಂಟೆಗೆ ಶ್ರೀಮತಿ ಸರಸ್ವತಿ ನಟರಾಜ್ ಅವರ 'ಸೊನ್ನೆ ಮತ್ತು ಒಂದು' ಕಾದಂಬರಿ ಲೋಕಾರ್ಪಣೆಗೊಂಡಿತು.

ಶ್ರೀಮತಿ ರೇಣುಕಾ ದೇಸಾಯಿಯವರು ಸ್ವಾಗತ ಕೋರಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಾಹಿತಿ, ಶ್ರೀ ಶಶಿಧರ ಹಾಲಾಡಿ ಅವರು ಪುಸ್ತಕ ಬಿಡುಗಡೆ ಮಾಡಿದರು.

ಕಾದಂಬರಿಯನ್ನು ಕುರಿತು ಮಾತನಾಡಿದ ಶ್ರೀ ಕೆ.ಎನ್ ಮಹಾಬಲ ಅವರು ಇದೊಂದು ವಿಭಿನ್ನ ಸಮಕಾಲೀನ ವಸ್ತುವನ್ನು ಹೊಂದಿರುವ ಕೃತಿಯಾಗಿದ್ದು, ಇದಕ್ಕೆ ಅರ್ಥಪೂರ್ಣ ಮುಖಚಿತ್ರ ಮತ್ತು ಅಂದವಾದ ಮುದ್ರಣವನ್ನು ಹೊಂದಿದೆ. 'ಸೊನ್ನೆ ಮತ್ತು ಒಂದು' ಎಂಬ ಹೆಸರು ಇದು ವೈಜ್ಞಾನಿಕ ಕಾದಂಬರಿಯೇನೋ ಎಂಬ ಭ್ರಮೆ ಉಂಟುಮಾಡುತ್ತದೆ. ಸಾಫ್ಟ್‌ವೇರ್ ಜಗತ್ತಿನ ಕುರಿತಾದ ಈ ಕಾದಂಬರಿ ಪ್ರಮುಖವಾಗಿ ಮೂರು ಮುಖ್ಯ ಪಾತ್ರಗಳ ಸುತ್ತ ಸುತ್ತುತ್ತದೆ. ಸ್ಪರ್ಧೆ, ಸ್ವಜನ ಪಕ್ಷಪಾತ ಮುಂತಾದ ವಿವರಣೆಗಳು ಸಂಭಾಷಣೆಯಲ್ಲಿ ಬರುತ್ತವೆ. ಸಾಫ್ಟ್‌ವೇರ್ ಜಗತ್ತಿನ ಬಗ್ಗೆ ಹಲವಾರು ಮಾಹಿತಿಗಳು ಕೃತಿಯಲ್ಲಿ ಲಭಿಸುತ್ತದೆ. ಇಂತಹ ವಿಶ್ಲೇಷಣಾತ್ಮಕ ಕಾದಂಬರಿಯನ್ನು ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿಸಿರುವ ಶ್ರೀಮತಿ ಸರಸ್ವತಿ ನಟರಾಜ್ ಅವರನ್ನು ಅಭಿನಂದಿಸಿ ವರ್ತಮಾನದ ವಿಷಯದ ಬಗ್ಗೆ ಬರೆದು ಲೇಖಕಿ ಹೊಸತನ ತೋರಿಸಿದ್ದಾರೆ ಎಂದರು. ಕಾದಂಬರಿಯು 150ಕ್ಕೂ ಹೆಚ್ಚು ಸದಸ್ಯರು ಇರುವ ಈ ಪ್ರಬುದ್ಧ ವೇದಿಕೆಯಲ್ಲಿ ಬಿಡುಗಡೆಗೊಳ್ಳುತ್ತಿರುವುದು ಸಂತೋಷ ಎಂದ ಅವರು, ಆಪ್ತ ವಲಯದಲ್ಲಿ ಕೃತಿ ಬಿಡುಗಡೆ ಮಾಡುವುದರೊಂದಿಗೆ ನಾವೇ ಸಾಹಿತ್ಯ ವಿಮರ್ಶಾ ವಲಯ ರಚಿಸಿಕೊಳ್ಳಬಹುದು ಎಂದರು. (ಕೆ.ಎನ್. ಮಹಾಬಲರ ಪೂರ್ಣ 'ಕೃತಿ ಪರಿಚಯ'ವನ್ನು ಈ ಸಂಚಿಕೆಯಲ್ಲಿ ಪ್ರತ್ಯೇಕವಾಗಿ ನೀಡಲಾಗಿದೆ),

'ಸೊನ್ನೆ ಮತ್ತು ಒಂದು' ಕಾದಂಬರಿ ಬಿಡುಗಡೆ ಮಾಡಿದ ಶ್ರೀ ಶಶಿಧರ ಹಾಲಾಡಿಯವರು ಮಾತನಾಡಿ, ಹಲವು ಆಯಾಮಗಳಿಂದ ಸೊನ್ನೆ ಮತ್ತು ಒಂದು ಕೃತಿ ವಿಶಿಷ್ಟ ಎನಿಸಿತು. ಸಾಫ್ಟ್‌ವೇರ್ ಜಗತ್ತಿನ ತಲ್ಲಣ, ತಳಮಳ ಸ್ಪರ್ಧೆಯನ್ನು ಪರಿಚಯಿಸುವ ಜೊತೆಯಲ್ಲಿ, ವಿವಿಧ ದೇಶಗಳಲ್ಲಿ ಕೆಲಸ ಮಾಡುವ ಮಹಿಳೆಯರು ಎದುರಿಸುವ ಸಮಸ್ಯೆಗಳು, ತಂತ್ರಜ್ಞಾನ



ಹಾಗೂ ಅದರಿಂದ ಆಗುತ್ತಿರುವ ಬದಲಾವಣೆಯಿಂದ ಉಂಟಾಗುವ ಬಿಕ್ಕಟ್ಟುಗಳ ಬಗ್ಗೆ ಕಾದಂಬರಿಯಲ್ಲಿ ಸೊಗಸಾಗಿ ವಿಶ್ಲೇಷಿಸಲಾಗಿದೆ. ಸಾಫ್ಟ್‌ವೇರ್ ಜಗತ್ತು ಇಂದು ಜನಜೀವನದ ಮೇಲೆ ನೇರ ಪರಿಣಾಮ ಬೀರಿದೆ. ಇಂತಹ ವಿಷಯವನ್ನು ಆಯ್ದುಕೊಂಡು ಸವಾಲಾಗಿ ಸ್ವೀಕರಿಸಿ ಒಂದು ಸುದೀರ್ಘ ಕಾದಂಬರಿಯನ್ನಾಗಿ ಹೆಣೆದಿರುವುದು ಗಮನಾರ್ಹ ಸಂಗತಿ ಈ ಕಾದಂಬರಿಯಲ್ಲಿ ಅಧ್ಯಾಯಗಳಿಗೆ ಕೊಟ್ಟಿರುವ ಶೀರ್ಷಿಕೆ ಬಹಳ ಚೆನ್ನಾಗಿದೆ ಎಂದು ತಮ್ಮ ಪ್ರಶಂಸೆ ವ್ಯಕ್ತಪಡಿಸಿದರು. .

ಕಾದಂಬರಿಯ ಬಗ್ಗೆ ಶ್ರೀಮತಿ ವಿಜಯಲಕ್ಷ್ಮಿ, ಶ್ರೀ ಜಿ.ವಿ.ಅರುಣ, ಶ್ರೀ ವಿಠಲ್ ಇಜೇರಿ, ಶ್ರೀಮತಿ ರೇಣುಕಾ ದೇಸಾಯಿ, ಶ್ರೀಮತಿ ಮಾಲತಿ ಶ್ರೀನಿವಾಸನ್ ಹಾಗೂ ಶ್ರೀ ಬೆಂ ಶ್ರೀ ರವೀಂದ್ರ ಅವರುಗಳು ಮಾತನಾಡಿದರು


ಲೇಖಕಿ ಶ್ರೀಮತಿ ಸರಸ್ವತಿ ನಟರಾಜ್ ಅವರು ಮಾತನಾಡಿ, 'ಇವತ್ತಿನ ಕಾಲದ ವಾಸ್ತವದ ಕಥೆ ಜೊತೆಗೆ ಒಂದಿಷ್ಟು ಕಲ್ಪನೆ ಸೇರಿಸಿ 'ಸೊನ್ನೆ ಮತ್ತು ಒಂದು' ಕಾದಂಬರಿ ಈ ರೂಪ ತಳೆದಿದೆ. ಕಾದಂಬರಿಯಲ್ಲಿ ಕಾಣುವುದು ತಂತ್ರಜ್ಞಾನ ಜಗತ್ತಿನ ಒಂದು ಪಕ್ಷಿ ನೋಟ ಅಷ್ಟೇ .ಪ್ರಶ್ನೋತ್ತರ ತಂತ್ರವನ್ನೇ ಕಾದಂಬರಿಯಲ್ಲಿ ಉಪಯೋಗಿಸಿದ್ದೇನೆ' ಎಂದರು.

ಕಾರ್ಯಕ್ರಮ ನಿರ್ವಹಣೆ ಮಾಡಿದ ಪ್ರಧಾನ ಸಂಚಾಲಕರಾದ ಶ್ರೀ ಬೆಂ.ಶ್ರೀ. ರವೀಂದ್ರರವರು ಇತ್ತೀಚೆಗೆ ಕವಿ ಶ್ರೀ ಎಚ್.ಎಸ್. ವೆಂಕಟೇಶ ಮೂರ್ತಿಯವರು ಬಿಡುಗಡೆ ಮಾಡಿದ ಖೋ ಕಾದಂಬರಿ 'ಪಲ್ಲಟ'ದ ಮುಖಚಿತ್ರ ಪ್ರದರ್ಶಿಸಿ ಫೆಬ್ರವರಿ 26 ರಂದು ನಡೆಯಲಿರುವ ಬಿಡುಗಡೆ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು .ಮಾರ್ಚ್ 11ರಂದು 'ಎಚ್ಚೆತ್ತ್ಕೆ ಬದುಕು ಬರಹ ಸಂದರ್ಶನ' ಕೃತಿ ಬಿಡುಗಡೆಯಾಗಲಿದ್ದು ಈ ಎರಡೂ ಕಾರ್ಯಕ್ರಮಗಳಿಗೆ ವೇದಿಕೆಯ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪುಸ್ತಕ ಕೊಂಡು ಪ್ರೋತ್ಸಾಹಿಸಬೇಕೆಂದು ವಿನಂತಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ಶ್ರೀಮತಿ ರಾಧಿಕಾ ಗುಜ್ಜರ್ ಅವರು ಎಲ್ಲರಿಗೂ ಧನ್ಯವಾದ ಅರ್ಪಿಸಿದರು.

***

ಕೃತಿ ಪರಿಚಯ



ಕೃತಿ: ಎಚ್ಚೆಸ್ಕೆ : ಬದುಕು- ಬರೆಹ- ಸಂದರ್ಶನ

(ಲೇಖಕರು: ಡಾ. ಪ್ರಧಾನ್ ಗುರುದತ್ತ.;
ಪ್ರಕಾಶಕರು: ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು 560009
ಪ್ರಥಮ ಮುದ್ರಣ: ಫೆಬ್ರವರಿ,2023 – 508 ಪುಟಗಳು – ಬೆಲೆ ರೂ.450/-)

ಪರಿಚಯ – ಮಹಾಬಲ ಕೆ.ಎನ್.

ನಾಡಿನ ಶ್ರೇಷ್ಠ ವಿದ್ವಾಂಸ, ಅನುವಾದಕ, ಬೋಧಕ ಪ್ರಧಾನ್ ಗುರುದತ್ತ ಅವರು ರಚಿಸಿರುವ "ಪ್ರಾಚಾರ್ಯ ಎಚ್ಚೆಸ್ಕೆ: ಬದುಕು-ಬರೆಹ- ಸಂದರ್ಶನ". ಬೃಹತ್ತು ಹಾಗೂ ಮಹತ್ತುಗಳಲ್ಲಿ ವಿಶಿಷ್ಟವಾದ ಈ ಕೃತಿಯನ್ನು ನಾಡಿನ ಸಾರಸ್ವತಲೋಕಕ್ಕೆ ಪರಿಚಯಿಸುವುದು ನನ್ನ ಕರ್ತವ್ಯವಾಗಿದೆ.

ಪ್ರಾ ಎಚ್ಚೆಸ್ಕೆಯವರ ಬದುಕು, ಬರೆಹ ಹಾಗೂ ಸಂದರ್ಶನಗಳನ್ನು ಒಳಗೊಂಡ 498 ಪುಟಗಳ ಬೃಹತ್ ಹೊತ್ತಗೆ ಇದು. ಇದರ ಪ್ರಕಾಶಕರು ನಾಡಿನ ಪ್ರಖ್ಯಾತ ಪ್ರಕಾಶನ ಗೃಹ ಸಪ್ನಾ ಬುಕ್ ಹೌಸ್.

ಕತೆ, ಕಾದಂಬರಿ, ಜೀವನ ಚರಿತ್ರೆ ರಚನೆ, ಅಂಕಣ ಸಾಹಿತ್ಯ, ಪ್ರಬಂಧ ಸಾಹಿತ್ಯ,, ಕಾವ್ಯ ರಚನೆ, ವಿಮರ್ಶೆ, ಚುಟುಕು ಕವನ, ನಾಟಕ, ಬಾನುಲಿ ಬರೆವಣಿಗೆ, ವಾಣಿಜ್ಯ ಕನ್ನಡ, ಕಾನೂನು ಕನ್ನಡ, ವ್ಯಾವಹಾರಿಕ ಕನ್ನಡ, ಆಡಳಿತ ಕನ್ನಡ ಮುಂತಾದ ಭಾಷಾ ಸಂಬಂಧೀ ಕ್ಷೇತ್ರಕಾರ್ಯ, ಗ್ರಂಥ ಸಂಪಾದನೆ, ಭಾಷಾಂತರ ಮುಂತಾದ ಸಾಹಿತ್ಯ ಪ್ರಕಾರಗಳ ಮೇರು ಸಾಧನೆಗಳ ಗೌರೀಶಂಕರರೆನಿಸಿದ್ದ ಪ್ರಾ.ಎಚ್ಚೆಸ್ಕೆಯವರ ಲಭ್ಯವಿರುವ ಎಲ್ಲ ಕೃತಿಗಳನ್ನೂ ಕೂಲಂಕಷವಾಗಿ ಅಧ್ಯಯನ ನಡೆಸಿ ಪರಿಚಯಿಸಿದ್ದಾರೆ ಡಾ.ಪ್ರಧಾನ ಗುರುದತ್ತ ಅವರು.

ಕೃತಿಯ ಮೊದಲ ಭಾಗದಲ್ಲಿ ಎಚ್ಚೆಸ್ಕೆಯವರ ಬಾಲ್ಯ, ಓದು, ಉದ್ಯೋಗ ಮುಂತಾದುವುಗಳ ವಿವರಗಳಿವೆ. ಪಿಯುಸಿ ಓದುವಾಗಲೇ ತಾಯಿನಾಡು ಪತ್ರಿಕೆಯ ವರದಿಗಾರರಾಗಿ ಎಚ್ಚೆಸ್ಕೆಯವರು ಅಂದಿನ ಮೈಸೂರು ಸರ್ಕಾರದ ದಿವಾನರಾದ ಮಿರ್ಜಾ ಇಸ್ಮಾಯಿಲ್‌ರ ಗಮನ ಸೆಳೆದ ಪ್ರಸಂಗ ಬಹಳ ಆಕರ್ಷಕವಾಗಿ ಚಿತ್ರಿತವಾಗಿದೆ. ರಾಮಕೃಷ್ಣ ವಿದ್ಯಾರ್ಥಿನಿಲಯದ ಪ್ರಸಂಗ, ಪರಿಷತ್ತಿನಲ್ಲಿ ಎಚ್ಚೆಸ್ಕೆಯವರ ಭಾಷಣ ಕೇಳಿದ ಬಿಎಂಶ್ರೀಯವರು ಸಂತಸಪಟ್ಟು ಕನ್ನಡದಲ್ಲಿ ಇನ್ನೂ ಹೆಚ್ಚಿನದನ್ನು ಸಾಧಿಸಬೇಕು ಎಂದು ಹರಸಿದ್ದು ಮುಂತಾದುವು ಬಹಳ ಸ್ವಾರಸ್ಯಕರವಾಗಿ ಚಿತ್ರಿತವಾಗಿದ್ದು, ಪ್ರಾಚಾರ್ಯರ ಧೈರ್ಯ ಹಾಗೂ ಪ್ರತಿಭೆಗಳಿಗೆ ಸಾಕ್ಷಿಯಾಗಿದೆ.

ಮುಂದಿನ ಭಾಗದಲ್ಲಿ ಎಚ್ಚೆಸ್ಕೆಯವರ ಬರಹಗಳ ಬಗ್ಗೆ ವಿಶ್ಲೇಷಣೆಗೆ ಲೇಖಕರು ಹೆಚ್ಚಿನ ಗಮನವನ್ನು ನೀಡಿರುವುದು ಸ್ವಾಗತಾರ್ಹವಾದ ವಿಷಯ. ಕಥೆ ಹಾಗೂ ಕಾದಂಬರಿಗಳ ಸಾರವನ್ನು ತಿಳಿಸುತ್ತಲೇ ಅಲ್ಲಿನ ವಿಶೇಷ ಅಂಶಗಳತ್ತ ಲೇಖಕರು ಕುತೂಹಲದ ನೋಟ ಬೀರುತ್ತಾರೆ. ಸುಮಾರು 395 ಪುಟಗಳು ಪ್ರಾಚಾರ್ಯರ ಬರಹಗಳ ಕುರಿತ ಚರ್ಚೆಗೆ ಮೀಸಲಾಗಿದೆ ಎಂಬ ಅಂಶವು ಲೇಖಕರ ಕೃತಿನಿಷ್ಠೆಗೆ ದ್ಯೋತಕವಾಗಿದೆ.

ಎಚ್ಚೆಸ್ಕೆಯವರಿಗೆ ಜೀವನ ಚರಿತ್ರೆ ರಚನೆಯೂ ಸುಲಲಿತವಾಗಿತ್ತು ಎಂಬುದನ್ನು ಲೇಖಕರು ಪಂತುಲು, ಯಾಮನಾಚಾರ್ಯ, ಅರವಿಂದ ಮಾಲಗತ್ತಿ ಕೃತಿಗಳ ಉದಾಹರಣೆಗಳ ಮೂಲಕ ತಿಳಿಸಿಕೊಟ್ಟಿದ್ದಾರೆ. ಲಾಲ್ ಬಹಾದುರ್ ಶಾಸ್ತ್ರಿಯವರ ಬಗ್ಗೆ ಎಚ್ಚೆಸ್ಕೆಯವರ ಲೇಖನವನ್ನು ಚರ್ಚಿಸುವಾಗ ಇತ್ತೀಚಿನ ತಾಷ್ಕೆಂಟ್ ಡೈರಿ ಸಿನೆಮಾ ಹಾಗೂ ಕನ್ನಡ ಅನುವಾದಿತ ಕೃತಿಯ ವಿಷಯವನ್ನೂ ಅಡಿಟಿಪ್ಪಣಿಯಾಗಿ ನೀಡಿ ಲೇಖಕರು ತಮ್ಮ ವರ್ತಮಾನ ಪ್ರಜ್ಞೆಯನ್ನು ಸೂಚಿಸಿದ್ದಾರೆ.

ಎಚ್ಚೆಸ್ಕೆಯವರ ಎರಡು ಕಥಾ ಸಂಕಲನಗಳಾದ 'ಆ ಚಿತ್ರ' ಮತ್ತು 'ಮುಪ್ಪಿನ ಸಂಗಾತಿ'ಗಳ ಬಗ್ಗೆ ವಿವರಿಸುತ್ತಾ ಲೇಖಕರು ಯಾವುದೇ ಪಂಥವಾದವನ್ನು ಅವಲಂಬಿಸದೆ ವಿರಚಿತವಾದ ಕೃತಿಗಳವು ಎನ್ನುತ್ತಾರೆ. ಅದೇ ರೀತಿ ಅವರ ಕಾದಂಬರಿಗಳಾದ 'ಬಯಕೆಯ ಬೆಲೆ', 'ಮುಕ್ತಿಮಾರ್ಗ' ಮತ್ತು 'ಕುರುಕ್ಷೇತ್ರ'ಗಳ ಕೇಂದ್ರ ಆಶಯ ವಿವರಿಸುತ್ತಲೇ ಕಾದಂಬರಿಯನ್ನು ಕುರಿತ ಸಾರ್ವತ್ರಿಕ ವಿವರಗಳನ್ನೂ ನೀಡುತ್ತಾರೆ.

ಎಚ್ಚೆಸ್ಕೆಯವರು ನಾಲ್ಕು ದಶಕಗಳ ಕಾಲ ನಾಡಿನ ಪ್ರಸಿದ್ಧ ಪತ್ರಿಕೆಗಳಾದ ದೇಶಬಂಧು, ಛಾಯಾ, ನುಡಿ, ಸುಧಾ, ಅಲ್ಲದೆ ಇನ್ನಿತರ ಪತ್ರಿಕೆಗಳಲ್ಲಿ ಹುಟ್ಟುತ್ತಲೇ ಸಾಯುವ ಅಲ್ಪಾಯು ಎಂದೇ ಆ ಕಾಲದಲ್ಲಿ ಜನಜನಿತವಾಗಿದ್ದ ಅಂಕಣ ಬರಹಗಳನ್ನು ಬರೆದಿದ್ದಾರೆ. ರಷ್ಯನ್ ಕನ್ನಡಿಗ ದಷ್ಕೋವಿನಿಂದ ಹಿಡಿದು ದೇಶವಿದೇಶದ ರಾಜಕಾರಣಿಗಳು, ವಿಜ್ಞಾನಿಗಳು, ಸಾಹಿತಿಗಳು, ಕ್ರೀಡಾಪಟುಗಳು, ಸಮಾಜ ಸೇವಕರು ಅವರ ಲೇಖನಿಯ ಮೋಡಿಗೆ ಸಿಲುಕಿರುವುದನ್ನು ಲೇಖಕರು ವಿವರಿಸಿ, ಕ್ರಿಯಾಪದವಿಲ್ಲದೆಯೇ ಕ್ರಿಯೆಯನ್ನು ಸೂಚಿಸುವ ವಾಕ್ಯ ರಚನಾಕ್ರಮ ಆ ಕಾಲದ ಹಲವು ವಿದ್ವಾಂಸರ ಟೀಕೆಗೆ, ಬೌದ್ಧಿಕ ಚರ್ಚೆಗೆ ಗುರಿಯಾದ ಸಂಗತಿಗಳನ್ನು ಕೃತಿಯಲ್ಲಿ ಓದುಗರ ಮುಂದಿಡುತ್ತಾರೆ.

'ಸಾಹಿತ್ಯ ಸಂಪದ' ಕೃತಿಯಲ್ಲಿ ಎಚ್ಚೆಸ್ಕೆಯವರು ತಾವು ಮೆಚ್ಚಿಕೊಂಡ ಸಾಹಿತಿಗಳ ಬಗ್ಗೆ, ಅವರ ಸಾಹಿತ್ಯ ಕೃತಿಗಳ ಬಗ್ಗೆ ಚರ್ಚಿಸಿದ್ದಾರೆ. ಕೈಲಾಸಂ, ಡಿವಿಜಿ, ತರಾಸು, ವಿಸೀ, ಜಾಕ್ ಲಂಡನ್, ಫೆಲಿಕ್ಸ್ ಗ್ರೀನ್ ಮುಂತಾದವರ ಬಗ್ಗೆ ಅಲ್ಲದೆ ಪ್ರಪಂಚದ ಪ್ರಮುಖ ಕಥೆಗಳು, ಜಾಗತಿಕ ಕಥಾಲೋಕದ ಚಿತ್ರ, ಬಿಎಂಶ್ರೀಯವರ ಅಶ್ವತ್ಥಾಮನ್ ಕೃತಿಗಳೂ ಇಲ್ಲಿ ವಿಶ್ಲೇಷಣೆಗೊಂಡಿವೆ. ಇಂಥದೊಂದು ಕೃತಿಯ ಬಗ್ಗೆ ಓದುಗರ ಗಮನ ಸೆಳೆದ ಲೇಖಕರಿಗೆ ನಮನಗಳು.

'ಹೊನ್ನಾರು ಕಟ್ಟಿದವರು' ಕೃತಿಯಲ್ಲಿ ಅಭಿನವ ಕಾಳಿದಾಸ ಎನಿಸಿದ್ದ ಬಸವಪ್ಪ ಶಾಸ್ತ್ರಿ,, ಉತ್ತಂಗಿ ಚನ್ನಪ್ಪ, ಎಂ.ಎಸ್.ಪುಟ್ಟಣ್ಣ, ಕಿಟೆಲ್ ಮುಂತಾದ ಸಾರಸ್ವತ ಮಹನೀಯರ ಪರಿಚಯವಿದೆ.

ಅದೇ ರೀತಿ "ಹೊಂಗನಸ ಕಂಡವರು" ಕೃತಿ ಗೋಪಾಲಕೃಷ್ಣ ಅಡಿಗ, ಜಿ.ಎಸ್.ಶಿವರುದ್ರಪ್ಪ ಮುಂತಾದ 53 ಕನ್ನಡದ ಮುಂಚೂಣಿಯ ಸಾಹಿತಿಗಳನ್ನು ಕುರಿತ ಲೇಖನಗಳನ್ನು ಹೊಂದಿದೆ. ಅಂತರ್ಜಾಲಾದಿ ಸೌಲಭ್ಯಗಳು ಇಲ್ಲವಾಗಿದ್ದ ಆ ಕಾಲದಲ್ಲಿ ಎಚ್ಚೆಸ್ಕೆಯವರು ಮಾಹಿತಿ ಸಂಗ್ರಹಿಸುತ್ತಿದ್ದ ರೀತಿ ಲೇಖಕರಂತೆ ನಮಗೂ ಬೆರಗು ಹುಟ್ಟಿಸುವ ವಿಷಯವೇ.

'ಸಿದ್ಧರು ಪ್ರಸಿದ್ಧರು' ಅಂಕಣ ಬರಹಗಳ ಕೃತಿ. ಸುಧಾ ಪತ್ರಿಕೆಯ ಜನಪ್ರಿಯ 'ವಾರದ ವ್ಯಕ್ತಿ' ಬರಹಗಳು. ಇಲ್ಲಿ ಎಚ್ಚೆಸ್ಕೆಯವರಲ್ಲಿನ ಸಾಹಿತಿ ಗಾರುಡಿ ಮಾಡಿಬಿಡುತ್ತಾನೆಂದು ಗುರುದತ್ತ ಅವರು ಸಹಜವಾಗಿಯೇ ಅಭಿಪ್ರಾಯಪಡುತ್ತಾರೆ.

"ಎತ್ತರದ ವ್ಯಕ್ತಿಗಳು" ಕೃತಿ ದೇಶ ವಿದೇಶದ, ಸ್ವಧರ್ಮ ವಿಧರ್ಮಗಳ ಭೇದವಿಲ್ಲದ ಹಲವಾರು ವ್ಯಕ್ತಿಗಳ ಚಿತ್ರಣ.

"ನಲಿವು ಒಲವಿನ ಬದುಕು" ವಿವೇಕಾನಂದರ ಭಕ್ತರಾದ ಡಿವೈನ್ ಪಾರ್ಕಿನ ಚಂದ್ರಶೇಖರ ಉಡುಪರ ಪ್ರೇರಣೆಯಿಂದ ಬರೆದದ್ದು. ಇದು ಎಚ್ಚೆಸ್ಕೆಯವರ ವ್ಯಕ್ತಿಚಿತ್ರ ಶೈಲಿಗಿಂತ ಭಿನ್ನವಾದದ್ದು ಎಂದು ಲೇಖಕರು ಅಭಿಪ್ರಾಯ ಪಡುತ್ತಾರೆ. ಅದೇ

ರೀತಿ "ವಿಶ್ವಧರ್ಮಗುರು" ಕೃತಿಯು ಧರ್ಮಸ್ಥಳದ ಮಂಜುವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಅಂಕಣ ಬರಹಗಳ ಸಂಗ್ರಹ. ಜಗತ್ತಿನ ಎಲ್ಲ ಧರ್ಮಗಳ ಸಾರಸಂಗ್ರಹವಾಗಿದೆ.

ಲೇಖಕರು ಪ್ರಬಂಧ ಸಾಹಿತ್ಯ ಅಧ್ಯಾಯದಲ್ಲಿ ಎಚ್ಚೆಸ್ಕೆಯವರ ಲಲಿತ ಪ್ರಬಂಧಗಳ ವಿಪುಲತೆಯನ್ನು ಸೋದಾಹರಣವಾಗಿ ಪರಿಚಯಿಸಿದ್ದಾರೆ.

ಎಚ್ಚೆಸ್ಕೆಯವರ ಕವನ ಸಂಕಲನಗಳ ಬಗ್ಗೆ ಬರೆಯುತ್ತ ಲೇಖಕರು, ಮೊದಲ ಸಂಕಲನ "ದವನದ ಕೊನೆ" ಪ್ರಕಟವಾದದ್ದು ಎಚ್ಚೆಸ್ಕೆ ಅವರಿಗೆ 69 ವಯಸ್ಸು ಆದಾಗ ಎಂಬುದು ಹಲವರ ಅಚ್ಚರಿಗೆ ಕಾರಣವಾಗಿತ್ತು ಎನ್ನುತ್ತಾರೆ. ಕವನ ರಚನೆಗೆ ಎಚ್ಚೆಸ್ಕೆಯವರಿಗೆ ಆಪ್ತರಾಗಿದ್ದ ಅನಂತಪದ್ಮನಾಭ ಸೋಗಾಲ ಅವರ ಪ್ರೋತ್ಸಾಹ ವನ್ನು ಸ್ಮರಿಸಿದ್ದು, ಸೋಗಾಲ ಅವರ ಹಠಾತ್ ನಿಧನದಿಂದ ಎಚ್ಚೆಸ್ಕೆಯವರು ಹತಾಶರಾದದ್ದು, ಕವನ ಬರೆಯುವುದನ್ನು ಸ್ಥಗಿತಗೊಳಿಸಿದ್ದು, ಮೂರನೆಯ ಕವನ ಸಂಕಲನ 'ಜೀವರೇಖೆ'ಯನ್ನು ಸೋಗಾಲರಿಗೆ ಅರ್ಪಿಸಿದ್ದು ಮುಂತಾದ ಭಾವನಾತ್ಮಕ ವಿಷಯಗಳನ್ನು ಲೇಖಕರು ನಿರೂಪಿಸಿ, ಎಚ್ಚೆಸ್ಕೆಯವರ ಹಲವಾರು ಪ್ರಮುಖ ಕವನಗಳನ್ನೂ ಉದಾಹರಿಸಿದ್ದಾರೆ.

ಕೃತಿಯಲ್ಲಿ ಚುಟುಕು ಸಾಹಿತ್ಯ ಹಾಗೂ ಕನ್ನಡದಲ್ಲಿ ವಿಡಂಬನಾ ಸಾಹಿತ್ಯಗಳ ಬಗ್ಗೆ ಲೇಖನಗಳು ಇದ್ದು ಎಚ್ಚೆಸ್ಕೆಯವರಲ್ಲಿ ಕನ್ನಡ, ಇಂಗ್ಲಿಷ್ ಹಾಗೂ ಸಂಸ್ಕೃತಗಳ ಆಳವಾದ ಜ್ಞಾನ ಇತ್ತೆಂಬುದನ್ನು ಲೇಖಕರು ಸೋದಾಹರಣವಾಗಿ ಚಿತ್ರಿಸಿದ್ದಾರೆ.

ನವ್ಯಕಾವ್ಯ ಕುರಿತ ಎಚ್ಚೆಸ್ಕೆಯವರ ಲೇಖನದಲ್ಲಿ ರಾಮಚಂದ್ರ ಶರ್ಮ ಅವರು ದಸರಾ ಕವಿಗೋಷ್ಠಿಯೊಂದರಲ್ಲಿ ವಾಚಿಸಿದ ನವರಾತ್ರಿ ಕವನವನ್ನು ಕೇಂದ್ರವಾಗಿರಿಸಿಕೊಂಡು ಎಚ್ಚೆಸ್ಕೆಯವರು ನವ್ಯಕಾವ್ಯದ ಬಗ್ಗೆ ಪ್ರತಿಪಾದಿಸಿರುವ ಪರ ವಿರೋಧಿ ಅಂಶಗಳನ್ನು ಲೇಖಕರು ವಿವರಿಸುತ್ತಾ, ನವ್ಯಕಾವ್ಯದ ಅಬ್ಬರ ಕಡಿಮೆಯಾಗಿ ಕವಿಗಳು ಮತ್ತೆ ರಸ ಧ್ವನಿಪೂರ್ಣ ಕಾವ್ಯಕ್ಕೆ ಮರಳುತ್ತಿದೆಯೆನ್ನುತ್ತಾರೆ. ಕಾವ್ಯಾಸಕ್ತರೆಲ್ಲ ಗಮನಿಸಬೇಕಾದ ಒಂದು ಉಪಯುಕ್ತ ಲೇಖನ ಇದು.

ಅಧುನಿಕ ಕನ್ನಡ ಕಾವ್ಯದಲ್ಲಿ ಪ್ರಣಯ, ಕುವೆಂಪು ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ ದರ್ಶನ, ಎಚ್ಚೆಸ್ಕೆ ಬರಹಗಳಲ್ಲಿ ಕುವೆಂಪು, ಕುವೆಂಪು ಕಾವ್ಯ ಸ್ವರೂಪ, ಕುವೆಂಪು ಅವರ ಲೋಕಪ್ರಜ್ಞೆ ಇವುಗಳ ಬಗ್ಗೆಯೂ ಉಪಯುಕ್ತ ಲೇಖನಗಳಿವೆ.

'ಅನುಪಮ ಪ್ರತಿಭಾ ಸಂಪನ್ನ ಪುತಿನ' ಭಾರತೀಯ ಸ್ಟೇಟ್ ಬ್ಯಾಂಕಿಗಾಗಿ ಎಚ್ಚೆಸ್ಕೆ ಬರೆದ ಈ ಕೃತಿಯಲ್ಲಿ ಪುತಿನ ಅವರ ಕೃತಿಗಳ ಬಗ್ಗೆ ಸಮಗ್ರ ಪರಿಚಯವಿದ್ದು, ಇನ್ನೂ ಹೆಚ್ಚಿನ ಅಧ್ಯಯನ ಮಾಡುವವರಿಗೆ ಇದು ಉಪಯುಕ್ತ ಎಂದು ಅಭಿಪ್ರಾಯ ಪಡುತ್ತಾರೆ ಲೇಖಕರು.

ಎಚ್ಚೆಸ್ಕೆಯವರು ರಚಿಸಿರುವ ಏಕೈಕ ನಾಟಕ 'ದೀನಬಂಧು ರಾಮಾನುಜ' ಬಗ್ಗೆಯೂ ಒಂದು ಅರ್ಥಪೂರ್ಣ ವಿಶ್ಲೇಷಣೆ ಇದೆ.

ಎಚ್ಚೆಸ್ಕೆಯವರು ವ್ಯಾವಹಾರಿಕ ಕನ್ನಡ, ಆಡಳಿತ ಕನ್ನಡ, ಕಾನೂನು ಕನ್ನಡ ಮುಂತಾದ ಕ್ಷೇತ್ರಗಳಲ್ಲಿ ಸಾರ್ಥಕ ಕೃತಿಗಳನ್ನು ರಚಿಸಿ ಯಶಸ್ವಿಯಾದವರು. ಕನ್ನಡದ ಮೊಟ್ಟಮೊದಲ "ವ್ಯಾವಹಾರಿಕ ಕನ್ನಡ" ಕೃತಿಯನ್ನು ಬರೆದವರು ಎಂಬ ವಿಷಯವನ್ನೂ ಓದುಗರ ಗಮನಕ್ಕೆ ತಂದಿದ್ದಾರೆ.

ಭಾರತದ ಭಾಷಾ ಸಮಸ್ಯೆಯ ಬಗ್ಗೆಯೂ ಎಚ್ಚಸ್ಕೆಯವರು ಕೃತಿ ರಚಿಸಿದ್ದು ಇದರಲ್ಲಿ ಚರ್ಚಿತವಾಗಿರುವ ಅಂಶಗಳ ಬಗ್ಗೆ ಗುರುದತ್ತ ಅವರು ವಿವರವಾಗಿ ಚರ್ಚಿಸಿದ್ದಾರೆ.

ಪ್ರಥಮ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೊರತಂದಿರುವ "ಅವಲೋಕನ" ಸ್ಮರಣ ಸಂಚಿಕೆಯ ಸಂಪಾದಕರಾಗಿ ಎಚ್ಚೆಸ್ಕೆಯವರ ಪಾತ್ರದ ಬಗ್ಗೆಯೂ ವಿವರವಾದ ಮಾಹಿತಿ ಈ ಕೃತಿಯಲ್ಲಿದೆ.

ಕೃತಿಯಲ್ಲಿ ಎಚ್ಚೆಸ್ಕೆಯವರ ಮೂರು ಅನುವಾದದ ಕೃತಿಗಳು –**Man's Worldly Goods** (ಲಿಯೊ ಹ್ಯೂಬರ್ಮನ್), **Small is Beautiful** (ಅರ್ನೆಸ್ಟ್ ಷ್ಯೂಮ್ಯಾಕರ್) ಮತ್ತು **How we are Built** (ಮೂಲ ಲೇಖಕರ ವಿವರ ಇಲ್ಲ) ಈ ಕೃತಿಗಳ ಅನುವಾದಗಳಲ್ಲೂ ಎಚ್ಚೆಸ್ಕೆಯವರ ವಿದ್ವತ್ತು ಕಂಡಿದೆಯೆಂಬುದು ಲೇಖಕರ ಅಭಿಮತ.

ಅನುಬಂಧದಲ್ಲಿ ಮುದ್ರಿತವಾಗಿರುವ ಲೇಖಕರೇ ನಡೆಸಿಕೊಟ್ಟಿರುವ ಎಚ್ಚೆಸ್ಕೆಯವರ ಆಕಾಶವಾಣಿ ಸಂದರ್ಶನದಲ್ಲಿ 77 ವಿಸ್ತೃತ ವಿಷಯಗಳಿರುವ ಪ್ರಶ್ನೆಗಳನ್ನು ಒಳಗೊಂಡಿದ್ದು, ಸ್ವತಃ ಪ್ರಾಚಾರ್ಯರೇ ಎದುರು ನಿಂತು ಮಾತನಾಡಿದಷ್ಟು ಸಹಜವಾಗಿದೆ ಮತ್ತು ಉಪಯುಕ್ತವಾಗಿದೆ.

ಜತೆಗೆ ಅನುಬಂಧದಲ್ಲಿ ಸಮನ್ವಯ ಸಮಿತಿಯ ಎಲ್ಲ ಚಟುವಟಿಕೆಗಳ ಬಗ್ಗೆ ಸಮಗ್ರ ಮಾಹಿತಿ ಇದೆ.

ಕೃತಿಯಲ್ಲಿ ಲೇಖಕರು ಪ್ರಸ್ತಾಪಿಸಿರುವ ಈ ಕೆಳಗಿನ ಪ್ರಸಂಗ ಎಚ್ಚೆಸ್ಕೆಯವರ ಬರಹಗಳ ಮೌಲ್ಯ ಹಾಗೂ ಔನ್ನತ್ಯಗಳ ಸೂಚಿಯಾಗಿದೆ:

ಜಿ.ಎನ್. ರಂಗನಾಥರಾವ್ ಅವರು 'ಸುಧಾ' ಪತ್ರಿಕೆಯ 2 ಜೂನ್ 1996ರ ಸಂಚಿಕೆಯಲ್ಲಿ ಈ ಪ್ರಸಂಗವನ್ನು ಉಲ್ಲೇಖಿಸಿದ್ದು ಅದು ಹೀಗೆ ಚಿತ್ರಿತವಾಗಿದೆ. ಸುಮಾರು ನಾಲ್ಕೈದು ವರ್ಷಗಳ ಹಿಂದಿನ ಮಾತು. ಒಂದು ಬೆಳಗ್ಗೆ 'ಸುಧಾ' ಸಂಪಾದಕೀಯಕ್ಕೆ ಒಬ್ಬ ಯುವಕ ಧಾವಂತದಿಂದ ಬಂದು "ನಾನು ಸಂಪಾದಕರನ್ನು, ಸಮದರ್ಶಿಯವರನ್ನು ಕಾಣಬೇಕು." ಎಂದು ಕೇಳುತ್ತಾರೆ.

"ಏಕೆ?" ರಂಗನಾಥರಾವ್ ಪ್ರಶ್ನೆ.

'ನಾನು ಕನ್ನಡದಲ್ಲಿ ಪರೀಕ್ಷೆ ಬರೆದು ಐ.ಎ.ಎಸ್. ಪಾಸ್ ಮಾಡಿರುವ ಮೊದಲ ಕನ್ನಡಿಗ'

"ಸಂತೋಷ."

"ನಾನು ಐ.ಎ.ಎಸ್. ಪಾಸ್ ಮಾಡಲು ಯಾವ ಲೈಬ್ರರಿಗೂ ಹೋಗಲಿಲ್ಲ. ಪ್ರತಿ ವಾರ ತಪ್ಪದೆ 'ಸುಧಾ' ಪತ್ರಿಕೆಯ 'ಸುದ್ದಿಯ ಹಿನ್ನೆಲೆ', 'ವ್ಯಕ್ತಿ ವಿಷಯ' ಓದಿದೆ. ಈ ಅಂಕಣಗಳೇ ನನಗೆ ಆಕರಗಳು.'ಎನ್ನುತ್ತಾರೆ ಆ ಯುವಕ.

ಅಂದು ಹೀಗೆ ಹೇಳಿದ್ದವರು ರಾಜ್ಯ ಸರ್ಕಾರದಲ್ಲಿ ಐ.ಎ.ಎಸ್. ಅಧಿಕಾರಿಯಾಗಿದ್ದ ಕೆ.ಶಿವರಾಮು ಅವರು.

ಇಂಥದೊಂದು ಕೃತಿ ರಚಿಸಿ ಡಾ.ಪ್ರಧಾನ್ ಗುರುದತ್ತ ಅವರು ನಾಡಿನ ಸಾಹಿತ್ಯಾಸಕ್ತರಿಗೆ ಉಪಕರಿಸಿದ್ದಾರೆ. ಇದನ್ನು ಓದಿ ಆಸ್ವಾದಿಸಿದರೆ ಅವರ ಪ್ರತಿಭೆ, ಪರಿಶ್ರಮಗಳಿಗೆ ಹಾಗೂ ಪ್ರಾಚಾರ್ಯ ಎಚ್ಚೆಸ್ಕೆಯವರಿಗೆ ಗೌರವ ಸಲ್ಲಿಸಿದಂತೆ.

***

ಕೃತಿ ಪರಿಚಯ


‘ಸೊನ್ನೆ ಮತ್ತು ಒಂದು’

(ಒಂದು ವಿಶಿಷ್ಟ ಕಾದಂಬರಿ)

(ಲೇಖಕರು: ಶ್ರೀಮತಿ ಸರಸ್ವತಿ ನಟರಾಜ್, ಮುಖಚಿತ್ರ: ರಂಜನಾ ನಟರಾಜ್
ಪ್ರಥಮ ಮುದ್ರಣ: 2022 – 169 ಪುಟಗಳು – ಬೆಲೆ ರೂ. 150/-)

ಪರಿಚಯ – ಮಹಾಬಲ ಕೆ.ಎನ್.

ಸೊನ್ನೆ ಮತ್ತು ಒಂದು ಈಗಾಗಲೇ ಹಲವಾರು ಕೃತಿಗಳನ್ನು ರಚಿಸಿ ಖ್ಯಾತರಾಗಿರುವ ಸರಸ್ವತಿ ನಟರಾಜ್ ಅವರ ಒಂದು ವಿಭಿನ್ನರೀತಿಯ ಕಾದಂಬರಿ.



ದೃಷ್ಟಿ–ಮತ್ತೊಂದು

ಸೊನ್ನೆ–ಒಂದು

"ನನ್ನ ದೃಷ್ಟಿಯಲ್ಲಿ ಈ ಸೊನ್ನೆ– ಒಂದುಗಳು ಕೇವಲ ರೂಪಕವಷ್ಟೇ ಅಲ್ಲ, ದಿಕ್ಸೂಚಿಯೂ ಹೌದು. ಇಲ್ಲಿ ಈ ಜಾಗದಲ್ಲಿ ಸೊನ್ನೆಯಾದರೇನು ಮಹಾ? ಒಂದು ಇದ್ದೇ ಇದೆ. ಒಂದಾಗಬಹುದು. ಒಂದೊಂದೇ ಆಗಿ ವಿವಿಧ ದಿಕ್ಕುಗಳಲ್ಲಿ ಸಾಗಬಹುದು. ಒಂದಾಗುವ, ಒಂದೇ ಆಗಿರುವ ಪ್ರಕ್ರಿಯೆಗೆ ನಾವು ತೆರೆದುಕೊಳ್ಳೋಣ.ಅವಕಾಶಗಳನ್ನು ಬಳಸಿಕೊಳ್ಳೋಣ ಒಬ್ಬರಿಗಾದರೆ ಒಬ್ಬರು ಇಬ್ಬರಿಗಾದರೆ ಇಬ್ಬರು. ಒಂದಾಗಿಯೇ ನಿರಾಶರಾಗಬೇಕಿಲ್ಲ. ಹಾಗೆಂದು, ಒಬ್ಬೊಬ್ಬರಿಗೆ ಸಿಕ್ಕ ದಾರಿ ಸ್ವಾರ್ಥವಲ್ಲ. ಬದುಕಿನ ದಾರಿ ಅಷ್ಟೇ .,.."

ಇಂಥ ಆರಂಭದ ಸಾಲುಗಳಂದ ವೈಜ್ಞಾನಿಕ ಕಾದಂಬರಿಯೇನೋ ಎಂಬಂತೆ ಭಾಸವಾಗುವ "ಸೊನ್ನೆ ಮತ್ತು ಒಂದು" ಕೃತಿಯ ಪುಟ ತೆರೆದಂತೆ ಸಮಕಾಲೀನ ಬದುಕಿನ ಭಾಗವೇ ಆಗಿರುವ ಸಾಫ್ಟ್‌ವೇರ್ ಜಗತ್ತಿನ ಅಂತರಾಳ, ಅಲ್ಲಿ ಬದುಕನ್ನು ಕಂಡುಕೊಳ್ಳಲು ಹವಣಿಸುತ್ತಿರುವ ಯುವಜನಾಂಗವು ಎದುರಿಸುವ ಸಂಕಟಗಳು, ತಲ್ಲಣಗಳು, ಅಲ್ಲಿ ಕಂಡುಬರುವ ಭಾಷಾ ತಾರತಮ್ಯ, ವಲಸೆಗೊಂಡವರು ಮತ್ತು ಸ್ಥಳೀಯರು ಎಂಬ ಕಂದಕಗಳು, ಒಳಸುಳಿಗಳು, ಸಂಸ್ಥೆಗಳ ನಡುವಣ ದರ ಸಮರ, ಅದರಿಂದ ಉದ್ಯೋಗಿಗಳ ಮೇಲೆ ಉಂಟಾಗುವ ಪರಿಣಾಮ ಇವೆಲ್ಲವನ್ನೂ ತಮ್ಮ ಕೃತಿಯಲ್ಲಿ ಲೇಖಕಿ ಸವಿವರವಾಗಿ ಬಣ್ಣಿಸಿದ್ದಾರೆ.

ಕಥೆಯ ನಿರೂಪಕ ಓರ್ವ ಮೇಷ್ಟರು. ಅವರಿಗೆ ಹೆಸರಿಲ್ಲ, ಅವರ ಮಗಳು ಅಪರ್ಣ ಹಾಗೂ ಸ್ವೀಡನ್ನಿನಲ್ಲಿ ತಮ್ಮ ಭವಿಷ್ಯ ಅರಸುತ್ತಿರುವ ಸಾಫ್ಟ್‌ವೇರ್ ಇಂಜನಿಯರ್ (ವೆಂಕಟ್), ಈ ಕಾದಂಬರಿಯ ಮೂರು ಪ್ರಧಾನ ಪಾತ್ರಗಳು. ಉಳಿದ ಪಾತ್ರಗಳೂ ಈ ಮೂರು ಪಾತ್ರಗಳ ನಡುವೆಯೇ ಸುಳಿದು ಹೋಗುತ್ತವೆ.

ಸ್ವೀಡನ್ ದೇಶದ ಮಾಲ್ಮೋ ನಗರಕ್ಕೆ ಐದನೆಯ ಬಾರಿ ಬಂದಿರುವ ನಿರೂಪಕನಿಗೆ ತನ್ನ ಒಂದು ಕಾಲದ ಶಿಷ್ಯ ವೆಂಕಟ್‌ನನ್ನು ಭೇಟಿಯಾಗುವ ತುಡಿತ ಉಂಟಾಗುತ್ತದೆ. ಭೇಟಿಯಾದಾಗ ವೆಂಕಟ್, ನಿರೂಪಕರಿಗೆ ಸಾಫ್ಟ್‌ವೇರ್ ಜಗತ್ತಿನ

ವಿವಿಧ ವಿದ್ಯಮಾನಗಳು, ಅಲ್ಲಿನ ವಿವಾದಗಳು, ಪೈಪೋಟಿಯ ಕರಾಳ ಮುಖಗಳು ಮುಂತಾದುವನ್ನು ವಿವರಿಸುತ್ತಾನೆ. ನಿರೂಪಕರ ಜತೆಯಲ್ಲೇ ಓದುಗರಿಗೂ ಈ ವಲಯದ ಕೆಲವು ಅಪರಿಚಿತ ಮಾಹಿತಿಗಳು, ನೋಟಗಳು ಲಭ್ಯವಾಗುತ್ತವೆ.

ಮುಂದೆ ಮತ್ತೊಂದು ಪಾತ್ರವಾದ ಅಪರ್ಣಾಳತ್ತಲೂ ಲೇಖಕಿ ಗಮನ ಹರಿಸುತ್ತಾರೆ. ಅಪರ್ಣಾ ಈ ಹಿಂದೆ ತಿಳಿಸಿದಂತೆ ಮೇಷ್ಟ್ರ ಮಗಳು. ವಯಸ್ಸು ಮೂವತ್ತು ದಾಟಿದ್ದರೂ ಅವಿವಾಹಿತೆ. ಅವಳೂ ಸಾಫ್ಟ್‌ವೇರ್ ವಲಯದಲ್ಲೇ ದುಡಿಯುತ್ತಿರುವವಳು. ತಂದೆಗೆ ಪದೇಪದೇ ವರ್ಗಾವಣೆಯಾಗುತ್ತಿದ್ದುದರಿಂದ ಬಾಲ್ಯವನ್ನು ಅಜ್ಜಿಯ ಆಶ್ರಯದಲ್ಲೇ ಕಳೆದವಳು. 24ನೆಯ ವಯಸ್ಸಿಗೇ ಸ್ವೀಡನ್ನಿಗೆ ಬಂದು ವೃತ್ತಿಯಲ್ಲಿರುವ ಅವಳು ಮದುವೆಯಾಗಿ ನೆಲೆ ಕಂಡುಕೊಳ್ಳಲಿ ಎನ್ನುವುದು ತಂದೆಯ ಆಸೆ. ಆದರೆ ಅವಳೇಕೋ ಮನಸ್ಸು ಮಾಡುತ್ತಿಲ್ಲ. ಅವಳು ಪ್ರೀತಿಸಿದ್ದ ಪ್ರವೀಣ್ ಅಪಘಾತದಲ್ಲಿ ಮಡಿದಿರುತ್ತಾನೆ. ಮತ್ತೊಬ್ಬ ರಾಜೇಶ್‌ನೊಡನೆ ವಿವಾಹ ನಿಷ್ಕರ್ಷೆಯಾಗಿದ್ದು ಅವನ ತಂದೆಯ ಸಾವಿನ ಕಾರಣದಿಂದ ಆ ಮದುವೆಯೂ ನಿಂತುಹೋಗಿರುತ್ತದೆ. ಈ ನಡುವೆ ಅಪರ್ಣಾಳಿಗೆ ನಿಖಿಲ್ ಭಾರದ್ವಾಜ್‌ನ ಪರಿಚಯವಾಗುತ್ತದೆ. ಅವನು ಮದುವೆಯಾಗಬೇಕಿದ್ದ ಹುಡುಗಿ ಬೇರೊಬ್ಬನೊಡನೆ ಓಡಿಹೋಗಿರುತ್ತಾಳೆ. ಅಪರ್ಣಾ ನಿಖಿಲ್‌ರ ಸಂಬಂಧ ಮುಂದೆ ವಿವಾಹ ಬಂಧನಕ್ಕೂ ಅನುವಾಗುತ್ತದೆ. ಈ ರೀತಿ ಲೇಖಕಿ ಅಪರ್ಣಾಳ ಜೀವನ ಅಪೂರ್ಣವಾಗಲು ಬಿಡದೆ ನ್ಯಾಯ ಸಲ್ಲಿಸಿದ್ದಾರೆ ಎನ್ನಬಹುದು.

ಕಂಪನಿಯಲ್ಲಿ ನಡೆದ ಪ್ರತಿಕೂಲ ವಿದ್ಯಮಾನಗಳಿಂದಾಗಿ ವೆಂಕಟ್ ಬೇರೊಂದು ಕಂಪನಿಯನ್ನು ಸೇರುತ್ತಾನೆ. ವೆಂಕಟ್‌ನ ಬಾಸ್ ಕೆಲಸಕ್ಕೆ ರಾಜೀನಾಮೆ ನೀಡಿ ಫುಟ್‌ಬಾಲ್ ಅಕಾಡೆಮಿ ಸ್ಥಾಪಿಸುತ್ತಾನೆ. – ಇದು ಸಂಕ್ಷಿಪ್ತವಾಗಿ ಕಥೆಯ ಸಾರಾಂಶ.

ಹೀಗೆ ಸಾಫ್ಟ್‌ವೇರ್ ಜಗತ್ತಿನ ಬಹುಮಗ್ಗಲುಗಳು ಈ ಕಾದಂಬರಿಯಲ್ಲಿ ಅನಾವರಣಗೊಂಡು ಓದುಗರನ್ನು ತನ್ನೊಂದಿಗೆ ಕರೆದೊಯ್ಯುತ್ತವೆ.

ಪುಟ 119 ರವರೆಗೆ ನಿರೂಪಕ ಹಾಗೂ ವೆಂಕಟ್ ಇಬ್ಬರ ನಡುವಣ ಸಂಭಾಷಣೆಯೇ ಆವರಿಸಿಕೊಂಡು ಉಳಿದ ಪಾತ್ರಗಳು ತೆರೆಮರೆಗೆ ಸರಿದಿರುತ್ತವೆ. ಲೇಖಕಿ ಮಧ್ಯೆ ಮಧ್ಯೆ ಉಳಿದ ಪಾತ್ರಗಳನ್ನೂ ಬೆಳೆಸಲು ಕೆಲವು ಅಧ್ಯಾಯಗಳನ್ನು ಬಳಸಿದ್ದರೆ ಏಕತಾನತೆ ನಿವಾರಣೆಯಾಗುತ್ತಿತ್ತು.

ಈ ಕೃತಿಗೆ ಮುನ್ನುಡಿ ಇರುವುದಿಲ್ಲ. ಸಾಹಿತ್ಯದಲ್ಲೂ ತೊಡಗಿಕೊಂಡಿರುವ ಸಾಫ್ಟ್‌ವೇರ್ ವಲಯದ ಪ್ರಮುಖರ ಮುನ್ನುಡಿ ಬರೆಸಿದ್ದಿದ್ದರೆ ಕೃತಿ ಅವಲೋಕನಕ್ಕೆ ಓದುಗರಿಗೆ ಒಂದು ಉತ್ತಮ ಪ್ರವೇಶ ದೊರೆಯುತ್ತಿತ್ತು.

ಕೃತಿಗೆ ಶ್ರೀಮತಿ ರಂಜನಾ ನಟರಾಜ್ ಅರ್ಥಪೂರ್ಣ ಮುಖಪುಟದ ರಕ್ಷೆಯಿದೆ. ಶ್ರೀಮತಿ ರತ್ನಾ ಮೂರ್ತಿಯವರ ಬೆನ್ನುಡಿ ಪ್ರೋತ್ಸಾಹಕವಾಗಿದೆ. ಕಾದಂಬರಿಯ ರಚನೆಗೆ ಮಹತ್ವದ ಮಾಹಿತಿಗಳನ್ನು ಒದಗಿಸಿರುವ ತಮ್ಮ ಅಳಿಯಂದಿರಾದ ದೀಪಕ್ ವಸ್ತಾರೆ ಅವರಿಗೆ ಕೃತಿಯನ್ನು ಅರ್ಪಿಸಿದ್ದಾರೆ ಲೇಖಕಿ. ತಮ್ಮ ಅನುಭವದ ಕ್ಷೇತ್ರವಲ್ಲದಿದ್ದರೂ ತಜ್ಞರ ಮಾರ್ಗದರ್ಶನ ಪಡೆದು ಇಂಥ ವಿಭಿನ್ನ ಕಾದಂಬರಿ ರಚಿಸಿರುವ ಶ್ರೀಮತಿ ಸರಸ್ವತಿ ನಟರಾಜ್ ನಿಜಕ್ಕೂ ಅಭಿನಂದನಾರ್ಹರು.

ಸಾಹಿತ್ಯಾಸಕ್ತರು ಕೃತಿಯನ್ನು ಓದಿ,ಆಸ್ವಾದಿಸಿ ಸ್ಪಂದಿಸಿದರೆ ಲೇಖಕಿಯ ಶ್ರಮ ಸಾರ್ಥಕ.

***

ಮ್ಯಾಡಿಸನ್ ಎಂಬ ಹುಡುಗಿ

– ಹು.ವಾ. ಶ್ರೀಪ್ರಕಾಶ್

ಮ್ಯಾಡಿಸನ್ ಕೆನಡಾದಲ್ಲಿರುವ ನನ್ನ ಏಳು ವರ್ಷದ ಮೊಮ್ಮಗಳ ಗೆಳತಿ. ನಾಲ್ಕೈದು ವರ್ಷದ ಹಿಂದೆ ಅವರ ಮನೆಯ ಎದುರೇ ಬಾಡಿಗೆ ಮನೆಯಲ್ಲಿದ್ದಾಗ ಆದ ಮಕ್ಕಳ ಗೆಳೆತನ ಈಗ ಇವರು ಸ್ವಂತ ಮನೆ ತೆಗೆದುಕೊಂಡು ಸ್ವಲ್ಪ ದೂರ ಬಂದಮೇಲೂ ಮುಂದುವರೆದಿದೆ. ಯಾವಾಗಲಾದರೂ ಅವಳು ಬರುವುದೋ ಅಥವಾ ಇವಳು ಹೋಗುವುದೋ ಒಟ್ಟಿನಲ್ಲಿ ಮೂರು ತಿಂಗಳಗೊಮ್ಮೆಯಾದರೂ ಭೇಟಿಯಾಗುತ್ತಾರೆ. ಮೊಮ್ಮಗಳಿಗೆ ನಿನ್ನ ಬೆಸ್ಟ್ ಫ್ರೆಂಡ್ ಯಾರು ಅಂದರೆ ಮ್ಯಾಡಿಸನ್ ಎಂದೇ ಹೇಳುತ್ತಿರುತ್ತಾಳೆ.

ಒಮ್ಮೆ ನನ್ನ ಮೊಮ್ಮಗಳ ಹುಟ್ಟು ಹಬ್ಬದ ಸಂದರ್ಭ, ನಾನು ಬೆಂಗಳೂರಿನಿಂದ ವೀಡಿಯೋ ಕಾಲ್ ಮಾಡಿದಾಗ ಅವಳ ಜೊತೆ ಇದ್ದ ಮ್ಯಾಡಿಸನ್‌ಳನ್ನು ನೋಡಿದ್ದೆ. ಬಿಳಿಯ ಮುದ್ದಾದ ಹುಡುಗಿ. ಮೊಮ್ಮಗಳು ಕೊಟ್ಟ ಕೆಲವು ಬಳೆಗಳನ್ನು ಕೈಗೆ ಹಾಕಿಕೊಂಡಿದ್ದಳು. ಇಬ್ಬರನ್ನೂ ಮಾತಾಡಿಸುತ್ತಾ ಹಾಗೇ ಸ್ಕ್ರೀನ್ ಸೇವ್ ಮಾಡಿಕೊಂಡು ಆ ಫೋಟೋ ಕಳಿಸಿದ್ದೆ.

ಕೆನಡಾಕ್ಕೆ ಒಮ್ಮೆ ಹೋಗಬೇಕೆಂಬ ನನ್ನ ಆಸೆಯೂ ಫಲಿಸುವ ದಿನ ಬಂದಿತ್ತು. ಮನೆಗೆ ಬಂದಿದ್ದ ಎರಡನೇ ಮಗಳ ಜೊತೆ ಅಮೇರಿಕಾದ ಅವಳ ಮನೆಗೆ ಹೋಗಿ, ಅಲ್ಲಿಂದ ಕೆನಡಾಕ್ಕೆ ಹೋಗುವ ಯೋಜನೆ ಹಾಕಲಾಯ್ತು. ತೆಗೆದುಕೊಂಡು ಹೋಗಬೇಕಾದ ವಸ್ತುಗಳ ಪಟ್ಟಿ ಸಿದ್ಧವಾಗಿತ್ತು. ಮಗಳೇ ಕೊಟ್ಟ ಸಲಹೆಯಂತೆ ಜಯನಗರದಲ್ಲಿ ಮೊಮ್ಮಗಳಿಗೆ ಒಂದು ಉದ್ದ ಲಂಗದ ಜೊತೆಗೆ ಮ್ಯಾಡಿಸನ್‌ಳಿಗೂ ಒಂದು ಉದ್ದ ಲಂಗ ಖರೀದಿಸಲಾಯ್ತು.

ನಾನು ಕೆನಡಾಕ್ಕೆ ತಲುಪಿದಾಗ ಅಲ್ಲಿ ನಾವು ವಾರಾಂತ್ಯದಲ್ಲಿ ಸಂದರ್ಶಿಸಬಹುದಾದ ಸ್ಥಳಗಳಿಗೆ ಬೇಕಾದ ಏರ್ಪಾಟು ಮೊದಲೇ ಮಾಡಿದ್ದರು. "ಫಾಲ್ ಸೀಸನ್‌ನಲ್ಲಿ ಕ್ಯುಬೆಕ್ ನಗರ ಅತಿ ಸುಂದರವಾಗಿರುತ್ತದೆ, ಮ್ಯಾಡಿಸನ್ ಕೂಡಾ ನಮ್ಮ ಜೊತೆ ಬರುತ್ತಾಳೆ" ಅಂದಿದ್ದಳು ಮಗಳು. ಆದರೆ ಅವರ ಕಾರ್ಯಕ್ರಮ ಬದಲಾಗಿದ್ದರಿಂದ ಬರಲಿಲ್ಲ. ಅದೇ ಸಮಯದಲ್ಲಿ ಅವಳು ಅವಳ ತಂದೆಯ ಮನೆಗೆ ಹೋಗಿದ್ದಳು. ಹಾಗಾಗಿ ತಿಂಗಳು ಕಳೆದರೂ ಅವಳನ್ನು ನೋಡುವುದಾಗಲಿಲ್ಲ.

ಅಮೆರಿಕದಲ್ಲಿ ಪ್ರೈವಸಿಗೆ ಬಹಳ ಮಹತ್ವ. ಕರೆ ಇಲ್ಲದೆ ಯಾರ ಮನೆಗೂ ಹೋಗುವುದಿಲ್ಲ. ಹಾಗೇ ಯಾರ ಮನೆಗೆ ಹೋಗುವುದಾದರೂ ಮೊದಲೇ ಫೋನ್ ಅಥವಾ ಮೆಸೇಜ್ ಮಾಡಿ ತಿಳಿಸಿ, ಒಪ್ಪಿಗೆ ದೊರೆತಮೇಲೆ ಹೋಗುತ್ತಾರೆ

.

ಮ್ಯಾಡಿಸನ್‌ಳ ತಂದೆ ಕೆನಡಿಯನ್ ಹಾಗೂ ತಾಯಿ ಮೆಕ್ಸಿಕನ್ ಹಾಗೂ ಜರ್ಮನ್ ಮೂಲದವಳಂತೆ. ತಾಯಿ ಈಗ ಎರಡನೇ ವಿವಾಹವಾಗಿ ಒಂದು ಮಗುವನ್ನು ಪಡೆದು ಆತನೊಂದಿಗೂ ವಿಚ್ಛೇಧನ ಪಡೆದಿದ್ದಾಳೆ. ಅಲ್ಲಿ ಸ್ತ್ರೀಯರು ಬಹಳ ಸ್ವತಂತ್ರವಾಗಿ ವ್ಯವಹರಿಸುತ್ತಾರೆ. "ಏಳೇಳು ಜನ್ಮದ ಸಂಬಂಧ", "ಪತಿ ಸೇವೆಯೇ ಪರಮ ಸೇವೆ", "ಹೆಣ್ಣು ಅಂದರೆ ಹೇಗಿರಬೇಕು, ಮೈತುಂಬ ಸೆರಗು ಹೊದ್ದಿರಬೇಕು" ಎಂಬೆಲ್ಲಾ ಕಲ್ಪನೆಗಳಿಲ್ಲ. ಹುಡುಗಿಯರಿಂದ ಮುದುಕಿಯರವರೆಗೂ ಅತಿ ಕಡಿಮೆ ಉಡುಪಿನಲ್ಲಿ ಓಡಾಡುತ್ತಿರುತ್ತಾರೆ. ನವಂಬರ್ ನಂತರ

ನಾಲ್ಕು ತಿಂಗಳು ವಿಪರೀತ ಛಳಯಲ್ಲಿ ಮೈತುಂಬ ಹೊದ್ದು ಓಡಾಡುವ ಇವರಿಗೆ ಸೂರ್ಯನ ಬಿಸಿಲು ಆಹ್ಲಾದಕರ.

ಇಬ್ಬರು ಗಂಡಂದಿರಿಂದ ಎರಡು ಮಕ್ಕಳನ್ನು ಪಡೆದಿರುವ ಮ್ಯಾಡಿಸನ್‌ಳ ತಾಯಿ, ಮಕ್ಕಳ ಬಗ್ಗೆ ಬಹಳ ಎಚ್ಚರಿಕೆ ವಹಿಸುತ್ತಾಳೆ. ಪ್ರೈವಸಿಗೆ ಬಹಳ ಮಹತ್ವ ಕೊಡುವುದಕ್ಕೆ ಇದೂ ಒಂದು ಕಾರಣವಾಗಿರಬಹುದು.

ಅಲ್ಲಿ ವ್ಯಕ್ತಿಯ ಮರಣಾನಂತರ ಹಕ್ಕು ವರ್ಗಾವಣೆ ಸರಳವಲ್ಲ. ಮಕ್ಕಳು ನೇರ ವಾರಾಸುದಾರರಾಗುವುದಿಲ್ಲ. ವಿಲ್ ಅಥವಾ ಟ್ರಸ್ಟ್ ಮುಖಾಂತರ ವಿಲೇವಾರಿಯಾಗುತ್ತದೆ.

ಅದೊಂದು ದಿನ ಮ್ಯಾಡಿಸನ್‌ಳ ಮನೆಯ ಹತ್ತಿರದ ಪಾರ್ಕಿನಲ್ಲಿ ಸಂಜೆ ನಾಲ್ಕು ಗಂಟೆಗೆ ಆಡಲು ಹೋಗುವುದೆಂದಾದಾಗ ಮೊಮ್ಮಗಳಿಗೆ ಬಹಳ ಸಂತೋಷವಾಯ್ತು.

ಕೆನಡಾದ ವಾತಾವರಣ ಬಹಳ ಪರಿಶುದ್ಧ. ಅಗಲವಾದ ಮತ್ತು ಸುಂದರವಾದ ರಸ್ತೆಗಳು, ಅಲಲ್ಲಿ ಹಸಿರು ಪಾರ್ಕ್ ಗಳು, ಸರೋವರಗಳು. ಸಾಲುಮನೆಗಳ ಮುಂದೆಲ್ಲಾ ವೈವಿಧ್ಯಮಯ ಅಲಂಕಾರಿಕ ಗಿಡಗಳು. ಮ್ಯಾಡಿಸನ್‌ಳ ಮನೆಯ ಮುಂದೆ ಒಂದಿಷ್ಟು ಗಿಡಗಳು, ಹಕ್ಕಿಗಳಿಗೆ ಕಾಳು ಹಾಕುವ ಗೂಡು, ಸೈಕಲ್, ಪುಟ್ಟ ಜಾರು ಬಂಡಿ, ಕೆಲವು ಆಟಿಕೆಗಳೆಲ್ಲಾ ಇದ್ದವು. ಅವಳಿಗೆ ಹಕ್ಕಿಗಳೆಂದರೆ ಪ್ರೀತಿಯಂತೆ. ಮೊಮ್ಮಗಳು ನನ್ನನ್ನು "ಗ್ರಾಂಡ್ ಪಾ" ಅಂತ ಪರಿಚಯ ಮಾಡಿಸಿದಳು. ಅಲ್ಲೇ ಹತ್ತಿರದಲ್ಲಿದ್ದ ದೊಡ್ಡ ಪಾರ್ಕ್‌ನಲ್ಲಿ ಮಕ್ಕಳು ಅಂದು ಬಹಳ ಹೊತ್ತು ಆಟವಾಡಿದರು.

ನವರಾತ್ರಿ ಹಬ್ಬದ ಸಂಧರ್ಭ. ಒಂದು ದಿನ ಮ್ಯಾಡಿಸನ್‌ಳನ್ನು ಮನೆಗೆ ಕರೆಯುವುದೆಂದಾಯ್ತು. ಆ ದಿನ ಅಳಿಯ ವಿಶೇಷವಾಗಿ ಚೀನೀಕಾಯಿ ಕಡುಬು ಮಾಡಿದ್ದ. ಅವನಿಗೆ ವಾರಾಂತ್ಯಗಳಲ್ಲಿ ಇಷ್ಟವಾದ ತಿನಿಸುಗಳನ್ನು ಮಾಡುವುದರಲ್ಲಿ ಬಹಳ ಖುಷಿ. ಮ್ಯಾಡಿಸನ್ ಮತ್ತು ಅವಳ ತಂಗಿಯೊಂದಿಗೆ ಅವಳ ತಾಯಿ ಕಾರಿನಲ್ಲಿ ಬಂದರು ಅವರನ್ನು ಉಪಚರಿಸಿ ಅವಳಿಗೆ ಇಲ್ಲಿಂದ ತೆಗೆದುಕೊಂಡು ಹೋಗಿದ್ದ ಲಂಗ, ಬಳೆ ಎಲ್ಲವನ್ನೂ ಕೊಡಲಾಯ್ತು. ಮೊಮ್ಮಗಳು ಮತ್ತು ಅವಳು ಇಬ್ಬರೂ ಉದ್ದ ಲಂಗ ಹಾಕಿಕೊಂಡು ಆಡಿ ಕುಣಿದು ಡ್ಯಾನ್ಸ್ ಮಾಡಿ ಸಂತಸಪಟ್ಟರು. ಇಬ್ಬರೂ ಸೇರಿ ಚಿತ್ರ ಬರೆದರು. ಹಲವು ಬಗೆಯ ಆಟಗಳನ್ನಾಡಿದರು.

ಅದೇ ದಿನ ಅಮೇರಿಕಾದಲ್ಲಿದ್ದ ಮಗಳು. ಅಳಿಯನಿಗೆ ಗ್ರೀನ್ ಕಾರ್ಡ್ ಸಿಕ್ಕಿದ ಸಂತಸದ ವಾರ್ತೆ ತಲುಪಿತ್ತು. "ನಿಮಗೆ ಹಸಿರು ಕಾರ್ಡ್ ಸಿಕ್ಕಿದ ಖುಷಿಗೆ ಇಲ್ಲಿ ನಾವು ಭಾರತದ ವಿಶೇಷ ಚೀನಿಕಾಯಿ ಕಡುಬು ಮಾಡಿದ್ದೇವೆ" ಅಂತ ತಮಾಷೆ ಮಾಡಿಕೊಂಡು ಫೋನಿನಲ್ಲಿ ಪ್ರದರ್ಶಿಸಿ ಸಂಭಾಷಿಸುತ್ತಿರುವುದನ್ನು ನೋಡಿ ನಮ್ಮ ಚೀನಿಕಾಯಿ ಕಡುಬಿನ ಬಗ್ಗೆ ಅವರಿಗೆ ಕುತೂಹಲ ಮೂಡಿತು. ಕಡುಬನ್ನು ಅವರಿಗೆ ಪರಿಚಯಿಸಲಾಯ್ತು. ದೀಪಾವಳಿ ಸಂಧರ್ಭ ಮಾಡುವ ಗೋ ಪೂಜೆ ಬಗ್ಗೆ ಹೇಳಿ, ಅಂದು ಬೆಳಗಿನ ಉಪಹಾರಕ್ಕೆ ವಿಶೇಷವಾಗಿ ತಯಾರಿಸುವ ಕಡುಬನ್ನು ಬಣ್ಣಿಸಲಾಯ್ತು. ಅವರ ಆಹಾರ ಪದ್ಧತಿಯೇ ಬೇರೆ. ಗೋಮಾಂಸವನ್ನು ಪ್ರಮುಖವಾಗಿಯೇ ಬಳಸುತ್ತಾರೆ. ಅವರಿಗೆ ಕಡುಬು ಅಷ್ಟು ರುಚಿಸಿರಲಿಕ್ಕಿಲ್ಲ. ಅರ್ಧ ಕಡುಬಿನಲ್ಲಿ ಮೂವರೂ ರುಚಿ ನೋಡಿದರು. ಕೇಕ್, ಸ್ಯಾಂಡ್‌ವಿಚ್, ಜ್ಯೂಸ್, ಚಾಕ್ಲೇಟ್ ತೆಗೆದುಕೊಂಡರು.

ಮ್ಯಾಡಿಸನ್ ಬುದ್ಧಿವಂತ ಹುಡುಗಿ. ನನ್ನ ಮೊಮ್ಮಗಳ ಗೆಳತನದಿಂದಾಗಿ ನಮ್ಮ ಹಬ್ಬಗಳ ಪರಿಚಯವೂ ಅವಳಿಗೆ ಸಾಕಷ್ಟು ಇದೆ.

ನನ್ನ ಮೊಮ್ಮಗಳು ತಾಯಿತಂದೆಯರ ಜೊತೆ ದೇವರ ಭಜನೆ ಹಾಡುವಾಗ ಅವಳು ಸಂತೋಷದಿಂದ ನೋಡುತ್ತಿದ್ದಳು. ನನಗೆ ಆ ಮಗುವಿಗೆ ಇಂತಹ ಭಾಗ್ಯ ಇಲ್ಲವಲ್ಲ ಅಂತ ಒಂದು ಕ್ಷಣ ಅನಿಸಿದರೂ, ನಮ್ಮ ಆಲೋಚನೆಗಳೆಲ್ಲ ನಾವು ಬೆಳೆದು ಬಂದ ರೀತಿಗೆ ಅಂಟಿಕೊಂಡೇ ಇರುತ್ತದೆ. ಸಂಪೂರ್ಣ ಭಿನ್ನವಾದ ಆಚಾರ ವಿಚಾರಗಳಿರುವ ಬೇರೆಯೇ ಭೂ ಭಾಗಗಳ ಹೋಲಿಕೆ ಸರಿಯಲ್ಲ ಅನಿಸಿತು.

ಇತ್ತೀಚೆಗೆ ತಂದಿದ್ದ ಹೊಸ ಕೇರಂ ಬೋರ್ಡ್‌ನಲ್ಲಿ ಸ್ವಲ್ಪ ಹೊತ್ತು ಕೇರಂ ಆಡಿದೆವು. ಆಗ ಮೊಮ್ಮಗಳ ಹಾಗೆ ಅವಳೂ ನನ್ನನ್ನು ಒಮ್ಮೆ "ಅಜ್ಜಾ" ಎಂದು ಕರೆದಾಗ ನನಗೆ ತುಂಬಾ ಖುಷಿಯಾಯ್ತು.

"ಹೌದು, ನೀನೂ ನನ್ನ ಪ್ರೀತಿಯ ಮೊಮ್ಮಗಳ ಹಾಗೆ" ಅಂತ ಅಪ್ಪಿಕೊಂಡು ಬೀಳ್ಕೊಟ್ಟೆ.

ಭಾರತಕ್ಕೆ ಮರಳುವಾಗ ನನ್ನ ಮೊಮ್ಮಗಳಿಗೆ, "ಮ್ಯಾಡಿಸನ್‌ಳಿಗೂ ಹೇಳು. ಇನ್ನೊಮ್ಮೆ ಅವಳು ಮನೆಗೆ ಬಂದಾಗ ನನಗೆ ವೀಡಿಯೋ ಕಾಲ್ ಮಾಡು" ಎಂದು ಹೇಳಿ ಬಂದೆ.

***

ಮುನ್ನುಡಿಯೆಂಬ ಮುಳ್ಳಿನ ಹಾದಿ

– ಮಹಾಬಲ

ನನ್ನ ಗೆಳೆಯನೊಬ್ಬ ಕವನ ಸಂಕಲನವೊಂದನ್ನು ಪ್ರಕಟಿಸಿರುವ ಸುದ್ದಿ ನನಗೆ ಅವನಿಂದಲೇ ತಿಳಿಯಿತು. ಮುಖತಃ ಭೇಟಿಯಾದಾಗಲೇ ಪ್ರತಿಯನ್ನು ಪಡೆಯಲೂ ಸೂಚಿಸಿದ್ದ

ಅದರಂತೆ ಅವನಿಗೆ ಪೂರ್ವಸೂಚನೆ ಕೊಟ್ಟು ಒಂದು ದಿನ ಅವನ ಮನೆಗೆ ಹೋದೆ. ಕಾಫಿ ಇತ್ಯಾದಿ ಉಪಚಾರ, ಉಭಯಕುಶಲೋಪರಿ ವಿಚಾರಣೆ ಎಲ್ಲ ಆದ ಮೇಲೆ ಗೆಳೆಯ ಕವನದ ಪ್ರತಿ ತಂದು "ಅಭಿಪ್ರಾಯ ಬಯಸಿ" ಎಂಬ ಷರಾ ಬರೆದು ನನ್ನ ಕೈಗಿತ್ತ.

ನಾನು ಸಾಮಾನ್ಯವಾಗಿ ಕವನ ಕುತೂಹಲನಾದದ್ದರಿಂದ ಸರಸರ ಪುಟ ತಿರುವಿ ಹಾಕಲು ಆರಂಭಿಸಿದೆ. ಮುಖಪುಟ, ಒಳಪುಟ, ತಾಂತ್ರಿಕ ಪುಟ, ಬೆನ್ನುಡಿ ಎಲ್ಲ ಅದರದರ ಸ್ಥಾನಗಳಲ್ಲಿ ಅಚ್ಚುಕಟ್ಟಾಗಿ ಇದ್ದವು. ಆದರೆ ಮುನ್ನುಡಿ ಕಾಣಲೇ ಇಲ್ಲ.

ನಾನು "ಇದೇನಯ್ಯಾ ಕವಿಮಿತ್ರ? ಮುನ್ನುಡಿಯೇ ಇಲ್ಲವಲ್ಲ. ರವಿಯಾಕಾಶಕೆ ಭೂಷಣಂ ಎಂಬ ಹಾಗೇ ಕೃತಿಗೆ ಮುನ್ನುಡಿಯೇ ಭೂಷಣ ಅಲ್ಲವೇನಯ್ಯ. ಅದರಲ್ಲೂ ಕವನ ಸಂಕಲನಕ್ಕಂತೂ ಮುನ್ನುಡಿ ಅತ್ಯಗತ್ಯ. ಅಲ್ಲಿನ ಅರ್ಥವಾಗದ ಕವನಗಳಿಗೆ ಮುನ್ನುಡಿಯೇ ಒಂದು ಬಗೆ ದಾರಿದೀಪದಂತೆ." ಇನ್ನೂ ಹೇಳುವುದು ಬಾಕಿ ಇತ್ತು. ಅಷ್ಟರಲ್ಲಿ ಮಿತ್ರ ತಡೆದು "ನಿಲ್ಲಿಸಯ್ಯ ಸಾಕು. ಕವನ ಸಂಕಲನಕ್ಕೆ ಮುನ್ನುಡಿ ಮುಖ್ಯ ಒಪ್ಪಿದೆ. ಆದರೆ ನಾನೇನೂ ಮುನ್ನುಡಿಗಾಗಿ ಸೈಕಲ್ ಹೊಡೆದಿಲ್ಲ ಅಂತ ಅಂದುಕೊಂಡಿದ್ದೀಯಾ?"ಖಾರವಾಗಿ ಪ್ರಶ್ನಿಸಿದ.

"ಸೈಕಲ್ ಏಕಯ್ಯ, ಮನೆ ಮುಂದೆ ಲಕ್ಷಣವಾಗಿ ಸ್ಕೂಟರ್ ಕಾರು ಎರಡೂ ನಿಂತಿರುವಾಗ?" ಎಂದು ಕೇಳಿದೆ.

"ಅಯ್ಯಾ, ಮಂಕುಸಾಂಬ್ರಾಣಿ! ಸೈಕಲ್ ಹೊಡೆಯೋದು ಅಂದ್ರೆ ಪಡ್ಡೆಗಳ ಭಾಷೇಲಿ ಕಷ್ಟಪಡೋದು ಅಂತ. ಅಷ್ಟೂ ತಿಳೀದೆ'ಕೆರಳಿದ ಮಿತ್ರ.

"ಸರಿ, ಇನ್ನು ಸುಮ್ಮನಿರುತ್ತೇನೆ. ಹೇಳುವಂಥವನಾಗು ನಿನ್ನ ಮುನ್ನಡಿಯ ವ್ಯಥೆ"ಎಂದೆ.

"ಮೊದಲು ನಾನು ಮುನ್ನುಡಿಗಾಗಿ ಕೇಳಿದ್ದು ಕವಿವಾಚಸ್ಪತಿಯವರನ್ನು. ಅವರು ಇಮೇಲ್‌ನಲ್ಲಿ ಸುದೀರ್ಘವಾಗಿ ಉತ್ತರಿಸಿ 'ಮಗೂ ನಿನಗೆ ಮುನ್ನುಡಿ ಬರೆದುಕೊಡುವುದು ನನಗೆ ಸದಾ ಸಂತಸದ ವಿಷಯವೇ. ನಿಮ್ಮ ಬ್ಯಾಂಕಿನಲ್ಲಿ ನನ್ನ ಅಕೌಂಟ್ ಇದ್ದಾಗ ಕೌಂಟರಿನಲ್ಲಿ ಎಷ್ಟು ಚೆನ್ನಾಗಿ ಸೇವೆ ಮಾಡಿದ್ದೆ. ನಾನು ಕಾರು ಕೊಳ್ಳಲು ನಿಮ್ಮ ಬ್ಯಾಂಕ್ ಸಾಲ ನೀಡಿದ್ದು ನಿನ್ನ ಪ್ರಯತ್ನದಿಂದಲೇ ಅಲ್ಲವೆ? ಆದರೆ ನಾನೀಗ ಅಮೆರಿಕಾ ಪ್ರವಾಸದಲ್ಲಿದ್ದೇನೆ. ಮಗಳು ಅಳಿಯ ನಿನ್ನೆ ಕ್ಯಾಲಿಫೋರ್ನಿಯಾದ ರೆಡ್‌ವುಡ್ ಕಾಡಿಗೆ ಕರೆದುಕೊಂಡು ಹೋಗಿದ್ದರು. ಎಷ್ಟು ಚೆನ್ನಾಗಿದೆ ಅಂತೀಯಾ? ನೀನೂ ಒಂದು ಸಲ ಅಲ್ಲಿಗೆ ಹೋಗುವ ಯೋಜನೆ ಹಾಕು. ನಾನಂತೂ ಇನ್ನು ಮೂರು ತಿಂಗಳು ನನ್ನ ಕಾವ್ಯಕೃಷಿಗೆ ಪೂರ್ಣವಿರಾಮ ಹಾಕಿ ಪ್ರವಾಸದ ಮೋಜು ಅನುಭವಿಸುತ್ತಿದ್ದೇನೆ. ಬೆಂಗಳೂರಿಗೆ ವಾಪಸಾಗುವ ತನಕ ಕಾದರೆ ನಿನ್ನ ಮುನ್ನುಡಿ ಬರೆಯಬಲ್ಲೆ'-ಹೀಗೆ ಮೊದಲ ವಿಕೆಟ್ ಬಿತ್ತಯ್ಯ" ಎಂದು ದುಃಖಿಸಿದ.

“ನಿನ್ನ ಜತೆ ಒಂದೆರಡು ಬಾರಿ ಕವಿಗೋಷ್ಠಿಯಲ್ಲಿ ವೇದಿಕೆ ಹಂಚಿಕೊಂಡಿದ್ದ ಆ ಸುಂದರ ಕವಯಿತ್ರಿಯನ್ನು ಕೇಳಲಿಲ್ಲವೆ?”ನನಗೆ ತೋಚಿದ ಪ್ರಶ್ನೆ ಕೇಳಿದೆ.

“ಕೇಳಿದೆನಯ್ಯ, ಕೇಳಿದೆ. ಅದಕ್ಕೆ ಆಕೆ ತಾನು ಹಾಸನದ ಹತ್ತಿರದ ಒಂದು ಹಳ್ಳಿಯಲ್ಲಿ ಜಮೀನು ಕೊಂಡಿರುವುದಾಗಿಯೂ, ಈಗ ಕೃಷಿ ಚಟುವಟಿಕೆಯಲ್ಲಿ ಮುಳುಗಿರುವುದಾಗಿಯೂ, ಟ್ರಾಕ್ಟರ್ ಓಡಿಸುವುದನ್ನು ಕಲಿಯುತ್ತಿರುವುದರಿಂದ ಮುನ್ನುಡಿ ಬರೆಯಲು ಸಾಧ್ಯವಿಲ್ಲ, ಸಮಯವೂ ಇಲ್ಲ, ಕ್ಷಮಿಸಿ. ಕೃತಿ ಹೊರಗೆ ಬಂದ ಮೇಲೆ ನನಗೊಂದು ಪ್ರತಿ ಕಳುಹಿಸಿ”ಎಂದು ಉತ್ತರಿಸಿದ್ದಾರೆ ಎಂದ ಮಿತ್ರ.

"ಕಾಲೇಜಿನಲ್ಲಿ ನಿನಗೆ ಪಾಠಮಾಡುತ್ತಿದ್ದ ನಿನ್ನ ಮೆಚ್ಚಿನ ಉಪಾಧ್ಯಾಯರು ಈಗ ಕವಿಯೂ ಆಗಿದ್ದಾರಂತಲ್ಲ”.

“ಅವರನ್ನೂ ಕೇಳಿದೆನಯ್ಯ. ಅವರು ತಮ್ಮ ಮಗನಿಗೆ ಚಾಮರಸನ ಪ್ರಭುಲಿಂಗಲೀಲೆ ಕಾವ್ಯದಲ್ಲಿ ಬರುವ ಮಾಯೆಯನ್ನು ನೆನಪಿಸುವ ಒಬ್ಬ ಮುದ್ದಾದ ಮಗಳು ಜನಿಸಿದ್ದಾಳೆಂದೂ, ಆ ಮೊಮ್ಮಗಳ ಆಟ ವಿನೋದಗಳಲ್ಲಿ ತಮಗೆ ಕಾಲ ಹೋಗುವುದೇ ತಿಳಿಯುತ್ತಿಲ್ಲವೆಂದೂ, ಕಾವ್ಯಕ್ಕಾಗಿ ಸಮಯ ನೀಡುವ ಮನಸ್ಥಿತಿಯಲ್ಲಿ ತಾವು ಇಲ್ಲವೆಂದೂ ತಿಳಿಸಿ, ಒಮ್ಮೆ ಮನೆಗೆ ಬಂದು ಮುದ್ದು ಮೊಮ್ಮಗಳನ್ನು ನೋಡಿ ಹರಸಬೇಕೆಂದೂ ಆಹ್ವಾನಿಸಿದ್ದರು. ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಇಲ್ಲ ಎಂಬಂತೆ ಆಯಿತು."

"ಮತ್ತೊಬ್ಬರು ಕವಿಗಳನ್ನು ಯಾರದೋ ಮೂಲಕ ಭೇಟಿಯಾದೆ. ಅವರು ತಾವೀಗ ಪರಭಾಷೆಯ ಡಬ್ಬಿಂಗ್ ಸಿನಿಮಾ ಒಂದರ ಹಾಡುಗಳನ್ನು ಕನ್ನಡಕ್ಕೆ ತರ್ಜುಮೆ ಮಾಡುವ ಕಾಯಕದಲ್ಲಿ ಮುಳುಗಿದ್ದು ಅದಕ್ಕಾಗಿ ನಾಳೆಯಿಂದ ಒಂದು ಅಜ್ಞಾತ ಸ್ಥಳಕ್ಕೆ ಹೋಗುತ್ತಿರುವುದಾಗಿ ವಿನಯದಿಂದಲೇ ಹೇಳಿದರು" ಎಂದ ಮಿತ್ರ.

“ಕವಿಗಳನ್ನು ಬಿಡಯ್ಯ., ಯಾರಾದರೂ ವಿಮರ್ಶಕರನ್ನು ಅಂದರೆ ಹಾಯದ ಒದೆಯದ ಸಹೃದಯ ವಿಮರ್ಶಕರನ್ನು ಕೇಳಬಹುದಿತ್ತಲ್ಲವೆ?”ಎಂದು ನನ್ನ ಪ್ರಶ್ನಾವಳಿ ಮುಂದುವರೆಸಿದೆ.

“ಅದನ್ನೂ ಮಾಡಿದೆ, ಪ್ರಜೆ. ಎಲ್ಲ ತಾರಮ್ಮಯ್ಯ ಆಡಿದರು. ಒಬ್ಬರಂತೂ ತಾವು ಇತ್ತೀಚಿನ ಕವನಗಳ ಬಗ್ಗೆ ಭ್ರಮ ನಿರಸನ ಹೊಂದಿರುವುದಾಗಿಯೂ, ಹೆಚ್ಚಿನವರಿಗೆ ಕಾವ್ಯ ಪರಂಪರೆ ಬಗ್ಗೆ ಅರಿವಿಲ್ಲವೆಂದೂ, ಕಾಗುಣಿತವಂತೂ ದೇವರಿಗೇ ಪ್ರೀತಿ ಎಂದೂ ಘಂಟಾಘೋಷವಾಗಿ ತಿಳಿಸಿ ಮುನ್ನುಡಿಗೆ ತೆರೆ ಎಳೆದರು”.

ಈ ಮಧ್ಯೆ ಪ್ರಕಾಶಕರು ತಾವು ಮಗಳ ಬಾಣಂತನಕ್ಕಾಗಿ ಪತ್ನಿಸಮೇತ ಆರು ತಿಂಗಳು ಅಮೆರಿಕಕ್ಕೆ ಹಾರುತ್ತಿರುವುದಾಗಿಯೂ, ನಿಮ್ಮ ಕವನ ಸಂಕಲನ ಈಗ ಮಾಡಿದರೆ ಉಂಟು ಇಲ್ಲದಿದ್ದರೆ ಆರು ತಿಂಗಳು ಕಾಯಬೇಕು’ಎಂದು ನೋಟೀಸ್ ಕೊಟ್ಟುಬಿಟ್ಟರು.

“ಮುನ್ನುಡಿ ಎಂದು ಶೀರ್ಷಿಕೆ ಕೊಟ್ಟು ಎರಡು ಖಾಲಿ ಪುಟ ಬಿಡಬಹುತ್ತಲ್ಲವೆ?’ಛಲ ಬಿಡದೆ ಕೇಳಿದೆ.

“ಆ ಯೋಚನೆಯೂ ಬಂದಿತ್ತಯ್ಯ. ಆದರೆ ಪ್ರಕಾಶಕರು ಒಪ್ಪಲಿಲ್ಲ. ಹಾಗೆ ಖಾಲಿ ಬಿಟ್ಟರೆ ಅದು ಮುದ್ರಕರ ಪ್ರಮಾದ ಎಂದು ಆಪಾದನೆ ಬರಬಹುದು ಅನ್ನುವುದು ಅವರ ಭಯ” ಎಂದ. “ಸರಿ ಬಿಡು. ಆ ಲೆಕ್ಕದಲ್ಲಿ ನೀನು ಮಾಡಿದ್ದು ಸರಿ ಇದೆ” ಎನ್ನುತ್ತ, ಕವನ ಸಂಕಲನದ ಪ್ರತಿ ಎತ್ತಿಕೊಂಡು, ಅಭಿಪ್ರಾಯ ತಿಳಿಸುವ ಮಾತುಕೊಟ್ಟು ಮುನ್ನುಡಿಯೆಂಬ ಮುಳ್ಳಿನಹಾದಿಯ ಬಗ್ಗೆ ಚಿಂತಿಸುತ್ತ ಮನೆಗೆ ಮರಳಿದೆ.

***

ಒಡಲ ಪ್ರೀತಿ

– ಬೆಂ.ಶ್ರೀ. ರವೀಂದ್ರ

ಹಿಮಾಲಯದೆತ್ತರದೇಣುಗಳ
ತೆಳುರೆಂಬೆಯ ನುಣುಪು ತೊಗಟೆಯ
ಭೂರ್ಜಪತ್ರವನೆಲ್ಲ ಅರಸಲ ಹುಡುಗಿ
ಅವೆಲ್ಲ ಆಗಲೆ ಚರ್ಮ ಸುಲಿಸಿಕೊಂಡು ಕರಕಾಗಿವೆ

ಹೋಗಲಿ
ತಾಳೆಯೋಲೆಗಳ ಮೇಲೆ ನನ್ನೆದೆ ದೌತಿಯ
ಮಸಿಯಾರುವ ಮುನ್ನವೆ ಬಿಡಿಸುವೆ
ಬಂಧುರ ಭಾವಗಳನೆನಲು ಅದೆಲ್ಲವೆ
ತಾಳೆ ಸೇಂದಿಯಂಗಡಿಯ ಸರಕಾಗಿವೆ

ಮೇಘ ಸಂದೇಶಗಳು ಹಂಸೆಯ ಅಂಚೆಗಳು
ನಿರ್ಭಾವುಕ ಕವಿಗಳ ಪಾಂಡಿತ್ಯದ
ಗೀಟು ಗಿಲೀಟುಗಳಾಗಿವೆ

ಈಗಿಲ್ಲಿ ಬಿದ್ದಿದೆ ರಾಶಿ ರಾಶಿ ತರತರದ ಕಾಗದ
ಕೋರಿಕೆಯಿದು ಆಗದಿರಲಿ ಕೋರಿ ಕಾಗದ
ನನ್ನದೊ ಕಾಪಿ ಬರೆದಿಲ್ಲದ ಸೊಟ್ಟಪಟ್ಟ ಅಕ್ಷರಗಳು
ನಿಂತಿವೆ ಕೋಳಕಾಲುಗಳಮೇಲೆ
ಕಾಗುಣಿತಕೆ ಮನ್ನಾ ಮಾಡಿ ಓದಿಕೊ

ಬೇಡವೆಂದರೆ
ಈಗೆಲ್ಲ ಜಟ್ಪಟ್ ಅಂತ ಸೆಟ್ ಆಗೊ ಕಾಲ
ನವಿರು ಅಕ್ಷರಗಳ ಬದಿಗಿರಿಸಿ
ಒಱಲಿ ಬಿಡುವೆ ಮಧುರ ಭಾವಗಳ
ನನಗೆ ತಿಳಿದ ದನಿತಂತುಗಳಲಿ
ಚಚಿತ್ರ ಪರದೆಯಲಿ ಮುದ್ದಿಸಲಾಗದ
ನಿನ್ನ ಮುದ್ದುಮೊಗವ ತೋರಿದರೆ

ಅದಷ್ಟು ತಂತ್ರೋಪತಂತ್ರಗಳವೆ
ಓಲೈಕೆಯ ಓಲೆಗೆ
ಆದರೆನ್ನ ಮಾತುಗಳು ನಿಂತು ಬಿಟ್ಟಿವೆ ಹೋಗಲಾರದೆ ಒಳಗೆ
ಹಾಲೆಯ ಕೆಳಗೆ ಓಲಾಡುವ ಜುಮಕಿಯಂತೆ

ಕಾಲವೆಷ್ಟೋ ಸರಿದು ಹೋಯಿತು
ಮಳೆಯೆಷ್ಟೊ ಸುರಿದು ಹೋಯಿತು
ರವಿ ಆವಿಯಾಗಿಸಿದ
ನೀರಚಕ್ರವೆಷ್ಟೊ ಸುತ್ತಿಬಿಟ್ಟಿತು

ಅಕ್ಷರಗಳನೆಷ್ಟೊ ಕೂಡಿ ಹಾಕಿದೆ
ಅವು ಹಾಡಲಿಲ್ಲ
ಚಿತ್ರಗಳನೆಷ್ಟೋ ಬಿಡಿಸಿ ಇಟ್ಟೆ
ಅವು ರಂಗೇರಲಿಲ್ಲ
ಹಾಡುಗಳನೆಷ್ಟೋ ಹಾಡಿದೆ
ಅವು ಹಿತವೆನಿಸಲಿಲ್ಲ
ಇನ್ನು ಹೇಗೆ ಅಭಿವ್ಯಕ್ತಿಸಲಿ ಒಡಲ ಪ್ರೀತಿ

ಈಗ ನೀನೆಲ್ಲಿರುವೆ
ಬುವಿಯಲ್ಲೊ ಬಾನಿನಲ್ಲೋ
ನಕ್ಷತ್ರ ನಿಹಾರಿಕೆಯಲ್ಲೂ
ತಪ್ಪಿಸಿಕೊಳ್ಳಲಾರೆ ಎಲ್ಲಿ ಹೋದರೂ
ವಿಶ್ವ ಚಿಕ್ಕದಿದೆ ಹುಡುಗಿ
(ನೀನೆಂದೂ ಮುದಿಯಾಗುವುದಿಲ್ಲ ಬಿಡು!)
ಆದಿಯೂ ಇಲ್ಲ ಅನಂತವೂ ಇಲ್ಲ
ಮಿಗಿಲಾಗಿ ನಿನ್ನದೆಯ ಗೂಡಿನಲಿ ಮಿಡಿವ
ಒಳದನಿಯ ಮೊರೆತ ಕೇಳು ಸುಳ್ಳಾಡದೆ

ಯಾರೂ ನಮ್ಮನ್ನು ಹುಟ್ಟಿಸಲಿಲ್ಲ
ಯಾರೂ ನಮ್ಮನ್ನು ಸಾಯಿಸಲಾರರು
ಹುಟ್ಟು ಸಾವನು ಉಡಿಯಲಿಡದ ತುಡಿತವಿದು
ಹರಿಸಿಬಿಡು ನಮ್ಮೆದೆಯ ಪಸೆಗೆ ಮತ್ತಷ್ಟು ಜೀವರಸ
ಹೂವುಗರಳ ತೂಗಿ ತೊನೆಯಲಿ
ಗಾಳಿಯೊಡಗೂಡಿ ಹಾಡಲಿ
ಕೇಳುವಂತೆ ಕಂಪತ್ತೂರಿ.

***

ಬದುಕು ಬರಹ

– ಶ್ರವಣಕುಮಾರಿ ಟಿ.ಎಸ್.

ದಾಕ್ಷಾಯಿಣಿ ಮುಂದೆ ಕಾಣುತ್ತಿದ್ದ ಪ್ರವೇಶ ದ್ವಾರದತ್ತ ಕಣ್ಣು ಹಾಯಿಸುತ್ತಲೇ ಇದ್ದಳು. ಕಾರ್ಯಕ್ರಮ ಶುರುವಾಗಿ ಆಗಲೇ ಅರ್ಧಗಂಟೆಗೂ ಮೇಲಾಯಿತು. ಆರಂಭಿಕ ಕಲಾಪಗಳು ಮುಗಿದು ಇನ್ನೇನು ನಿರೂಪಕರು ತನ್ನ ಪರಿಚಯ ಮಾಡ್ಬೇಕಿದೆ. ಇಷ್ಟು ಹೊತ್ತಾದರೂ ಅಗ್ನಿಮಿತ್ರನ ಸುಳಿವೇ ಇಲ್ಲ. ಇಷ್ಟು ಹೊತ್ತಿಗಾಗಲೇ ಬಂದಿರ್ಬೇಕಿತ್ತು. ಹೊರಡಕ್ಮುಂಚೆ ಸಾರಿಸಾರಿ ಹೇಳಿದ್ರೂ ಇಷ್ಟೇನೇ, ನಾನು ಬರೆಯೋದ್ರ ಬಗ್ಗೆ, ನನ್ನ ಸಾಧನೆಗಳ ಬಗ್ಗೆ ಸಾರ್ವಜನಿಕವಾಗಿ ಯಾವ ಅಭಿಪ್ರಾಯ, ಮೆಚ್ಚುಗೆ ಇದೆ ಅನ್ನೋದನ್ನ ಅವ್ನು ಕಿವಿಯಾರೆ ಕೇಳ್ಬೇಕಿತ್ತು. ಹಿತ್ತಲಗಿಡ ಮದ್ದಲ್ಲ! ನನ್ನ ಯಾವ ಸಾಧನೇನೂ ದೊಡ್ಡದೂಂತ ಅವ್ನಿಗೆಂದೂ ಅನ್ನಿಸಿಯೇ ಇಲ್ಲ.

ನಿಮಿಷಗಳು ಸರಿಯುತ್ತಿದ್ದಂತೆ ಅವಳ ಮನ ಪ್ರಕ್ಷುಬ್ಧವಾಗತೊಡಗಿತು. ಇವತ್ತಾದ್ರೂ, ಕಡೇಪಕ್ಷ ಇವತ್ತಾದ್ರೂ ಅವನು ಬಂದಿರ್ಬೇಕಿತ್ತು. 'ಸಾಮ್ರಾಟ್ ಸಾಹಿತ್ಯ ಪ್ರಶಸ್ತಿ' ಅಂದ್ರೇನು ಸಾಮಾನ್ಯಾನ! ನನ್ನ ಎಷ್ಟೋ ವರ್ಷಗಳ ಕನಸಿದು. ಇವತ್ತು ಕೈಗೂಡ್ತಿದೆ. ಅಂತದ್ರಲ್ಲಿ, ಸ್ವಂತ ತನ್ನ ಹೆಂಡತಿ, ಇಷ್ಟು ದೊಡ್ಡ ಪ್ರಶಸ್ತಿ ಪಡೀತಿರೋವಾಗ, ಬೇರೆ ಏನೂ ಬೇಡ, ಬಂದು ಕೂತಿರ್ಬೇಕಿತ್ತಲ್ವಾ. ಅದೇ ಅವ್ನಿವತ್ತು ನನ್ನ ಜಾಗದಲ್ಲಿ ಇದ್ದಿದ್ರೆ ನಾನು ಹೀಗೇ ಮಾಡ್ತಿದ್ನಾ? 'ನಾನಿವರ ಹೆಂಡತಿ' ಅಂತ ಎದ್ದು ಕಾಣೋಹಾಗೆ ಎಲ್ರಿಗಿಂತ ಮುಂಚಿತ್ವಾಗಿ, ಚೆನ್ನಾಗಿ ಅಲಂಕಾರ ಮಾಡ್ಕೊಂಡು, ಚಪ್ಪಾಳೆ ತಟ್ಟಕ್ಕೆ ಸಿದ್ಧವಾಗಿ ಮುಂದಿನ ಕುರ್ಚಿಲೇ ಕೂತಿರ್ತಿರ್ಲಿಲ್ವೇ! ಗಂಡಸ್ರೆಂದ್ರೆ ಹೀಗೇನೇ.. ಹೆಂಡತಿ ತಮಗಿಂತ ಮುಂದ್ಹೋದ್ರೆ ಅವ್ರಿಗೆ ಸೈರಣೆಯಿಲ್ಲ. ಪ್ರಶಸ್ತಿ ಘೋಷಣೆಯಾದ ದಿನ ಅದೆಷ್ಟು ಖುಷೀಲಿ ಅವನಿಗೆ ಹೇಳ್ದಾಗ ಅದೆಷ್ಟು ಸಪ್ಪೆಯ ರಿಯಾಕ್ಷನ್ ಅವನದ್ದು.. "ಓ ಹೌದಾ, ಕಂಗ್ರಾಟ್ಸ್". 'ಅಯ್ಯೋ, ಎಲ್ಲಾ ಬಿಟ್ಟು ನಿನ್ನತ್ರ ಮೊದಲು ಹಂಚ್ಕೊಂಡ್ನಲ್ಲ' ಅಂತ ತಲೆ ಚಚ್ಕೊಳೋ ಹಾಗಾಗಿತ್ತು. ನನ್ಮುಖ ನೋಡಿ ಏನನ್ನಿಸ್ತೋ, "ಹಾಗಲ್ಲ ದಚ್ಚು, ಇವೆಲ್ಲಾ ನಂಗರ್ಥವಾಗಲ್ಲ ಸಾರಿ" ಎಂದು ಎದ್ಹೋಗಿದ್ದ.

ಅಮೇಲೆ ಅದೇನನ್ನುಸ್ತೋ ಹೋದ್ವಾರ ಈ ಸೀರೆ ಕೊಡಿಸಿ, ಟೈಲರ್ ಹತ್ರ ಎರಡ್ಮೂರು ಸಲ ಓಡಾಡಿ ಬ್ಲೌಸ್ ತಂದ್ಕೊಟ್ಟು, ನಿನ್ನೆ ಬ್ಯೂಟಿ ಪಾರ್ಲರ್‌ಗೂ ಕರ್ಕೊಂಡ್ಹೋಗಿ ಬಂದಿದ್ದ. ಖುಷಿಯಾಗೇ ಮಾಡಿದ್ನೋ ಅಥ್ವಾ ಸುಮ್ನೆ ಹೀಗೇ ಆದ್ರೆ ಇವತ್ತು ಬರ್ತೀನೀಂತ ಒಪ್ಕೊಂಡಿದ್ದ. "ಒಂದ್‌ಸ್ವಲ್ಪ ಕೆಲ್ಸ ಇದೆ ದಚ್ಚು. ಇವತ್ತು ರಜಾ ಹಾಕಿದೀನಿ. ಆದ್ರೂ ಒಂದು ಇಂಪಾರ್ಟೆಂಟ್ ಕಾಲ್ ಎಕ್ಸ್‌ಪೆಕ್ಟ್ ಮಾಡ್ತಿದೀನಿ. ಅದು ಬಂದ ತಕ್ಷಣ ಒಂದು ಮೇಲ್ ಕಳಿಸಿ ನಾನು ಹೊರಡೋದೆ. ಅವ್ರು ಕಾರು ಕಳಿಸಿದಾರಲ್ಲ; ಲೇಟ್ ಮಾಡ್ಬಾರ್ದು ನೀನು ಹೊರಟ್ಬಿಡು. ಹಿಂದೇನೇ ಬರ್ತೀನಿ, ಖಂಡಿತಾ. ವಾಪಸ್ ಬರೋವಾಗ ಕಾರು ಕಳ್ಸೋದ್ಬೇಡ ಅಂತ್ಹೇಳು. ಹೇಗಿದ್ರೂ ನನ್ನ ಕಾರೇ ಇರತ್ತಲ್ಲ" ಎನ್ನುತ್ತಾ ನನ್ನನ್ನು ಮೇಲಿಂದ ಕೆಳಗಿನ ತನಕ ನೋಡಿ ಕಣ್ಣಲ್ಲೇ ಮೆಚ್ಚುಗೆ ಸೂಸುತ್ತಾ ಕಳಿಸಿಕೊಟ್ಟಿದ್ದ. ಅವನ ಮಾತು ನಂಬ್ಕೊಂಡು ನಾನೂ ಬಂದ ತಕ್ಷಣಾನೇ 'ವಾಪಸ್ಸು ಹೋಗೋವಾಗ ಟ್ರಾನ್ಸ್‌ಪೋರ್ಟ್ ಬೇಡ. ಮನೇವ್ರ ಜೊತೇಲಿ ವಾಪಸ್ಸು ಹೋಗ್ತೀನಿ' ಅಂತ ನಿರ್ವಾಹಕರಿಗೆ ಹೇಳಿದ್ದಾಗಿತ್ತು. ಆದ್ರೆ ಹೀಗ್ಯಾಕ್‌ಮಾಡ್ದ? ಅರ್ಥವಾಗ್ಲಿಲ್ಲ!.

ಆಗಲೇ ನನ್ನ ಪರಿಚಯ ಆರಂಭವಾಗಿದೆ. ಇನ್ನೂ ಅವನ ಸುಳಿವಿಲ್ಲ. ಇನ್ನೇನು ಸನ್ಮಾನ ಮಾಡಕ್ಕೆ ಮುಂದಿರೋ ಕುರ್ಚಿಗೆ ಕರೀತಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿ ಸುಮಿತ್ರಾ ಪಾಡ್ದನ ಅವ್ರ ಅಧ್ಯಕ್ಷತೇಲಿ ನಡೀತಿರೋ ಇಂಥಾ ಸಂದರ್ಭ ಮತ್ತೆ ಮತ್ತೆ ಸಿಗುತ್ತಾ? ಜಾನಕಿ ವಲ್ಲರಿಯಂಥಾ ಪ್ರಸಿದ್ಧ ಲೇಖಕಿ ಪ್ರಶಸ್ತಿ ಪ್ರಧಾನ

ಮಾಡಿ ನನ್ ಬಗ್ಗೆ ಮಾತಾಡ್ತಾರೆ. ಇಂಥಾ ಸಮಾರಂಭಕ್ಕೂ ಬಾರದವನು. ಇವ್ನಿಗೆ ನನ್‌ಬಗ್ಗೆ ಇನ್ನೆಷ್ಟು ಅಸಡ್ಡೆ ಇರಬಹುದು! ಅದೆಷ್ಟು ಪೇಪರ್‌ಗಳಲ್ಲಿ, ಮ್ಯಾಗಜೀನುಗಳಲ್ಲಿ ತನ್ನ ಕತೆಗಳು, ಲೇಖನಗಳು ಬಂದಿಲ್ಲ! ಒಂದನ್ನಾದ್ರೂ, ಕುತೂಹಲಕ್ಕಾದ್ರೂ ಓದಿದಾನಾ? ಸದಾ ತಾನಾಯ್ತು, ತನ್ನ ಕೆಲಸವಾಯ್ತು, ಟೈಮ್ ಸಿಕ್ಕರೆ ಟೀವೀಲಿ ನ್ಯೂಸು, ಇಲ್ಲಾ ಕ್ರಿಕೆಟ್ ಅದೆರಡನ್ನು ಕಂಡ್ರೂ ನಂಗೆ ದ್ವೇಷ ಹುಟ್ಟೋ ಹಾಗಾಗಿದೆ. 'ಅವ್ನು ಅದನ್ನಷ್ಟು ನೋಡ್ತಿರ್ತಾನಲ್ಲ' ಅಂತ ನಂಗದ್ರ ಬಗ್ಗೆ ಕೋಪಾನಾ ಇಲ್ಲಾ 'ಅದ್ರಿಂದಾಗಿ ನನ್ನನ್ನ ನಿರ್ಲಕ್ಷ ಮಾಡ್ತಿದಾನೆ' ಅಂತ ನಂಗದರ ಬಗ್ಗೆ ಅಸಡ್ಡೇನಾ? ಮನದಲ್ಲೇ ತರ್ಕಿಸತೊಡಗಿದಳು. ಎಲ್ಲರೂ ಚಪ್ಪಾಳೆ ತಟ್ಟುತ್ತಿದ್ದಾರೆ. ತಕ್ಷಣವೇ ಇಹಕ್ಕೆ ಬಂದು 'ಥತ್! ಅವ್ನು ಬರ್ದಿದ್ರೆ ಅವನಿಗೇ ಇಲ್ಲ. ನಾನ್ಯಾಕೆ ಮನಸ್ಸು ಕೆಡಿಸ್ಕೋಬೇಕು, ಇಷ್ಟು ಜನ ತುಂಬಿರೋ ಈ ಸಭಾಂಗಣದಲ್ಲಿ, ನಾನೇ ಎಲ್ಲರ ಆಕರ್ಷಣೆಯ ಕೇಂದ್ರಬಿಂದು ಆಗಿರೋವಾಗ ಅವ್ನೊಬ್ಬ ಬರದಿದ್ರೆ ಏನಾಯ್ತು?' ಅಂದ್ಕೊಂಡು ಮುಖದಲ್ಲಿ ನಗುಸೂಸುತ್ತಾ ಇಡೀ ಸಭಾಂಗಣವನ್ನು ಕಣ್ತುಂಬಿಕೊಂಡಳು.

ಆದರೂ ಸಾವಿರಾರು ಕಣ್ಣುಗಳ ಮಧ್ಯೆ ಅದೊಂದು ಜೋಡಿ ಕಣ್ಣು ಕಾಣ್ತಿಲ್ವಲ್ಲ.. 'ಅವನು' ಬಂದಿದ್ರೆ ಹೊಟ್ಟೆ ಉರಿದುಕೊಳ್ಳೋದಕ್ಕೆ ಅವನ್ಯಾಕೆ ಬರ್ತಾನೆ? ಇರ್ಲಿ, ಇವತ್ತು ಮನೆಗ್ಹೋದ್ಮೇಲೆ ಏನೇ ಆದ್ರೂ ಯಾಕೆ ಬರ್ಲಿಲ್ಲಾಂತ ಅವ್ನನ್ನ ಕೇಳ್ಬಾರ್ದು ಅಂತ ನಿಶ್ಚಯಿಸಿಕೊಂಡು ಕಾರ್ಯಕ್ರಮದ ಕಡೆಗೆ ಗಮನ ಹರಿಸಿದಳು ದಾಕ್ಷಾಯಿಣಿ. "ಈಗ ಶ್ರೀಮತಿ ದಾಕ್ಷಾಯಿಣಿ ಮಿತ್ರ ಅವರನ್ನು ಸನ್ಮಾನಿಸುವ ಸಮಯ. ದಯವಿಟ್ಟು ಅವರು ಮುಂದಿರುವ ಅಲಂಕೃತ ಕುರ್ಚಿಯಲ್ಲಿ ಆಸೀನರಾಗಬೇಕೆಂದು ವಿನಂತಿ" ಎಂದು ನಿರೂಪಕಿ ಹೇಳಿದ ತಕ್ಷಣ ಇನ್ನೊಬ್ಬರು ಅವಳನ್ನು ಕರೆತಂದರು. ಸನ್ಮಾನ ಆರಂಭವಾಯಿತು. ದಾಕ್ಷಾಯಿಣಿ ಆ ಸಂಭ್ರಮದಲ್ಲಿ ಮುಳುಗಿಹೋದಳು ಸಚಿವೆ ಸುಮಿತ್ರಾ ಪಾಡ್ಡನ, ಲೇಖಕಿ ಜಾನಕಿ ವಲ್ಲರಿ, ಸಮಿತಿಯ ಸದಸ್ಯರು ಎಲ್ಲರೂ ಒಟ್ಟುಗೂಡಿ ಮೈಸೂರು ಪೇಟವನ್ನಿಟ್ಟು, ಏಲಕ್ಕಿ ಹಾರವನ್ನು ಹಾಕಿ, ಹಣ್ಣಿನ ಬುಟ್ಟಿ, ಬೆಳ್ಳಿಯ ಸ್ಮರಣಿಕೆ, ಶಾಲು, ಮೇಲೊಂದು ಚೆಕ್ಕು ಎಲ್ಲವನ್ನೂ ಕೊಟ್ಟು ಸನ್ಮಾನ ನಡೆಯುವ ವೇಳೆ ಪುಷ್ಪವೃಷ್ಟಿಯೂ ಆಯಿತು. ವೇದಿಕೆಯ ತುಂಬಾ ಮೊಬೈಲ್ ಫ್ಲಾಶ್‌ಗಳು ಥಳಥಳನೆ ಕಣ್ಣು ಹೊಡೆದವು. ಹಲವು ಪತ್ರಿಕೆಗಳ ಬಾತ್ಮೀದಾರರು ಕ್ಯಾಮರಾದಲ್ಲಿ ಆ ಕ್ಷಣಗಳನ್ನು ಸೆರೆಹಿಡಿದುಕೊಂಡರು. ಹೃದಯತುಂಬಿ ಬಂತು ದಾಕ್ಷಾಯಿಣಿಗೆ. ತನ್ನ ಇಷ್ಟುಕಾಲದ ಬರವಣಿಗೆಗೆ ಇಂದು ಒಂದು ಸಾರ್ಥಕತೆ ಬಂತು ಎಂದೆನ್ನಿಸಿ ಮನ ಗದ್ಗದವಾಯಿತು. ಗಂಟಲುಬ್ಬಿ ಬಂದು ಕಣ್ಣಲ್ಲಿ ನೀರಾಡಿತು ಸಂತೋಷಕ್ಕೋ ? ಇಲ್ಲಾ ಅವನು ಬರಲಿಲ್ಲವಲ್ಲ ಎನ್ನುವ ದುಗುಡಕ್ಕೋ ?!

ಸಮಾರಂಭ ಮುಂದುವರೆಯಿತು. ಜಾನಕಿ ವಲ್ಲರಿಯವರು ದಾಕ್ಷಾಯಿಣಿಯ ಕತೆಗಳಲ್ಲಿನ ಮಹಿಳಾ ಸಮಾನತೆಯ, ಹೋರಾಟದ ದಾರಿಯನ್ನು ಗುರುತಿಸಿದರು. ಸತ್ವಪೂರ್ಣವಾದ ಬರವಣಿಗೆ; ಲೇಖಕಿಯಿಂದ ಇನ್ನೂ ಹೆಚ್ಚಿನ ನಿರೀಕ್ಷೆಯಿದೆ ಎಂದು ಹೇಳುತ್ತಾ ಅರ್ಧಗಂಟೆಗೂ ಮಿಕ್ಕು ಮಾತನಾಡಿದರು. ಸುಮಿತ್ರಾ ಪಾಡ್ಡನ ಅವರು ಇಷ್ಟು ಚಿಕ್ಕ ವಯಸ್ಸಿಗೇ ಎಂತಹ ಸಾಧನೆ ಎಂದು ಹೊಗಳಿ, ಶುಭಾಶಯವನ್ನು ಕೋರಿದರು. ಸಂಸ್ಥಾಪಕರು ತಾವು ಇಂದು ನೀಡಿರುವ ಪುರಸ್ಕಾರ, ಈ ಪ್ರಶಸ್ತಿಯ ಗೌರವವನ್ನು ಹೆಚ್ಚಿಸಿದೆ ಎಂದು ಹೊಗಳಿದರು. ಸಭೆಯಲ್ಲಿ ಚಪ್ಪಾಳೆಯೋ ಚಪ್ಪಾಳೆ. ಹರ್ಷದಿಂದ ಮೂಕಳಾಗಿಹೋಗಿದ್ದಳು ದಾಕ್ಷಾಯಿಣಿ. ಅವಳು ಮಾತನಾಡುವಾಗ ಎಲ್ಲರ ಅಭಿಮಾನದ ನುಡಿಗಳಿಗೆ ತನ್ನ ಕೃತಜ್ಞತೆಗಳನ್ನು ಸಲ್ಲಿಸಿ, ಈ ಪ್ರಶಸ್ತಿ ತನ್ನ ಪಾಲಿಗೆ ಅಮೂಲ್ಯ ಮತ್ತು ತನ್ನ ಮುಂದಿನ ಬರವಣಿಗೆಗೆ ಸ್ಫೂರ್ತಿದಾಯಕವಾಗಿದೆ ಎಂದು ಮನದುಂಬಿ ಹೇಳಿದಳು. ಜನರ ಚಪ್ಪಾಳೆ ಇಡೀ ಸಭಾಂಗಣದಲ್ಲಿ ಪ್ರತಿಧ್ವನಿಸತೊಡಗಿತು.

ಸಮಾರಂಭದ ನಂತರ ಪುಷ್ಕಳವಾದ ಭೋಜನ. ಆ ಸಮಯದಲ್ಲಿ ದಾಕ್ಷಾಯಿಣಿಯ ಕಾಲೇಜಿನ ಪ್ರಾಧ್ಯಾಪಕ ಶ್ರೀರಾಮ್ ಶರ್ಮ ಸಿಕ್ಕು ಅಭಿನಂದನೆಗಳನ್ನು ತಿಳಿಸಿ. "ತಕ್ಷಣ ಹೊರಟ್ಬಿಡ್ಬೇಡಮ್ಮ. ಬಹಳ ದಿನಗಳ ಮೇಲೆ ಸಿಕ್ಕಿದೀಯ; ನಾಲ್ಕು ಮಾತಾಡೋಣ" ಎಂದರು. ದಾಕ್ಷಾಯಿಣಿಗೂ ಖುಷಿಯೆನಿಸಿತು. ಊಟ ಮುಗಿಸಿ ಇಬ್ಬರೂ ಬಂದು ಸಭಾಂಗಣದ ಹೊರಗಿದ್ದ ಮರವೊಂದರ ಬುಡದಲ್ಲಿನ ಕಲ್ಲುಬೆಂಚಿನ ಮೇಲೆ ಕುಳಿತು ಮಾತಿಗೆ ತೊಡಗಿಕೊಂಡರು. ಶರ್ಮರವರಿಗೆ ತನ್ನ ಶಿಷ್ಯಳ ಸಾಧನೆ ಅಪಾರ ಸಂತಸ ತಂದಿತ್ತು. ಕಾಲೇಜು ದಿನಗಳಲ್ಲಿ ಅವರು ನೀಡಿದ ಮಾರ್ಗದರ್ಶನದ ಫಲವೇ ಇದು ಎಂದು ದಾಕ್ಷಾಯಿಣಿಯ ನಿಲುವು. ಆ ಕಾಲದ ಎಲ್ಲಾ ಗುರು ಶಿಷ್ಯರೂ ಅವರ ಮಾತಿನಲ್ಲಿ ಬಂದುಹೋದರು. ಅವರಿಬ್ಬರೂ ಮಾತನಾಡುತ್ತಿರುವಾಗಲೇ ಇಡೀ ಸಭಾಂಗಣ ನಿಧಾನವಾಗಿ ಖಾಲಿಯಾಯಿತು... ಬಹಳ ದಿನಗಳ ಮೇಲೆ ಸಿಕ್ಕ ಗುರುಶಿಷ್ಯರ ಭೇಟಿ ನಿರಾತಂಕವಾಗಿ ಮಾತಿನ ಮನೆಕಟ್ಟುತ್ತಿತ್ತು. ಮಾತಲ್ಲೇ ಮುಳುಗಿರುವಾಗ ಶರ್ಮ ಅವರಿಗೆ ಹೆಂಡತಿಯಿಂದ ಕರೆಬಂತು. ಮಾತನಾಡುತ್ತಲೇ "ಹಾ ಬಂದೆ, ಬಂದೆ, ಇನ್ನು ಕಾಲು ಗಂಟೇಲಿ ಅಲ್ಲಿರ್ತೀನಿ" ಎನ್ನುತ್ತಾ ದಡಬಡಿಸಿ ಎದ್ದು "ಬರ್ತೀನಮ್ಮ, ಇನ್ನೊಂದಿನ ಬಿಡುವಾಗಿ ಸಿಗೋಣ" ಎನ್ನುತ್ತಾ ಸರಸರನೆ ತಮ್ಮ ಕಾರನ್ನು ಹತ್ತಿ ಹೊರಟೇಬಿಟ್ಟರು.

ಈಗ ದಾಕ್ಷಾಯಿಣಿ ವಾಸ್ತವಕ್ಕೆ ಬಂದಳು. ಸಂಜೆ ನಾಲ್ಕು ಗಂಟೆ. ಸಭಾಂಗಣ ಖಾಲಿಯಾಗಿ ಎಲ್ಲರೂ ಹೋಗಿಯಾಗಿದೆ. ಮೊದಲೇ ತಾನು 'ವಾಪಸ್ಸು ಹೋಗುವಾಗ ಟ್ರಾನ್ಸ್‌ಪೋರ್ಟ್ ಬೇಡ' ಅಂದಿದ್ದಕ್ಕೆ ನಿರ್ವಾಹಕರೂ ತನ್ನ ಬಗ್ಗೆ ತಲೆಕೆಡಿಸಿಕೊಳ್ಳದೇ ಹೊರಟೇಹೋಗಿದ್ದಾರೆ. ಹೋಗುವಾಗ ಬಾಯ್ಮಾತಿಗಾದ್ರೂ ನಿಮ್ಮ ಕಾರು ಬಂದಿದ್ಯಾಂತ ಕೇಳ್ಬೇಕಿತ್ತಲ್ವಾ! ಶರ್ಮ ಸರ್ ಮನೆ ಬನ್ನೇರುಘಟ್ಟ ರಸ್ತೇಲಿಂದ್ರು. ನಮ್ಮನೆ ದಾರೀನೇ. ಅವರಾದ್ರೂ ಬಿಟ್ಟುಹೋಗ್ಲಾಂತ ಕೇಳ್ಳಿಲ್ವಲ್ಲ! ಒಂದೆರೆಡೇ ಗಂಟೆಗಳ ಮುಂಚೆ ಇಡೀ ಸಭಾಂಗಣದ ಚಪ್ಪಾಳೆ ಗಿಟ್ಟಿಸಿಕೊಂಡು ಸನ್ಮಾನಿತಳಾಗಿ ನಾಯಕಿಯಾಗಿದ್ದವಳು ಈಗ ಹಾರ, ಫಲಕ, ಶಾಲು, ಹಣ್ಣುಗಳಿದ್ದ ದೊಡ್ಡ ಬ್ಯಾಗನ್ನೆತ್ತಿಕೊಂಡು ಯಾರೂ ಇಲ್ಲದ ನಿರ್ಗತಿಕರಂತೆ, ಅನಾಥಳಂತೆ ನಿಂತಿದ್ದಳು. ಏನು ಮಾಡಬೇಕೆಂದು ತಿಳಿಯಲಿಲ್ಲ. ತಕ್ಷಣ 'ಮಿತ್ರನಿಗೆ ಫೋನ್ ಮಾಡಲೇ' ಎನ್ನಿಸಿ ಸಮಾರಂಭದ ಸಮಯದಲ್ಲಿ ಸ್ವಿಚಾಫ್ ಮಾಡಿದ್ದ ಮೊಬೈಲ್ ಎತ್ತಿಕೊಂಡು ರಿಸ್ಟಾರ್ಟ್ ಮಾಡಿದಳು. ಅವನು ಏನಾದ್ರೂ ಮೆಸೇಜಾದ್ರೂ ಕಳಿಸಿರಬಹುದೇ ಎಂದು ನೋಡಿದಳು. ಊಹ್ಞೂಂ, ಏನೂ ಇಲ್ಲ ಛೇ ಅವ್ನನ್ನ ಖಂಡಿತ ಕರೀಬಾರ್ದು ಅಂತನ್ನಿಸಿ ಉಬರ್ ಬುಕ್ ಮಾಡಲು ಯತ್ನಿಸಿದಳು. ಎಲ್ಲವೂ 20-30 ನಿಮಿಷ ದೂರದಲ್ಲಿವೆ. ರಸ್ತೇಲಿ ಯಾವ್ದಾದರೂ ಆಟೋ ಸಿಕ್ಕರೆ ನೋಡೋಣ ಎಂದುಕೊಂಡು ಫುಟ್‌ಪಾತಿನ ಮೇಲೆ ಚೀಲವನ್ನಿಟ್ಟುಕೊಂಡು ಚಪ್ಪಾಳೆ ತಟ್ಟುತ್ತಾ ಖಾಲಿ ಕಾಣುತ್ತಿದ್ದ ಆಟೋಗಳನ್ನೆಲ್ಲಾ ಕರೆದಳು. ಎಷ್ಟೋ ಹೊತ್ತು ಕಳೆದಮೇಲೆ ಅಂತೂ ಒಬ್ಬ ಆಟೋದವನು ನಿಲ್ಲಿಸಿದ. "ಮೀಟರ್ ಮೇಲೆ 20 ರೂಪಾಯಿ ಕೊಟ್ರೆ ಬರ್ತೀನಿ" ಎಂದ. "ಏನು ಹಗಲು ದರೋಡೇನಾ. ಈಗಿನ್ನೂ ನಾಕೂವರೆ" ದಬಾಯಿಸಿದಾಗ ಮಾತೇ ಆಡದೆ ಸ್ಟಾರ್ಟ್ ಮಾಡಿದ. ವಿಧಿಯಿಲ್ಲದೆ ಹತ್ತಿದಳು.

ಬೆಳಗಿನಿಂದ ಹತ್ತಿಕ್ಕಿಕೊಂಡಿದ್ದ ಹತಾಶೆ, ದುಃಖ, ದುಮ್ಮಾನ ಎಲ್ಲವೂ ಒಮ್ಮೆಲೇ ನುಗ್ಗಿ ಬಂದು ಕಣ್ಣಲ್ಲಿ ನೀರಾಡತೊಡಗಿತು. ಹಲ್ಲುಕಚ್ಚಿ ಅದುಮಲು ಯತ್ನಿಸಿದಳು. ಅಷ್ಟರಲ್ಲಿ ಅಗ್ನಿಮಿತ್ರನ ಕರೆ ಬಂತು. ಕೋಪದಿಂದ ತೆಗೆದುಕೊಳ್ಳಲೇ ಇಲ್ಲ. ಮತ್ತೆ ಮತ್ತೆ ಕರೆಬಂದಾಗ ಮೊಬೈಲನ್ನು ಮೌನವಾಗಿಸಿದಳು. ಮನೆ ಬಾಗಿಲು ತೆರೆದೇ ಇತ್ತು. ಆಟೋದವನಿಗೆ ದುಡ್ಡುಕೊಟ್ಟು ಭಾರವಾದ ಬ್ಯಾಗನ್ನೆತ್ತಿಕೊಂಡು ಒಳಗೆ ಅಡಿಯಿರಿಸಿದಳು. "ಸಧ್ಯ ಬಂದ್ಯಲ್ಲ ದಚ್ಚು. ನಾನು ನಿಂಗೇನಾಯ್ತೋಂತ ಹೆದ್ರಿಬಿಟ್ಟಿದ್ದೆ" ಆತಂಕದಲ್ಲಿ ಬಾಗಿಲಲ್ಲೇ ಸಿಕ್ಕ ಮಿತ್ರ ಬ್ಯಾಗೆತ್ತಿಕೊಳ್ಳಲು ಕೈ ಚಾಚಿದ. ಕೊಸರಿಕೊಂಡು ಮಾತೇ ಆಡದೆ ರೂಮಿನೊಳಹೊಕ್ಕು ಡ್ರೆಸ್ ಬದಲಾಯಿಸಿ,

ಮುಖಕ್ಕೆ ತಣ್ಣೀರೆರೆಚಿಕೊಳ್ಳುತ್ತಿರುವಾಗ "ಏನೇ ಆದ್ರೂ ಅವ್ನನ್ನ ಏನೂ ಕೇಳ್ಬಾರ್ದು" ಅಂತ ತೀರ್ಮಾನ ಮಾಡಿಕೊಂಡೇ ಹೊರಬಂದು ಸೋಫಾದ ಮೇಲೆ ಕೂತಳು.

ಒಳಗಿನಿಂದ ಬಿಸಿಯಾದ ಕಾಫಿ ಹಿಡಿದು ಬಂದ ಮಿತ್ರ, "ಯಾಕೆ ದಚ್ಚು, ಇಷ್ಟು ಲೇಟಾಯ್ತು. ಎವೆರಿಥಿಂಗ್ ಈಸ್ ಓಕೆ ನೋ" ಎಂದ ಕಕ್ಕುಲತೆಯಿಂದ. ಉರಿದುಹೋಯಿತು ದಾಕ್ಷಾಯಿಣಿಗೆ. "ನಿನ್ನ ನೀನು ಏನ್ ಅಂದ್ಕೊಂಡಿದೀಯ? ನೀನು ಬರ್ದಿದ್ರೆ ಏನೂ ನಡ್ಯೋದೇ ಇಲ್ವಾ. ಎಲ್ಲಾ ಹೈಕ್ಲಾಸಾಗಿ ನಡೀತು. ನಾಳೆ ಪೇಪರ್ ನಲ್ಲಿ ಬರತ್ತಲ್ಲ ಓದ್ಕೋ. ನನ್ನೇನೂ ಕೇಳ್ಬೇಡ" ಸಿಡುಕಿದಳು. 'ಓಕೆ.. ಓಕೆ.. ಕೂಲ್.. ಕೂಲ್.. ನಾನ್ಯಾಕೆ ಬರ್ಲಿಲ್ಲ ಅಂತ ನಿಂಗೇನಾದ್ರೂ ಗೊತ್ತಾ" ಕೇಳಿದ. "ಇನ್ಯಾತಕ್ಕೆ. ನಂಗೆ ಪ್ರಶಸ್ತಿ ಬಂದಿರೋದು ನಿಂಗೆ ಹಿತವಾಗಿಲ್ಲ. ನಿಂಗೆ ಹೊಟ್ಟೆಕಿಚ್ಚು. ಸಂತೋಷಪಡೋ ಮನಸ್ಸಿಲ್ಲ" ಕಿರುಚಾಡಿದಳು. ಗಲ್ಲಕ್ಕೆ ಕೈಕೊಟ್ಟು ಅವಳು ಬೈಯುವುದೆಲ್ಲಾ ಮುಗಿಯುವ ತನಕ ಸುಮ್ಮನಿದ್ದವನು, "ಆಯ್ತಾ, ನಿನ್ನ ಬೈಗಳ ಸ್ಟಾಕೆಲ್ಲಾ ಮುಗೀತಾ. ನಾನೇನೂ ಮಾತಾಡ್ದೇ ನಿನ್ನ ಮಾತೆಲ್ಲಾ ಕೇಳಿಸ್ಕೊಂಡಿದೀನಿ. ಈಗ ಮೊದ್ಲು ಕಾಫಿ ಕುಡ್ದು ನೀನು ಕೇಳಿಸ್ಕೋ. ನನ್‌ಕೆಲ್ಸ ಮುಗಿದ ತಕ್ಷಣ ಬೀಗ ಹಾಕಿ ಪದ್ಮ ಹನ್ನೊಂದು ಗಂಟೆಗೆ ಕೆಲ್ಸ ಮಾಡಕ್ಕೆ ಬಂದಾಗ ಕೊಡ್ಲೀಂತ ಪಾರ್ವತಮ್ಮನವರ ಮನೆಗೆ ಕೀ ಕೊಡಕ್ಕೆ ಹೋದೆ.. ಹಾಲು ಸೀದ ವಾಸ್ನೆ ಹೊರಗ್ತಂಕ ಬರ್ತಿದೆ. ಯಾವತ್ನಂಗೆ ಕಿಟಕೀಲಿ ಕೈಹಾಕಿ ಅಗಳಿ ತೆಗೆದು ಒಳಗ್ಹೋಗ್ತೀನಿ, ಪದ್ದಮ್ಮನ ಕಾಲು ಈಳಿಗೆ ಮಣೆಗೆ ಸಿಕ್ಕಿ ಕೊಯ್ದು ರಕ್ತ ಸೋರ್ತಿದೆ. ಜ್ಞಾನ ಹೋದ ಸ್ಥಿತೀಲಿದಾರೆ. ಒಲೆ ಮೇಲೆ ಹಾಲಿನ ಪಾತ್ರೆ ಸೀದು ಇಡೀ ಮನೆಯೆಲ್ಲಾ ಹೊಗೆಯೋ ಹೊಗೆ. ತಕ್ಷಣ ಗ್ಯಾಸ್ ಆರ್ಸಿ ಅಲ್ಲೇ ಇದ್ದ ಒಂದು ಟವಲನ್ನ ಅವ್ರ ಕಾಲಿಗೆ ಸುತ್ತಿ, ಎದುರ್ಮನೆ ಗಣೇಶ್‌ನ ಕರ್ದು, ಇಬ್ರೂ ಸೇರಿ ಅವ್ರನ್ನ ಎತ್ಕೊಂಡು ತಂದು ನಮ್ಮ ಕಾರಲ್ಲಿ ಮಲಗ್ಸಿದ್ವಿ. ನಾನಾ, ನೀನಾ ಅಂತ ಟೈಮ್ ವೇಸ್ಟ್ ಮಾಡೋ ಹಾಗಿರ್ಲಿಲ್ಲ. ಆಕೆಗೆ ಅರೆ ಜ್ಞಾನ. ರಕ್ತ ಹೋಗ್ತಾನೇ ಇದೆ. ಸೀದಾ ವಾಸಂತಿ ನರ್ಸಿಂಗ್ ಹೋಮಿಗೆ ಕರ್ಕೊಂಡ್ಹೋದ್ವಾ., ಡಾಕ್ಟು ಸಿಕ್ಕುದ್ರು ಸಧ್ಯ. ಒಳ್ಳೇ ಟೈಮಲ್ಲಿ ಕರ್ಕೊಂಡು ಬಂದ್ರಿ. ವಿಪ್ರೀತ ಬ್ಲಡ್ ಲಾಸಾಗಿದೆ. ಹಾಗಾಗಿ ಬ್ಲಡ್ಡೂ ಕೊಡ್ಬೇಕಾಗತ್ತೆ ಅಂದ್ರು. ಆಕೇದು 'ಓ ನೆಗೆಟಿವ್' ಅಂತೆ. ಅರೇಂಜ್ ಮಾಡಕ್ಕೇ ಎರಡು ಗಂಟೆ ಬೇಕಾಯ್ತು.

ಅಂತೂ ಎರಡು ಗಂಟೆಗೆ ಅವ್ರನ್ನ ವಾರ್ಡಿಗೆ ಶಿಫ್ಟ್ ಮಾಡಿದ್ರು. ನರ್ಸಿಗೆ ಸ್ವಲ್ಪ ನೋಡ್ಕೊಳ್ತಿರಿ ಅಂತ್ಹೇಳಿ ಮನೆಗ್ಬಂದ್ರೆ ನೀನಿನ್ನೂ ಬಂದಿರ್ಲಿಲ್ಲ. ಏನೋ ಲೇಟಾಗಿರ್ಬೋದು ಅಂದ್ಕೊಂಡು ಡೈರಿನಲ್ಲಿ ಅವ್ರ ಮಗಳ ನಂಬರ್ ಹುಡ್ಕಿ ಫೋನ್ ಮಾಡ್ದೆ. ತುಮ್ಕೂರಿಂದ ಬರ್ಬೇಕಲ್ಲ. ತಕ್ಷಣವೇ ಹೊರಟ್ಬಂದ್ರೂ ನಾಕ್‌ಗಂಟೆಯಾಯ್ತು. ಮನೆಗೆ ಬಂದ್ನೋಡ್ತೀನೀ, ಆಗ್ಲೂ ನೀನಿನ್ನೂ ಮನೆಗ್ಬಂದಿಲ್ಲ. ಎಷ್ಟು ಗಾಭರಿಯಾಯ್ತು ಗೊತ್ತಾ? ಮೇಲಿಂದ್ಮೇಲೆ ಫೋನ್ ಮಾಡಿದ್ರೆ ನೀನು ತೊಗೋತಾ ಇಲ್ಲ. ನಾನೇನಂದ್ಕೋಬೇಕ್ಹೇಳು? ಬಡಬಡಾಂತ ರೇಗಿದ್ಯಲ್ಲ ಈಗ ನೀನೇ ಹೇಳು, ನಾನೇನ್ಮಾಡ್ಬೇಕಿತ್ತು; ಅವ್ರನ್ನ ಹಾಗೇ ಬಿಟ್ಟು ಫಂಕ್ಷನ್ನಿಗೆ ಬರ್ಬೇಕಿತ್ತಾ? ಯಾವ್ದು ಮುಖ್ಯ ಜೀವನ್ದಲ್ಲಿ ಬದುಕಾ ಬರಹಾನಾ". ದಾಕ್ಷಾಯಿಣಿ ಮೌನವಾಗಿ ಎದ್ದು ಬಂದು ಅವನನ್ನಪ್ಪಿಕೊಂಡಳು. ಪಶ್ಚಾತ್ತಾಪದ ಒಂದೆರಡು ಹನಿಗಳು ಅವನ ತಲೆಗೂದಲನ್ನು ತೋಯಿಸಿದವು.

***

ಛಂದಸ್ಸು ಹಾಗೂ ಮಾತ್ರೆಗಳು

– ಜೀ.ವಿ. ಹೆಗಡೆ

'ಕವೇಃ ಕರ್ಮಃ ಕಾವ್ಯಂ' (ಕವಿಯು ಬರೆದಿದ್ದು ಕಾವ್ಯ) ಎನ್ನುವ ಪ್ರಯೋಗದಿಂದ ಪ್ರಾರಂಭಿಸಿ 'ವಾಕ್ಯಂ ರಸಾತ್ಮಕಂ ಕಾವ್ಯಂ' (ರಸವನ್ನು ಹೊರಸೂಸುವ ವಾಕ್ಯವೇ ಕಾವ್ಯ) ಎನ್ನುವ ತನಕ ಕಾವ್ಯದ ಕುರಿತಾಗಿ ಬಹಳಷ್ಟು ವಿವರಣೆಗಳನ್ನು ಲಾಕ್ಷಣಿಕರು ಹೇಳಿದ್ದಾರೆ. ಆದರೆ 'ವಾಕ್ಯಂ ರಸಾತ್ಮಕಂ ಕಾವ್ಯಂ' ಎನ್ನುವದು ಹೆಚ್ಚು ವಿಮರ್ಶಕರ ಮನ್ನಣೆಯನ್ನು ಪಡೆದಿದ್ದು ಸುಳ್ಳಲ್ಲ. ರಸಾನುಭೂತಿಯನ್ನು ಬಿಚ್ಚಿಡದ ವಾಕ್ಯಗಳು ಕೇವಲ ಶಬ್ದ ಸಮೂಹಗಳೇ ಹೊರತು ಕಾವ್ಯವಲ್ಲ ಎನ್ನುವದನ್ನು ಎಲ್ಲಾ ಲಾಕ್ಷಣಿಕರು ಒಪ್ಪುತ್ತಾರೆ.

ಕಾವ್ಯವನ್ನು ಪದ್ಯ ಕಾವ್ಯ, ಗದ್ಯ ಕಾವ್ಯ ಹಾಗೂ ಚಂಪೂಕಾವ್ಯ ಎನ್ನುವ ಮೂರು ಬಗೆಯಲ್ಲಿ ವಿಂಗಡಿಸುತ್ತಾರೆ ಎನ್ನುವದು ಸಾಹಿತ್ಯಾಸಕ್ತರಿಗೆ ತಿಳಿದಿದ್ದೇ ಆಗಿದೆ. ಚಂಪೂಕಾವ್ಯವನ್ನು ಗದ್ಯ-ಪದ್ಯಗಳ ಮಿಶ್ರಣ ಅಂತ ಗುರುತಿಸುವಾಗ ಕಾವ್ಯದ ಮೂಲ ಗದ್ಯ ಹಾಗೂ ಪದ್ಯ ಅಂತ ತಿಳಿಯಬಹುದು.

ಗೇಯಕ್ಕೆ ಅನುಕೂಲವಾದ ಕಾವ್ಯ ಪ್ರಕಾರವನ್ನು ಪದ್ಯವೆಂತಲೂ, ಅದಿಲ್ಲವಾದಲ್ಲಿ ಗದ್ಯವೆಂತಲೂ ಸ್ಥೂಲವಾಗಿ ವಿಂಗಡಿಸಬಹುದು. (ಸಂಗೀತಗಾರರು ಗದ್ಯ ಪ್ರಕಾರವನ್ನೂ ಸ್ವರ ಸಂಯೋಜನೆಯಿಂದ ಗೇಯ ಕಾವ್ಯವನ್ನಾಗಿಸಬಲ್ಲರು. ಅದು ಬೇರೆ.)

ಗೇಯಕ್ಕೆ ಅನುಕೂಲವಾಗಿ ಕಾವ್ಯವನ್ನು ಬರೆಯುವಾಗ ಶಬ್ದ ಪ್ರಯೋಗಗಳು ಕೆಲವು ನಿಯಮಗಳಿಗೆ ಒಳಪಡಬೇಕು ಎನ್ನುವದು ಕಾವ್ಯ ವಿಮರ್ಶಕರ ಅಭಿಪ್ರಾಯ. (ಇದು ನವ್ಯಕಾವ್ಯಕ್ಕಿಂತಲೂ ಪೂರ್ವದ ಪದ್ಯ ಕಾವ್ಯದ ಕುರಿತಾದ ವಿವರಣೆ.) ಇಂತಹ 'ಪದ್ಯವನ್ನು ರಚಿಸುವ ನಿಯಮ ಅಥವಾ ಶಾಸ್ತ್ರವನ್ನು ಛಂದಸ್ಸು ಎನ್ನುತ್ತಾರೆ. ಛಂದಸ್ಸಿನ ಶಾಸ್ತ್ರದ ಪ್ರಕಾರ ರಚಿಸಿದ ಪದ್ಯವೇ 'ಛಂದೋಬದ್ಧ' ಪದ್ಯ ಅಥವಾ ಕಾವ್ಯ.

ಇಂತಹ ಪದ್ಯಗಳನ್ನು ಅರ್ಥೈಸಿಕೊಳ್ಳುವಾಗಲಾಗಲಿ, ರಚಿಸುವಾಗಲಾಗಲಿ ಛಂದಸ್ಸಿನ ನಿಯಮಗಳನ್ನು ತಿಳಿದುಕೊಳ್ಳುವುದು ಒಳ್ಳೆಯದು.

ಗಣ ಎಂದರೆ ಗುಂಪು. ಕೆಲವು ನಿಯಮಗಳಿಗನುಸಾರವಾಗಿ ವಿಂಗಡಿಸಿದ ಅಕ್ಷರಗಳ ಗುಂಪು. ಈ ಗಣಗಳನ್ನು ಕಟ್ಟುವ ಘಟಕಗಳು ಎಂದರೆ ಹ್ರಸ್ವ ದೀರ್ಘಾಕ್ಷರಗಳು. ಇದರಲ್ಲಿ 'ವರ್ಣಗಣ' ಅಥವಾ 'ಅಕ್ಷರಗಣ', 'ಮಾತ್ರಾಗಣ' ಮತ್ತು 'ಅಂಶಗಣ'ಗಳೆಂಬ ಮೂರು ವಿಧದ ಗಣಗಳಿವೆ. ಈ ಗಣಗಳು ಒಂದು ನಿರ್ದಿಷ್ಟವಾದ ಆವರ್ತದಲ್ಲಿ ಪುನರಾವರ್ತನೆಗೊಳ್ಳುವಾಗ ಗೇಯತೆ ಹುಟ್ಟಿಕೊಳ್ಳುತ್ತದೆ. ಇದೇ ಪದ್ಯದ ಲಕ್ಷಣ.

ಅಕ್ಷರ ಗಣದಲ್ಲಿ ಮೂರು ಅಕ್ಷರಗಳ ಗುಂಪನ್ನು ಗಣವಾಗಿ ಗುರುತಿಸುತ್ತಾರೆ. ಮಗಣ, ನಗಣ ಹೀಗೆ ಮ, ನ, ಭ, ಯ, ಜ, ರ, ಸ, ತ ಎನ್ನುವ ಎಂಟು ಗಣಗಳಿವೆ. ಈ ಗಣಗಳನ್ನು ಗುರುತಿಸಲು 'ಯಮಾತಾರಾಜಭಾನಸಲಗಂ' ಎನ್ನುವ ಸೂತ್ರವನ್ನು ಬಳಸುವದುಂಟು. ಅಕ್ಷರಗಣಗಳು ಸಂಸ್ಕೃತ ಶ್ಲೋಕ

ಗಳಲ್ಲಿ ವ್ಯಾಪಕವಾಗಿ ಬಳಕೆಯಲ್ಲಿವೆ. ಕನ್ನಡದಲ್ಲಿ ಶಾರ್ದೂಲ ವಿಕ್ರೀಡಿತ ಮೊದಲಾದ ವೃತ್ತಗಳಲ್ಲಿ ಈ ಲಕ್ಷಣಗಳನ್ನು ಗುರುತಿಸಬಹುದು.

ಅಂಶಗಣಗಳಲ್ಲಿ ಬ್ರಹ್ಮಗಣ, ವಿಷ್ಣುಗಣ ಹಾಗೂ ರುದ್ರಗಣ ಹೀಗೆ ಮೂರು ರೀತಿ. ಸಾಂಗತ್ಯ ಹಾಗೂ ತ್ರಿಪದಿ ಮುಂತಾದ ಜಾನಪದ ಕೃತಿಗಳಲ್ಲಿ ಇವು ಸಾಮಾನ್ಯ. ಹಾಡಲು ಅನುಕೂಲವಾಗುವಂತೆ ಪದ್ಯಗಳಲ್ಲಿ ಬರುವ ಅಕ್ಷರಗಳನ್ನು ಹಿಗ್ಗಿಸಿಯೋ ಅಥವಾ ಕುಗ್ಗಿಸಿಯೊ ಗೇಯತೆಗೆ ಒತ್ತು ಕೊಟ್ಟು ಕಾವ್ಯ ರಚನೆ ಮಾಡುತ್ತಾರೆ.

ಮಾತ್ರೆಗಳ ಆಧಾರದಿಂದ ಗಣ ವಿಭಾಗ ಮಾಡುವುದೇ ಮಾತ್ರಾಗಣ. ಮೂರು, ನಾಲ್ಕು ಅಥವಾ ಐದು ಮಾತ್ರೆಗಳಿಗೆ ಒಂದೊಂದು ಗಣ ಮಾಡಲಾಗುವುದು. ಸಾಲಿನಲ್ಲಿರುವ ಎಲ್ಲಾ ಮಾತ್ರೆಗಳನ್ನು ಗಣಗಳಾಗಿ ವಿಂಗಡಿಸಬೇಕು. ಕಂದ, ಷಟ್ಪದಿಗಳು, ರಗಳೆ ಇವು ಮಾತ್ರಾಗಣ ಆಧಾರಿತ ಛಂದಸ್ಸುಗಳು.

ಯಾವುದೇ ರೀತಿಯ ಗಣ ವಿಭಾಗವಿರಲಿ, ಮಾತ್ರೆಗಳ ಕುರಿತಾದ ತಿಳುವಳಿಕೆ ಸಾಹಿತ್ಯಾಸಕ್ತರಿಗೆ ಒಳ್ಳೆಯದು.

ಛಂದಶ್ಶಾಸ್ತ್ರದಲ್ಲಿ ಮಾತ್ರೆ ಎಂಬುದು 'ಉಚ್ಚರಣೆಯ ಕಾಲವನ್ನು ಅಳೆಯುವ ಮಾನ'. ಒಂದು ಹ್ರಸ್ವ ಅಕ್ಷರವನ್ನು ಉಚ್ಚರಿಸಲು ಬೇಕಾಗುವ ಕಾಲವೇ ಒಂದು ಮಾತ್ರಾಕಾಲ. ಅ, ಇ, ಉ, ಋ, ಎ, ಒ ಇವು ಹ್ರಸ್ವ ಸ್ವರಗಳು ಹಾಗೂ ಆ, ಈ, ಊ, ಏ, ಐ, ಓ, ಔ, ಇವು ದೀರ್ಘ ಸ್ವರಗಳು, ಹಾಗೂ ಅಂ, ಅಃ ಇವು ಯೋಗವಾಹಗಳು. ಜೊತೆಗೆ ವರ್ಗೀಯ ಅಥವಾ ಅವರ್ಗೀಯ ವ್ಯಂಜನಗಳೊಡನೆ ಈ ಸ್ವರಗಳು ಸೇರಿದಾಗ ಆಗುವ ಗುಣಿತಾಕ್ಷರಗಳು ಕ್ರಮವಾಗಿ ಹ್ರಸ್ವ (ಕ, ಗ, ಚ, ದ, ಬ, ರ, ಮುಂತಾದವು) ಹಾಗೂ ದೀರ್ಘ (ಕಾ, ಗಾ, ಛೇ, ತೌ, ಕೀ, ಶೂ, ಸಃ ಮುಂತಾದವು) ವ್ಯಂಜನಗಳೆಂದು ಕರೆಯಿಸಲ್ಪಡುತ್ತವೆ.

ಮಾತ್ರೆಗಳಲ್ಲಿ ಮೂರು ವಿಧಗಳು. ಅವೇ ಲಘು, ಗುರು ಹಾಗೂ ಪ್ಲುತ. (ಆದರೆ ಪ್ಲುತ ಮಾತ್ರೆ ಎನ್ನುವದನ್ನು ಕ್ವಚಿತ್ತಾಗಿ ಉಪಯೋಗಿಸುತ್ತಾರೆ. ಆದುದರಿಂದ ಲಘು ಹಾಗೂ ಗುರು ಮಾತ್ರೆಗಳ ಕುರಿತಾಗಿ ಮಾತ್ರ ಬರೆಯುತ್ತೇನೆ.)

ಲಘುವನ್ನು **'U'** ಎಂತಲೂ ಗುರುವನ್ನು **_** ಎಂತಲೂ ಗುರುತಿಸಲಾಗುವುದು. ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವೇ ಲಘು. ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವೇ ಗುರು. ಹೀಗಾಗಿ ಹ್ರಸ್ವ ಅಕ್ಷರಗಳಿಗೆ ತಗಲುವ ಸಮಯವನ್ನು ಲಘುಮಾತ್ರಾ ಕಾಲ ಅಂತಲೂ, ದೀರ್ಘ ಅಕ್ಷರಗಳಿಗೆ ತಗಲುವ ಸಮಯವನ್ನು ಗುರುಮಾತ್ರಾ ಕಾಲ ಅಂತಲೂ ಹೇಳಬಹುದು.

ಶಬ್ದದ ಮಧ್ಯದಲ್ಲಿ ಬರುವ ಒತ್ತಕ್ಷರದ ಹಿಂದಿನ ಅಕ್ಷರವನ್ನೂ ಗುರು ಅಂತಲೇ ಗುರುತಿಸುತ್ತಾರೆ. ಉದಾಹರಣೆ ಕೊಡುವದಾದರೆ,

ಭಾಮಿನಿ ಷಟ್ಪದಿಯ ಲಕ್ಷಣವನ್ನು ಹೇಳುವಾಗ

3 / 4 / 3 / 4

3 / 4 / 3 / 4

3 / 4 / 3 / 4 / 3 / 4 / 1

ಇಲ್ಲಿ 3 ಅಥವಾ 4 ಮಾತ್ರೆಗಳ ಗುಂಪು, ಪೂರ್ಣ ಲಘು ಅಥವಾ ಪೂರ್ಣ ಗುರು ಅಥವಾ ಮಿಶ್ರ ಮಾತ್ರೆಗಳನ್ನು ಹೊಂದಿರಬಹುದು. ಕೊನೆಯ 1 ಮಾತ್ರ ಗುರುವಾಗಿರಬೇಕು.

_ ∩   _ ∩∩   ∩∩∩ ∩∩∩∩

ದೇವ। ನಿನ್ನಯ। ಹಸಿವ। ತಣಿಸಲು।

_ ∩   _ ∩∩   ∩∩∩   _ ∩∩

ಭಾವ। ಶುದ್ಧದ। ಭಕುತಿ। ಬೇಹುದು।

_ ∩   _ ∩∩ _ ∩   _ ∩∩ ∩∩∩ ∩∩   ∩∩ _

ನಾವು। ಚಂಚಲ। ಚಿತ್ತ।ರೆಂದಳು। ಕಮಲ।ಮುಖಿ ನಗು।ತಾ

ನಿನ್ನಯ ಎನ್ನುವಲ್ಲಿ ನಿನ್+ನಯ ಅಂತ ವಿಭಾಗಿಸಬೇಕು ಹಾಗೂ ನಿನ್ ಎನ್ನುವದು ಗುರು ಆಗಿರುತ್ತದೆ. ಆದುದರಿಂದ ನಿನ್ನಯ ಎನ್ನುವಲ್ಲಿ 'ನಿ' ಗುರುವಾಗಿಯೂ 'ನ್ನಯ' ಲಘುಗಳಾಗಿಯೂ ಕಾಣುತ್ತವೆ.

ಇದು ತೀರಾ ಸುಲಭವಾದ ಪದ್ಯ.

3 4 3 4
ಶ್ರೀವ ।ನಿತೆಯರ। ಸನೆವಿ। ಮಲರಾ।
3 4 3 4
ಜೀವ। ಪೀಠನ। ಪಿತನೆ। ಜಗಕತಿ।
3 4 3 4 3 4 2
ಪಾವ। ನನೆಸನ। ಕಾದಿ। ಸಜ್ಜನ। ನಿಕರ। ದಾತಾ। ರಾ

(ಷಟ್ಪದಿಯ 3 ಹಾಗೂ 6ನೇ ಸಾಲಿನ ಕೊನೆಯ ಅಕ್ಷರ ಗುರುವೇ ಆಗಿರುತ್ತದೆ.)

ವಾರ್ಧಿಕ ಷಟ್ಪದಿಯನ್ನು ಗುರುತಿಸುವಾಗ

5 / 5 / 5 / 5

5 / 5 / 5 / 5

5 / 5 / 5 / 5 / 5 / 5 / 2

5 / 5 / 5 / 5

5 / 5 / 5 / 5

5 / 5 / 5 / 5 / 5 / 5 / 2

ಹೀಗೆ ಬರೆಯುತ್ತಾರೆ.

5 5 5 5
ಶ್ರೀವಧುವಿ।ನಂಬಕ ಚ।ಕೋರಕಂ। ಪೂರೆಯೆ ಭ ।
5 5 5 5
ಕ್ತಾವಳಿಯ। ಹೃತ್ಕುಮುದ ।ಕೋರಕಂ। ಬಿರಿಯೆ ಜಗ ।
5 5 5 5 5
ತೀ ವಲಯ।ದಮಲ ಸೌ।ಭಾಗ್ಯ ರ।ತ್ನಾಕರಂ ।ಪೆರ್ಚಿನಿಂ ।
5 2
ಮೇರೆವರಿ।ಯೆ ॥
5 5 5 5
ಆವಗಂ। ಸರಸ ಕರು।ಣಾಮೃತದ। ಕಲೆಗಳಿಂ ।
5 5 5 5
ತೀವಿದೆಳ।ನಗೆಯ ಬೆಳ।ದಿಂಗಳಂ ।ಪಸರಿಸುವ ।
5 5 5 5 5
ದೇವಪುರ। ಲಕ್ಷ್ಮೀರ।ಮಣನಾಸ್ಯ। ಚಂದ್ರನಾ।ನಂದಮಂ ।
5 2
ನಮಗೀಯ।ಅ॥

(ಆದರೆ ಶಬ್ದದ ಪ್ರಾರಂಭದಲ್ಲಿಯೇ ಒತ್ತಕ್ಷರ ಇದ್ದಲ್ಲಿ ಪದ್ಯದ ಮಧ್ಯದಲ್ಲಿ ಬರುವ ಈ ಅಕ್ಷರದ ಹಿಂದಿನ ಅಕ್ಷರ ಗುರುವಾಗುವದಿಲ್ಲ.)

3 4 3 4
ರಾವ।ಣಾಸುರ।ಮಥನ। ಶ್ರವಣಸು।

ಇಲ್ಲಿ ಶ್ರವಣ ಎನ್ನುವಲ್ಲಿ ಶ್ರ ಶಬ್ದದ ಪ್ರಾರಂಭದ ಒತ್ತಕ್ಷರವಾದುದರಿಂದ ಹಿಂದಿನ 'ನ' ಗುರುವಾಗುವದಿಲ್ಲ.

ಪ್ಲುತ ಪ್ರಯೋಗ:

'ನಾರಿ ಕೇಳ ದಿವಾಕರನೊಳು' ಇಲ್ಲಿ 19 ಮಾತ್ರೆಗಳಿವೆ. ಸರಿಪಡಿಸಲು 'ವಾ' ಅಕ್ಷರ ಪ್ಲುತವಾಗುವಂತೆ ಬರೆದರೆ ಸರಿಯಾಗುವದು.

3 4 3 4
ನಾರಿ। ಕೇಳ ದಿ।ವಾಽ।ಕರನೊಳು

ಹೀಗೆ ಪ್ರಸ್ತಾರಗಳನ್ನು ಹಾಕಿ ಬೇರೆ ಬೇರೆ ಸ್ವರೂಪದ ಪದ್ಯಗಳ ಛಂದೋಲಕ್ಷಣಗಳನ್ನು ಗುರುತಿಸಬಹುದು.

***

ಕಥಾಲೋಕ

ಚಮತ್ಕಾರಿ ಹೆಣ್ಣು – ಹೆನ್ರಿ ಬ್ರದರ್ಸ್ ಕತೆ

– ವಿಠ್ಠಲ್ ಇಜೇರಿ

ಜಾನ್ ಹೆನ್ರಿ ಮೂರ್‌ಕ್ರಾಫ್ಟ್ (John Henry Moorcroft) ಮತ್ತು ಪೌಲ್ ಹೆನ್ರಿ ಝುರಾಗ್ (Poul Henry Zarrag) ಇವರು ಶಿಕ್ಷಕರಿಗೆ ತರಬೇತಿ ನೀಡುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಇಬ್ಬರ ಹೆಸರಿನ ಮಧ್ಯದಲ್ಲಿ ಬರುವ ಹೆನ್ರಿಯಿಂದಾಗಿ ಹೆನ್ರಿ ಸೋದರರು (Henry Brothers) ಎಂದು ಗುರುತಿಸಿಕೊಂಡಿದ್ದಾರೆ. ಇವರು ಟರ್ಕಿಯ ಇಸ್ತಾಂಬೂಲ್‌ನಿಂದ ದೇಶದ ಇತರೆಡೆ ಸಂಚರಿಸಿ ಭಾಷಣ, ಪ್ರಾತ್ಯಕ್ಷಿಕೆ, ಪ್ರದರ್ಶನಗಳ ಮೂಲಕ ಶಿಕ್ಷಕರ ತರಬೇತಿ ಕಾರ್ಯಾಗಾರ ನಡೆಸುತ್ತಿದ್ದಾರೆ. ಅದಕ್ಕಾಗಿ ಮಾಧ್ಯಮವಾಗಿ ಮನೋರಂಜನೆ ಮತ್ತು ಮೌಲ್ಯಗಳುಳ್ಳ ಕತೆ, ಕವನಗಳನ್ನು ಬಳಸುತ್ತಾರೆ. ಅಂಥಹ ಕಥೆಯೊಂದು ಇಲ್ಲಿದೆ.

ಹೆನ್ರಿ ಬ್ರದರ್ಸ್ ಸ್ಟೋರೀಸ್ ಎಂಬ ಇಂಗ್ಲಿಷ್ ಪ್ರಸಿದ್ಧ ಕತೆಗಳು ಮತ್ತು ಕವನಗಳು ಸಾಕಷ್ಟು ಓದುಗರನ್ನು ಹೊಂದಿವೆ. ಅದರಲ್ಲಿಯ ಒಂದು ಕತೆ, ಸ್ವಾರಸ್ಯವಾಗಿಯೂ ಇದೆ, ಮತ್ತು ಒಂದು ಮಹತ್ವದ ವಿಷಯವನ್ನೂ ಒಳಗೊಂಡಿದೆ. ಇದು ಜಾನಪದ ಶೈಲಿಯಲ್ಲಿದೆ. ಕತೆಯ ಹೆಸರು 'ಚಮತ್ಕಾರಿ ಮಹಿಳೆ'

ಕತೆ : ಚಮತ್ಕಾರಿ ಮಹಿಳೆ

ರಾಜ ಆರ್ಥರ್‌ನನ್ನು ಪಕ್ಕದ ರಾಜ ಯುದ್ಧದಲ್ಲಿ ಸೋಲಿಸಿ ಸೆರೆಹಿಡಿದ. ಆ ರಾಜ ತನ್ನ ಸೆರೆಯಾಳಾದ ರಾಜರನ್ನೆಲ್ಲ ಕೊಂದುಹಾಕುತ್ತಿದ್ದ. ಆದರೆ ಆರ್ಥರನ ಆಕರ್ಷಕ ವ್ಯಕ್ತಿತ್ವ ಮತ್ತು ಚಟುವಟಿಕೆಯುಕ್ತ ನಡವಳಿಕೆ ಅವನಿಗೆ ಇಷ್ಟವಾಯಿತು. ಅವನಿಗೊಂದು ಅವಕಾಶ ನೀಡಲು ನಿರ್ಧರಿಸಿದ. ಒಂದು ಸವಾಲು ಒಡ್ಡಿ ಅದರಲ್ಲಿ ಪಾಸಾದರೆ ಅವನಿಗೆ ಮುಕ್ತಗೊಳಿಸುವ ಮನಸ್ಸು ಮಾಡಿದ. "ಒಂದು ಕಠಿಣ ಪ್ರಶ್ನೆಯೊಂದನ್ನು ಕೇಳಿ, ಅದಕ್ಕೆ ಸರಿಯಾದ ಉತ್ತರ ಒಂದು ವರ್ಷದೊಳಗೆ ರಾಜ ಆರ್ಥರ್ ನೀಡಿದರೆ ಅವನು ಸ್ವತಂತ್ರ, ತಪ್ಪಿದಲ್ಲಿ ಒಂದು ವರ್ಷದ ನಂತರ ಮರಣದಂಡನೆ, ಉತ್ತರ ಹುಡುಕುವ ಒಂದು ವರ್ಷ ಕಾಲ ಆರ್ಥರ್ ತನ್ನ ರಾಜ್ಯದಲ್ಲಿ ಸ್ವತಂತ್ರ" ಎಂದು ಹೇಳಿದ.

ಕಿಂಗ್ ಆರ್ಥರ್ ಈ ಸವಾಲನ್ನು ಸ್ವೀಕರಿಸಿದ. ವಿಜಯೀ ರಾಜ ಕೇಳಿದ ಪ್ರಶ್ನೆ – "ಮಹಿಳೆಯರ ನಿಜವಾದ ಬೇಡಿಕೆ ಏನು?

ಪ್ರಶ್ನೆ ಕಠಿಣವಿತ್ತು. ಆದರೆ ದೀರ್ಘ ಒಂದು ವರ್ಷದ ಸಮಯವಿತ್ತು. ಪ್ರಶ್ನೆ ತಿರಸ್ಕರಿಸಿದರೆ ಅಂದೇ ಮರಣ. ಆದುದರಿಂದ ಸವಾಲನ್ನು ಸ್ವೀಕರಿಸಿದ ಆರ್ಥರ್ ತನ್ನ ರಾಜ್ಯಕ್ಕೆ ಮರಳಿದ. ತನ್ನ ರಾಜ್ಯದ ಪಂಡಿತರು, ವಿದ್ವಾಂಸರು, ಪುರೋಹಿತರು, ಗುರುವರ್ಯರು, ಮಂತ್ರಿ, ಮಾಂಡಲೀಕರು ಎಲ್ಲರಲ್ಲಿ ಈ ಪ್ರಶ್ನೆ ಇರಿಸಿದ. ಆದರೆ ಯಾರಿಂದಲೂ ಸೂಕ್ತ ಉತ್ತರ ದೊರೆಯಲಿಲ್ಲ. ಕೆಲವರು ಈ ಪ್ರಶ್ನೆಗೆ, 'ಊರ ಹೊರಗೆ ಮುದುಕಿ ಮಾಟಗಾತಿ ಒಬ್ಬಳಿದ್ದಾಳೆ. ಆಕೆ ಎಂಥ ಪ್ರಶ್ನೆಯನ್ನೂ ಉತ್ತರಿಸಬಲ್ಲಳು, ಆದರೆ ಆಕೆಯ ಬೇಡಿಕೆ ದೊಡ್ಡದು" ಎಂದು ಅಭಿಪ್ರಾಯಪಟ್ಟರು.

ಆರ್ಥರ್ ಮಾಟಗಾತಿಯ ಬಳಿ ಹೋಗದೇ ಸುಮಾರು ಸಮಯ ಇತರೆಡೆ ಉತ್ತರಕ್ಕಾಗಿ ಪ್ರಯತ್ನಿಸಿ ಕೊನೆಗೆ ವರುಷ ತುಂಬುತ್ತ ಬಂದಾಗ ಆಕೆಯ ಬಳಿ ಹೋದ. ಆಕೆ "ಉತ್ತರ ನೀಡುವೆ, ಆದರೆ ಅದಕ್ಕೆ ತಕ್ಕ ಬೆಲೆ ಕೊಡಬೇಕು '' ಎಂದಳು. ಕಿಂಗ್ ಆರ್ಥರ್ ಆಕೆಯ ಷರತ್ತು ಕೇಳಿದ. ಆಕೆ ಉತ್ತರ ಹೇಳಿದರೆ ಆರ್ಥರ್ ಪ್ರಾಣ ಸ್ನೇಹಿತ ಮತ್ತು ಅವನ ಬಂಟ ಗೈವಾನ್ ಆಕೆಯನ್ನು ಮದುವೆಯಾಗಬೇಕು ಎಂಬುದಾಗಿತ್ತು. ಆರ್ಥರ್‌ಗೆ ತನಗಾಗಿ ಸ್ನೇಹಿತನ ಬಾಳು ಹಾಳಾಗಬಾರದು, ನನಗೆ ಮರಣ ದಂಡನೆಯಾಗುವುದಾದರೆ ಆಗಲಿ, ಗೈವಾನ್ ಬಾಳು ಮಾಟಗಾತಿಯ ಪಾಲಾಗುವುದು ಬೇಡ" ಎಂದು ಆಕೆಯ ಷರತ್ತಿಗೆ ಒಪ್ಪಲಿಲ್ಲ. ಯಾಕೆಂದರೆ ಗೈವಾನ್ ಮನ್ಮಥನಂತೆ. ಆ ಮಾಟಗಾತಿಯೋ ಬೆನ್ನು ಬಾಗಿದ, ಕಪ್ಪು ಬಣ್ಣದ, ಹಲ್ಲುಗಳಿಲ್ಲದ, ಹತ್ತಿರ ಹೋದರೆ ದುರ್ಗಂಧಪೂರಿತ ಕುರೂಪಿ ಮುದುಕಿ. ಅಂಥವಳನ್ನು ಮದುವೆಯಾಗಲು ಯಾರೂ ಒಪ್ಪುವುದಿಲ್ಲ. ಆರ್ಥರ್ ಆಕೆಯ ಷರತ್ತು ಒಪ್ಪದಿದ್ದರೂ ಅವನ ಸ್ನೇಹಿತ ಗೈವಾನ್ ರಾಜನೂ, ಹಿತೈಷಿಯೂ ಆದ ಆರ್ಥರನ ಪ್ರಾಣ ಉಳಿಸಲು ಮಾಟಗಾತಿ ಮುದುಕಿಯನ್ನು ಮದುವೆಯಾಗಲು ಒಪ್ಪಿದ. ಮದುವೆಯ ಘೋಷಣೆಯಾಯಿತು.

'ಉತ್ತರ ನೀಡುವ ಮೊದಲು ಮದುವೆ' ಅಂದಳು ಮಾಟಗಾತಿ. ಅದೂ ನೆರವೇರಿತು. ಆರ್ಥರ್ "ನಿನ್ನ ಸಮಸ್ಯೆ ಬಗೆ ಹರಿಯಿತು, ನನ್ನ ಸಮಸ್ಯೆ ಹಾಗೆಯೇ ಉಳಿದಿದೆ, ನನ್ನ ಪ್ರಶ್ನೆಗೆ ಉತ್ತರ? ಅಂದ. ಆಕೆ, "ಸ್ವಲ್ಪ ಕಾಯಿ, ನಿನ್ನ ಸ್ನೇಹಿತ ಮದುವೆಯಾಗಿದ್ದಾನೆ, ಮದುವೆಯ ಉದ್ದೇಶ ನೆರವೇರಲಿ" ಅಂದುಬಿಟ್ಟಳು.

ಮೊದಲ ರಾತ್ರಿ ಗೈವಾನ್ ಭಯ, ಭೀತಿ ಮತ್ತು ನಿರಾಸಕ್ತಿಯಿಂದ ಮಲಗುವ ಕೋಣೆ ಪ್ರವೇಶಿಸಿದ. ಅಲ್ಲೊಂದು ಆಶ್ಚರ್ಯ ಕಾದಿತ್ತು. ಜಗತ್ತಿನಲ್ಲಿಯ ಅಪರೂಪದ ಸುಂದರಿಯೊಬ್ಬಳು ಹೊಳೆಯುವ ಕಣ್ಣುಗಳಿಂದ ಅವನ ಆಗಮನಕ್ಕೆ ಕಾದಿದ್ದಳು. ಅಂಥಹ ಸುಂದರಿಯನ್ನು ಗೈವಾನ್ ಈ ಮುಂಚೆ ಕಂಡಿದ್ದೇ ಇಲ್ಲ.

ಆ ಸುಂದರಿಯೇ ಮಾತನಾಡಿದಳು. "ನಾನು ಕುರೂಪಿ ಮಾಟಗಾತಿ. ಮುದುಕಿಯಾದಾಗ ನನ್ನನ್ನು ವರಿಸಿ ಮಹದುಪಕಾರ ಮಾಡಿರುವಿ. ನಾನು ಹಗಲು ಮಾಟಗಾತಿಯಾಗಿದ್ದರೆ, ರಾತ್ರಿ ಹೀಗೆ ಚೆಲುವೆ, ರಾತ್ರಿ ಮಾಟಗಾತಿಯಾಗಿದ್ದರೆ, ಈ ನನ್ನ ರೂಪರಾಶಿ ನಿನಗೆ ಹಗಲು ಲಭ್ಯ. ನೀನು ಬಯಸಿದಂತೆ ಬದಲಾವಣೆ, ನಿನ್ನ ಆಯ್ಕೆ ಹೇಳು" ಅಂದಳು.

ಗೈವಾನ್ ಯೋಚನೆಗೆ ಬಿದ್ದ. "ಹಗಲು ಜಗತ್ತಿಗೆ ತೋರಿಸಲು ಸುಂದರಿ ಇದ್ದರೆ, ರಾತ್ರಿಗೆ ಕುರೂಪಿ ಮುದುಕಿ, ಇಲ್ಲವೇ ಹಗಲು ಈಗಿರುವ ಹಾಗೆ ಕುರೂಪಿ ಮಾಟಗಾತಿ, ಬಯಸಿದರೆ ರಾತ್ರಿಗೆ ಈ ಸೌಂದರ್ಯ ರಾಶಿ". ಯೋಚಿಸಿ, ಯೋಚಿಸಿ, ಕೊನೆಗೆ ಆಯ್ಕೆಯನ್ನು ಆಕೆಯ ವಿವೇಚನೆಗೆ ಬಿಟ್ಟು, "ನಿನ್ನ ಇಷ್ಟದಂತೆ ಆಗಬಹುದು. ಆಯ್ಕೆಯನ್ನು ನಿನಗೇ ಬಿಡುವೆ" ಅಂದ.

ಆಗ ಆಕೆ ಇದೇ ನಿಮ್ಮ ರಾಜನ ಪ್ರಶ್ನೆಗೆ ಉತ್ತರ. "ಹೆಣ್ಣಿಗೆ ಯಾವಾಗಲೂ ಸ್ವಾತಂತ್ರ್ಯ ಬೇಕು. ಹೆಣ್ಣು ತನ್ನ ಒಡೆತನ ತಾನೇ ಹೊಂದಿರಬೇಕು".

***

ಜೀರ್ಣೋದ್ಧಾರ

– ರೇಣುಕಾ ದೇಸಾಯಿ

ಪ್ರಪಂಚದಲ್ಲಿರುವ ಪ್ರತಿವಸ್ತು, ಜೀವಿ, ಜೀವಸಂಕುಲ, ಕಲೆ, ಕಲೆಗಾರ ಎಲ್ಲರೂ ಎಲ್ಲಾ ಕಾಲದಲ್ಲೂ ಒಂದೇ ತೆರನಾಗಿ ಉತ್ತುಂಗ ಸ್ಥಿತಿಯಲ್ಲಿ ಇರುವದಿಲ್ಲ. ಮೊದಲು ಕೃಷ್ಣಪಕ್ಷದ ಚಂದ್ರನಂತೆ ದಿನದಿಂದ ದಿನಕ್ಕೆ ಬೆಳೆಯುತವೆ. ಇಷ್ಟಿಷ್ಟೆ ಬೆಳೆಯುತ್ತಾ ಒಂದು ಹಂತದಲ್ಲಿ ಉತ್ತುಂಗ ಸ್ಥಿತಿ ತಲುಪತ್ತವೆ. ನಂತರ ಎಷ್ಟೋ ವರುಷಗಳು ಒಂದು ತರಹದ ಸಮಾನ ಸ್ಥಿತಿ. ಅತ್ತ ಹೆಚ್ಚು ಅಲ್ಲ, ಇತ್ತ ಕಡಿಮೆಯೂ ಅಲ್ಲ. ಹೀಗೆ ಒಂದಿಷ್ಟು ವರುಷಗಳು ಸಂದಮೇಲೆ ಶುಕ್ಲಪಕ್ಷದ ಚಂದ್ರನಂತೆ ಕ್ಷೀಣಿಸುವ ಈ ಪ್ರಕ್ರಿಯೆ ಸರಿಯೇ. ಆದರೆ ಕಲೆಗೆ ಈ ಸ್ಥಿತಿ ಬಂದರೆ, ಕಲಾಪ್ರಕಾರಗಳನ್ನು ಪೋಷಿಸುವವರು, ಮುನ್ನೆಡೆಸುವವರು ಇಲ್ಲದಿದ್ದಾಗ ಆ ಕಲಾಪ್ರಕಾರವೇ ನಶಿಸುತ್ತದೆ, ಕಣ್ಮರೆಯಾಗುತ್ತದೆ, ಒಂದು ಸಂಸ್ಕೃತಿಯ ಭಾಗವೇ ಕಳಚಿ ಮಾಯವಾಗುತ್ತದೆ.

ಒಂದು ಕಲಾಪ್ರಕಾರ ಪುರುಷರಿಂದಲೇ ಸೃಷ್ಟಿಗೊಂಡು, ನಿರ್ದೇಶನಗೊಂಡು, ಪ್ರದರ್ಶಿಸಲ್ಪಟ್ಟು ಮುಂದುವರಿಸು ವವರು ಇಲ್ಲದಿದ್ದಾಗ ಒಬ್ಬ ತಾಯಿ ಅದನ್ನು ಕೈಗೆತ್ತಿಗೊಂಡು ಹಾಳಾಗದಂತೆ ಕಾಪಿಟ್ಟು ಉಳಿಸಿ, ಬೆಳೆಸಿದ ಹಾಗೂ ಆ ಕಲೆ ನಡೆದು ಬಂದ ದಾರಿಯ ಬಗ್ಗೆ ಇಲ್ಲಿ ಹೇಳಬೇಕಾಗಿದೆ.

ಹೌದು, ಆ ಕಲೆಯೇ ಗಮಕರೂಪಕ. ಇದೊಂದು ಗಮಕಕಲೆಯ ಪ್ರಾಯೋಗಿಕ ರೂಪ. ವೇಷಭೂಷಣ, ರಂಗಪರಿಕರಣ, ಪಾತ್ರದ ಆಗಮನ ನಿರ್ಗಮನಗಳಿಲ್ಲದ ನಾಟಕ ಅಥವಾ ನಾಟಕ ರೂಪದ ಪ್ರಸ್ತುತಿ ಇದಾಗಿದೆ, ಇದಕ್ಕೆ ವ್ಯವಸ್ಥಿತವಾದ ತಂಡ, ನಾಟಕದ ರೀತಿಯಲ್ಲಿ ಪೂರ್ವಾಭ್ಯಾಸ, ರಂಗನಿರ್ದೇಶನ, ಕಾವ್ಯದ ರಸಗ್ರಹಣ, ಪಾತ್ರದ ಸ್ವಭಾವದ ತಿಳುವಳಿಕೆ ಹಾಗೂ ಪದ್ಧತಿ ಪೂರ್ವಕವಾಗಿ ಕಾವ್ಯ ನಡೆಯುವ ರೀತಿಯಲ್ಲೇ ಪ್ರಸ್ತುತಿ ಪಡಿಸುವ ಪರಂಪರೆಯಲ್ಲಿ ಇದನ್ನು ವ್ಯವಸ್ಥಿತವಾಗಿ ಪ್ರಸ್ತುತಿಪಡಿಸುವ ಒಂದು ತಂಡ ಕಟ್ಟಿ, ಅದೂ ಪೂರ್ತಿ ಪ್ರಮಾಣದ ಹೆಣ್ಣು ಮಕ್ಕಳ ತಂಡವಾಗಿದ್ದು, ಪುರುಷ ಪಾತ್ರವನ್ನು ಅಷ್ಟೇ ಪರಿಣಾಮಕಾರಿಯಾಗಿ ನಿರೂಪಿಸುವ, ಮಹಿಳೆಯರನ್ನು ವ್ಯವಸ್ಥಿತ ರೀತಿಯಲ್ಲಿ ತರಬೇತಿ ಕೊಟ್ಟು ಹೊಸ ಹೊಸ ಮಾರ್ಪಾಡುಗಳನ್ನು ಅಳವಡಿಸಿದ ಪ್ರಯೋಗಶೀಲ ಮಹಿಳೆ ವಿದುಷಿ ಎನ್. ಶ್ರೀಮತಿ ಜಯರಾಂ.

ಇವರು ಗಮಕ ರೂಪಕಕ್ಕೆ ತಮ್ಮ ಸಿರಿಕಂಠದ ಶ್ರೀಮಂತಿಕೆ, ತಾಜಾತನದ ರೂಪಕೊಟ್ಟು ಕರ್ನಾಟಕದಾದ್ಯಂತ ಎಲ್ಲಾ ದೊಡ್ಡ ದೊಡ್ಡ ವೇದಿಕೆಯಲ್ಲಿ ಪ್ರದರ್ಶನ ನೀಡಿ ಕೀರ್ತಿ ಹೊಂದಿದ್ದಾರೆ. ಇವರು ನಾಟಕ, ರಂಗಗೀತೆ, ಕರ್ನಾಟಕ ಶಾಸ್ತ್ರೀಯ ಸಂಗೀತ, ಲಘು ಸಂಗೀತ, ಗಮಕ, ಜಾನಪದ ಗೀತೆ, ಸಂಪ್ರದಾಯ ಗೀತೆ ಹಾಗೂ ರಂಗಭೂಮಿ ಕಲಾವಿದೆ, ಆಕಾಶವಾಣಿ, ದೂರದರ್ಶನದ ಕಲಾವಿದೆ, ಕರ್ನಾಟಕ ಸರಕಾರದ ವಾರ್ತಾ ಇಲಾಖೆಯಲ್ಲಿ ಕಲಾವಿದೆಯಾಗಿ ಸುದೀರ್ಘ ಇಪ್ಪತ್ತು ವರುಷದ ಅನುಭವಿ, ಪ್ರಸ್ತುತ ಮಲ್ಲೇಶ್ವರದಲ್ಲಿ 'ಶ್ರೀ ಗಾನಧಾಮ' ಎನ್ನುವ ಸಂಸ್ಥೆಯ ಸಂಸ್ಥಾಪಕಿ, ಎಳೆಯರನ್ನು ಸಂಗೀತ ಲೋಕಕ್ಕೆ ತರುತ್ತಾ, ಬೆಳೆದವರನ್ನು ಹೊಸ ಹೊಸ ಪ್ರಯೋಗಕ್ಕೆ ಹಚ್ಚುತ್ತಿರುವ ಪ್ರಯೋಗಶೀಲ ವಿದ್ವನ್ಮಣಿ.

ಇವರು ಗಮಕ ಕಲೆಯಲ್ಲಿ 50 ವರ್ಷಗಳನ್ನು ಮೀರಿ ವೇದಿಕೆ ಕಾರ್ಯಕ್ರಮ ನೀಡಿದ್ದಾರೆ ಜೊತೆಗೆ ಹಲವಾರು ವಿದ್ಯಾರ್ಥಿಗಳಿಗೂ ಶಿಕ್ಷಣ ನೀಡಿದ್ದಾರೆ. ಹಳಗನ್ನಡ ಕಾವ್ಯಗಳಾದ ಆದಿಕವಿ ಪಂಪನ ಆದಿಪುರಾಣ,

ವಿಕ್ರಮಾರ್ಜುನ ವಿಜಯ, ರನ್ನನ ಗದಾಯುದ್ಧ, ಜನ್ನನ ಯಶೋಧರ ಚರಿತೆ ಮುಂತಾದ ಕಾವ್ಯಗಳನ್ನು, ಹರಿಹರ ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ, ತೊರವೆ ನರಹರಿ, ಚಾಮರಸ ಮುಂತಾದ ಪ್ರಸಿದ್ಧ ನಡುಗನ್ನಡ ಕವಿಗಳ ಕಾವ್ಯಗಳನ್ನು ಮತ್ತು ಅಧುನಿಕ ಕವಿಗಳಾದ ಮುದ್ದಣನ ರಾಮಶ್ವಮೇಧ, ಕುವೆಂಪು ರಾಮಾಯಣ, ಡಿವಿಜಿ ಅವರ ಕಗ್ಗ, ಮಾಸ್ತಿಯವರ ಶ್ರೀರಾಮ ಪಟ್ಟಾಭಿಷೇಕಂ, ಪುತಿನ ಅವರ ಹರಿಚರಿತೆ, ಮುಂತಾದ ಕಾವ್ಯಗಳನ್ನು, ಪ್ರಸಿದ್ಧ ವಾಖ್ಯಾನಕಾರರಾದ ಡಾ.ಮತ್ತೂರು ಕೃಷ್ಣಮೂರ್ತಿ, ನೀಲತ್ತಳ್ಳಿ ಕಸ್ತೂರಿ, ಪ್ರೊ. ಅ.ರಾ.ಮಿತ್ರ, ಡಾ. ಎ.ವಿ.ಪ್ರಸನ್ನ, ಶ್ರೀ ಮಾರ್ಕಂಡೇಯ ಅವಧಾನಿಗಳು, ಶ್ರೀಮತಿ ಕಮಲಮ್ಮ ಮುಂತಾದ ಹಿರಿಯರೊಂದಿಗೆ ಕಾರ್ಯಕ್ರಮ ನೀಡಿದ್ದಾರೆ. ಗಾಂಧಿ ಸಾಹಿತ್ಯ ಸಂಘ ಪ್ರಸ್ತುತಪಡಿಸಿರುವ ನೂರಾರು ಗಮಕರೂಪಕಗಳಲ್ಲಿ 1961ರಿಂದಲೇ ತಮ್ಮ 16ನೇ ವಯಸ್ಸಿನಲ್ಲೇ ಪ್ರಧಾನ ಪಾತ್ರ ನಿರ್ವಹಿಸಿ ಪ್ರಶಂಸೆಗಳಿಸಿ, ಇಂದಿಗೂ ತಮ್ಮ 76ನೇ ವಯಸ್ಸಿನ ಹರೆಯದಲ್ಲೂ ಅದೇ ಉತ್ಸಾಹ, ಅದೇ ಕಂಚಿನ ಕಂಠದಿಂದ ಸಭಿಕರನ್ನು ಮಂತ್ರ ಮುಗ್ಧರನ್ನಾಗಿಸಿ, ತಮ್ಮ ಎಲ್ಲಾ ಬಗೆಯ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದ ಎಲ್ಲಾ ಪ್ರಸಿದ್ಧ ಕವಿಗಳ ಗೀತೆಗಳನ್ನು ಹಾಡಿದ್ದಾರೆ. ಪುತಿನ ಅವರ ಹಲವಾರು ಗೀತೆಗಳನ್ನು ಅವರ ಬಳಿಯೇ ಕಲಿತು ಹಾಡಿರುವವರಲ್ಲದೆ ಪುತಿನ ಅವರ ರಾಮೋದಯ, ಶಬರಿ, ದೀಪದ ಲಕ್ಷ್ಮಿ,, ಶ್ರೀರಾಮ ಪಟ್ಟಾಭಿಷೇಕಂ, ಗೋಕುಲ ನಿರ್ಗಮನ, ಸೀತಾ ಕಲ್ಯಾಣ ಗೀತರೂಪಕಗಳನ್ನು ನಿರ್ದೇಶಿಸಿ ಪ್ರತಿಷ್ಠಿತ ವೇದಿಕೆಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಇವರು ಪ್ರಸ್ತುತಿಪಡಿಸಿದ್ದಾರೆ.

ಭಾರತೀಯ ವಿದ್ಯಾಭವನದ ಬೆಂಗಳೂರು ಶಾಖೆಯಲ್ಲಿ 1990ರ ದಶಕದಲ್ಲಿ ಮೂರು ವರ್ಷಗಳ ಕಾಲ ನಡೆದ ಮಲ್ಲೇಶ್ವರಂ ಗಾಂಧಿ ಸಾಹಿತ್ಯ ಸಂಘದ ಕಲಾವಿದರ ಗಮಕರೂಪಗಳಲ್ಲಿ ಪ್ರಮುಖ ಪಾತ್ರನಿರ್ವಹಿಸಿ ಪ್ರಶಂಸೆ ಪಡೆದಿರುವ ಇವರು ಗಮಕ ರತ್ನಾಕರ ಕೀರ್ತಿಶೇಷ ಶ್ರೀ ಬಿ.ಎಸ್.ಎಸ್. ಕೌಶಿಕ್ ಅವರ ಗಮಕ ದೃಶ್ಯ ರೂಪಕಗಳಲ್ಲಿ ಭಾಗವಹಿಸಿದ್ದಾರೆ. ಇದಲ್ಲದೆ ಇವರ ಅನೇಕ ಧ್ವನಿಸುರಳಿ ಬಿಡುಗಡೆಗೊಂಡಿವೆ. ಗಮಕ ರೂಪಕದ ಬಗೆಗೆ ಕಾರ್ಯಾಗಾರ ನಡೆಸಿಕೊಟ್ಟಿದ್ದಾರೆ. ಹಲವಾರು ಪ್ರತಿಷ್ಠಿತ ವೇದಿಕೆಯಲ್ಲಿ ಪೂರ್ಣ ಪ್ರಮಾಣದ ಸಂಗೀತ ಕಛೇರಿ ನಡೆಸಿಕೊಟ್ಟಿದ್ದಾರೆ. ಹಿಂದೂಸ್ಥಾನಿ ಮತ್ತು ರಬೀಂದ್ರ ಸಂಗೀತದ ಕಿರುಪರಿಚಯವಿದೆ. ಮುಂದಿನ ಸಮಾಜ ಮತ್ತು ಪೀಳಿಗೆಯನ್ನು ಗಮನದಲ್ಲಿಟ್ಟುಕೊಂಡು ಅನೇಕ ಶಿಶುಗೀತೆಗಳ ಧ್ವನಿಸುರಳಿ ಬಿಡುಗಡೆ ಮಾಡಿದ್ದಾರೆ. ಜೊತೆಗೆ ಇದರಲ್ಲಿ ಪಾಶ್ಚಿಮಾತ್ಯ, ಹಿಂದೂಸ್ಥಾನಿ, ರಬೀಂದ್ರ ಸಂಗೀತವೆಲ್ಲವನ್ನೂ ಬಳಸಿ ತಮ್ಮದೇ ವಿಶಿಷ್ಟ ಮತ್ತು ಮಕ್ಕಳಿಗೆ ಆಕರ್ಷಣೆ ಮೂಡಿಸುವಂತಹ ಸಂಗೀತ ಅಳವಡಿಸಿ ಮಕ್ಕಳಲ್ಲಿ ಶಾಸ್ತ್ರೀಯ ಸಂಗೀತದಲ್ಲಿ ಒಲವು ಮೂಡಿಸುವ ಸಾಧನೆಗೈದಿದ್ದಾರೆ.

ಶ್ರೀಮತಿ ಶಾಂತಾ ನಾಗಮಂಗಲ ಮತ್ತು ಅವರ ಗೆಳತಿಯರು ಸೇರಿಕೊಂಡು ಹಳಗನ್ನಡ ಕಾವ್ಯ/ಪದ್ಯ ಓದಲು ನಿರ್ಮಿಸಿಕೊಂಡ ಹಳಗನ್ನಡ ಶಾಲೆಯ (Whatsapp group) ಸಹಯೋಗದಲ್ಲಿ, ಶ್ರೀಮತಿ ಜಯರಾಂ ಅವರು ಮತ್ತು ಅವರ ಶ್ರೀ ಗಾನಧಾಮದ ಹಿರಿಯ ವಿದ್ಯಾರ್ಥಿಗಳು ಡಿಸೆಂಬರ 31ರಂದು ಇಂಡಿಯನ್ ಇನ್ಸಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ಪ್ರದರ್ಶಿಸಲ್ಪಟ್ಟ ಗಮಕ ರೂಪಕ 'ಹರಿಶ್ಚಂದ್ರ'ದ ನಿರ್ದೇಶಕಿ ವಿದುಷಿ ಎನ್. ಶ್ರೀಮತಿ ಜಯರಾಂ ಅವರ ಸಾಧನೆ, ಅವರು ನಡೆದು ಬಂದ ದಾರಿಯೊಂದಿಗೆ ಗಮಕ ರೂಪಕದ ಒಂದು ಸುಂದರ ಕಲಾಪ್ರಕಾರಕ್ಕೆ ದುಡಿದ ಹಿರಿಯ ವಿದ್ವಾಂಸರುಗಳು, ಕನ್ನಡ ಸಾಹಿತ್ಯ ಲೋಕದ ಧೃವತಾರೆಗಳು, ಸಾಹಿತ್ಯ ಕಲೆಗೆ ನೀಡಿದ ಕೊಡುಗೆ ಎಲ್ಲವೂ ಇಲ್ಲಿ ತಳಕು ಹಾಕಿಕೊಂಡಿವೆ.

ಇನ್ನು ಅಂದಿನ ಕಾರ್ಯಕ್ರಮದ ಮೊದಲು, ವಿದುಷಿ ಶ್ರೀಮತಿ ಯವರು ಹೀಗೆ ಹೇಳುತ್ತಾರೆ- "ನಮ್ಮ ಗುರುಗಳು ಗಮಕಿ, ಪಂಡಿತ ಹು.ಮ.ರಾಮಾರಾಧ್ಯರ ಸೃಷ್ಟಿ ಈ 'ಹರಿಶ್ಚಂದ್ರ' ಗಮಕ ರೂಪಕ. ಹಳಗನ್ನಡ ಕಾವ್ಯಗಳ ವಾಚನ ಮಾಡುತ್ತಿದ್ದ ನಮ್ಮ ಗುರುಗಳು ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘದಲ್ಲಿ ಸುಮಾರು ವರುಷ ಗಮಕ ತರಗತಿ ನಡೆಸಿದುದರ ಫಲವಾಗಿ, ಹಲವಾರು ಮಂದಿ ಗಮಕಿಗಳಂದ ಕೂಡಿದ ಒಂದು ದೊಡ್ಡ ತಂಡವೇ ನಿರ್ಮಾಣವಾಯ್ತು. 1940-50ರ ದಶಕದಲ್ಲಿ, ಸ್ವಾತಂತ್ರ್ಯ ಬಂದ ಹೊಸತರಲ್ಲಿ ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘ ಸ್ಥಾಪಿಸಿದ ಶ್ರೀಯುತ ಸಿದ್ದವನಳ್ಳಿ ಕೃಷ್ಣ ಶರ್ಮರು ತಮ್ಮ ಮತ್ತು ತಮ್ಮ ಗೆಳೆಯರ ಸಹಕಾರದೊಂದಿಗೆ ರಾಮಾರಾಧ್ಯರ ಈ ಕಲೆಗೆ ಸಹಕಾರ ನೀಡುತ್ತಿದ್ದರು, ಬೆಂಬಲಿಸುತ್ತಿದ್ದರು. 1957ರ ಕಾಲ, ಕೋ.ಶ್ರೀನಿವಾಸಯ್ಯ, ನೀಲತ್ತಳ್ಳಿ ಕಸ್ತೂರಿ (ಶ್ರೀಮತಿ ಅವರ ಸ್ವಂತ ಅಣ್ಣ), ತೋರವೆ ಶ್ರೀಹರಿ, ಮತ್ತೂರು ಕೃಷ್ಣಮೂರ್ತಿ ಇನ್ನೂ ಮುಂತಾದ ತರುಣರ ತಂಡ ಗಾಂಧೀ ಸಾಹಿತ್ಯ ಸಂಘದಲ್ಲಿ ವಿಜೃಂಭಣೆಯಿಂದ ಸಾಹಿತ್ಯಿಕ ಕಾರ್ಯಕ್ರಮ ನಡೆಸುತ್ತಿದ್ದರು. ಆ ಕಾಲದಲ್ಲಿ ನಮ್ಮ ಗುರುಗಳಿಗೆ ಬಂದ ಹೊಸ ವಿಚಾರಧಾರೆಯೇ 'ಗಮಕ ರೂಪಕ'. ರಾಮಾರಾಧ್ಯರು ಸ್ವತಃ ಸಾಹಿತಿಗಳು, ಸಂಗೀತಗಾರರು, ಗಮಕಿಗಳು, ಹರಿಕಥೆ ಹೇಳುತ್ತಿದ್ದರು. ನಾಟಕ ಕಲೆಯೂ ಅವರಿಗೆ ಚೆನ್ನಾಗಿ ಕರಗತವಾಗಿತ್ತು. ಹೀಗಾಗಿ ಗಮಕದಲ್ಲಿ ಹೊಸ ಆವಿಷ್ಕಾರ ಮಾಡಲು ಸಾಧ್ಯವಾಯ್ತು. ತಮ್ಮ ಹೊಸ ವಿಚಾರಧಾರೆಯನ್ನು ಸಿದ್ದವನಳ್ಳಿ ಕೃಷ್ಣ ಶರ್ಮರಲ್ಲಿ ಹೇಳಿದಾಗ, ಅವರು ತುಂಬು ಉತ್ಸಾಹದಿಂದ ಎಲ್ಲರ ಮನಗೆದ್ದ ಹರಿಶ್ಚಂದ್ರ ಕಾವ್ಯವನ್ನೇ ಸೂಚಿಸಿದರು. ಹೀಗೆ ಗುರುಗಳು ಗಮಕ ರೂಪಕದ ಉಗಮಕ್ಕೆ ಕಾರಣಕರ್ತರಾದರು".

ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದಲ್ಲಿರುವ ಸ್ವಾರಸ್ಯಕರ ಸಣ್ಣ ಸಣ್ಣ ಸಂಭಾಷಣೆ ತೆಗೆದುಕೊಂಡು ಹಾಗಾಗೇ ಮುತ್ತುಗಳಂತೆ ಪೋಣಿಸಿದರು, ಒಬ್ಬ ನಿವೇದಕನ ಪಾತ್ರ ಸೃಷ್ಟಿಸಿ, ಮಧ್ಯ, ಮಧ್ಯ ಕಥಾ ಸಂದರ್ಭಕ್ಕೆ ತಕ್ಕಂತೆ ನಿವೇದಕ ವಿವರಣೆ ನೀಡಿ, ಕಥೆಯ ಹರಿವಿಗೆ ಕೊಂಡಿಯಾಗಿಸಿದರು. 1957ರಲ್ಲಿ ಪ್ರಥಮ ಗಮಕ ರೂಪಕ 'ರಾಜಾ ಹರಿಶ್ಚಂದ್ರ' ಪ್ರದರ್ಶಿತವಾಯ್ತು. ಪ್ರೇಕ್ಷಕರಿಂದ ಅದ್ಭುತವಾದ ಕರತಾಡನ ಪಡೆಯಿತು. ಗುರುಗಳಿಗೆ ಪ್ರಶಂಸೆ ಮತ್ತು ಬೇಡಿಕೆಗಳ ಮಹಾಪೂರ. ರಾಮಾಯಣ, ಮಹಾಭಾರತ ಕಾವ್ಯಗಳನ್ನು ಗಮಕ ರೂಪಕದಲ್ಲಿ ತನ್ನಿರಿ ಎಂದು ಒತ್ತಾಸೆ. ಇದರ ಪರಿಣಾಮವಾಗಿ ಒಂದು ವರುಷ ಬರೀ ರಾಮಾಯಣದ ರೂಪಕ ರಚಿಸಿದರು. ಅದು 15 ದಿನಗಳವರೆಗೆ ನಡೆಯಿತು, ನಂತರ ಇನ್ನೊಂದು ವರುಷ ಸಮಗ್ರ ಕುಮಾರವ್ಯಾಸ ಭಾರತ ಹತ್ತು ದಿನಗಳವರೆಗೆ ನಡೆಯಿತು. ನಂತರ ಜೈಮಿನಿ ಭಾರತದಲ್ಲಿ ಬರುವ ಬಿಡಿ ಬಿಡಿ ಭಾಗಗಳನ್ನು ಗಮಕ ರೂಪಕಗಳಾಗಿ ಬರೆದರು. ಇವೆಲ್ಲವೂ ಗಾಂಧೀ ಸಾಹಿತ್ಯ ಸಂಘದ ಮೂಲಕ ಹಲವಾರು ಕಡೆಗಳಲ್ಲಿ ಪ್ರದರ್ಶನ ಗೊಂಡವು. ರಾಮಾರಾಧ್ಯರು ಬರೆದ ಗಮಕ ರೂಪಕದ ಪುಸ್ತಕಗಳು ಪ್ರಕಟಗೊಂಡವು. ಇಂದಿಗೂ ಸಂಘದಲ್ಲಿ ಲಭ್ಯ.ರಾಮಾರಾಧ್ಯರು 1973 ರರ ತನಕ ತಾವೇ ಸ್ವತಃ ಕುಳಿತು ಹೀಗೆ ಹೀಗೆ ಮಾಡಬೇಕೆಂದು ನಿರ್ದೇಶನ ನೀಡುತ್ತಿದ್ದರು. ಅವರದು "ದೈತ್ಯ ಪತಿಭೆ". ಹೀಗೆ ವಿದುಷಿ ಶ್ರೀಮತಿಯವರ ಗುರುವಂದನೆ ಸಾಗಿತ್ತು.

ಗುರುವಿಗೆ ತಕ್ಕ ಶಿಷ್ಯೆ ಶ್ರೀಮತಿಯವರು. ಅವರ ಕಳಕಳ ಹಾಗೇ ಮುಂದುವರೆದಿತ್ತು. ನೆರೆದ ಸಭಿಕರಿಗೆ ತೀರಾ ಆಪ್ತವಾಗಿ ಗಮಕ ರೂಪಕದ ಬಗೆಗೆ ಹೇಳುತ್ತಲೇ ಇದ್ದರು ಮತ್ತು ಇದನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡ ಬಗೆಯನ್ನು ಹೇಳುತ್ತಿದ್ದರು.

“ಇದೊಂದು ಮಿಶ್ರ ಜಾತಿಯ ಕಲೆ – ಅಂದ್ರೆ ನಾಟಕವೂ ಇರುತ್ತೆ, ಸಂಗೀತವೂ ಇರುತ್ತೆ. ಪ್ರತಿಯೊಬ್ಬರೂ ಒಂದೊಂದು ಪಾತ್ರ ನಿರ್ವಹಣೆ ಮಾಡುತ್ತಾರೆ. ನಿರಾಡಂಬರವಾಗಿ, ಸರಳವಾಗಿ ಎಲ್ಲರೂ ಕುಳತು ಬರೀ ಶ್ರುತಿಯೊಂದನ್ನೇ ಮೂಲವಾಗಿಟ್ಟುಕೊಂಡು ತಮ್ಮ ನೈಜ ಪ್ರತಿಭೆಯನ್ನು ಪ್ರೇಕ್ಷಕರ ಮುಂದೆ ಸಾದರ ಪಡಿಸುತ್ತಾರೆ. ಇದುವೇ ಗಮಕ ರೂಪಕದ ಜೀವಾಳ. ಪರಿಕರಗಳ ಸಂಗದಲ್ಲಿ, ತಳುಕು ಬೆಳಕಿನ ಮೇಲಾಟದಲ್ಲಿ ಸ್ವಲ್ಪ ಹೆಚ್ಚು ಕಮ್ಮಿಯಾದರೆ ಮುಚ್ಚಿಬಿಡುತ್ತದೆ. ಜನರ ಗಮನ ವೇಷಭೂಷಣಗಳತ್ತ ಇರುತ್ತದೆ. ಆದರೆ ಇಲ್ಲಿ ಹಾಗಾಗುವುದಿಲ್ಲ. ಕಲಾವಿದರ ಹಾಡುಗಾರಿಕೆ, ಸಾಹಿತ್ಯ ವಾಚನ, ಕಂಠದ ಹಾವಭಾವ ಮುಖ್ಯವಾಗುತ್ತದೆ” – ಹೀಗೆ ಹೇಳುತ್ತಲಿದ್ದವರು, ಸ್ವಲ್ಪ ಭಾವಪರವಶವಾದರು.

“ರಾಮಾರಾಧ್ಯರು ಕಾಲವಾದ ನಂತರ ಗಾಂಧೀ ಸಂಘದ ಹಿರಿಯ ಸಾಹಿತಿಗಳಾದ ನೀಲತ್ತಳ್ಳಿ ಕಸ್ತೂರಿ, ತೊರವಿ, ಮತ್ತೂರು ಕೃಷ್ಣಮೂರ್ತಿಯವರು, ಸುಬ್ರಮಣ್ಯ, ರಮೇಶ್ ಒಬ್ಬರಾದ ಮೇಲೆ ಒಬ್ಬರು ಇದರ ಜವಾಬ್ದಾರಿ ವಹಿಸಿಕೊಂಡು ಉಳಿಸಿ, ಬೆಳೆಸಿ ರಾಜ್ಯಾದ್ಯಂತ ಪ್ರದರ್ಶಿಸಿದರು. ಈ ಜವಾಬ್ದಾರಿ ಈಗ ನನ್ನ ಹೆಗಲಿಗೆ ಬಂದಿದೆ.” ಹೆಣ್ಣುಮಕ್ಕಳ ತಂಡವನ್ನೇ ಕಟ್ಟಿ ಜಯಭೇರಿ ಹೊಡೆಸುತ್ತಿರುವ ಸಮಾಧಾನ ಆ ತಾಯಿಯದು.

“ಯಾವುದೇ ಕಾರ್ಯಕ್ರಮದಲ್ಲಿ ‘ಮೈ ಎಲ್ಲಾ ಕಣ್ಣಾಗಿರಿ’ ಎಂದು ಹೇಳುವದು ವಾಡಿಕೆ. ಆದರೆ ಈ ಕಾರ್ಯಕ್ರಮದಲ್ಲಿ ಮೈಯೆಲ್ಲಾ ಕಿವಿಯಾಗಿರಬೇಕು. ಇದೊಂದು ಶ್ರವ್ಯಕಲಾ ಪ್ರಾಕಾರ. ಹಳಗನ್ನಡವಾದ್ದರಿಂದ ಮಾತನಾಡುವವರು, ಹಾಡುವವರು ಹುಷಾರಾಗಿ ಮಾಡಬೇಕು. ಶ್ರೋತೃಗಳು ಕೂಡಾ ಹುಷಾರಾಗಿ ತಮ್ಮ ಕಿವಿಯನ್ನು ಇತ್ತಕೊಡಬೇಕು” ಎನ್ನುವ ಸಂದೇಶ ಕೊಟ್ಟು, ಇಡೀ ಸಭಾಂಗಣವನ್ನು ಸೂಜಿ ಬಿದ್ದರೆ ಸಪ್ಪಳ ಕೇಳುವಂತೆ ಮಾಡಿದ ಅವರ ದೃಢ ಹಿಡಿತದ ಅನುಭವ ನಮಗಾಯ್ತು.

“ಒಪ್ಪೆಲ್ಲವೂ ನಮ್ಮ ಗುರುಗಳದು, ತಪ್ಪೆಲ್ಲವೂ ನಮ್ಮದು” ಎನ್ನುವ ಅವರ ಘೋಷಣೆ ಸಭಿಕರಿಂದ ದೀರ್ಘಕರತಾಡನ ಪಡೆಯಿತು. ನಂತರದ ಸಮಯವೆಲ್ಲ ರಾಘವಾಂಕ, ರಾಮಾರಾಧ್ಯ,, ವಿದುಷಿ ಶ್ರೀಮತಿ ಮತ್ತು ಅವರ ತಂಡದಾಗಿತ್ತು. ನಾವೆಲ್ಲ ಹರಿಶ್ಚಂದ್ರ, ಚಂದ್ರಮತಿಯರ ಕಷ್ಟಕಾರ್ಪಣ್ಯಗಳ ಭಾಗವಾಗಿ ಕಣ್ಣೀರಧಾರೆಯಾದೆವು.

***

ನಾಮದ ಬಲ

– ಕೆ.ಎನ್.ಭಗವಾನ್

'ನೀನ್ಯಾಕೋ ನಿನ್ನ ಹಂಗ್ಯಾಕೋ..' ಅಂತ ಹುಲುಮಾನವನನ್ನು ಕಡೆಗಣಿಸಿ, 'ನಿನ್ನ ನಾಮದ ಬಲವೊಂದಿದ್ದರೆ ಸಾಕೋ' ಎಂದು ನುಡಿದ ದಾಸರು ಲೋಕದ ಹಂಗಿಲ್ಲದವರು. ಮಾಸ್ತಿಯವರ 'ನಾಮದ ಮಹಿಮೆ' ಎಂಬ ಕಥನ ಕವನದಲ್ಲಿ ದೇವರಿಗಿಂತ ದೈವಭಕ್ತಿ ದೊಡ್ಡದೆಂದು ಸಾರುವ ಸಂದೇಶವಿದೆ. ನಾಮ ಎಂದರೆ ವ್ಯಕ್ತಿಯೊಬ್ಬರ ಹೆಸರೂ ಹೌದು, ಆ ವ್ಯಕ್ತಿ ಹಣೆಯಲ್ಲಿ ಧರಿಸುವ ಮತ ಲಾಂಛನವೂ ಹೌದು.

ಸಾಮಾನ್ಯವಾಗಿ ಒಂದು ನಿರ್ದೇಶಿತ ವ್ಯವಸ್ಥೆಯಲ್ಲಿ ಕೆಳಗಿನವರು ತಮ್ಮ ವರಿಷ್ಠರನ್ನು ದೇವರೆಂದೇ ಭಾವಿಸುತ್ತಾರೆ. ಅಂಥ ದೇವರನ್ನು ಒಲಿಸಿಕೊಳ್ಳಲು ಕೆಳಗಿನವರು ಮಾಡುವ ಪ್ರಯತ್ನಗಳು ಕೆಲವೊಮ್ಮೆ ಪ್ರಹಸನ ಆಗುವುದುಂಟು. ಈ ನಿಟ್ಟಿನಲ್ಲಿ ನಾನು ಹಿಂದುಳಿದವ. ನನ್ನ ಹೆಸರಿನಂತೆ ನನ್ನ ಹೊಸ ಇಲಾಖೆಯ ವರಿಷ್ಠರ ಹೆಸರೂ ಸಹ 'ನ್' ಎಂಬ ಅರ್ಧಾಕ್ಷರದಿಂದ ಪೂರ್ಣಗೊಳ್ಳುವುದಕ್ಕೂ, ನಮ್ಮಿಬ್ಬರ ಮತಕ್ಕೂ ಹಲವರು ಗಂಟು ಹಾಕಿದ್ದರಿಂದಾಗಿ, ಇಲಾಖೆಗೆ ಕಾಲಿಟ್ಟ ಆರೇಳು ತಿಂಗಳ ಕಾಲ ನನಗೆ ಕೆಲವರಿಂದಾದರೂ ಅನಪೇಕ್ಷಿತವಾಗಿ ಸಿಗುತ್ತಿದ್ದ ಅಡ್ಡ ಸಲಾಮುಗಳು, ಗುಡ್ ಮಾರ್ನಿಂಗ್ ಸರ್‌ಗಳಿಂದ ನನಗೇ ವಿಸ್ಮಯ! ಇಲಾಖೆಯಲ್ಲಿ ನನಗಿಂತ ಹಿರಿಯ ಅಧಿಕಾರಿಗಳಿದ್ದರೂ ಅವರುಗಳಿಗೆ ಸಿಗದ ಪುಕ್ಕಟೆ ಮರ್ಯಾದೆ ನನಗೆ ಸಿಗುತ್ತಿದ್ದುದನ್ನು ಅನುಮಾನಿಸಿದ್ದೂ ಉಂಟು. ಎಲ್ಲ ಕೆಳ ಅಧಿಕಾರಿಗಳನ್ನೂ, ಕಾರ್ಮಿಕರನ್ನೂ ತೀರಾ ಹಗುರಾಗೇ ಕಾಣುತ್ತಿದ್ದ ರಂಗನಾಥನ್‌ಗೆ ಕೂಡಾ ನನ್ನ ಬಳಿ ನಯಗಾರಿಕೆ! ಆ ಹೊತ್ತಿಗಾಗಲೇ ನನಗೆ ಆಪ್ತರಾಗಿದ್ದ ಕೆಲವರು 'ಈ ಮನುಷ್ಯನ ಹತ್ರ ಕೊಂಚ ಹುಷಾರಾಗಿರಿ' ಎಂಬ ಕಿವಿಮಾತು ಹಾಕಿದ್ದರು. ನನಗೆ ಈತ ಇಲಾಖೆಯ ನಂಬರ್ ಒನ್ ಗೂಢಚಾರ ಎಂಬ ಸಂದೇಹ ಇತ್ತು. ಆದ್ದರಿಂದ ಆತ ಕೇಳಿದ್ದಕ್ಕೆಲ್ಲ ಚುಟುಕಾಗಿ ಉತ್ತರಿಸಿ ಜಾರಿಕೊಂಡು ಬಿಡುತ್ತಿದ್ದೆ.

ಇಲಾಖೆಗೆ ಹೊಸತಾಗಿ ಯಾರೇ ಬರಲಿ, ಅವರ ಹಿನ್ನೆಲೆ ತಿಳಿದು ಅದಕ್ಕೆ ಸೂಕ್ತವಾಗಿ ಮಾತಾಡುವ ಕಲೆ ವೆಂಕಣ್ಣನಿಗೆ ಚೆನ್ನಾಗಿ ಸಿದ್ಧಿಸಿತ್ತು. ಒಮ್ಮೆ ಹೀಗೇ ಮಾತಾಡುತ್ತ 'ನೀವು ಇಂಟರ್‌ವ್ಯೂಗೆ ಬರೋಕೆ ಮುಂಚೆ ನಾನೂ ಈ ಪೋಸ್ಟಿಗೆ ಅಪ್ಲೈ ಮಾಡಬಹುದಾ ಅಂತ ವಿಜಯಕುಮಾರ್‌ಗೆ ಕೇಳಿದ್ದೆ. ಯೂ ಡೊಂಟ್ ಹ್ಯಾವ್ ಟೆಕ್ನಿಕಲ್ ಕ್ವಾಲಿಫಿಕೇಷನ್ ಅಂತ ಹೇಳಿಬಿಟ್ರು!' ಅಂತ ಸಂಕಟ ತೋಡಿಕೊಂಡಿದ್ದ. ಆದರೆ ಆತನ ಪರಮಾಪ್ತನ ಬಳಿ 'ನಾವೆಲ್ಲ ಬಿಗ್ ಬಾಸ್‌ನ ಧರ್ಮರಾಯ ಅಂತ ತಿಳಿದಿದ್ವಿ. ನೋಡಿ, ಅವರ ಸಂಬಂಧೀನ ಡಿಪಾರ್ಟ್‌ಮೆಂಟಿಗೆ ತರಬೇಕು ಅಂತ ನನ್ನ ಅಪ್ಲಿಕೇಷನ್ನನ್ನೇ ರಿಜೆಕ್ಟ್ ಮಾಡಿಬಿಟ್ರು' ಅಂತ ಅಳಲು ತೋಡಿಕೊಂಡಿದ್ದೂ ಉಂಟು.

ಒಂದು ಸಾರಿ ನನ್ನ ಇಮ್ಮೀಡಿಯೇಟ್ ಬಾಸ್ ವಿಜಯಕುಮಾರ್ 'ಬೆಂಗಳೂರು ಸ್ಟೇಷನ್ ಮಾತ್ರ ಟ್ಯೂನ್ ಆಗುವಂತೆ ಒಂದು ಟ್ರಾನ್ಸಿಸ್ಟರ್ ರೇಡಿಯೋ ಮಾಡಿ. ನಾಡಿದ್ದರಿಂದ ಇಂಡಿಯಾ ಆಸ್ಟ್ರೇಲಿಯಾ ಟೆಸ್ಟ್ ಸಿರೀಸ್ ಶುರುವಾಗುತ್ತೆ' ಅಂತ ಸರ್ಕ್ಯೂಟ್ ಚಿತ್ರ ಕೊಟ್ಟರು. ನಾನು ಅದಕ್ಕೆ ಅಗತ್ಯವಿದ್ದ ಡಯೋಡ್, ಟ್ರಾನ್ಸಿಸ್ಟರ್, ರೆಸಿಸ್ಟರ್, ಫೆರೈಟ್ ರಾಡ್, ತಂತಿ ಸುರಳಿ, ಕ್ರಿಸ್ಟಲ್ ಹೀಗೆ ಎಲ್ಲ ಕಾಂಪೋನೆಂಟುಗಳನ್ನೂ ಹೊರಗಡೆ ಖರೀದಿಸಿ ಎರಡು ದಿನಗಳಲ್ಲಿ ಟ್ರಾನ್ಸಿಸ್ಟರ್ ರೇಡಿಯೋ ಸಿದ್ಧಗೊಳಿಸಿದೆ. ರೇಡಿಯೋ ಪ್ರಸಾರವನ್ನು ಶಿರೋವಾಣಿ ಬಳಸಿ ಕೇಳಬಹುದಿತ್ತು. ಅದರ ಕಾರ್ಯಕ್ಷಮತೆಯನ್ನು ಪರೀಕ್ಷಿಸಿದ ವಿಜಯಕುಮಾರ್, ಅದನ್ನು ರಂಗನಾಥನ್

ಕೈಲರಿಸಿ 'ನೀವು ನಾಳೆಯಿಂದ ಕ್ರಿಕಟ್ ಕಾಮೆಂಟ್ರಿ ಕೇಳಬಹುದು' ಎಂದರು ಖುಷಿಯಿಂದ. ರಂಗನಾಥನ್ ನನ್ನ ಖಾಸಾ ಮಿತ್ರ ರಾವ್ ಬಳಿ 'ರೇಡಿಯೋ ಅಸೆಂಬ್ಲಿ ಪಣ್ಣುದು ಅಂದ ಪುದು ಪೊಯ್ಯನ್ ತಾನೆ.? ಎಪ್ಪಡಿ ನಂಬ ಆಳು?' ಎಂದು ಹಿಗ್ಗಿದರಂತೆ! ಅದೇ ಮದ್ಯಾಹ್ನ ಕಾಮೆಂಟರಿ ಕೇಳಿದ ಆತ ಚಹಾ ವಿರಾಮದಲ್ಲಿ ನನ್ನ ಕೈಕುಲುಕಿ 'ಇದು ನೀಂದಾ ಪಣ್ಣದನಿ ಸಂದೇಹಂ ವಂದುದು' ಎಂದಲ್ಲದೆ ತಮಿಳಿನಲ್ಲೇ ಇನ್ನೂ ನಾಲ್ಕಾರು ಪ್ರಶ್ನೆ ಕೇಳಿದರು. ನಾನು ಎಲ್ಲದಕ್ಕೂ ಇಂಗ್ಲೀಷಿನಲ್ಲೇ ಉತ್ತರಿಸುತ್ತಿದ್ದೆ. ಆತನಿಗೆ ತಲೆ ಬಿಸಿಯಾಗಿರಬೇಕು, ನೇರವಾಗಿ ನನ್ನ ಮುಖ ನೋಡುತ್ತ, 'ಏ ಮಾದರಿ ಅಯ್ಯಂಗಾರ್ಯಾ ನೀ, ನಾ ಎದು ಕೇಟಾಲುಮ ಇಂಗ್ಲೀಷ್ಲೇ ಅನ್ಸರ್ ಪಣ್ಣುವೆ?' ಅಂತ ಕೇಳಿಯೇಬಿಟ್ಟರು. ನಾನು ಒಮ್ಮೆಲೇ 'ಹೂ ಟೋಲ್ಡ್ ಯು ದಟ್ ಆಮ್ ಐ ಅನ್ ಅಯ್ಯಂಗಾರ್?' ಎನ್ನುತ್ತಾ ಮಂಜುಗಡ್ಡೆಯನ್ನು ಒಡೆದೇಬಿಟ್ಟೆ. ಅಲ್ಲಿಂದ ಮುಂದೆ ನನಗೂ ರಂಗನಾಥನ್‌ಗೂ ಅಷ್ಟಕ್ಕಷ್ಟೆ!

ನಾನು ಬಿಗ್ ಬಾಸ್ ಸಂಬಂಧಿಯಾಗಲೀ, ಅವರ ಕುಲಬಾಂಧವನಾಗಲೀ ಅಲ್ಲವೆಂದು ಖಚಿತಪಡಿಸಿಕೊಳ್ಳಲು ವೆಂಕಣ್ಣ ನನ್ನನ್ನು ಖಾಸಗಿಯಾಗಿ ವಿಚಾರಿಸಿದ. ನನ್ನ ಪೂರ್ವಾಪರವೆಲ್ಲವನ್ನೂ ತಿಳಿದಮೇಲೆ 'ಓ, ಹಾಗಿದ್ಮೇಲೆ ನೀವೂ ನಮ್ಮವರೇ! ಒಂದೇ ಮಠದವರೂ!' ಅಂತ ಸಂತಸಪಟ್ಟ. ಅಷ್ಟೇ ಅಲ್ಲದೆ, ನೀವಿಲ್ಲಿಗೆ ಇಂಟರ್ವ್ಯೂಗೆ ಬರೋಕೆ ಮುಂಚೆ ನಿಮ್ಮ ವಿಚಾರ ಸ್ವಲ್ಪಮಟ್ಟಿಗೆ ಟೆಸ್ಟ್ ಹೌಸ್ ನರಸಿಂಹನ್ ಮೂಲಕ ತಿಳಿದಿತ್ತು. ಅದನ್ನು ವಿಜಯಕುಮಾರ್‌ಗೂ ತಿಳಿಸಿದ್ದೆ. ಅದೂ ಸ್ವಲ್ಪಮಟ್ಟಿಗೆ ಇನ್ಫ್ಲೂಯೆನ್ಸ್ ಮಾಡಿದೆ' ಎಂದು ಉದ್ಗರಿಸುವುದೇ!

ನಾಮದ ಬಲ ಅಂದ್ರೆ ಹೀಗೂ ಬದಲಾಗಬಹುದು ನೋಡಿ!

***

ಓ ಮುದ್ದು ಮಗುವೆ (ಋತು ಕಾವ್ಯ)

– ಶೀಲಾ ಅರಕಲಗೂಡು

ಬಾಲ್ಯದಲಿ ನೋಡಿದ್ದು ಕೇಳಿದ್ದು ತಿಳಿದದ್ದು
ಕಡೆತನಕ ನೆನಪಿನಲಿ ಅಚ್ಚೊತ್ತಿದಂತೆ ।
ಅದಕೆಂದೆ ಹೇಳುತಿಹೆ ನಲ್ಮೆಯಲಿ ಮಾತೊಂದ
ಕೇಳುವೆಯ ನೀನೀಗ ಓ ಮುದ್ದು ಮಗುವೆ ॥1॥

ಪ್ರತಿದಿನವು ನೀನೋಡು ತಲೆಯೆತ್ತಿ ಗಗನವನು
ಹಗಲಲ್ಲಿ ಇರುಳಲ್ಲಿ ಸಂಜೆಯಲು ಒಮ್ಮೆ ।
ತೋರುವುದು ವಿಧವಿಧದಿ ನಿನ್ನನಾಕರ್ಷಿಸಲು
ನಿನ್ನ ಕಂಡರೆ ಪ್ರೀತಿ ಸೃಷ್ಟಿಗೂ ಮಗುವೆ ॥2॥

ಹಗಲಿನಲಿ ದಿನಕರನು ಬೆಳಕ ತರುವನು ನಿನಗೆ
ಅರಳಿಸುತ ಸುಮಗಳನು ನೀ ನೋಡಲೆಂದು ।
ಗಿಡ ಮರದಿ ಹೂ ಹಣ್ಣು ಬಗೆಬಗೆಯ ತರಕಾರಿ
ಬೆಳೆಸಿಹನು ನಿನಗಾಗಿ ಒಪ್ಪಿಸಿಕೊ ಮಗುವೆ ॥3॥

ಸಂಜೆಯಲಿ ಮುಗಿಲಲ್ಲಿ ರೆಕ್ಕೆಯನು ಬಿಚ್ಚುತ್ತ
ಹಾರುತಿಹ ಹಕ್ಕಿಗಳು ಸೊಗಸೆನಿತು ನೋಡೆ ।
ಬಹುರೂಪಿ ಮೋಡಗಳು ಚಲಿಸುವುದ ನೋಡುತಿರೆ
ಮನಸಿಗಾನಂದವದು ಅನುಭವಿಸು ಮಗುವೆ ॥4॥

ರಾತ್ರಿಯಲಿ ಕಾಣುವನು ಚಂದಿರನು ಹೊಳೆಯುತ್ತ
ನಕ್ಷತ್ರ ರಾಶಿಗಳ ಗುಂಪು ಜೊತೆಗೂಡಿ ।
ಕನಸುಗಳ ಲೋಕಕ್ಕೆ ನಿನ್ನ ಕರೆದೊಯ್ಯುತ್ತ
ಸುಖ ನಿದ್ರೆ ಕೊಡುವನವ ನೀ ಮಲಗು ಮಗುವೆ ॥5॥

ಅದು ಏನು ಇದು ಏನು ಎಂಬೆಲ್ಲ ಪ್ರಶ್ನೆಗಳು
ಮನದಲ್ಲಿ ಮೂಡುವುವು ಗೊತ್ತೆನಗೆ ಮಗುವೆ ।
ಕೆಲವೊಂದು ವಿಷಯಗಳ ತಿಳಿಸುವೆನು ನಾ ನಿನಗೆ
ಪ್ರಕೃತಿಯನು ನೋಡುತ್ತ ಕಲಿ ನೀನು ಮಗುವೆ ॥6॥

ಚೈತ್ರ ವೈಶಾಖದಲಿ ಬರುವ ನವ ವಸಂತನು
ಹೊಸ ಚಿಗುರು ಹೊಸ ಹಸಿರು ಗಿಡ ಮರಗಳಲ್ಲಿ ।
ಮಾವು ಮಲ್ಲಿಗೆ ಕಂಪು ಜೊತೆ ಯುಗಾದಿಯ ಹಬ್ಬ
ಸಂತಸದಿ ಸಂಭ್ರಮಿಸು ಸಡಗರದಿ ಮಗುವೆ ॥7॥

ಗ್ರೀಷ್ಮ ಋತು ಎನ್ನುವರು ಜ್ಯೇಷ್ಠ ಆಷಾಢಕ್ಕೆ
ಬಿರು ಬಿಸಿಲು ಬಲು ಕಷ್ಟ ಹೊರಗಾಡಲಿಕ್ಕೆ ।
ಗಟ್ಟಿಯಾಗಲು ಮೂಳೆ ಈ ಬಿಸಿಲು ಬೇಕೆಮಗೆ
ಜಟ್ಟಿ ನೀನಾಗಿ ಬೆಳೆ ಹರಸುವೆನು ಮಗುವೆ ॥8॥

ಶ್ರಾವಣವು ಭಾದ್ರಪದ ಮಾಸಗಳು ಬರುತಿರಲು
ವರ್ಷ ಋತುವೆನ್ನುವರು ಮಳೆಧಾರೆ ಭುವಿಗೆ ।
ಬೆಂದ ಭೂಮಿಯು ತಣಿದು ಮುಸಲಧಾರೆಯ ಸವಿಯೆ
ಹಬ್ಬಗಳ ಹಿರಿ ಸಾಲು ಆಚರಿಸು ಮಗುವೆ ॥9॥

ಆಶ್ವಯುಜ ಕಾರ್ತಿಕವು ಬಂದಾಗ ಮಳೆ ಕಡಿಮೆ
ಶರದೃತು ಎನುವರಾಗ ಆ ಮಾಸಗಳನು ।
ದಸರೆ ದೀಪಾವಳಿಯ ಸಂಭ್ರಮವು ನಿನಗಾಗಿ
ತುಸುವೆ ಮಳೆ ತುಸುವೆ ಚಳಿ ಹಿತದ ಹವೆ ಮಗುವೆ ॥10॥

ಹೇಮಂತ ಋತು ಬರುವ ಮಾರ್ಗಶಿರ ಪುಷ್ಯದಲಿ
ಚಳಿಗಾಲ ನೀ ಧರಿಸು ಬೆಚ್ಚನೆಯ ಬಟ್ಟೆ ।
ಮುಂಜಾನೆ ಮುಸುಕುವುದು ಬಿಳಿ ಹಿಮವು ಸುತ್ತೆಲ್ಲ
ಪುಳಕಗೊಳುವುದು ಮನ ಖುಷಿ ನಿನಗೆ ಮಗುವೆ ॥11॥

ಬಂತದೋ ಶಿಶಿರ ಋತು ಮಾಘ ಫಾಲ್ಗುಣದಲ್ಲಿ
ಒಣ ಹವೆಗೆ ಉದುರುವುವು ಮರದೆಲೆಗಳೆಲ್ಲ ।
ಉತ್ತರಾಯಣ ಕಾಲ ಸಂಕ್ರಾಂತಿ ಶಿವರಾತ್ರಿ
ವರ್ಷದಂತ್ಯವು ಕೆಲವೆ ದಿನಗಳಲಿ ಮಗುವೆ ॥12॥

ಹನ್ನೆರಡು ಮಾಸಗಳು ಪ್ರತಿಯೊಂದು ವರ್ಷದಲಿ
ವಿಧ ವಿಧದ ಋತು ಆರು ಹವೆಗೆ ತಕ್ಕಂತೆ ।
ಪ್ರತಿ ಎರಡು ಮಾಸಕ್ಕೆ ಋತುವೊಂದರಾ ಹೆಸರು
ಬಹು ಚೆಂದ ಹೆಸರುಗಳು ನಿನ್ನಂತೆ ಮಗುವೆ ॥13॥

ಮಾಸಕ್ಕೆ ತಕ್ಕಂತೆ ಪ್ರಕೃತಿಯಲಿ ವೈವಿಧ್ಯ
ಹೊಸ ಹಣ್ಣು ತರಕಾರಿ ಬಗೆ ಬಗೆಯ ಹೂವು ।
ಗಿಡ ಮರವ ನೋಡುತ್ತ ಹವೆಯನ್ನು ಗಮನಿಸುತ
ಹೆಸರಿಸುವೆ ಋತು ಮಾಸ ನೀನೀಗ ಮಗುವೆ ॥14॥

ಸರ್ವ ಋತು ನಿನಗಾಗಿ ನಮಗಾಗಿ ಬುವಿಗಾಗಿ
ಸೌಂದರ್ಯ ಕೊಡುತಿಹವು ನಿನ್ನ ಜೀವನಕೆ ।
ಗಮನಿಸುತಲನುಭವಿಸು ಪ್ರೀತಿಸುತ ಗೌರವಿಸು
ಗುರುತಿಸುತಲೊಳಿತನ್ನು ನೀ ಜಗದ ಮಗುವೆ ॥15॥

ಸೃಷ್ಟಿಯೇ ಗುರು ನಿನಗೆ ಸೃಷ್ಟಿ ಚೈತನ್ಯ ಸೆಲೆ
ಸೃಷ್ಟಿ ಜೊತೆಗೂಡಿ ನೀ ಬೆಳೆಯುತಿರು ಮಗುವೆ ।
ಸೃಷ್ಟಿ ಮರೆತರೆ ನೀನು ಅಮ್ಮನನು ಮರೆತಂತೆ
ಸೃಷ್ಟಿ ರಕ್ಷಣೆ ನಿನ್ನ ಹೊರೆಯುವುದು ಮಗುವೆ ॥16॥

ಸುಜ್ಞಾನಿ ವಿಜ್ಞಾನಿ ಮೊದಲಿವರು ಅಜ್ಞಾನಿ
ನೋಡುತ್ತ ತಿಳಿಯುತ್ತ ಸೃಷ್ಟಿ ವೈಶಿಷ್ಟ್ಯ ।
ತಿಳಿದರೆಷ್ಟೋ ವಿಷಯ ಪಡೆದರೆಷ್ಟೋ ಜ್ಞಾನ
ಅವರ ಮಾರ್ಗದಿ ಸಾಗಿ ಹೆಚ್ಚು ತಿಳಿ ಮಗುವೆ ॥17॥

ಏನೇನೊ ಪ್ರಶ್ನೆಗಳು ತಿಳಿದಷ್ಟು ಅನುಮಾನ
ಹೀಗೇಕೆ ಹಾಗೇಕೆ ಎಂಬ ಗೊಂದಲವೆ? ।
ಕೇಳಿ ನೀ ತಿಳಿದುಬಿಡು ಹಿರಿಯರನು ಗುರುಗಳನು
ಜೊತೆಗೋದಿ ಪುಸ್ತಕವ ಶಾಲೆಯಲಿ ಮಗುವೆ ॥18॥

***

ಬಾಲ್ಯ ಕಾಣಿಸದ ಕನ್ನಡಿ

– ಶಾಂತಿ ವಾಸು

ನಾವು ನಾಲ್ಕು ಅಕ್ಕ ತಂಗಿಯರು ಜೊತೆಗೆ ನಮ್ಮಮ್ಮನನ್ನೂ ಸೇರಿ ಎಲ್ಲರೂ ಹೆಣ್ಣುಗಳೇ ಓಡಾಡುವ ನಮ್ಮನೆ ಮೊದಲೇ ಹೆಣ್ಣು ಮಕ್ಕಳ ಹಾಸ್ಟೆಲ್ ತರಹ ಇರ್ತಿತ್ತು. ಅದರಲ್ಲೂ ನಮ್ಮಪ್ಪ ಅಂತೂ ಗಂಡು ಮಕ್ಕಳಿರುವ ಸಂಸಾರಕ್ಕೆ ಮನೆಗಳನ್ನ ಬಾಡಿಗೆಗೂ ಕೊಡ್ತಿರಲಿಲ್ಲ. ಹತ್ತು ವರ್ಷ ವಯಸ್ಸಿನ ಚಿಕ್ಕ ಹುಡುಗ ಇದ್ದಾನೆ ಅಂದ್ರೂ ಊಹೂಂ. ಇಲ್ಲ. ಯಾಕಂದ್ರೆ ಬಾಡಿಗೆಗಂತ ಬರೋ ಯಾರೂ ಕಡಿಮೆ ಅಂದ್ರೂ ಹತ್ತು ವರ್ಷದ ಮೊದಲು ಮನೆ ಖಾಲಿ ಮಾಡ್ತಿರಲಿಲ್ಲ.

ಹಾಗಿರುವಾಗ ಈಗ ಹತ್ತು ವರ್ಷದ ಹುಡುಗ, ನಂತರ ಬೆಳೆದು ಹದಿನಾರು, ಹದಿನೇಳು ವರ್ಷದವನಾಗಿ ಬರೀ ಹೆಣ್ಣುಮಕ್ಕಳೇ ಇರುವ ಕಡೆ ಹುಡುಗು ಚೇಷ್ಟೆಗೆ ತೊಡಗಿದರೆ ಎನ್ನುವ ಮುಂದಾಲೋಚನೆ ಅವರಿಗೆ. ಕೆಲ ಸಂಸಾರಗಳು ನಮ್ಮಲ್ಲಿಗೆ ಬಂದ ನಂತರ ಗಂಡು ಮಕ್ಕಳಾಗಿದ್ದು ಇದೆ. ಆದರೆ ಅವೆಲ್ಲವೂ ನಾವು ಎತ್ತಾಡಿ ಶಾಲೆಗೆ ಹೋಗುವ ಹೊತ್ತಿಗೆ ವರ್ಗಾವಣೆ, ಮತ್ತೊಂದು ಅಂತ ಮನೆ ಖಾಲಿ ಮಾಡಿಬಿಡುತ್ತಿದ್ದರು. ನಮ್ಮಪ್ಪನಿಗೆ ಈ ರೀತಿ ನಿರಾಳತೆ ಸಿಗ್ತಿತ್ತು.

ಅದು ಒಂದು ಕಡೆ ಇರಲಿ. ಹೆಣ್ಣು ಮಕ್ಕಳ ಕಡೆ ಗಮನ ಕೊಡೋಣ. ಹಾಗೇ ನನ್ನನ್ನು ನೋಡಿದ ಕನ್ನಡಿಯ ಕಡೆ ಕೂಡ ನೋಡಬೇಕಿದೆಯಲ್ಲಾ? ಹೂಂ ಏನಪ್ಪಾ ಹೇಳ್ತಿದ್ದೆ? ಹಾಂ ಆಗೆಲ್ಲಾ ಒಂದು ಸಂಸಾರಕ್ಕೆ ಕಡಿಮೆಯೆಂದರೂ ಮೂರು ಮಕ್ಕಳಂತೂ ಇದ್ದೇ ಇರುತ್ತಿದ್ದವು. ಬಾಡಿಗೆಗಂತ ಇದ್ದಿದ್ದು ಎರಡು ಮನೆಗಳು. ಅಂದರೆ ನಮ್ಮನ್ನು ಬಿಟ್ಟು ಆರರಿಂದ ಅಥವಾ ಏಳು ಹೆಣ್ಣು ಮಕ್ಕಳು ಹೆಚ್ಚುವರಿ ಖಾಯಂ. ಆ ಮನೆಗಳೇನೂ ಮಹಡಿಯ ಮೇಲೂ ಇರಲಿಲ್ಲ. ಎಲ್ಲಾ ಸಿಮೆಂಟು ಶೀಟಿನ ಮನೆಗಳು. ಹಾಗಾಗಿ ಎಲ್ಲರೂ ಕಣ್ಣೆದುರೇ ಓಡಾಡುತ್ತಿದ್ದರಿಂದ ನಮ್ಮ ಮನೆ ಒಂಥರಾ ಹಾಸ್ಟೆಲ್ ತರಹ ಇರ್ತಿತ್ತು ಅಂದಿದ್ದು. ಮೂರು ಮನೆಗೂ ನಮ್ಮ ತಾತ ಸೇರಿ ನಾಲ್ಕೇ ಗಂಡಸರು. ಮಿಕ್ಕೆಲ್ಲರೂ ಹೆಣ್ಣುಗಳೇ ಹೆಣ್ಣುಗಳು. ಮನೆಗೆ ಬರುವ ನೆಂಟರು ಗಿಂಟರ ವಿಷಯ ನಮಗೆ ಬೇಡ ಬಿಡಿ. ನಾನು ಹೇಳುವ ಈ ಅವಸ್ಥೆ ಸುಮಾರು ನಲವತ್ತೈದು ವರ್ಷದ ಹಿಂದೆ ಅಂದ್ಕೊಳ್ಳಿ.

ಬಟ್ಟೆ ಒಣಗಿಸಲು ಎಷ್ಟು ದಾರ ಕಟ್ಟಿದ್ದರೂ ಅಲ್ಲೆಲ್ಲೋ ಒಂದು ಮೂಲೆಯಲ್ಲಿ ಒಂದು ಪ್ಯಾಂಟು, ಒಂದು ಶರಟು, ಒಂದೇ ಒಂದು ಪಟ್ಟಾಪಟ್ಟಿ ಚಡ್ಡಿ, ಒಂದು ಬನಿಯನ್ನು ನೇತಾಡುತ್ತಿದ್ದರೆ ಮತ್ತೆಲ್ಲಾ ಬಟ್ಟೆಗಳೂ ಹೆಣ್ಣು ಮಕ್ಕಳವೇ. ಮರ ಗಿಡಗಳು ಸೊಂಪಾಗಿ ಬೆಳೆದ ಕಾಂಪೌಂಡಿನಲ್ಲಿ ಒಣ ಹಾಕಿದ ಆ ಬಣ್ಣ ಬಣ್ಣದ ಬಟ್ಟೆಗಳು ಎಂಥಾ ಚಂದ ಇರ್ತಿತ್ತು ಅಂತೀರಿ? ನನಗಂತೂ ನನ್ನ ಬಟ್ಟೆಗಳನ್ನ ಬಿಟ್ಟು ಬೇರೆಯವ್ರ ಬಟ್ಟೆಗಳೇ ಚಂದ ಅನ್ನುಸ್ತಿತ್ತು ಕಣ್ರೀ.

ನನ್ನದೇ ವಯಸ್ಸಿನವಳೋ ಅಥವಾ ನನಗಿಂತ ದೊಡ್ಡವಳೋ ಚಿಕ್ಕವಳೋ ಅಂತೂ ಕೆಂಪು ಬಣ್ಣದ ಫ್ರಾಕ್ ಹಾಕ್ಕೊಂಡ ಯಾರನ್ನೇ ನೋಡುದ್ರೂ, 'ಅದೇ ಬಟ್ಟೆ ನಾನು ಹಾಕ್ಕೊಂಡ್ರೆ ಅವಳಗಿಂತ ಎಷ್ಟು ಚೆನ್ನಾಗಿ ಕಾಣ್ತಿದ್ದೆ. ಅವ್ಳು ಒಳ್ಳೇ ಕೋತಿ ಇದ್ದಂಗೇ ಇದ್ದಾಳೆ' ಅಂತ ಮನಸ್ಸಲ್ಲಿ ಸಂಕಟ ಪಟ್ಟಿದ್ದೇಪಟ್ಟಿದ್ದು. ಅವರಿಗೆಲ್ಲಾ ಸಿಗೋ ಆ ಕೆಂಪು ಬಣ್ಣದ ಬಟ್ಟೆಗಳು ನಂಗೆ ಮಾತ್ರ ಸಿಗಲ್ವಲ್ಲ ಎನ್ನೋ ದುಃಖ ಒಂದು ಕಡೆಯಾದರೆ, ಬಟ್ಟೆ ಅಂಗಡಿಗೆ

ನಾನೇ ಹೋಗೋ ಹಾಗಿದ್ದಿದ್ರೆ ಅದೇ ಬಣ್ಣದ್ದು ಸಿಗೋ ತನಕ ಹುಡುಕಬಹುದು ಅನ್ನೋ ಆಸೆ ಮತ್ತೊಂದು ಕಡೆ. ಆದರೆ ಇದ್ಯಾವುದನ್ನೂ ನಮ್ಮಮ್ಮ ಅಪ್ಪನೆದ್ರಿಗೆ ಹೇಳೋ ಧೈರ್ಯ ಅಂತೂ ಇಲ್ವೇ ಇಲ್ಲ.

ಆಗ ಸುಮಾರು ಆರೇಳು ವರ್ಷ ಇರಬಹುದು ನನಗೆ. ಸ್ಕೂಲಿಗೆ ರಜಾ ಇರುವಾಗ ಮಾತ್ರ ಬರುತ್ತಿದ್ದ ಬಾಡಿಗೆ ಮನೆ ಮೀನಾಕ್ಷಿ ಅಜ್ಜಿಯ ಮೊಮ್ಮಗಳು ಶಕ್ಕು ಹಾಕಿದ್ದ ಒಂದು ಕೆಂಪು ಸಲ್ವಾರ್ ಕಮೀಜ್ ಸಿಕ್ಕಾಪಟ್ಟೆ ಇಷ್ಟವಾಯಿತು. ಇನ್ನೂ ಅದಕ್ಕೆ ಕೆಂಪು ಬಣ್ಣದ್ದೇ ದುಪಟ್ಟಾ ಬೇರೆ. ಆಗ ತಾನೇ ಓಣಿ (ಅದರ ಹೆಸರು ಬಹುಶಃ ಒಡ್ನಿ ಇರಬಹುದು. ನಮ್ಮಗಳ ಬಾಯಲ್ಲಿ ಅದು ಓಣಿಯಾಗಿ ಓಡಾಡ್ತಿತ್ತು) ಇದ್ದ ಸಲ್ವಾರ್ ಕಮೀಜ್ ಬಂದ ಹೊಸದು. ಅದನ್ನ ಹಾಕ್ಕೊಂಡಿದ್ದ ಶಕ್ಕು ಆ ದಿನ ಮಲ್ಲಿಗೆ ದಿಂಡನ್ನ ಬೇರೆ ಮುಡ್ಕೊಂಡಿಡ್ಲು. ಆಗ್ಲೇ ನಿಮ್ಗೆ ಹೇಳಿದ್ದೀನಲ್ಲಾ? ಕೆಂಪು ಬಣ್ಣ ತೊಟ್ಟವರು ನನ್ನ ಕಣ್ಣಿಗೆ ಯಾವಾಗ್ಲೂ ಚೆನ್ನಾಗಿ ಕಾಣ್ತಿರಲಿಲ್ಲ ಅಂತ. ಆದರೆ ನನ್ನದೇ ವಯಸ್ಸಿನ ಶಕ್ಕು ಮಾತ್ರ ಮುದ್ದಾಗಿ ಕಾಣುತ್ತಿದ್ದಾಳೆ ಅನ್ನಿಸಿತ್ತು. ಆಗ ಮಾತ್ರ ಅಲ್ಲ. ಈಗಲೂ ಅವಳ ನೆನಪಾದರೆ, ಅದೇ ಕಮೀಜ್ ಹಾಗೂ ಮಲ್ಲಿಗೆಯ ಎರಡು ದಿಂಡಿನ ಸಮೇತವೇ ಶಕ್ಕು ಮುದ್ದಾದ ಮುಖ ನೆನಪಾಗೋದು.

ನಿಮಗೂ ಗೊತ್ತಲ್ಲ? ನನ್ನ ಕೆಂಪಾಸೆ ತುಂಬಿದ ಕಣ್ಣಿಗೆ ಅವಳೇ ಅಷ್ಟು ಚೆನ್ನಾಗಿ ಕಾಣುತ್ತಿದ್ದಾಳೆ ಅಂದ್ರೆ, ನಾನು ಹಾಕ್ಕೊಂಡ್ರೆ ಇನ್ನೂ ಚೆನ್ನಾಗಿರ್ತೀದ್ದೆ ಅನ್ನೋ ಎಂದಿನ ಸಹಜ ಆಲೋಚನೆ ನನ್ನದು. ನಾನಂತೂ ಆಗಾಗ ಜಾರುವ ಓಣಿಯನ್ನ ಮೆಹೆಂದಿ ಹಚ್ಚಿ, ಕೆಂಪಿನದ್ದೇ ಬಳೆ ತೊಟ್ಟ ಕೈಗಳಿಂದ ಎಳೆದೆಳೆದು ಭುಜದ ಮೇಲೆ ಹಾಕಿಕೊಂಡಂತೆ, ಅದೇ ಓಣಿಯನ್ನ ಸೊಂಟಕ್ಕೆ ಒಂದು ಸುತ್ತು ಸುತ್ತಿ ಪಕ್ಕಕ್ಕೆ ಗಂಟು ಹಾಕಿ ಓಡಾಡಿದಂತೆ ಕಲ್ಪನೆಯ ಲೋಕದಲ್ಲಿ ತೇಲುತ್ತಿದ್ದೆ.

ಕಲ್ಪನೆಯನ್ನು ನಿಜ ಮಾಡಿಕೊಳ್ಳುವಂತೆ ಹೋಗಿ ನಾಲ್ಕು ಮನೆ ದಾಟಿದರೆ ಇದ್ದ ಚಿಕ್ಕಪ್ಪನ ಮನೆ ಮುಂದೆ ಚಿಗುರಿದ್ದ ಗೋರಂಟಿ ಎಲೆಯನ್ನು ಮುಳ್ಳುಗಳಿದ್ರೂ ಹುಷಾರಾಗಿ ಬಿಡಿಸಿ ತಂದೆ. ಕಂಪೌಂಡಿನೊಳಗೆ ಬಾಡಿಗೆಯವರು ರುಬ್ಬಿಕೊಳ್ಳಲು ಹುದುಗಿಸಿದ್ದ ದೊಡ್ಡ ಒರಳು ಕಲ್ಲಿಗೆ ಅದನ್ನು ಹಾಕಿ ರುಬ್ಬತೊಡಗಿದೆ. ಚಿಕ್ಕ ಕೈಗಳಲ್ಲಿ ರುಬ್ಬೋಕ್ಕಾಗ್ತಿಲ್ಲ. ಆದ್ರೆ ಕನಸು ನಂದಲ್ಲವೇ? ನಿಂತ್ಕೊಂಡು, ಕುಕ್ಕರಗಾಲಲ್ಲಿ ಕೂತ್ಕೊಂಡು ಹೇಗೋ ರುಬ್ಬಿದೆ. ಅದೂ ಪಟ್ಟಿಕೋಟ್ ಮೇಲೆ ಟವೆಲನ್ನ ಓಣಿ ಹಾಗೆ ಹೊದ್ದುಕೊಂಡು, ಎತ್ತಿ ಎತ್ತಿ ಏರಿಸ್ಕೊಂಡು ರುಬ್ಬಿದೆ. ರಾತ್ರಿ ಊಟ ಆದ್ಮೇಲೆ ಅರ್ಧಂಬರ್ಧ ರುಬ್ಬಿದ ಗೋರಂಟಿಯನ್ನು ಎಡಗೈಯಲ್ಲಿ ತಗೊಂಡು ಬಲಗೈಗೆ, ಬಲಗೈಯಲ್ಲಿ ತಗೊಂಡು ಎಡಗೈ, ಒಟ್ಟೂ ಎರಡೂ ಕೈ ಬೆರಳುಗಳಿಗೆ ಟೋಪಿ ಹಾಕಿ ಅಂಗೈ ಮಧ್ಯದಲ್ಲಿ ರೊಟ್ಟಿ ತರ ತಟ್ಟಿಕೊಂಡು, ಎರಡೂ ಕೈಯ್ಯನ್ನೂ ದೂರ ದೂರ ಇಟ್ಕೊಂಡು ಮಲಗಿದೆ.

ನಂಗೇನೋ ನಿದ್ದೆ ಬಂತು. ನಂಗೆ ನಿದ್ದೆ ಬರೋ ತನಕ ನನ್ನ ಹಿಡಿತದಲ್ಲಿರುತ್ತಿದ್ದ ನಿದ್ದೆ ಅದು ಆವರಿಸಿದ ಮೇಲೆ ನನ್ನಕ್ಕನ ಮೇಲೇ ನನ್ನ ಸಂಪೂರ್ಣ ಸಾಮ್ರಾಜ್ಯ. ಹಾಗಾಗಿ ಬೆಳಗ್ಗೆದ್ದು ನೋಡಿದರೆ ಪಕ್ಕದಲ್ಲೇ ಮಲಗಿದ್ದ ನಮ್ಮಕ್ಕನ ಮೂತಿ ಎಲ್ಲಾ ಗೋರಂಟಿಮಯ. 'ಯಾವಾಗ್ಲೂ ಒದ್ದಾಡೋ ಹಾಗೆ ಒದ್ದಾಡ್ತಿದ್ದಾಳೆ' ಅಂದ್ಕೊಂಡು ಮಲಗಿದ್ಲೇನೋ ಪಾಪ. ಒಳ್ಳೆ ಬೆಳ್ಳಗಿದ್ದ ನಮ್ಮಕ್ಕ ಮುಖ ತೊಳೆದರೆ ಅಲ್ಲಲ್ಲಿ ಚೂರು ಚೂರು ಕೇಸರಿ ಬಣ್ಣ ಇದ್ದಿದ್ದು, ಹೊತ್ತು ಕಳೀತಾ ಕಳೀತಾ ಸ್ವಲ್ಪ ದಟ್ಟವಾಗಿ ಕಾಣ್ತಿತ್ತು. ಅದೂ ನೋಡಿದವರಿಗೆ ಕಾಣ್ತಿತ್ತು ಅಷ್ಟೇ. ಅವಳಿಗಲ್ಲ. ಯಾಕಂದ್ರೆ ನಮ್ಮನೆಯಲ್ಲಿದ್ದ ಕನ್ನಡಿಯನ್ನ ನಮ್ಮಪ್ಪ ಮಾತ್ರ ನೋಡೋಷ್ಟು ಎತ್ತರಕ್ಕೆ

ಹಾಕಿಸಿಕೊಂಡಿದ್ರು. ನಮ್ಮಪ್ಪ ಐದೂ ಮುಕ್ಕಾಲಡಿ ಎತ್ತರ ಇದ್ರು. ಆಗೆಲ್ಲಾ ಎಲ್ಲರ ಮನೇ ಕನ್ನಡಿಗಳೂ ಅಷ್ಟೆತ್ತರದಲ್ಲೇ ಇರ್ತಿದ್ದಿದ್ದು. ಅದ್ರಲ್ಲೂ ನಮ್ಮನೆ ಕನ್ನಡಿ ಬರೀ ಅರ್ಧ ಅಡಿ ಉದ್ದ. ಅರ್ಧ ಅಡಿ ಅಗಲ ಅಷ್ಟೇ.

ಶೇವಿಂಗ್ ಮಾಡಿಕೊಳ್ಳಲು, ತನ್ನ ತಲೆ ಬಾಚಿಕೊಳ್ಳಲು ಮಾತ್ರ ಆ ಕನ್ನಡಿ ಇದ್ದಿದ್ದು. ಮನೆಯಲ್ಲಿದ್ದ ಹೆಣ್ಣುಗಳಿಗೆ ಅದರಲ್ಲಿ ಮುಖ ನೋಡಿಕೊಳ್ಳುವ ಭಾಗ್ಯವೇ ಇಲ್ಲ. 'ಕನ್ನಡೀನ ಅಷ್ಟೆತ್ರದಲ್ಲಿ ತಗ್ಲಾಕಿದ್ರೆ, ಅದಕ್ಕೆ ನಮ್ಮನ್ನ ನೋಡೋಕ್ಕೇ ಅಗಲ್ವಲ್ಲಣ್ಣ ಪಾಪ' ಅಂದ್ರೆ 'ತಲೆ ಬಾಚೋದು, ಪೌಡರ್ ಬಳಿಯೋದು, ಬೊಟ್ಟಿಡೋದು ಎಲ್ಲಾ ನಿಮ್ಮಮ್ಮಾನೇ. ಇನ್ನು ಕನ್ನಡೀಗೇನು ಕೆಲ್ಸ?' ಅನ್ನೋದು ನಮ್ಮಪ್ಪನ ಮಾತು. ಆಗೆಲ್ಲಾ ಹಣೆಗಿಡುವ ಸ್ಟಿಕ್ಕರ್ ಇದ್ದರೂ ಹುಡುಗಿಯರು ಮಾತ್ರ ಇಡಬಹುದಿತ್ತು. ಮುತ್ತೈದೆಯರಿಗೆ ಕುಂಕುಮ ಮಾತ್ರವೇ. ವಿಧವೆಯರಿಗೆ ವಿಭೂತಿ ಮಾತ್ರ. ನಮ್ಮಮ್ಮ ತನ್ನ ತಲೆ ಬಾಚಿಕೊಂಡ ಮೇಲೆ ನಮ್ಮಪ್ಪನಿಗೆ ಹೇಳಿ ಕನ್ನಡಿಯನ್ನ ಕೆಳಗಿಳಿಸಿಕೊಂಡು ಗುಂಡಗೆ ದೊಡ್ಡದಾಗಿ ಕುಂಕುಮ ಹಚ್ಚಿಕೊಳ್ಳುತ್ತಿದ್ದರು. ಅದೂ ಅಭ್ಯಾಸ ಬಲದಿಂದ ಒಂದರ್ಧ ನಿಮಿಷದಲ್ಲಿ ತಿದ್ದಿ ತೀಡಿಬಿಡುತ್ತಿದ್ದರು. ಮತ್ತೆ ಆ ಕನ್ನಡಿ ಗೋಡೆಗೆ ಏರಿಬಿಡ್ತಿತ್ತು.

ಅದು ಕೆಳಗಿಳೀತಿದ್ದುದನ್ನೇ ಕಾಯ್ತಿದ್ದ ನಾನು ಅದನ್ನ ಗೋಡೆ ಮೇಲೆ ಏರಿಸೋಷ್ಟರಲ್ಲಿ "ಅಮ್ಮಾ, ಅಣ್ಣ ಬರೋಷ್ಟ್ರಲ್ಲಿ ಕನ್ನಡಿಗೆ ಒಂಚೂರೇ ಚೂರು ನನ್ನ ಮುಖ ತೋರುಸ್ತೀನಿ ಕೊಡಮ್ಮಾ" ಅಂತ ಗೋಗರೆತ ಮಾಮೂಲಿ. ನಮ್ಮಮ್ಮ ಸಂತೋಷವಾಗಿದ್ರೆ, ಒಂದೈದು ಸೆಕೆಂಡು ಕನ್ನಡಿಗೆ ನನ್ನನ್ನ ನೋಡೋ ಅವಕಾಶ ಸಿಕ್ತಿತ್ತು. ಮನೇನಲ್ಲಿದ್ದ ನಾಲ್ಕು ಹೆಣ್ಮಕ್ಳು, ಗಂಡ, ಮಾವ ಒಬ್ಬರಾದ್ರೂ ಅವಳ್ನ ರೇಗಿಸದೇ ಇರ್ತಿದ್ವಾ? ಸಾಧ್ಯವೇ ಇಲ್ಲ. ಯಾವುದೋ ವಿಷಯಕ್ಕೆ ನಮ್ಮಮ್ಮನ ರೇಗಾಟ ಇದ್ದೇ ಇರ್ತಿತ್ತು. ಇದು ಮಾಮೂಲಿ. ಹಾಗಾಗಿ ಎಷ್ಟೋ ವರ್ಷಗಳಿಂದ ಮನೇನಲ್ಲಿದ್ದು, ಅಲ್ಲಲ್ಲಿ ಕರೆಗಟ್ಟಿದ್ದ ಕನ್ನಡಿ ಕೂಡ ನಮ್ಮನ್ನು ನೋಡುವುದು ತುಂಬಾ ತುಂಬಾ ಅಪರೂಪ. ಹಾಗೂ ಎಂದೋ ಒಮ್ಮೊಮ್ಮೆ ನೋಡಿದ್ದರೂ ಸೆಕೆಂಡುಗಳ ಲೆಕ್ಕದಲ್ಲಿ ಮಾತ್ರ. ನಮ್ಮಕ್ಕ ಎಂದೂ ಕನ್ನಡಿಯನ್ನು ಇಷ್ಟಪಟ್ಟಿಲ್ಲ. ಮತ್ತೆ ಇಬ್ಬರು ತಂಗಿಯರು ಪುಟ್ಟ ಪುಟ್ಟವರು. ಅವರಿಗೂ ಬೇಕಿಲ್ಲ. ನಾನು ಮಾತ್ರ ಹೀಗೆ. ಮಾವಾನೋ, ಚಿಕ್ಕಪ್ಪಾನೋ ಬಂದಾಗ "ಎತ್ಕೋ ಮೇಲೆ. ನನ್ನನ್ನ ಕನ್ನಡೀಗೆ ತೋರ್ಸು" ಅಂತಂದ್ರೆ ಎಲ್ರೂ "ಇವಳು ಕನ್ನಡೀಲ್ಲಿ ಮುಖ ನೋಡೋದಲ್ಲ. ಕನ್ನಡೀನೇ ಇವ್ಳನ್ನ ನೋಡ್ಬೇಕಂತೆ. ಇದೇನೋ ಇವುಳ್ದು ಒಂಥರಾ ಹೊಸಾ ಕಥೆ" ಅಂತ ಒಬ್ಬರಿಗೊಬ್ರು ಹೇಳಿಕೊಂಡು ಛೇಡಿಸುತ್ತಿದ್ದರು.

ಆ ಬಗ್ಗೆ ನನ್ನನ್ನ ಯಾರಾದ್ರೂ ಕೇಳುದ್ರೆ "ಹೌದು ಮತ್ತೆ. ನಾನು ಮಾಡ್ಕೊಳ್ಳೊ ಡ್ರೆಸ್ಸು ನೀವೆಲ್ಲಾ ನೋಡಲ್ವಾ. ಹಾಗೇ ಕನ್ನಡೀನೂ ನೋಡ್ಬೇಕಲ್ವಾ? ಕನ್ನಡೀನಾದ್ರೂ ನಾನೆಷ್ಟು ಚೆನ್ನಾಗಿದ್ದೀನಿ ಅಂತ ತೋರಿಸುತ್ತೆ. ನೀವ್ಯಾರೂ ನಾನು ಹೇಗಿದ್ದೀನಿ ಅಂತ ಹೇಳೋದೇ ಇಲ್ಲ" ಅನ್ನುತ್ತಿದ್ದೆ. ಒಮ್ಮೊಮ್ಮೆ ನನ್ನ ಅಲಂಕಾರ ತೋರಿಸೋಕ್ಕೆ ಕನ್ನಡಿ ಎದುರಿಗಿದ್ದ ಟೈಲರ್ ಮಿಷನ್ ಮೇಲೆ ಹತ್ತಿ ಕಷ್ಟಪಟ್ಟು ಬಗ್ಗಿ ನೋಡುದ್ರೆ, ಹತ್ತಡಿ ಅಗಲದ ಮನೆಯಲ್ಲಿ ಸೂರ್ಯನೆದುರಿಗೆ ಹಾಕಿದ್ದ ಆ ಕನ್ನಡಿನೋ ಫಳ ಫಳ ಅಂತ ಹೊಳೀತಾ ಇರ್ತಿತ್ತು. ಸಾವಿರಾರು ಅಡಿ ದೂರವಿರೋ ಸೂರ್ಯನ್ನ ನೋಡ್ತಿದ್ದ ಆ ಮೋಸದ ಕನ್ನಡಿ ಹತ್ತೇ ಅಡಿ ದೂರದಲ್ಲಿ ನಿಂತು, ಕೂತು, ಬಗ್ಗಿ ಸರ್ಕಸ್ ಮಾಡ್ತಿದ್ದ ನನ್ನನ್ನ ಮಾತ್ರ ನೋಡ್ತಿರಲಿಲ್ಲ. ಕನ್ನಡಿ ವಿಷ್ಯದಲ್ಲಿ ನಂಗೆ ಮೋಸದ ಮೇಲೆ ಮೋಸ.

ಶಕ್ಕೂ ಸಲ್ವಾರ್ ಕಡೆ ಬರೋಣ. ಅಜ್ಜಿಯ ಮನೆಯಲ್ಲಿ ಹಿಂದಿನ ದಿನ ತಾನೇ ಹಬ್ಬದ್ದೋ ಎಂಥದ್ದೋ ಸಂಭ್ರಮ ಮುಗಿದಿತ್ತು. ಅದಕ್ಕೇ ಶಕ್ಕೂ ಕೂಡ ಬಂದಿದ್ಲು. ಅವ್ಳು ಹಾಕ್ಕೊಂಡಿದ್ದ ಸಲ್ವಾರನ್ನ ಮಾರನೇ ದಿನ ಬೆಳಗ್ಗೆ ನಾನು

ಎದ್ದೇಳೋಷ್ಟ್ರಲ್ಲಿ ಮೀನಾಕ್ಷಿ ಅಜ್ಜಿ ಒಗೆದು ದಾರದ ಮೇಲೆ ಒಣಗಿಸಿದ್ದರು. ಅಯ್ಯೋ, ಯಾಕೇಳ್ತೀರಾ ನನ್ನ ಸಂಭ್ರಮ. ಅಷ್ಟೊಂದು ಜನರಿರುವ ಆ ಸಂತೆಯಂತಹ ಪರಿಸರದಲ್ಲಿ ಯಾರು ಏನು ಮಾಡುತ್ತಿದ್ದರೋ ನನಗೆ ಈಗ್ಲೂ ನೆನಪೇ ಇಲ್ಲ ಬಿಡಿ. ಕೇವಲ ನನ್ನ ಆಸೆಗಳು ಹಾಗೂ ಅವನ್ನು ಪೂರೈಸಿಕೊಳ್ಳಲು ಮಾಡುತ್ತಿದ್ದ ಚೇಷ್ಟೆಗಳು ಮಾತ್ರ ನೆನಪಿವೆ ಅಷ್ಟೇ. ಇದೇನು ಇವ್ಳು ಹೀಗೆ ಅಂತ ಯಾರೇನು ಅಂದ್ಕೊಂಡ್ರೂ ಏನ್ಮಾಡೋಕ್ಕಾಗುತ್ತೆ ಹೇಳಿ? ಅನುಮಾನ ಬೇಡ. ಈಗ ನಾನು ಬದ್ಲಾಗಿದ್ದೀನಿ. ನಿಜಾಪ್ಪ. ನಂಬಿ. ಹತ್ತಿರ ಹೋಗಿ ಆಸೆಯಿಂದ ಮುಟ್ಟಿ ನೋಡಿದೆ. ಸಮಾಧಾನವಾಗಲಿಲ್ಲ. ಇದ್ದ ಬಟ್ಟೆಗಳನ್ನು ಅತ್ತಿತ್ತ ಜರುಗಿಸಿ ನೋಡಿದೆ. ಅಯ್ಯೋ ದೇವ್ರೇ! ಓಣಿನೇ ಎಲ್ಲೂ ಇಲ್ಲ.

ಆಸೆ ತಡೆಯಲಾಗದೆ ಅವರ ಮನೆಗೇ ಹೋಗಿ "ಅಜ್ಜಿ, ಶಕ್ಕೂದು ಓಣಿ ಎಲ್ಲಿ? ದಾರದ್ಮೇಲೆ ಇಲ್ಲ. ಕಳ್ದಾಕ್ಬಿಟ್ಟಿದ್ದಾಳೆ. ಅವಳನ್ನ ಚೆನ್ನಾಗಿ ಬೈರಿ" ಅಂತ ದೂರು ಹೇಳಿದೆ. "ನೀನು ಮೊದ್ಲು ದೋಸೆ ತಿನ್ನು ಬಾ. ಅಷ್ಟರಲ್ಲಿ ಒಗ್ದಾಕಿರೋದು ಒಣಗುತ್ತೆ. ನಿಂಗೆ ಹಾಕ್ತೀನಿ" ಎಂದು ತೆಳುವಾಗಿ ಮಾಡಿದ್ದ ಅಗಲವಾದ ದೋಸೆಗೆ ಚಟ್ನಿ ಹಾಕಿ ಕೊಟ್ಟರು. ಮೊದಲೇ ಮನೆ ಮನೆ ಪೂಜಾರಿ ನಾನು. ಚಟ್ನಿಯೂ ಇಷ್ಟವಿಲ್ಲ. ಬೇರೆ ಮನೆಗಳಿಗೆ ಹೋದರೆ ಬೇರೆ ತಿಂಡಿ ಸಿಕ್ಕುತ್ತಿತ್ತು. ಆದರೆ ಬಟ್ಟೆಯ ಮೇಲಿನ ಆಸೆಗೆ ಸಿಕ್ಕಾಪಟ್ಟೆ ಖಾರ ಇದ್ದ ಚಟ್ನಿಯನ್ನು ಕಣ್ಣಲ್ಲಿ ಮೂಗಲ್ಲಿ ನೀರು ಸುರಿಸಿಕೊಂಡು ತಿನ್ನತೊಡಗಿದೆ. ನನ್ನ ಅವಸ್ಥೆ ನೋಡಲಾಗದೆ "ಚಟ್ನಿ ಬಿಟ್ಬಿಡು, ಈ ಬೆಲ್ಲದಲ್ಲಿ ತಿನ್ನು" ಎಂದು ಬೆಲ್ಲ ಕೊಟ್ಟರು ಅಜ್ಜಿ.

'ಈ ಮೀನಾಕ್ಷಿ ಅಜ್ಜೀಗೆ ನನ್ನ ಆಸೆಗಳು, ಕಷ್ಟಗಳು ಎಲ್ಲಾ ಗೊತ್ತಾಗುತ್ತೆ. ನಮ್ಮಮ್ಮನಿಗೆ ಮಾತ್ರ ಏನೂ ಅರ್ಥಾನೇ ಆಗಲ್ವಲ್ಲಾ? ಓಣಿ ಇರೋ ಕೆಂಪು ಬಟ್ಟೆ ಕೊಡ್ಸಿ, ನನ್ನನ್ನ ಕನ್ನಡಿಗೆ ತೋರಿಸೋಕ್ಕೆ ನಮ್ಮಮ್ಮಂಗೆ ಇಷ್ಟಾನೇ ಇಲ್ಲ' ಅನ್ನೋ ಬೇಸರ ಬೇರೆ ಆ ತಕ್ಷಣಕ್ಕೆ ಹುಟ್ಟಿತು. ಶಕ್ಕೂವಿನ ಬಟ್ಟೆ ಹಾಕಿಕೊಳ್ಳುವ ಮಹದಾಸೆಯಿಂದ ದೋಸೆ, ಬೆಲ್ಲ ಎರಡನ್ನೂ ಬೇರೆಬೇರೆಯಾಗಿ ತಿಂದು ಕೈಯನ್ನು ಫ್ರಾಕಿಗೇ ಒರೆಸಿಕೊಂಡು ತಯಾರಾಗಿ ನಿಂತೆ. ನನಗೇನು? ಅಜ್ಜಿ ಕೊಟ್ಟ ದೋಸೆ ಹಾಗೂ ಬೆಲ್ಲವನ್ನು ಖಾಲಿ ಮಾಡಬೇಕಷ್ಟೇ.

ಇರುವ ಒಂದೇ ಸ್ಟೌನಲ್ಲೇ ನೆಂಟರಿಗೂ ಸೇರಿ ಎಲ್ಲರಿಗೂ ದೋಸೆಗಳು ಬೇಯಬೇಕಿತ್ತು. ಅಷ್ಟು ಜನರ ನಡುವೆಯೂ ನನಗೂ ದೋಸೆ ಬೆಲ್ಲ ಕೊಟ್ಟು ಮತ್ತೆ ದೋಸೆ ಮಾಡಲು ತೊಡಗಿದರು ಅಜ್ಜಿ. ಅವರ ಮನಸ್ಸಲ್ಲಿ ಬಟ್ಟೆ ಒಣಗಬೇಕಿತ್ತು. ಆದರೆ ಆಮೇಲೆ ಅದೇ ಬಟ್ಟೆ ಹಾಕ್ಕೊಂಡು ಶಕ್ಕು ಅವಳ ಮನೆಗೆ ಹೋಗ್ಬಿಟ್ರೆ ಅಂತ ನನ್ನ ಹೊಟ್ಟೆಯಲ್ಲಿ ಬುಗಬುಗ. ಯಾವುದೇನೇ ಇದ್ರೂ ಓಣಿ ಇರ್ಬೇಕಲ್ಲಾ? ಅದೆಲ್ಲಿ ಹೋಯ್ತಪ್ಪಾ?

ಶತಪಥ ಅವರ ಮನೆಗೂ ನಮ್ಮನೆಗೂ ತಿರುಗಿದೆ. ಇನ್ನ್ಯಾಕೆ? ಅಜ್ಜಿ ದೋಸೆ ಕೆಲ್ಸ ಮುಗೀತಾ ಅಂತ. ಅದು ಮುಗೀತಾನೇ ಇಲ್ಲ. ಕೊನೆಗೆ ತಡೆಯೋಕಾಗದೆ ಒಣಹಾಕಿದ್ದ ಸಲ್ವಾರ್ ಕಮೀಜನ್ನ ಮೆಲ್ಲಗೆ ಎಳ್ಕೊಂಡು, ಮನೆಗೆ ತಗೊಂಡೋಗಿ ರೂಮಲ್ಲಿದ್ದ ಟ್ರಂಕ್ ಒಳಗೆ ಹಾಕಿ ಹೊರಬಂದೆ. ನಮ್ಮಕ್ಕನಿಗೆ ಪುಸ್ತಕದ ಹುಚ್ಚು. ಜೊತೆಗೆ ಕಾಂಗ್ರೆಸ್ ಕಡಲೆಬೀಜ ಇದ್ರಂತೂ ಪ್ರಪಂಚವೇ ತಲೆಕೆಳಗಾದ್ರೂ ಆರಾಮಾಗಿರ್ತಿದ್ಲು. ಅವಳನ್ನ ಬಿಟ್ಟು ಮನೇಲ್ಯಾರೂ ಇರಲಿಲ್ಲ. ಸರಿ ಒಳಗೋಗಿ ಒದ್ದೊದ್ದೆ ಇದ್ದ ಶಕ್ಕೂ ಬಟ್ಟೆಗಳನ್ನ ಹಾಕ್ಕೊಂಡೇಬಿಟ್ಟೆ. ಮುಂದೇನು? ಯಾರಿಗೆ ತೋರಿಸಬೇಕು ಅದನ್ನು? ಯಾರಾದ್ರೂ ನನ್ನನ್ನ ನೋಡಿ "ಎಷ್ಟು ಚೆನ್ನಾಗಿದ್ದೀಯ" ಅಂತ ಹೇಳ್ಬೇಕಲ್ಲ? ಹೊರಗೆ ಬರೋ ಹಾಗೂ ಇಲ್ಲ.

ಒದ್ದೊದ್ದೆ ಇದ್ರೂ, ಕೆಂಪು ಬಟ್ಟೆ ಹಾಕ್ಕೊಂಡಿರೋ ನನ್ನನ್ನ, ಕೊನೇ ಪಕ್ಷ ಮನೆಯಲ್ಲೇ ಇರೋ ಕನ್ನಡಿಗೂ ನೋಡೋಕ್ಕಾಗ್ಲಿಲ್ಲ. ಅಕ್ಕ ಹೊರಗೇ ಕೂತ್ಕೊಂಡಿದ್ದಾಳೆ. ಅಷ್ಟೇ ಅಲ್ಲ. ಮೀನಾಕ್ಷಿ ಅಜ್ಜಿ ಮನೆ ಜನವೋ, ಇಲ್ಲ ನಮ್ಮಪ್ಪ, ಅಮ್ಮ ಯಾರಾದ್ರೂ ಒಬ್ರು ನೋಡುದ್ರೂ ಸಾಕಲ್ಲ. ಮೈಮೇಲೆ ಬಾಸುಂಡೆ ಏಳೋಕ್ಕೆ ಯಾರಾದ್ರೇನು? ಬಿಚ್ಚಿ ಮತ್ತೆ ನನ್ನದೇ ಬಟ್ಟೆ ಹಾಕ್ಕೊಂಡೆ. ಮತ್ತೆ ಒದ್ದೆ ಸಲ್ವಾರ್ ಕಮೀಜ್ ಎತ್ಕೊಂಡು ಹೊರಗೆ ಬಂದೆ.

ದುಃಖವಾಗುತ್ತಿತ್ತು. ಕಮೀಜ್ ಕೈಲಿ ಹಿಡಿದು ಅಜ್ಜಿ ಮನೆಗೆ ಹೋದೆ. ಅವರ ಗಮನ ಸೆಳೀಬೇಕಲ್ಲಾ? "ಅಜ್ಜಿ, ಇದು ಬಿದ್ದೋಗಿದೆ ನೋಡಿ" ಎಂದು ಅವರ ಕೈಗೆ ಕೊಟ್ಟೆ. ತಿಂಡಿ ತಿಂದು ಮುಗಿಸಿದ್ದ ಅಜ್ಜಿ, "ಗಾಳೀಗೆ ಬಿತ್ತೇನೋ? ತಡೀ ಒಣಗಾಕ್ತೀನಿ" ಅಂತ ಮತ್ತೆ ಒಣ ಹಾಕಿದರು. ಸಂಕೋಚ ಬದಿಗಿಟ್ಟು, "ಓಣಿ ಕೊಡಿ ಅಜ್ಜಿ. ಸೊಲ್ಪ ಹೊತ್ತು ಹಾಕ್ಕೊಂಡು ಕೊಡ್ತೀನಿ" ಅಂತ ಕಣ್ಣೆಲ್ಲಾ ಕಿಸಿದುಕೊಂಡು ಗೋಗರೆದೆ. "ಏ ಶಕ್ಕೂ, ನಿನ್ನ ಓಣಿನಂತೆ ಶಾಂತೀಗೆ ಕೊಡು. ಸೊಲ್ಪ ಹೊತ್ತು ಹಾಕ್ಕೊಳ್ಳಿ" ಅಂತ ಅಜ್ಜಿ ಕೂಗಿ ಹೇಳಿದರು. ಅವಳೂ ತಂದು ಕೊಟ್ಟಳು. ಹಾಕಿದ್ದ ನೀಲಿ ಫ್ರಾಕಿನ ಮೇಲೆ ಅದನ್ನು ಹೊದ್ದುಕೊಂಡು ಓಡಾಡಿದ ಒಂದೊಂದು ಕ್ಷಣವೂ ಅತ್ಯಂತ ಅಮೂಲ್ಯವಾಗಿತ್ತು. ಪರಮಾನಂದ. ಎಷ್ಟು ಕೋಟಿ ಕೊಟ್ರೂ ಸಿಕ್ಕದ ಸಂಭ್ರಮ ಆ ದಿನ ನನ್ನದಾಗಿತ್ತು. ಇದು ಒಂದು ಉದಾಹರಣೆ ಅಷ್ಟೇ. ಹೀಗೆ ಎಷ್ಟೆಷ್ಟೋ ಘಟನೆಗಳನ್ನ ನಮ್ಮನೆ ಕನ್ನಡಿ ನೋಡೇ ಇಲ್ಲ ಅನ್ನೋದನ್ನ ಒತ್ತಿ ಹೇಳಲೇಬೇಕು.

ಆದ್ರೆ ಆ ದಿನ ನನ್ನನ್ನ ಕನ್ನಡಿ ನೋಡ್ಲಿಲ್ವಲ್ಲಾ ಅನ್ನೋ ದುಃಖ ಕೂಡ ಆ ಸಂತೋಷಕ್ಕೆ ಸಮವಾಗಿಯೇ ಇತ್ತು ಅನ್ನೋದು ಮತ್ತೊಂದು ವಿಷ್ಯ. ಓಣಿ ತೊಟ್ಟ ನನ್ನನ್ನು ನೋಡುವವರಿಗೆ ಯಾವುದೇ ವ್ಯತ್ಯಾಸ ಕಾಣುತ್ತಿಲ್ಲ. ಆದರೆ ಕೊನೆ ಪಕ್ಷ ನನ್ನ ಮುಖವನ್ನ ಕನ್ನಡಿ ನೋಡಿದ್ದರೆ? ನೋಡಿದ್ದರೆ ಏನು? ಏನೋ ಗೊತ್ತಿಲ್ಲ. ಆದರೆ ತುಂಬಾ ಅಸಮಾಧಾನ ಆದದ್ದು ಮಾತ್ರ ಸುಳ್ಳಲ್ಲ. ಆಗ ಶುರುವಾದ ಅಸಮಾಧಾನ ಮಾತ್ರ ಬಹಳ ವರ್ಷಗಳ ತನಕವೂ ಇತ್ತು. ಹೊಸ ಮನೆ ಕಟ್ಟಿ ನನ್ನ ರೂಮಿಗೆ ಒಂದಡಿ ಅಗಲ ಎರಡಡಿ ಉದ್ದದ ಹೊಸ ಕನ್ನಡಿಯನ್ನು ತಂದು ಅರಡಿ ಎತ್ತರದಲ್ಲಿ ತೂಗುಹಾಕಿದಾಗ ಮಾತ್ರ ನನ್ನ ಸಂತೋಷ ಮಿತಿ ಮೀರಿತು. ಮಿರಿಮಿರಿ ಮಿನುಗುತ್ತಿದ್ದ ಹೊಸ ಕನ್ನಡಿಗೆ ನನ್ನ ಮುಖವನ್ನ ನೋಡುವುದೇ ಕೆಲಸ. ಅದೂ ಒಂದಾರು ತಿಂಗಳು ಅಷ್ಟೇ.

ನಾನು ಪ್ರೇಮಪಾಶದಲ್ಲಿ ಬಿದ್ದಿದ್ದೇನೆ ಎಂದು ತಿಳಿಯುತ್ತಿದ್ದಂತೆ ಕನ್ನಡಿಯನ್ನು ನೋಡಿ ನೋಡಿಯೇ ನಾನು ಹಾಳಾಗಿಹೋದೆ ಎಂದು ಕೂಗಾಡಿದ ಅಪ್ಪ ಅಮ್ಮ ಇಬ್ಬರೂ ಅಪವಾದವನ್ನು ಅದರ ಮೇಲೆ ಹಾಕಿ ಅಟ್ಟದ ಮೇಲೆತ್ತಿ ಬಿಸಾಡಿದರು. ಮೂಲೆ ಸೇರಿದ್ದ ಅದೇ ಹಳೇ ಮಾಸಿದ ಕನ್ನಡಿ ಮತ್ತೊಂದು ರೂಮಿನ ಗೋಡೆಯ ಮೇಲೇರಿ ಕುಳಿತಿತು. ಈಗಂತೂ ಕನ್ನಡಿಗೆ ನನ್ನನ್ನು ತೋರಿಸುವ ಧೈರ್ಯವೇ ನನ್ನಲ್ಲಿ ಉಡುಗಿಹೋಯ್ತು. ಅಂತೂ ಇಂತೂ ಅದೇ ಹುಡುಗನ ಜೊತೆ ಮದುವೆ ಗೊತ್ತಾದ ಮೇಲೆ ಅಂದ್ರೆ ಮದುವೆಗಾಗಿ ಮನೆಗೆ ಬಣ್ಣ ಹೊಡೆಸಿದ ಸುಸಂದರ್ಭದಲ್ಲಿ ಅಲ್ಲೆಲ್ಲೋ ಅಟ್ಟದ್ಮೇಲೆ ಧೂಳು ಹತ್ತಿಸಿಕೊಂಡು ಕೂತಿದ್ದ ಅದೇ ಕನ್ನಡಿ ಮತ್ತದೇ ಗೋಡೆಗೆ ವಾಪಸ್ ಬಂತು. ಆದರೇನು ಪ್ರಯೋಜನ?

ಕನ್ನಡಿಯೋ ಮತ್ತೊಂದೋ, ಮದುವೆಯಾಗಿ ಹೋದ ಮೇಲೆ ಹೆಣ್ಣು ಮಕ್ಕಳು ತವರಿನ ವಸ್ತುಗಳ ಬಗ್ಗೆ ಚಿಂತಿಸಿ ಏನು ಲಾಭ ಅಲ್ಲವೇ? ಅತ್ತೆಯ ಮನೆಯಲ್ಲಿ ನನ್ನ ಕನ್ನಡಿ ಸಂಪೂರ್ಣ ನನ್ನದೇ ಆಗಿತ್ತು. ಆದರೆ ಕನ್ನಡಿ ತೃಪ್ತಿಯಿಂದ ನನ್ನನ್ನು ನೋಡಿದಾಗ ಮಾತ್ರ ನನ್ನ ಬಾಲ್ಯ ಕಳೆದು ಮದುವೆಯಾಗಿಹೋಗಿತ್ತು ಕಣ್ರೀ.

***

ನಾನೂ ನನ್ನ ಸಹಪಾಠಿ ಮಿತ್ರನೂ (ಲೇಖನ ಮಾಲೆ–3)

ಬೇಸ್ತು

– ಮಾಧುರಿ ಕೃಷ್ಣ

ಇತ್ತೀಚೆಗೆ ಊರಿಗೆ ಹೋದಾಗಲೆಲ್ಲ ನನ್ನ ಅಜೆಂಡಾದಲ್ಲಿ ಒಂದು ಹೊಸ ಕಾರ್ಯಕ್ರಮ ಸೇರ್ಪಡೆಯಾಗಿಬಿಟ್ಟಿತ್ತು. 50 ವರ್ಷಗಳ ಹಿಂದೆ ಪದವಿ ಓದುತಿದ್ದಾಗಿನ ಸಹಪಾಠಿ ಮಿತ್ರನೊಬ್ಬನು ತನ್ನ ಬ್ಯಾಂಕಿನ ಸೇವಾವಧಿ ಮುಗಿಸಿ, ನಿವೃತ್ತಿಯ ನಂತರ ನಮ್ಮೂರಿನಲ್ಲಿ ಜಾಗ ಖರೀದಿಸಿ ಮನೆ ಕಟ್ಟಿಕೊಂಡಿದ್ದನೆಂದು ತಿಳಿದುಬಂದ ಕಾರಣ, ಈಗೆರಡು ಬಾರಿ ಊರಿಗೆ ಹೋದಾಗ ತಪ್ಪದೆ ಆತನನ್ನು ಭೇಟಿಯಾಗಿ ಬಂದಿದ್ದೆ. ಅಂತೆಯೇ ತನ್ನ ಚಲನಶೀಲತೆಯನ್ನು ಕಳೆದುಕೊಂಡು ವ್ಹೀಲ್ ಛೇರಿಗೇ ಅಂಟಿಕೊಂಡ. ಆತನನ್ನು ಭೇಟಿಯಾಗಲು ಊರು ಸೇರಿದ ಮರುದಿನವೇ ಹೊರಟು ನಿಂತೆ.

ಮೊದಲೇ ಫೋನು ಮಾಡಿ ತಿಳಿಸಿದ್ದರಿಂದ ನನ್ನ ಸಹಪಾಠಿ ಮಿತ್ರ ಠಾಕುಠೀಕಾಗಿ ಅಲಂಕರಿಸಿಕೊಂಡು ಬಾಗಿಲೆದುರಿನ ಗಟ್ಟಿ ಮರದ ಕುರ್ಚಿಯಲ್ಲಿ 50 ವರ್ಷ ಹಿಂದಿನ ಆ ಸೊಗಸಿನಲ್ಲೇ ಅಂದೂ ಕುಳಿತಿದ್ದ. ನನ್ನನ್ನು ಕಾಣುತಿದ್ದಂತೆಯೇ ತನ್ನ ಹೊಳಪಿನ ಕಣ್ಣು ಝುಳಪಿಸುತ್ತ, ಇಷ್ಟಗಲ ಹಲ್ಲುತೋರಿ ನಗುತ್ತ, "ಬಾ.. ಬಾ... ಹೇಗಿತ್ತು ಪ್ರಯಾಣ" ಎಂದು ಒಳಕ್ಕೆ ಸ್ವಾಗತಿಸಿದ. ಆತನ ಉಲ್ಲಾಸ ನೋಡಿ ನನಗೂ ಹುರುಪು ಬಂತು. ಅಷ್ಟೊಂದು ವರ್ಷಗಳಿಂದಲೂ ಒಳಗೇ ಉಳಿದುಕೊಂಡು, ಗೌಪ್ಯ ಸಾಧಿಸಿದ ಆ ಒಂದು ಘಟನೆಯ ಬಗ್ಗೆ ಇಂದು ಕೇಳೇಬಿಡೋಣ ಎಂದು ಮನಸ್ಸಿನಲ್ಲಿ ನಿರ್ಧರಿಸಿಕೊಳ್ಳುತ್ತಲೇ ಸಿಂಗಲ್ ಸೀಟರ್ ಸೋಫಾದಲ್ಲಿ ಕೂರುತ್ತ, ಪಕ್ಕದ ದಿವಾನ್ ಮೇಲೆ ಆಸೀನಳಾಗಿದ್ದ ಅವನ ಮಿಸೆಸ್‌ಗೆ 'ಹಾಯ್' ಎಂದೆ. ಅಷ್ಟರಲ್ಲೇ ಅವನ ಚುರುಕಿನ ಮೊಮ್ಮಗ ಉದ್ದ ಲೋಟದಲ್ಲಿ ಎಳನೀರು ತಂದುಹಿಡಿದ. ಅವನ ಈ ಕ್ಲಪ್ತ ಪ್ರತಿಕ್ರಿಯೆಗೆ ಮುಗುಳ್ನಗುತ್ತ, "ಥ್ಯಾಂಕ್ಸ್ ಕಣೋ"ಎಂದೆ. ಹುಡುಗ ತುಸು ನಾಚಿಕೊಂಡಂತೆ ಅಲ್ಲೇ ತುಸು ಸರಿದು ನಿಂತ. ಕರಾವಳಿಯ ಬಿಸಿಲಿಗೆ ತಂಪಾದ ಎಳನೀರು ಅಮೃತದಂತಿತ್ತು. ಕುಡಿದು ಲೋಟ ಕೆಳಗಿಟ್ಟರೂ ನನ್ನ ಸಹಪಾಠಿ ಮಿತ್ರ ಮೌನವಾಗಿಯೇ ಇದ್ದ. ಹಾಗಾಗಿ ಥಕ್ಕನೆ ಮಾತು ಪ್ರಾರಂಭಿಸಲು ನನಗೂ ತೋಚಲಿಲ್ಲ. ಆತನೆರಡು ಹೆಣ್ಣುಮಕ್ಕಳು ಕಣ್ಣು ಅಗಲಿಸಿಕೊಂಡು, ಮೈಯೆಲ್ಲ ಕಿವಿ ಮಾಡಿಕೊಂಡು ಕಾಯುತಿದ್ದರು.

ಮೇಲೆದ್ದು ಬರಲು ಹವಣಿಸುತಿದ್ದ ಸಂತೃಪ್ತಿಯ ತೇಗನ್ನು ಮೃದುವಾಗಿ ಕೆಳಗೇ ದಬ್ಬುತ್ತ, ಮಿತ್ರನನ್ನು, "ಹೇಗಿದ್ದೀ ಈಗ ?" ಎಂದೆ.

"ಇದ್ದೀನಿ ನೋಡು , ಹೀ.. ಗೇ.. "ಎಂದು ಒಂಥರಾ ನಕ್ಕಾಗ ಕರುಳು ಚುರಕ್ಕೆಂದಿತು. 'ನೀನಾದರೂ ಇದೇ ಪಾಡಲ್ಲಿ, ಒಂದಿಲ್ಲಾ ಒಂದು ನೋವಿನಲ್ಲಿ ಸಂಕಟಪಡುವವಳಲ್ಲವೇ' ಎಂದು ಕುಟುಕಿತು ಒಳಮನಸ್ಸು! ಆ ಬೇಡದ ಯೋಚನೆಯನ್ನು ಎರಡು ಬೆರಳಿನಿಂದ ಚಿಮ್ಮಿಸಿ ಹೊಡೆದೋಡಿಸುವಂತೆ ಬೇರೊಂದು ಪ್ರಶ್ನೆಗೆ ತಿರುಗಿದೆ.

"ಅಲ್ಲಾ, ಆ ನಮ್ಮ ಇಬ್ಬರು ಕ್ಲಾಸ್‌ಮೇಟ್ಸ್ ನಿನ್ನನ್ನು ವಿಸಿಟ್ ಮಾಡಲು ಬರುವವರಿದ್ದರಲ್ಲ, ಬಂದರೇ?"

"ಒಬ್ಬ ಮಾತ್ರ ಬಂದು ಹೋದ, ಇನ್ನೊಬ್ಬನಿಗೆ ಹೆಲ್ತ್ ಪ್ರಾಬ್ಲೆಂ ಅಂತ ಕಾಣಿಸುತ್ತೆ" ಎಂದ ಮಿತ್ರ, ತುಸು ಜಾಸ್ತಿಯೇ ನಿಧಾನವಾಗಿ ಹೇಳಿದ.

'ಛೇ! ನಾನು ಏನೋ ಎಣಿಸಿಕೊಂಡು ಇಲ್ಲಿಗೆ ಬಂದರೆ ಇನ್ನೇನೇನೋ ತಿರುವು ತೆಗೆದುಕೊಳ್ತಾಯಿದೆಯಲ್ಲ ಇಲ್ಲಿ!

ಬೆನ್ನು ನೆಟ್ಟಗೆ ಮಾಡಿದೆ. ಮಿತ್ರನ ಮೊಗವನ್ನೇ ದಿಟ್ಟಿಸಿ ನೋಡಿದೆ. "ಹೌದಲ್ಲ, ನಿನ್ನನ್ನು ಕೇಳಬೇಕು,..ಕೇಳಬೇಕು ಎಂದುಕೊಳ್ಳುತ್ತಲೇ ಪ್ರತಿಸಾರಿ ಮರೆತು ಹೊರಡುತಿದ್ದೆ. ನಿಂಗೆ ನೆನಪಿದೆಯಾ.... ಬಹುಶ: ಅದು ನಮ್ಮ 2ನೇ ಪದವಿ ಕಾಲವಿರಬೇಕು.. ಕಂಬೈಂಡ್ ಕ್ಲಾಸಿನಲ್ಲಿದ್ದೆವು. ಪಾಪದ ಹಿಂದಿ ಪ್ರಾಚಾರ್ಯರ ಕ್ಲಾಸ್ ನಡೀತಿತ್ತು...."

"ಹಾಂ.. ಹಾಂ... ಹತ್ತಿರ ಹತ್ತಿರ 60 ಸ್ಟುಡೆಂಟ್ಸ್‌ಗಳಂದ ತುಂಬಿರುತಿದ್ದ ಕ್ಲಾಸ್! ಆ ಹಿಂದೀ ಪಂಡಿತರಿಗೆ ಸಾಕು.. ಸಾಕು ಮಾಡಿಸಿ ಬಿಡುತಿದ್ದೆವು."

ಹಳೇ ನೆನಪು ಮರುಕಳಸುತಿದ್ದಂತೆ ಸಹಪಾಠಿ ಮಿತ್ರ ಒಮ್ಮೆಲೇ ಚುರುಕುಗೊಂಡು ಉಲ್ಲಸಿತನಾಗಿಬಿಟ್ಟ. "ಹೌದೂ.. ಆ ಬಿ.ಎಸ್ಸೀ ಸ್ಟುಡೆಂಟ್ಸ್‌ಗೆ ನಾವು ಆರ್ಟ್ಸ್ ಸ್ಟುಡೆಂಟ್ಸ್ ಎಂದರೆ ಏನು ತಿರಸ್ಕಾರ... ಪ್ರಪಂಚದಲ್ಲಿ ತಾವೇ ಮಹಾ ಬುದ್ಧಿವಂತರು ಎನ್ನೋವಂತೆ!"

ನನಗೆ ನಗು ಬಂತು, ಬ್ಯಾಂಕ್ ಮ್ಯಾನೇಜರ್ ಆಗಿ ಅವರೆಲ್ಲರ ಹಣಕಾಸು ವ್ಯವಹಾರ ಕೈಯಲ್ಲಿಟ್ಟುಕೊಂಡರೂ ಈ ವಿಷಯ ಮಾತ್ರ ಮರೆತುಬಿಟ್ಟಿಲ್ಲ ಆಸಾಮಿ ಎಂದುಕೊಳ್ಳುತ್ತಲೇ ನನಗೆ ಮುಂದಿನ ಮಾತಿಗೆ ಪೀಠಿಕೆ ದೊರೆತಿತು.

"ಹೌದಲ್ಲೋ, ಆವತ್ತೂ ಹಾಗೆ ಕಂಬೈಂಡ್ ಕ್ಲಾಸಲ್ಲಿ ಕುಳತಿದ್ದೆವು. ಅಟೆಂಡರ್ ಒಂದು ಸರ್ಕ್ಯುಲರ್ ತಂದ. ಹಿಂದಿ ಪಠ್ಯದ ಧಾಟಿಯಲ್ಲೇ ನಮ್ಮ ಪಂಡಿತರು ಅದನ್ನೋದಿದರು" ಎನ್ನುತ್ತ ನನ್ನ ಸಹಪಾಠಿ ಮಿತ್ರನ ಮುಖವನ್ನೇ ನೋಡತೊಡಗಿದೆ, ಅದರಲ್ಲಿ ನನಗೆ ಬೇಕಾದ ಸುಳವೇನಾದರೂ ದೊರೆಯಬಹುದು ಎಂದು! ಆದರೆ ಹಾಗೇನೂ ನಡೆಯಲಿಲ್ಲ. .ಆತ ಬರಿದೆ ನನ್ನ ಮುಂದಿನ ಮಾತುಗಳನ್ನು ಕೇಳಲು ಉತ್ಸುಕನಾದಂತೆ ಕಂಡ ಅಷ್ಟೆ! ಉಪಾಯಗಾಣದೆ ಮುಂದುವರಿಯಬೇಕಾಯಿತು.

"ಅದೇ ಕಣೋ, ಆ ನೋಟೀಸ್‌ನಲ್ಲಿ ನಮ್ಮ ಕಾಲೇಜಿನ ವಿಧ್ಯಾರ್ಥಿನಿಯರಿಗೂ, ಉಡುಪಿಯ ಎಂ.ಜಿ.ಎಂ ಕಾಲೇಜಿನ ವಿದ್ಯಾರ್ಥಿನಿಯರಿಗೂ ಮರುದಿನ ಮಧ್ಯಾಹ್ನ ಮೂರು ಗಂಟೆಗೆ ಥ್ರೋ ಬಾಲ್ ಟೂರ್ನಮೆಂಟ್ ನಡೆಯಲಿದೆ. ಪ್ಲೇಯರ್ಸ್ ಲಿಸ್ಟ್ ಮತ್ತು ಅದರ್ ಡಿಟೈಲ್ಸನ್ನು ನೋಟೀಸ್ ಬೋರ್ಡ್‌ನಲ್ಲಿ ಹಾಕಲಾಗಿದೆ". ಮಾತು ಅಲ್ಲಿಗೇ ನಿಲ್ಲಿಸಿ ಈಗಲಾದ್ರೂ ಅವನಿಗೆ ಏನಾದ್ರೂ ಮತಿಯಲ್ಲಿ ಕಾಣಿಸಬಹುದೇ ಎಂದು ಕಾದೆ.

ಅರೆಕ್ಷಣ ಏನೂ ಬದಲಾವಣೆಯಿಲ್ಲ. ಆದರೆ ಈ ಬಾರಿ ಅವನು ತುಸು ಸಂಶಯಿತನಾದಂತೆ ಕಾಣಿಸಿತು. ನಾನು ಗಡಸು ಭಾವದಲ್ಲಿ ಮುಂದುವರೆದೆ. "ಆ ನೋಟೀಸ್ ಬಂದಾಗ, ನಾವು ಐದೂ ಜನ ವಿಧ್ಯಾರ್ಥಿನಿಯರು ಮುಂದಿನ ಬೆಂಚ್‌ನಲ್ಲೇ ಕುಳತಿದ್ದೆವು. ಸದಾ ನಮ್ಮ ರಕ್ಷಣೆಗೋ ಎಂಬಂತೆ ನೀವು ಹುಡುಗರು, ಬೇರೆ ಬಿ.ಎಸ್ಸೀ ಹುಡುಗರಿಗೆ ಅವಕಾಶವಾಗದಂತೆ ನಮ್ಮ ಬೆನ್ನ ಹಿಂದೆಯೇ ಕುಳತಿರುವುದು ನಮಗೆ ಮುಜುಗರದ ವಿಷಯವಾಗುತಿದ್ದರೂ ಉಪಾಯವಿಲ್ಲದೆ ಹಾಗೇ ಇರುತಿದ್ದೆವಾ, ಆಗಲೇ ಈ ನೋಟೀಸ್ ಬಂತು. ವಿದ್ಯಾರ್ಥಿನಿಯರಿಗೆ ಸಂಬಂಧಪಟ್ಟ ವಿಷಯ ಎಂದು ಪಿನ್ ಡ್ರಾಪ್ ಸೈಲೆನ್ಸ್‌ನಲ್ಲಿ ಎಲ್ಲರೂ ಕೇಳಸಿಕೊಂಡರು. ವಿಷಯ ಒಳಗಿಳಿಯುತಿದ್ದಂತೆ ಅಕಸ್ಮಾತ್ತಾಗಿ ಭಾರೀ ಗುಟ್ಟೆನ್ನುವಂತೆ ಅದೂ ನನ್ನ ಹಿಂದಿನಿಂದಲೇ ಒಂದು ಧ್ವನಿ ಕೇಳ ಬಂತು, "ಡು ಯು ನೋ.. ಹೂ ಈಸ್ ದ ಮ್ಯಾನೇಜರ್ ಟು ದಿಸ್ ಥ್ರೋ ಬಾಲ್ ಟೀಮ್??", ಪಕ್ಕದಲ್ಲಿದ್ದವ ಕೇಳರಬೇಕು,

ಅದನ್ನು ಕೇಳಸಿಕೊಂಡ ನಾನೂ, ಅಪ್ರಜ್ಞಾಪೂರ್ವಕವಾಗಿ ಹಿಂದೆ ತಿರುಗಿಬಿಟ್ಟಿದ್ದೆ! ಅದನ್ನು ಗಮನಿಸಿದ ನೀನು ನಿನ್ನ ಕಾಲರ್ ಎತ್ತಿ ಕುಣಿಸುತ್ತ, "ಮೀ.. ಹೂ ಎಲ್ಸ್... ಐ ಆ್ಯಮ್ ದ ಮ್ಯಾನೇಜರ್ ಟೇಕಿಂಗ್ ದೆಮ್ ಟು ಎಂ.ಜಿ.ಎಂ. ಟುಮಾರೋ" ಎಂದುಬಿಟ್ಟೆ. ನೀನು ಮೆತ್ತಗೆ ಎಂದುಕೊಂಡ ಮಾತು ಜಾಗಟೆ ಹೊಡೆದಂತೆ ಜೋರಾಗಿ ಹೊರಬಿದ್ದು ಇಡೀ ಕ್ಲಾಸೇ ಕೇಳಸಿಕೊಂಡಿತು. ನಮ್ಮ ಹಿಂದಿ ಪ್ರಾಚಾರ್ಯರಿಗೆ ಅದು ಕೇಳಸಿದರೂ ಏನೊಂದೂ ಪ್ರತಿಕ್ರಿಯಿಸಲಾಗದೆ ಹಾಗೇ ನಿಂತುಬಿಟ್ಟರು. ಆದರೂ ಆ ಮಾತಿನ ಅರ್ಥ ಆಗಿ ಗಾಬರಿಯಾದದ್ದು ನಾನು ಮಾತ್ರ!, ಯಾಕೆಂದರೆ ಆ ಥ್ರೋ ಬಾಲ್ ಟೀಮ್‌ನಲ್ಲಿ ನಾನೂ ಒಬ್ಬಳಾಗಿದ್ದೆ.

ನನ್ನ ಮಾತು ಮುಗಿಯುವಷ್ಟರಲ್ಲಿ ನನ್ನ ಸಹಪಾಠಿ ಮಿತ್ರ ತನ್ನ ಶರ್ಟ್ ಕಾಲರ್ ಎತ್ತಿ ಕುಣಿಸುತ್ತ, "ಹೌದೇನು! ಹಾಗೇನು?" ಎಂದು ನಾಟಕೀಯವಾಗಿ ಮಾತು ಹೊರಡಿಸಿದ.

"ಅಪ್ಪಾ..." ಎಂದು ಜೋರಾಗಿ ಕಿರುಚಿದ್ದು ಈಗ ಆತನ ನಲವತ್ತರ ಹೆಣ್ಣು ಮಕ್ಕಳು.

"ಅಷ್ಟಕ್ಕೇ ನಿಲ್ಲಲಿಲ್ಲ ನಿಮ್ಮಪ್ಪನ ಪ್ರತಾಪ! ಮರುದಿನ ಕಾಲೇಜಿನಿಂದ ಹೊರಟ ಥ್ರೋ ಬಾಲ್ ಟೀಂನ ಜತೆ, ಪಿ.ಟಿ. ಇನ್‌ಸ್ಟ್ರಕ್ಟರ್ ಅಲ್ಲದೆ ಇವನ ಸವಾರಿಯೂ ಇದ್ದದ್ದು ನಾವೆಲ್ಲಾ ಗರ್ಲ್ಸ್‌ಗಳಿಗೂ ಬಹಳ ಶಾಕ್ ಆಗಿ ಬಿಟ್ಟು, ನಾವು ಮ್ಯಾಚು ಸೋಲಲೂ ಕಾರಣವಾಯ್ತು"

"ಅಲ್ವೋ ಮಾರಾಯಾ, ಇವತ್ತು, 50 ವರ್ಷಗಳ ನಂತರವೂ ಈ ವಿಷಯ ನಂಗೆ ಫಝಲ್ ಆಗೇ ಉಳಿದಿದೆ. ಅದ್ಹೇಗೆ ನೀನು ಕ್ಲಾಸಿನಲ್ಲಿ ಕೊಚ್ಚಿಕೊಂಡಂತೆ ನಮ್ಮ ಟೀಮಿನ ಮ್ಯಾನೇಜರ್ ಆಗಿ ಬಂದದ್ದು?"

ಮರದ ಕುರ್ಚಿಯಲ್ಲಿ ಸದಾ ನೆಟ್ಟಗೇ ಕುಳಿತಿರಬೇಕಾದ ಅವನು, ಹೊಟ್ಟೆಯಿಂದುಕ್ಕಿ ಬರುವ ನಗುವನ್ನು ತಡೆದುಕೊಳ್ಳಲು ಭಾರೀ ಕಷ್ಟಪಡುತಿದ್ದರೂ, ಕಣ್ಣುಗಳು ಏನೊಂದೂ ಮುಚ್ಚಿಕೊಳ್ಳದೆ, ಎಂದಿನ ತುಂಟತನ ಚೆಲ್ಲುತ್ತಲೇ, "ಓ...ಹಾಗಾಗಿತ್ತಾ ಅಂದಿನ ಕಥೆ. ಅಂದು ನಿಮ್ಮೊಂದಿಗೆ ನಾನು ಬಂದಿದ್ದು ಮ್ಯಾನೇಜರನಾಗಿ ಅಲ್ಲ..! ನಾನು ಬಂದಿದ್ದು ಪೋರ್ಟರ್ ಆಗಿ. ನಿಮ್ಮ ಆಟದ ಥ್ರೋ ಬಾಲ್, ಗಾಳಿ ತುಂಬುವ ಪಂಪ್ ಮತ್ತು ನೆಟ್ ತುಂಬಿದ ಕಿಟ್‌ಬ್ಯಾಗ್ ಹೊತ್ತು ಬಂದದ್ದು! ಸರೀ ಎರಡು ದಿನದ ಮುಂಚೆ ಕ್ರಿಕೆಟ್ ಆಡುವಾಗ ನಾನು ಬ್ಯಾಟ್ ಬೀಸಿದ್ದು, ನಮ್ಮ ಸರ್ ಅವರ ಭುಜಕ್ಕೆ ಹೊಡೆದು, ಚೆನ್ನಾಗಿ ಪೆಟ್ಟಾಗಿಬಿಟ್ಟಿತ್ತು. ಅದಕ್ಕೇ ಫನಿಶ್‌ಮೆಂಟ್ ಎಂದು ನನಗೆ ಬಸ್ಸಿನಲ್ಲಿ ಬ್ಯಾಗ್ ಹೊತ್ತು ಬರುವ ಶಿಕ್ಷೆಯನ್ನೂ, ಪ್ರಿನ್ಸಿಪಾಲ್‌ಗೆ ತಿಳಿಸಬಾರದೆಂದೂ, ನನ್ನ ಬಸ್ ಚಾರ್ಜ್ ನಾನೇ ಹಾಕಿಕೊಂಡು ಬರಬೇಕೆಂದೂ, ಕಠಿಣ ಶಿಕ್ಷೆಯನ್ನೇ ಕೊಟ್ಟುಬಿಟ್ಟಿದ್ದರು. ಟು ಟೆಲ್ ಯು ದ ಟ್ರುಥ್... ಯಾರದ್ದೋ ಮಾತು ಕೇಳಿ, ಅಷ್ಟು ಚೆನ್ನಾಗಿ ಆಡುತಿದ್ದ ನನ್ನನ್ನು ಕಾಲೇಜ್ ಕ್ರಿಕೆಟ್ ಟೀಮಿನಿಂದಲೇ ಹಿಂದಿನ ದಿನ ಕಿತ್ತುಬಿಟ್ಟಿದ್ದರು. ಅದರ ಸಿಟ್ಟು ಬೇರೆ ನನ್ನಲ್ಲಿತ್ತು. ಹತ್ತಿರ ನಿಂತಿದ್ದು ನೋಡಿಯೂ ಬ್ಯಾಟ್ ಬೀಸಿಬಿಟ್ಟೆ. ಒಟ್ಟಿನಲ್ಲಿ ನೀವು ಸೋತರೂ ಮಜಾ ಮಾಡಿದ್ದು ನಾನಾಯಿತು" ಎಂದು ಮತ್ತೊಮ್ಮೆ ನಕ್ಕ.

ಈ ಬಾರಿಯೂ ಅವನ ಹೆಣ್ಣುಮಕ್ಕಳು, "ಅಪ್ಪಾ....." ಎಂದು ರಾಗ ಎಳೆದರು. 50 ವರ್ಷಗಳ ನಂತರವೂ ಬೇಸ್ತು ಬೀಳುವ ಪಾಡು ನನ್ನದ್ದೇ ಆಯಿತು.

***

ಎರಡು ಆತಂಕಕಾರಿ ಪ್ರಸಂಗಗಳು

– ನಾಗರತ್ನ ಚಂದ್ರಶೇಖರ್

ಪ್ರತಿದಿನ ಟಿವಿ ನೋಡುವವರಿಗೆ ಅನೇಕ ಚಾನೆಲ್‌ಗಳಲ್ಲಿ ಬಿತ್ತರಿಸುವ ಅನೇಕ ಅವಘಡಗಳು, ಅಪಘಾತಗಳು, ಅದರಲ್ಲಿ ಕೂದಲೆಳೆಯಷ್ಟು ಅಂತರದಲ್ಲಿ ಬಚಾವಾದವರ ದೃಶ್ಯಗಳನ್ನು ನೋಡಿದಾಗ ಮೈ ಝುಂ ಎನಿಸುತ್ತದೆ. ಮುಂದೆ ಏನಾಗಬಹುದು ಎನ್ನುವ ಆತಂಕ ಕೂಡ ಕೆಲವೊಮ್ಮೆ ನಿದ್ರೆಯನ್ನು ಕೆಡಿಸಬಲ್ಲವು. ಅಂತಹ ಎರಡು ಪ್ರಸಂಗಗಳ ಕುರಿತು ಈ ಲೇಖನದಲ್ಲಿ ನನ್ನ ಸ್ವಂತ ಅನುಭವವನ್ನು ತಿಳಿಸುವೆ.

ಇತ್ತೀಚೆಗೆ ನಾವು ಮಂಗಳೂರಿಗೆ ರೈಲಿನಲ್ಲಿ ಥ್ರೀ ಟಯರ್ ಕೋಚ್‌ನಲ್ಲಿ ಬುಕ್ ಮಾಡಿಸಿ ಪ್ರಯಾಣ ಮಾಡಿದೆವು. ನನ್ನದು, ಪತಿಯದು ಬೇರೆ ಬೇರೆ ಡಬ್ಬಿಗಳಾಗಿದ್ದವು. ನಾನಿದ್ದ ಡಬ್ಬಿಯ ರಾತ್ರಿ ಸಹ ಪ್ರಯಾಣಿಕರು ಸೇರಿ ಎಲ್ಲರೂ ಮಲಗುವ ಸಿದ್ಧತೆ ಮಾಡಿದೆವು. ಕೆಳಗಿನ ಬರ್ತ್ ನನ್ನದಾಗಿದ್ದು ಮಧ್ಯದಲ್ಲಿ ಒಬ್ಬ ಮಹಿಳೆ. ಅದರ ಮೇಲೆ ಆಕೆಯ ಪತಿಯ ಬರ್ತ್. ಆಕೆ ಮಲಗುವ ಹಲಗೆ ಒಂದು ಕಡೆ ಮಾತ್ರ ಲಾಕ್ ಆಗಿ ಮತ್ತೊಂದು ಭಾಗ ಏನು ಮಾಡಿದರೂ ಲಾಕ್ ಆಗದೆ ಹಾಗೆಯೇ ತೂಗಾಡತೊಡಗಿತು. ಕೆಳಗೆ ಮಲಗಬೇಕಾಗಿದ್ದ ನನಗೆ ಆಗಲೇ ಆತಂಕ ಶುರುವಾಯಿತು. ಹೇಗೋ ಮಾಡಿ ಅದನ್ನು ಸಿಕ್ಕಿಸಿದರೂ ರೈಲಿನ ಅಲುಗಾಟಕ್ಕೆ ಅದು ಮತ್ತೆ ಮತ್ತೆ ಸಡಿಲವಾಗಿ ಈಚೆಗೆ ಬರುತ್ತಿತ್ತು. ಅನೇಕ ಸಲ ಈ ಪ್ರಯತ್ನ ನಡೆದು ಯಶಸ್ವಿಯಾಗದೆ, ಆಕೆ ಸ್ವಸ್ತವಾಗಿ ಮೇಲೆ ಹೋಗಿ ಮಲಗೇಬಿಟ್ಟರು. ಮೂರನೆಯ ಬರ್ತಿನಲ್ಲಿ ಆಕೆಯ ಪತಿಯು ಕೂಡ 'ಏನೂ ಆಗುವುದಿಲ್ಲ, ಈ ರೀತಿ ಸಾಕಷ್ಟು ಬಾರಿ ಆಗಿದೆ, ಗಟ್ಟಿಯಾಗಿದೆ, ನೀವು ಧೈರ್ಯವಾಗಿ ಮಲಗಿ' ಎಂದು ಹೇಳಿ ಮೂರನೇ ಬರ್ತ್‌ಗೆ ಹೋಗಿ ಮಲಗಿಬಿಟ್ಟ. ಕೆಳಗೆ ತೂಗಾಡುತ್ತಿದ್ದ ಆ ಹಿಡಿಕೆಯನ್ನು ನಾನು ಭಯದಿಂದ, ಆತಂಕದಿಂದ ನೋಡುತ್ತಾ ಮಲಗುವುದಾದರೂ ಹೇಗೆ? ನನ್ನ ಎದುರಿನ ಮೂರು ಬರ್ತ್‌ಗಳಲ್ಲಿ ಏನೂ ಸಮಸ್ಯೆ ಇಲ್ಲದ್ದರಿಂದ ಅವರೆಲ್ಲ ಕೊಟ್ಟಿದ್ದ ರಗ್ಗು, ಬಿಳಿಯ ಬೆಡ್‌ಶೀಟ್ ಎಳೆದುಕೊಂಡು ಹಾಯಾಗಿ ಮಲಗಿಯೇ ಬಿಟ್ಟರು. ಎದುರಿಗಿದ್ದ ಕೆಳಗಿನ ಬರ್ತಿನ ತಾತನಿಗೂ ಸ್ವಲ್ಪ ಆತಂಕ ಶುರುವಾಗಿತ್ತೇನೋ. ಆತ ಸ್ವಲ್ಪ ಚಡಪಡಿಸುತ್ತಲೇ ಏನಾದರೂ ಯಾರನ್ನಾದರೂ ಕರೆದು ಇದನ್ನು ಸರಿ ಮಾಡಿಸಬೇಕು, ಕಂಪ್ಲೇಂಟ್ ಕೊಡಬೇಕು ಎಂದು ಅಲವತ್ತು ಕೊಂಡರು. ಮಧ್ಯದ ಬರ್ತ್ ಏನಾದರೂ ಕಳಚಿಕೊಂಡರೆ ನಾನೊಬ್ಬಳೇ ಅಪಘಾತದಲ್ಲಿ ಸಿಲುಕಿಕೊಳ್ಳುವುದರ ಜೊತೆಗೆ ಅವರಿಗೂ ಅಪಾಯ ಆಗುವ ಸಾಧ್ಯತೆಯಿತ್ತು.

ನಾನಂತೂ ತೂಗುವ ಕತ್ತಿಯ ಕೆಳಗೆ ತಲೆ ಇಟ್ಟು ಕೂತೇ ಇದ್ದೆ. ನಿದ್ದೆಯೂ ಬಾರದೆ, ಮಲಗಲು ಆಗದೆ ಮುಂದೆ ಆಗುವ ಅಪಾಯದ ಕಲ್ಪನೆಯ ಭೀಕರತೆಯನ್ನು ನೆನೆದು ಏನು ಮಾಡಲೂ ತೋಚದೆ ತಲೆ ಮೇಲೆ ಕೈಹೊತ್ತುಕೊಳ್ಳುವಂತಾಗಿತ್ತು. ಏನಾದರೂ ಆಗಲಿ ಒಂದು ಫೋಟೋ ಹಾಗೂ ವಿಡಿಯೋ ಮಾಡೇಬಿಡುವ ಎಂದು ನನ್ನ ಸೆಲ್ ಫೋನ್‌ನಿಂದ ಆ ದೃಶ್ಯವನ್ನು ಚಿತ್ರಕರಿಸಿ ಇಟ್ಟುಕೊಂಡೆ, ನನಗೆ ಏನಾದರೂ ಆಗಿ ಅಪ್ಪಚ್ಚಿ ಆದರೆ ಸಾಕ್ಷಿಗಾದರೂ ಇರಲಿ ಎಂದು. ಆದರೂ ನನಗೆ ನಗು ಬಂತು. ನಾನೇ ಇಲ್ಲದಾಗ ಸಾಕ್ಷಿ ಹೇಳುವವರಾದರೂ ಯಾರು ಎಂದು. ಗಂಟೆ 11.30 ಎಂದು ತೋರಿಸುತ್ತಿತ್ತು. ಒಂದೆರಡು ಬಾರಿ ಶೌಚಾಲಯಕ್ಕೆ ಹೋಗಿ ಬಂದಾಗಿತ್ತು. ಏನಾದರೂ ಆಗಲಿ, ಯಾರನ್ನಾದರೂ ಹುಡುಕಿ ಕಂಪ್ಲೇಂಟ್ ಆದರೂ ಕೊಡಲೇಬೇಕು ಎಂದು ನಿರ್ಧರಿಸಿ ಡಬ್ಬಿಗಳನ್ನು ದಾಟುತ್ತಾ ಕತ್ತಲೆಯಲ್ಲಿ ಹಾಗೆಯೇ ಮುಂದುವರೆದೆ. ನನ್ನ ಪುಣ್ಯಕ್ಕೆ ಕಪ್ಪು ಕೋಟ್ ಧರಿಸಿ ಟಿಕೆಟ್ ಚೆಕ್ ಮಾಡುತ್ತಿದ್ದ ಟಿ.ಸಿ. ಕಣ್ಣಿಗೆ ಬಿದ್ದಕೂಡಲೇ ಅವರತ್ತ ಧಾವಿಸಿ ಪರಿಸ್ಥಿತಿಯನ್ನು

ವಿವರಿಸಿದೆ. ಆತ 'ನಾನು ಬಂದು ಅದನ್ನು ಪರಿಶೀಲಿಸುವೆ' ಎಂದು ನನಗೆ ಭರವಸೆ ಕೊಟ್ಟರು. ನಾನು ಅವರ ನಿರೀಕ್ಷೆಯಲ್ಲಿ ಮತ್ತೆ ನನ್ನ ಸೀಟಿಗೆ ವಾಪಸ್ಸು ಹೋಗಿ ಕೂತಿದ್ದೆ ಬಂತು. ಅಂತೂ ಇಂತೂ 20 ನಿಮಿಷದ ನಂತರ ಆತ ಬಂದರು. ಮತ್ತೆ ಅದೇ ಪುನರಾವರ್ತನೆ 'ಏನೂ ಆಗುವುದಿಲ್ಲ ಮೇಡಂ, ನೀವು ಧೈರ್ಯವಾಗಿ ಮಲಗಿ ಇದು ೮೦೦ ಕೆಜಿ ಭಾರವನ್ನು ಕೂಡ ತಡೆಯುತ್ತದೆ. ಇದು ತುಂಬಾ ಹಳೆಯ ಕೋಚ್, ಆಗಿನ ಕಾಲದಲ್ಲಿ ಗಟ್ಟಿಮುಟ್ಟಾಗಿ ಮಾಡಿದ್ದು' ಎಂದು ಹೇಳತೊಡಗಿದರು ಏನಾದರೂ ಅವಘಡ ಸಂಭವಿಸಿದರೆ ಕೆಳಗೆ ಅಪ್ಪಚ್ಚಿಯಾಗಬೇಕಾದವಳು ನಾನಲ್ಲವೇ ಎಂದುಕೊಂಡು, 'ಇಲ್ಲಾ ನನಗೆ ನಿದ್ದೆ ಬರುವುದಿಲ್ಲ, ಏನಾದರೂ ಮಾಡಿ. ದಯಮಾಡಿ ನನಗೆ ಉಳಿದ ರಾತ್ರಿಯನ್ನು ನೆಮ್ಮದಿಯಿಂದ ಕಳೆಯುವಂತೆ ಮಾಡಿ' ಎಂದು ಕೈಮುಗಿದೆ. ಈಗ ಆತ ಆ ಚೈನನ್ನು ತಿರುಗಿಸಿ ತಿರುಗಿಸಿ ತಿರುಚಿ ಲಾಕ್ ಮಾಡಿಯೇ ಬಿಟ್ಟರು. ನಾನು ಹೇಳಿದೆ 'ಸರ್, ಇದರ ವಿಡಿಯೋ ಮಾಡಿದ್ದೆ. ಏನಾದರೂ ಹೆಚ್ಚು ಕಡಿಮೆಯಾದರೆ ಇರಲಿ' ಎಂದಾಗ ಆತ ನಕ್ಕುಬಿಟ್ಟರು. ನನಗೂ ನಗು ಬಂದಿತು.

ಆದರೆ ಆತಂಕಕಾರಿಯಾದ ಆ ರಾತ್ರಿಯ ನೆನಪು ಮಾತ್ರ ಇನ್ನೂ ಹಸಿಯಾಗಿದೆ. ಆ ನೇತಾಡುವ ಹಿಡಿಕೆಯ ವೀಡಿಯೋ ಈಗಲೂ ನನ್ನ ಬಳಿ ಇದೆ. ಕಂಪ್ಲೆಂಟ್ ಕೊಡುವ ಆಲೋಚನೆ ಮುಂದೆ ಎಂದಾದರೂ ಬಂದರೆ ಇರಲಿ ಎಂದು.

ಇನ್ನೊಂದು ಪ್ರಕರಣದಲ್ಲಿ ನಾವು 2019ರಲ್ಲಿ ಅಮೆರಿಕದಲ್ಲಿದ್ದ ಮಗಳ ಮನೆಗೆ ಭೇಟಿ ನೀಡಲು ಮೂರು ವಿಮಾನಗಳನ್ನು ಬದಲಾಯಿಸಿ ಹೋಗಬೇಕಿತ್ತು, ಬೆಂಗಳೂರಿನಿಂದ ಲಂಡನ್, ಲಂಡನ್ನಿಂದ ಚಿಕಾಗೋ, ಚಿಕಾಗೋದಿಂದ ಡಲ್ಲಾಸ್. ಸುಮಾರು 30ಕ್ಕಿಂತ ಹೆಚ್ಚು ಗಂಟೆಗಳ ಈ ಪ್ರಯಾಣದಲ್ಲಿ ಕೈಕಾಲುಗಳೆಲ್ಲ ಸೋತು ಹೋಗಿದ್ದವು ಎನ್ನಬೇಕು. ಚಿಕಾಗೋ ಸೇರಿದಾಗ ರಾತ್ರಿ 11 ಗಂಟೆ. ಅಲ್ಲಿಂದ ಡಲ್ಲಾಸ್ ಒಂದು ಗಂಟೆ ಪ್ರಯಾಣ. ಹಾಯಾಗಿ ಕಾಲು ನೀಡಿಕೊಂಡು ಮಲಗಿದರೆ ಸಾಕು ಎನಿಸುವಷ್ಟು ಆಯಾಸ ಎರಡು ವಿಮಾನ ಬದಲಾಯಿಸುವಷ್ಟರಲ್ಲಿ ಆಗಿತ್ತು. ಈ ಮೂರನೇ ಪ್ರಯಾಣದಲ್ಲಿ ನಿಶ್ಚಿತವಾದ ಸೀಟುಗಳು ಇರಲಿಲ್ಲವಾಗಿ ಎಲ್ಲಿ ಬೇಕಾದರೂ ಕೊಡಬಹುದಿತ್ತು. ಹಾಗೆ ನೋಡುತ್ತಾ ಹೋಗುವಾಗ ವಿಶಾಲವಾದ ಎರಡು ಸೀಟುಗಳ ಮಧ್ಯದ ಭಾಗ ಗೋಚರಿಸಿ, ಅಬ್ಬ ಎಂದು ಅಲ್ಲಿ ಹೋಗಿ ಕೂತೆವು.

ವಿಮಾನ ಇನ್ನೇನು ಹೊರಡುವುದರಲ್ಲಿತ್ತು. ಗಗನಸಖಿ ಒಂದು ಬಣ್ಣದ ಫೋಲ್ಡರ್ ಹಿಡಿದು ಬಂದಳು. ಅದನ್ನು ನಮಗೆ ಓದಬೇಕೆಂದು ಕೊಟ್ಟಳು ಹಾಗೂ ಅದನ್ನು ಓದಿ ನಾನು ಸಹಿ ಮಾಡಬೇಕಿತ್ತು. ನಾವು ಕುಳಿತಿದ್ದ ಜಾಗ, ತುರ್ತು ನಿರ್ಗಮನದ ಸಮಯದಲ್ಲಿ ಅಲ್ಲಿ ಕುಳಿತವರು ಒಳಗಿದ್ದವರಿಗೆ ಸಹಾಯ ಮಾಡಬೇಕಾದ ನಿಯಮಗಳ ಬಗ್ಗೆ ಅದರಲ್ಲಿ ವಿವರಗಳಿದ್ದವು. ಅದು ತುರ್ತು ನಿರ್ಗಮನದ ಬಾಗಿಲು ಇದ್ದ ಜಾಗ. ಅಲ್ಲಿ ಕುಳಿತುಕೊಳ್ಳಲು ಅಭ್ಯಂತರವಿರಲಿಲ್ಲ ಆದರೆ ನಿಯಮವನ್ನು ಪಾಲಿಸಬೇಕಿತ್ತು ಅಷ್ಟೇ. ನಾವೇ 70 ವರ್ಷದ ಹಿರಿಯ ನಾಗರಿಕರು. ಸುಸ್ತಾಗಿದ್ದ ನಮಗೇ ಯಾರಾದರೂ ಸಹಾಯ ಮಾಡಬೇಕೆಂದು ಬಯಸುತ್ತಿದ್ದ ಸ್ಥಿತಿಯಲ್ಲಿದ್ದವರು. ಇನ್ನು ಉಳಿದವರನ್ನು ನಾವು ಹೊರಗೆ ಎಳೆದು ಹಾಕಬಲ್ಲವೆ ಎಂಬ ಅನುಮಾನ ಸಹಜವಾಗಿತ್ತು. ನಮ್ಮ ಜೀವಕ್ಕಿಂತ ಉಳಿದವರ ಜೀವ ಉಳಿಸುವ ಮನೋಧರ್ಮ ಇರಬೇಕು ಅಲ್ಲವೇ. ಆದರೆ ವಿಮಾನ ಏನಾದರೂ ಅಪಘಾತಕ್ಕೀಡಾದರೆ ಒಳಗಿದ್ದವರನ್ನು ಹೊರಗೆ ದೂಡುವಷ್ಟು ಶಕ್ತರೇ ನಾವು ಎಂಬ ಅನುಮಾನ ಕಾಡಿತ್ತು. ಯಾಕೋ ಇದೊಂದು ಧರ್ಮಸಂಕಟ ಎನಿಸಿತು. ಆದರೆ ಅದನ್ನು ಹೇಳುವುದು ಹೇಗೆ. ನಾವು ನೋಡಲು

ಬಹಳ ಸಬಲರಂತೆ ಕಾಣುತ್ತಿದ್ದೆವು .ಪ್ಯಾಂಟು ಶರ್ಟು ಹಾಕಿಕೊಂಡಿದ್ದ ನಾನು ಗಟ್ಟಿ ಮುಟ್ಟಾದ ವ್ಯಕ್ತಿಯಂತೆ ಅವಳಿಗೆ ತೋರುತ್ತಿರಬಹುದು. ನನ್ನನ್ನು ಆಕೆ ಅಂಜುಪುರಿಕಿ ಎಂದು ಭಾವಿಸಬಾರದು ಎಂಬ ಧೈರ್ಯದಿಂದ ಅವಳು ಹೇಳಿದ ಎಲ್ಲಾ ನಿಯಮಗಳಿಗೆ ಒಪ್ಪಿಕೊಂಡೆ. ಒಳ ಮನಸ್ಸಿನಲ್ಲಿ ಯಾವುದೋ ಆತಂಕ ದೇವರೇ ಯಾವುದೇ ಅನಾಹುತ ಆಗದಿರಲಿ ಎಂದು ದೇವರನ್ನು ಧ್ಯಾನ ಮಾಡುತ್ತಲೇ ಒಂದು ಗಂಟೆ ಕಳೆದುಬಿಟ್ಟೆ.

ಅಂತೂ ಇಂತೂ ವಿಮಾನ ಸುರಕ್ಷಿತವಾಗಿ ನೆಲ ಮುಟ್ಟಿದ ಮೇಲಷ್ಟೇ ನಿಟ್ಟುಸಿರು ಬಿಟ್ಟು, ಅಬ್ಬ ಬಚಾವಾದೆ ಎಂದುಕೊಂಡೆ. ಇನ್ನೆಂದೂ ಇಂತಹ ಸಾಹಸ ಮಾಡಬಾರದು. ಬದುಕಿದೆಯಾ ಬಡಜೀವವೇ ಎಂದು ಕಾಲೆಳೆಯುತ್ತಾ ಆ ಮಧ್ಯರಾತ್ರಿ ಮಗಳನ್ನು ಅರಸುತ್ತಾ ನಿಲ್ದಾಣದಿಂದ ಹೊರ ಬಂದೆವು.

***

ಮಾತು–ಮೌನ

– ಮಾಲತಿ ಶ್ರೀನಿವಾಸನ್

ಮಾತು ಹಿತವೆನಿಸದು ಒಮ್ಮೊಮ್ಮೆ
ಆಂತರ್ಯದ ತುಡಿತಕೆ, ಮೌನ
ಹತ್ತಿರವಾಗುವುದು ನೆಮ್ಮದಿಯ
ಅರೆಸುವ ಮನಕೆ.

ಶರಣರ ವಚನ ದಾಸರವಾಣಿ, ಗೀತಾರ್ಥ
ತತ್ವಬೋಧೆ, ಏನ ಕೇಳಿದರೇನು, ಮನ
ಚಂಚಲ, ಪರಕಿಸದೆ ಬಿಡದು ಪ್ರತಿ ಪದವ.
ಮಾತು ಮಥಿಸಿದಷ್ಟು ಮಸ್ತಕದಿ ಬರಿ
ಗೊಂದಲ.

ಕ್ಷಣ ಭಂಗುರದ ಬಾಳು, ಸುತ್ತ ಮಾಯಾ–
ಲೋಕ, ಶಬ್ದ ಸ್ಪರ್ಶ,ರಸಗಂಧಗಳ ಸೆಳೆತ
ದೂರಾಗಿಪುದೆ ಮಾತಿನಾ ಮೋಡಿ?
ಮನಕೆ ಅರಿವು ಮೂಡವುದೇ
ಮಬ್ಬು ಸರಿಸಿ ತೋರುವುದೇ ನಿಜಸತ್ಯ–
ಜಗಮಿಥ್ಯ.

ದಶಕಗಳಲಿ ತತ್ವಗಳ, ನೀತಿಕಥೆಗಳ ಗಾಥೆ
ಆಲಿಸಿದ ಮನ ಇಂದು ಗಮ್ಯ ತಲುಪಲು
ಬದ್ಧ, ಮೌನಕೆ ತಲೆಬಾಗಲು ಸಿದ್ಧ.
ಆತ್ಮಾವಲೋಕನದ ಕಾಲ,
ಆಲಸಲಿದೆ ಮೌನದಲಿ ಅಂತರಾಳದ
ತಾಳ.

***

ಬೇಡಿಕೆ

– ಮಾಲತಿ ಶ್ರೀನಿವಾಸನ್

ಪುಟ್ಟ ಕಂದನ ತೋಳು ಕತ್ತ ಬಳಸಿರಲು
ಅಜ್ಜಿಯ ಲಾಲಿ ಕೇಳುತ್ತಾ ತಬ್ಬಿ ಮಲಗಿರಲು
ತುಟಿಯಂಚಿನಲಿ ಕಂಡಿತ್ತು ನಗೆಯ ಲೇಪ

ಅದಾವ ಕನಸಿನ ಲೋಕಕೊ
ಜಾರಿತ್ತು ಮನಸು
ಕೇಳಿತ್ತು ಮೌನದಲಿ ಸುತ್ತಲೂ
ಪ್ರೀತಿ ವಾತ್ಸಲ್ಯ ಮಧುರ ಗಾನ
ಮುದ್ದು ಕಂದನ ಮೋರೆ ನೋಡಿ
ಬೇಡಿತ್ತು ವರವನ್ನ

'ಈ ರಾತ್ರಿ ಸರಿಯದಿರಲಿ
ಆಗಸದ ಚಂದ್ರಮ ಮರೆಯಾಗದಿರಲಿ
ಸಮಯ ಓಡದೆ ನಿಂತೇ ಇರಲಿ
ಈ ಪ್ರೀತಿಯ ಬೆಚ್ಚನೆಯ ಭಾವದಲಿ
ದಶಕಗಳ ಏಳುಬೀಳುಗಳ
ದಣಿವು ದೂರವಾಗಲಿ'

'ನಾನು ಹೊರಡುವ ಮುನ್ನ
ಈ ಸಿಹಿನಿದ್ರೆ ಸವಿ ಇನ್ನಷ್ಟು
ಮನದಾಳಕಿಳಿಯಲಿ
ನೆಮ್ಮದಿಯ ಭಾವ ಸ್ಪುರಿಸಿ'

***

ಲಲಿತ ಪ್ರಬಂಧ

ಮುದ್ದಣ ಮನೋರಮೆ ಮುದ್ದೆ ತಿರುವಿದ್ದು

- ಡಾ. ಶುಭಶ್ರೀ ಪ್ರಸಾದ್

"ಕಂದಾ.. ಮುದ್ದಣ್ಣ ಏನ್ ಮಾಡ್ತಿದ್ಯೋ?" ಅಂತಾನೋ, "ಎಲ್ಲಿ ಏಡಿ? ಏನ್ ಮಾಡ್ತಿದಾರೇ?? ಅಂತಾನೋ, ಪಪ್ಪಾ ಫೋನ್ ಮಾಡಿದಾಗಲೆಲ್ಲ 'ನಮ್ಮ ಇವರನ್ನು' ವಿಚಾರಿಸಿಕೊಳ್ತಾ ಇರ್ತಾರೆ. ನಮ್ಮಿಬ್ಬರನ್ನು ರೇಗಿಸೋದು ಅಂದ್ರೆ ಪಪ್ಪಂಗೆ ಬಲು ಇಷ್ಟ. ಗಾಬರಿಯಾಗ್ಬೇಡಿ, ಏಡಿ ಅನ್ನೋದು ಕನ್ನಡದ ಏಡಿ ಅಲ್ಲ. ಇಂಗ್ಲೀಷ್ ಏ.ಡಿ. ಅಂದರೆ ಅಳಿಯ ದೇವರು.

ಪಪ್ಪ ಹಾಗನ್ನೋಕೂ ಒಂದು ಕಾರಣ ಇದೆ. ನಾನು ನನ್ನ ಗಂಡ ಒಬ್ಬರನ್ನೊಬ್ಬರು ರೇಗಿಸಿಕೊಳ್ತಾ ಸದಾ ಏನೋ ಹರಟೆ ಹೊಡಿತಾನೇ ಇರ್ತೀವಿ. ಬೆಳಗ್ಗೆ ಎದ್ದಾಗಿನಿಂದ ಗಡಿಯಾರ 8.30 ತೋರಿಸುವತನಕ ಕಾಫಿ ಹೀರುತ್ತ, ಪೇಪರ್ ಓದುತ್ತ, ನ್ಯೂಸ್ ನೋಡುತ್ತ, ಹರಟೆ ಹೊಡೆಯುತ್ತ, ಮಧ್ಯೆ ಮರ್ಧಯೆ ಮೊಬೈಲ್ ತಿವಿಯುತ್ತ ಕಾಲ ಕಳೆಯುತ್ತೀನಿ. 'ಟೈಮ್ ನೋಡಿದ್ಯಾ?' ಅಂತ ಅವರು ಎಚ್ಚರಿಸುವ ತನಕ ಕಾಲದ ಎಚ್ಚರವೇ ಇಲ್ಲದೆ ಆಮೆಯ ಗತಿಯಿಂದ ಇರುತ್ತೇನೆ. ಹಾಗಂದ ತಕ್ಷಣ ಗಡಬಡಿಸಿ ಎದ್ದು ಜಿಂಕೆಮರಿಯಂತೆ ಛಂಗನೆ ಜಿಗಿಯುತ್ತ, ಓಡುತ್ತಾ ಗಡಿಯಾರಕ್ಕೆ ಕಾಂಪಿಟೇಟರೇನೋ ಅನ್ನೋ ಹಾಗೆ ದಡಬಡಿಸುತ್ತೇನೆ. ಪ್ರತಿದಿನ ಗಂಟೆಗಟ್ಟಲೆ ಅದೇನು ಹರಟುತ್ತೇವೋ ಗೊತ್ತಿಲ್ಲ. ಯೋಚಿಸಿದರೆ ನನಗೆ ಅಚ್ಚರಿ.

ಅದೊಂದು ದಿನ ರಜನಿ ಮೇಡಂ ಕೂಡ ನಮ್ಮ ಹರಟೆಯ ವಿಷಯಕ್ಕೆ 'ನೀವು ದಂಪತಿಗಳು ಮುದ್ದಣ ಮನೋರಮೆಯರ ಹಾಗೆ ಇರಿ' ಅಂತ ಹಾರೈಸಿದರು.

ಅರೆ, ಎರಡೆರಡು ಬಾರಿ ಮುದ್ದಣ ಮನೋರಮೆಯರ ಪ್ರಸ್ತಾಪ ಬಂದಮೇಲೆ ನಾವು ಹಾಗೆಯೇ ಏನೋ ಅಂತ ನನಗೆ ಡೌಟ್ ಬಂತು, ನಗೂನೂ ಡೌಟೇನೂ ಇಲ್ಲ ಬಿಡಿ, ಹಾಗೇ ಇರ್ತೀವಿ. ಒಂದೊಂದು ಸಲ ಮಾತ್ರ ಬೆಕ್ಕು ನಾಯಿಗಳಾಗೋದು. ಅದು ಹೇಗೋ ಮಾತಿನಲ್ಲಿ ನನ್ನ ಗೆಳತಿ ಸ್ವಾತಿಗೂ ಮುದ್ದಣ ಮನೋರಮೆ ಅನ್ನೋ ಬಿರುದು ಗೊತ್ತಾಗಿಹೋಗಿತ್ತು. ಹೆಣ್ಣು ಮಕ್ಕಳ ಬಾಯಲ್ಲಿ ಮಾತು ನಿಲ್ಲುವುದೇ? ಅವರಿಂದ ಅವರ ಪತಿ ಸುರೇಶ್ ಅವರಿಗೂ ಮುದ್ದಣ ಮನೋರಮೆ ಎಂಬ ಬಿರುದು ಗೊತ್ತಾಯಿತು ಅಂತ ಬೇರೆ ಹೇಳಬೇಕೇ.

ನನ್ನ ಗಂಡನ್ನ ನಾನು ರೀ ಅಂತಾನೂ ಕರೀತೀನಿ, ಕೋಪ ಬಂದಾಗ ಅರಿ ಅಂತಾನೂ ಕರೀತೀನಿ. ಪ್ರೀತಿ ಉಕ್ಕಿದಾಗ "ಗುಬ್ಬಿ" ಅಂತೀನಿ. ಅದು 'ಹಬ್ಬಿ'ಯ ಮತ್ತೊಂದು ವರ್ಷನ್ ಅನ್ನೋದು ನನ್ನ ಮುದ್ದುವಾದ. 'ಗುಬ್ಬಚ್ಚಿ ಗೂಡಿನಲ್ಲಿ ಕದ್ದು ಮುಚ್ಚಿ ಆಡೋಣ ನಾನು ನೀನು ಕುಚಿಕುಚಿ' ಹಾಡನ್ನು ಗುಬ್ಬಿ ಜೊತೆ ಇದ್ದಾಗ ಹಾಡಿದರೆ ಅದರ ವಿಷಯ, ಇಂಪ್ಯಾಕ್ಟೇ ಬೇರೆ ಅನ್ನಿ. ಮುದ್ದೆ ವಿಷಯ ಕೈಬಿಟ್ಟು ಮುದ್ದಿನ ವಿಷಯಾನೇ ಹೇಳ್ತದೀನಲ್ಲಾ.

ಮಂಡ್ಯ ಹೇಳಕೇಳೀ ರೈತರ ಭೂಮಿ. ಮೈಮುರಿದು ದುಡಿಯುವ ಮಂದಿಗೆ ಚೂಪುಗಾರಿಕೆಯ ಅನ್ನ, ಸಾರು ಸರಿಹೊಂದುವುದಿಲ್ಲ ಅವರಿಗೆ ಗಟ್ಟಿ ರಾಗಿ ಮುದ್ದೆ, ಉಪ್ಪೆಸ್ರು, ತಂಗಳನ್ನ, ತಂಪಾದ ಮಜ್ಜಿಗೆ ಬೇಕು. ಬೆಳ್ಗಂ ಬೆಳಗ್ಗೆಯೇ ಪಟ್ಟಾಗಿ ರಾಗಿ ಮುದ್ದೆ ಬಾರಿಸಿ ಹೊಲ ಗದ್ದೆಗೆ ಹೋದರೆ. ಸಂಜೆಯ ತನಕ ಉಂಡ ಮುದ್ದೆ ಕರಗಲ್ಲ . ರಟ್ಟೆ ತುಂಬಾ ಶಕ್ತಿಯೂ ಇರುತ್ತಂತೆ. ನಮ್ಮಜ್ಜಿ ಹೇಳ್ತಿದ್ರು 'ರಟ್ಟೆ ಮುರಿಯಾ ದುಡೀ, ಹೊಟ್ಟೆ ತುಂಬಾ ತಿನ್ಬೇಕು' ಅಂತ. ಈಗ ನಾವು ಹೊಟ್ಟೆ ತುಂಬಾ ತಿನ್ನೋದೂ ಇಲ್ಲ, ರಟ್ಟೆ ಮುರಿಯೋ ಹಾಗೆ ದುಡಿಯೋದೂ ಇಲ್ಲ. ನಾಲಗೆ ರುಚಿ ತಿನ್ನೋದು, ಶೋಕಿ ಮಾಡೋದು, ಎ.ಸಿ ಕೆಳಗೆ ತಣ್ಣಗೆ ಕಂಪ್ಯೂಟರ್ ಎದುರು ಕೂತು ಕೂತು ಕಣ್ಣು ತೂತು ಮಾಡ್ಕೊಂಡು 'ಮಧ್ಯಪ್ರದೇಶ'ಕ್ಕೆ ಕೊಬ್ಬು ಸೇರಿಸ್ತಾ, ಖಾಯಿಲೆ ಕಸಾಲೆ ಬಂದಮೇಲೆ ಬೆವರು ಸುರಿಸೋಕೆ ಅಂತ ನಾಲ್ಕು ಗೋಡೆಗಳ ಒಳಗೆ ಮಿಷಿನ್ ತುಳಿತಾ ಬದುಕನ್ನು ಸವೆಸ್ತೀವಿ.

ಆದರೆ ರೈತಾಪಿ ವರ್ಗದವರು ಹಾಗಲ್ಲ. ಬಿಸಿಲೋ, ಮಳೆಯೋ, ಚಳಿಯೋ ನಮಗೆ ಅನ್ನ ಕೊಡೋಕೆ, ಅವರ ಅನ್ನ ಹುಟ್ಟಿಸಿಕೊಳ್ಳೋಕೆ ದುಡಿತಾರೆ. ಅವರ ಮುದ್ದೆಯ ಹಾಗೆ ಅವರೂ ಗಟ್ಟಿಮುಟ್ಟು. ರಾಗಿಮುದ್ದೆ ಗೋಡೆಗೆ ಹೊಡೆದರೆ ಚೆಂಡಿನ ಹಾಗೆ ಪುಟಿಯಬೇಕು ಅನ್ನೋದು ಹಿಂದಿನವರ ಮಾತು.

ನಮ್ಮ ಮನೆಗಳಲ್ಲಿ ರಾಗಿಮುದ್ದೆ ಹೆಚ್ಚು ಜನಪ್ರಿಯವಲ್ಲ. ಅಕ್ಕಿ ರೊಟ್ಟಿ, ಚಪಾತಿ, ದೋಸೆ, ಇಡ್ಲಿ, ಶಾವಿಗೆ ಅಂತ ಕಣ್ಣು ನಾಲಗೆಗೆ ತಂಪಾಗುವ ರುಚಿ ರುಚಿ ತಿಂಡಿಗಳನ್ನು ಮಾಡಿಕೊಂಡು ತಿನ್ತೀವಿ.

ಆದ್ರೆ ಒಂದು ದಿನ ಇದ್ದಕ್ಕಿದ್ದ ಹಾಗೆ 'ರೀ ನಾವು ರಾಗಿ ಮುದ್ದೆ ತಿನ್ನೋಣ ಇನ್ಮೇಲೆ? ತುಂಬಾ ಒಳ್ಳೇದಂತೆ. ಡೆಲ್ಲಿಯ ಫೈವ್ ಸ್ಟಾರ್ ಹೋಟೆಲಲ್ಲೂ ಪಿಎಂ. ದೇವೇಗೌಡ್ರ ಪ್ರಭಾವದಿಂದ ರಾಗಿ ಬಾಲ್ ಮಾಡ್ತಿದಾರಂತೆ' ಅಂತ ಹೊಸ ರಾಗ ತೆಗೆದೆ. ಇವರಿಗೆ ನನ್ನ ವಿಷಯ ಗೊತ್ತು. ಹೊಸತರಲ್ಲಿ ಶಸ್ತ್ರಾಭ್ಯಾಸ ಮಾಡಿ ಯುದ್ಧದ ಹೊತ್ತಿಗೆ ಸುಸ್ತಾಗಿ ಮರೆಯೋ ಪ್ರಾಣಿ ನಾನು ಅಂತ. ಆದರೂ ನನ್ನ ಉತ್ಸಾಹಕ್ಕೆ ತಣ್ಣೀರೆರೆಚಬಾರದು ಅಂತಲೂ ಅವರಿಗೆ ಗೊತ್ತು. ಇಲ್ದಿದ್ರೆ, ಜನ್ಮ ಪೂರ್ತಿ 'ನೀವು ಹೂಂ ಅನ್ಲಿಲ್ಲ, ಅದಕ್ಕೇ ನಾನು ಕಲಿಯಕ್ಕಾಗ್ಲಿಲ್ಲ. ಇಲ್ದಿದ್ರೆ ನಾನೂ ರಾಗಿಮುದ್ದೆ ಮಾಡಿ ತಿಂದು ಸಣ್ಣಕ್ಕೂ, ಗಟ್ಟಿಮುಟ್ಟಾಗಿಯೂ ಇರ್ತಿದ್ದೆ. ನಾ ಹೀಗೆ ಡುಮ್ಮ ಆಗಿರುವುದಕ್ಕೆ ನೀವೇ ಕಾರಣ' ಅಂತ ಅವರ ತಲೆಯ ಮೇಲೆ ಸುಲಭವಾಗಿ ಗೂಬೆ ಕೂರಿಸಿ ಬಿಡ್ತೀನಿ ಅನ್ನೋ ಭಯವೂ, ಎಚ್ಚರಿಕೆಯೂ ಅವರಿಗಿದೆ. ಅದಕ್ಕೇ 'ಮಾಡಮ್ಮ ತಾಯಿ, ಅದೇನ್ ಬೇಕು ನಿಂಗೆ ಅದನ್ನು' ಅಂತ ಜಾರಿಕೊಂಡರು.

ಸರಿ ಎರಡು ದಿನ ಅದಕ್ಕೆ ಸಂಶೋಧನೆ ಆಯ್ತು. ಬ್ಯಾಂಕಿಗೆ ಬಂದ ಹಳ್ಳಿ ಹೆಂಗಸರ ಬಳಿ ಮುದ್ದೆ ಮಾಡುವ ಬಗೆಯನ್ನು ಕೇಳದ್ದೂ ಆಯ್ತು. ಅವರು ನನ್ನನ್ನು ಝೂ ಪ್ರಾಣಿಯ ತರಹ ನೋಡಿದ್ದೂ, ಪಾಪ ಬ್ಯಾಂಕ್ ಮೇಡಮ್ಮು ಅಂತ ಪಾಠ ಹೇಳಿ ಕೊಟ್ಟಿದ್ದೂ ಆಯ್ತು. ದಿನಕ್ಕೆ ಮೂವತ್ತು ನಲವತ್ತು ಮುದ್ದೆ ಮಾಡುವ ಅವರು ಎರಡು ತಲೆಯ ಒಂದು ಮರದ ಕವಲನ್ನು ಬಳಸಿ, ದೊಡ್ಡ ಪಾತ್ರೆ ಅಲುಗಾಡದಂತೆ ಹಿಡಿದು ದಪ್ಪ ಕೋಲಿನಿಂದ ಮುದ್ದೆ ತಿರುವುತ್ತಾರೆ. ನಾನೆಲ್ಲಿಂದ ತರಲಿ ಅದನ್ನು? ಯಜಮಾನರಿಗೆ ದುಂಬಾಲು ಬಿದ್ದು ಕಲ್ಲು ಹೊಡೆಯುವ ಕ್ಯಾಟರ್‌ಪಿಲ್ಲರ್ ತರಿಸಿ ಯುದ್ಧಕ್ಕೆ ಹೋಗುವ ಹೊಸ ಬಿಲ್ಲಾಳಿನಂತೆ ತಯಾರಾದೆ. ಮುದ್ದೆ

ಮಾಡಲು ಬಾರದ ನನ್ನ ಸಿಟಿಯ ಗೆಳತಿಯರಿಗೆಲ್ಲಾ ವಾಟ್ಸಾಪಿನಲ್ಲಿ ನಾ ಮುದ್ದೆ ಮಾಡುವ ಚಿತ್ರ ವಿಡಿಯೋ ಕಳಿಸಿ ಸೈ ಎನಿಸಿಕೊಳ್ಳುವ ಹುಚ್ಚು ಬಯಕೆ ಹತ್ತಿತ್ತು

ಅಂದು ಬೆಳಗ್ಗೆಯಿಂದಲೇ ಹೊಸ ಉತ್ಸಾಹ. ಉಪ್ಪೆಸ್ರು, ಬೆಳ್ಳುಳ್ಳಿ ನಂಗೆ ಸೇರದು. ಹಾಗಾಗಿ ನಮ್ಮ ಮಾಮೂಲಿನ ದಂಟಿನ ಸೊಪ್ಪಿನ ಹುಳಿಗೇ ಮುದ್ದೆ ಮಾಡುವುದೆಂದು ಹಿಂದಿನ ರಾತ್ರಿಯೇ ನಿರ್ಧಾರವಾಗಿತ್ತು. ಹತ್ತಕ್ಕೆ ಬ್ಯಾಂಕಿಗೆ ಹೊರಡಬೇಕು. ಒಂಭತ್ತಕ್ಕೆ ಗಟ್ಟು ಹೊಡೆದ ಪಾಠವನ್ನು ಒಪ್ಪಿಸುವವಳಂತೆ ಮುದ್ದೆ ಶುರುಮಾಡಿದೆ. ನೀರು ಕುದಿಯುವಾಗ ರಾಗಿ ಹಿಟ್ಟು ಹಾಕಿ, ಕೋಲಿನಲ್ಲಿ ತಿರುವಲು ಆರಂಭಿಸಿದೆ. ಅಯ್ಯೋ ನೀರಿನಲ್ಲೆಲ್ಲಾ ನೂರಾರು ಪುಟ್ಟ ಪುಟ್ಟ ಗಂಟುಗಳು ಸಿಡುಬಿನಂತೆ ಜನ್ಮತಾಳಿದವು. ದಿಗ್ಭ್ರಾಂತಳಾಗಿ 'ರೀ' ಅಂತ ಕೂಗಿಕೊಂಡೆ. ಅವರೂ ಬಂದರು. ಏನು ಮಾಡಿದರೂ ಗಂಟು ಕರಗಲಿಲ್ಲ. ಮುದ್ದೆ ಆಗುತ್ತೋ ಇಲ್ವೋ ಅನ್ನೋದೇ ಅನುಮಾನವಾಯ್ತು. ಒಬ್ಬರು ಇಕ್ಕಳದಿಂದ ಪಾತ್ರೆಯನ್ನು ಗಟ್ಟಿಯಾಗಿ ಹಿಡಿದುಕೊಂಡ್ರೆ, ಇನ್ನೊಬ್ಬರು ಎರಡೂ ಕೈಯಿಂದ ಕೋಲನ್ನು ರಾಗಿ ಗಂಟುಗಳ ಮೇಲೆ ಪ್ರಹಾರ ಮಾಡುತ್ತ, ಇಬ್ಬರೂ ಏದುಸಿರು ಬಿಡುತ್ತಾ ಅದನ್ನು ಸಂಹಾರ ಮಾಡಲು ಪ್ರಯತ್ನ ಮಾಡುತ್ತಿದ್ದೆವು.

ಈ ಗಡಿಬಿಡಿಯಲ್ಲಿ ಬಾಗಿಲ ಚಿಲಕ ಹಾಕಿರಲಿಲ್ಲವಲ್ಲಾ. ಗೃಹಪ್ರವೇಶಕ್ಕೆ ಕರೆಹೇಳಲು ಬಂದ ಶ್ರೀನಿವಾಸ್ ಅವರೂ, ಅವರನ್ನು ಕರೆತಂದ ಸುರೇಶ್ ಸರ್ ಅವರೂ ನೇರ ಅಡುಗೆ ಮನೆಗೆ ಬರಬೇಕೇ? 'ಏನೂ ಇಬ್ರೂ ಸೇರಿ ಮುದ್ದೆ ತಿರುವ್ತಿದ್ದೀರಾ? ಸಾರ್ಥಕ ಆಯ್ತು ನಿಮಗೆ ಮುದ್ದಣ ಮನೋರಮೆ ಅಂತ ಬಿರುದು ಕೊಟ್ಟಿದ್ದು. ಮುದ್ದೆ ಮಾಡೋ ಮುದ್ದಣ್ಣ, ಕೈ ತಿರುವೋ ಮನೋರಮೆ' ಅಂತ ಹಾಸ್ಯ ಮಾಡಿದ್ರು. ಅವರನ್ನು ಕೂರಿಸಿ ಮುದ್ದೆ ಮಾಡುತ್ತಾ ಕುಳಿತುಕೊಳ್ಳೋಕಾಗುತ್ಯೇ? ಒಲೆ ಆರಿಸಿ ಹೊರಬಂದು ಅವರ ಆಹ್ವಾನ ಪತ್ರಿಕೆ ಪಡೆದು, ಕಾಫಿ ಕೊಟ್ಟು ಕಳಿಸುವ ಹೊತ್ತಿಗೆ ಅರ್ಧ ಗಂಟೆಯಾಯಿತು. ಅಷ್ಟರಲ್ಲಿ ಅವನ ಕಡೆ ನಾವು ಗಮನ ಕೊಡಲಿಲ್ಲವೆಂದು ನಮ್ಮ ಮುದ್ದೆ ಮಹಾಶಯ ಸೆಟೆದು ಮುಖ ಮೈಯಲ್ಲ ಗಂಟು ಮಾಡಿಕೊಂಡು ಕೂತಿದ್ದ. ಅವತ್ತಿಗೆ ಮುದ್ದೆ ಪ್ರಕರಣ ಮುಕ್ತಾಯವಾಯಿತು.

ಮರಳಿ ಯತ್ನವ ಮಾಡು, ಮರಳಿ ಯತ್ನವ ಮಾಡು ಹಾಗೆ ಕೇಳಿ, ನೋಡಿ, ಮಾಡಿ, ಮಾಡಿ ಈಗ ನಾನು ರಾಗಿ ಮುದ್ದೆ ಕಲಿಸೋ ಶಾಲೆ ತೆರೆಯುವಷ್ಟು ಎಕ್ಸ್‌ಪರ್ಟ್ ಆದರೂ, ಆ ಪ್ರಸಂಗದಿಂದ ನನ್ನ ಗೆಳತಿಯರ ಗುಂಪಿನಲ್ಲಿ 'ಮುದ್ದಣ ಮನೋರಮೆ ಮುದ್ದೆ ತಿರುವೋ ಹಾಗೆ' ಅಂತ ಹೊಸ ಮಾತು ಹುಟ್ಟಿಕೊಂಡು ರೆಕ್ಕೆ ಪುಕ್ಕ ಪಡೆದಿದೆ.

***

ಸಣ್ಣ ಕಥೆ

ನನಗದು ಕಾಲೇಜಿನ ದಾರಿ, ಆ ಹುಡುಗಿಗೆ.. ?.. !!

– ರಾಧಿಕಾ ವಿ ಗುಜ್ಜರ್

ನನ್ನದು ಸಣ್ಣ ಊರು. ಅದಕ್ಕೆ ತಕ್ಕಂತೆ ಅಲ್ಲಿನ ಅನುಕೂಲಗಳು ಹಾಗೂ ಜನಜೀವನವಿತ್ತು. ಊರಿಗೆ ಇದ್ದದ್ದೇ ಎರಡು ಕಾಲೇಜು. ಒಂದು ಮಹಿಳಾ ಕಾಲೇಜು, ಅಲ್ಲಿ ಕಲೆ ಮತ್ತು ವಾಣಿಜ್ಯದ ಓದು ಇತ್ತಾದರೂ ಹೊಸ ಕಾಲೇಜಾದ ಕಾರಣ ಉಪನ್ಯಾಸಕರು ಬಹಳ ಕಡಿಮೆ ಇದ್ದರು. ಮತ್ತೊಂದು ಹಳೆಯ ಹಾಗೂ ಇರುವುದರಲ್ಲಿಯೇ ಉತ್ತಮ ಕೋ–ಎಡ್ ಕಾಲೇಜು. ನನ್ನ ದಾಖಲಾತಿಯನ್ನು ಈ ಕಾಲೇಜಿನಲ್ಲಿ ಮಾಡಿಸಿಕೊಂಡಿದ್ದೆ.

ಕಾಲೇಜಿಗೆ ಎರಡು ದಾರಿಗಳಿದ್ದವು. ಒಂದು 5–8 ನಿಮಿಷಗಳದ್ದು. ಇನ್ನೊಂದು ಸುಮಾರು 15–18 ನಿಮಿಷಗಳದ್ದು. ಅರ್ಥವಾಗಲಿಲ್ಲ ಅಲ್ವೇ? ನಾವಿದ್ದದ್ದು ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿ. ನಮ್ಮ ಕಾಲೋನಿಯ ನಂತರ ಮತ್ತಾವುದೆ ಮನೆಗಳಾಗಲಿ ಅಥವಾ ಬೇರೆ ಯೋಗ್ಯ ಜಮೀನಾಗಲಿ ಇರಲಿಲ್ಲ. ಏಕೆಂದರೆ ಕಾಲೋನಿಯ ನಂತರ 100–150 ಮೀಟರು ಮುಂದೆ ಹಳ್ಳವೊಂದು ಹರಿಯುತ್ತಿತ್ತು. ಈ ಹಳ್ಳದ ತಗ್ಗಿನ ಉದ್ದಕ್ಕೂ ನೆಲಕ್ಕೆ ಜಲ್ಲಿಗಳನ್ನು ಹಾಸಿ ಕೂರಿಸಿದ್ದರು ಹಾಗೂ ನೀರು ಹರಿವ ತಗ್ಗಿನ ಕಡೆ ಸುಮಾರು ಒರಳುಕಲ್ಲಿನ ಗಾತ್ರದ 15–20 ಕಲ್ಲುಗಳನ್ನು ಮಧ್ಯ ಉದ್ದಕ್ಕೂ ಇಟ್ಟಿದ್ದರು. ಕಲ್ಲುಗಳನ್ನು ಎರಡೆರಡು ಅಡಿಗಳ ಅಂತರಕ್ಕೆ ಕೂರಿಸಿದ್ದ ಕಾರಣ, ನೀರು ಕಾಲಿಗೆ ಅಥವಾ ಚಪ್ಪಲಿಗೆ ತಾಕದಂತೆ ಕಲ್ಲುಗಳ ಮೇಲಿಂದ ಜಿಗಿದು ಹಳ್ಳ ದಾಟಿ ಆಚೆ ಬದಿಗೆ ಹೋಗುತ್ತಿದ್ದೆವು. ಸಾಮಾನ್ಯವಾಗಿ ವರ್ಷ ಪೂರ್ತಿ ಹಳ್ಳ ಹರಿಯುತ್ತಿರುತ್ತಿತ್ತು. ಅದರಲ್ಲೂ ಮಳೆಗಾಲದಲ್ಲಿ ಕೊಂಚ ಮೈತುಂಬಿಕೊಂಡಿದ್ದರೂ ದಾಟಲು ಅಂತಹ ಭಯವಿರಲಿಲ್ಲ. ಹಳ್ಳದ ಆಚೆಯ ದಡವೇ ನಮ್ಮ ಕಾಲೇಜು. ಹೇಗೆ ಹೋದರೂ 250–300 ಮೀಟರ್‌ಗೆ ಕಾಲೇಜು ಸಿಗುತ್ತಿತ್ತು. ನಮಗಿದು ಅತ್ಯಂತ ಹತ್ತಿರದ, ಆದರೆ ಕೊಂಚ ನಿರ್ಜನ ದಾರಿ. ಹರೆಯದ ನಮಗೆ ಹಳ್ಳ ದಾಟುವುದು ಸುಲಭವಾಗಿತ್ತು. ಅದರಲ್ಲೂ ಬೆಳಗಿನ ನಮ್ಮ ಅವಸರಕ್ಕಂತೂ ಈ ದಾರಿ ಹೇಳಿಮಾಡಿಸಿದಂತಿತ್ತು.

ಇನ್ನೊಂದು ದಾರಿ ಎಂದರೆ ಹಳ್ಳಕ್ಕೆ ದೊಡ್ಡ ಕಾಂಕ್ರೀಟ್ ಪೈಪು ಕೂರಿಸಿ ಕಟ್ಟಿದ್ದ ಕಚ್ಚಾ ಸಂಕವನ್ನು ದಾಟಿ ಹೋಗುವ ರಸ್ತೆ. ಇದು ಪೇಟೆಯಿಂದ ಹಾದುಹೋಗುವ ರಸ್ತೆಯಾಗಿತ್ತು. ಸೈಕಲ್, ದ್ವಿಚಕ್ರ ವಾಹನ, ಆಟೋರಿಕ್ಷಾ, ಚಕ್ಕಡಿ ಬಂಡಿ ಹಾಗೂ ಜನರ ಓಡಾಟದ ಜನನಿಬಿಡ ರಸ್ತೆ. ಈ ದಾರಿಯಲ್ಲಿ ಕಾಲೇಜಿಗೆ ಹೋಗಲು ಸುಮಾರು ಒಂದು ಕಿಲೋಮೀಟರ್ ನಡೆಯಬೇಕಿತ್ತು. ಪೇಟೆಯಲ್ಲಿ ಕೆಲಸವಿದ್ದರೆ ಹಾಗೂ ಪುರುಸೊತ್ತಾಗಿದ್ದರೆ ಮಾತ್ರ ಈ ದಾರಿ ಹಿಡಿಯುತ್ತಿದ್ದೆವು. ಬಾಕಿ ಹತ್ತಿರದ ದಾರಿಯಿಂದ ಹಳ್ಳವನ್ನು ಕಲ್ಲುಹಾರಿ ದಾಟಿ ಓಡಾಡುತ್ತಿದ್ದೆವು.

ಈ ನಿರ್ಜನ ದಾರಿಯ ನಮ್ಮ ಕಾಲೋನಿಯ ಬದಿಯ ಹಳ್ಳದ ತೀರದುದ್ದಕ್ಕೂ ಮನೆಗಳು ಹಾಗೂ ತೀರ ಕೊನೆಗೆ 3 ಮನೆಯವರ (ಅವರದ್ದೇ ಹೊಲದ) ಕಣಗಳಿದ್ದವು. ಆದರೆ ಕಾಲೇಜಿನ ಪಕ್ಕದ ತೀರದುದ್ದಕ್ಕೂ ಸಂಪೂರ್ಣ ಖಾಲಿ ಇತ್ತು. ಈ ದಡದ ಭಾಗ ರೈಲ್ವೆ ಕ್ರಾಸಿಂಗ್‌ಗೆ ಹೋಗಿ ಸೇರುತ್ತಿತ್ತು. ಮಧ್ಯದಲ್ಲಿ ಒಂದೆರಡು ಗ್ಯಾರೇಜ್ ಹಾಗೂ ರದ್ದಿಯವರ ಶೆಡ್ಡುಗಳು ಬಿಟ್ಟರೆ ಬಟಾಬಯಲು. ಈ ಬಯಲು ದಡದ ಉದ್ದಕ್ಕೂ ಆಗಾಗ ಮುಳ್ಳುಗಳ ಗುಪ್ಪೆ ಇಟ್ಟು ಹೊಸದಾಗಿ ಮುಚ್ಚಿದ ಗುಂಡಿಗಳು ಕಾಣಸಿಗುತ್ತಿದ್ದವು. ಕಡುಬಡವರ ಮನೆಯ ತೀರ ಹಸುಳೆ ಅಥವಾ ಕೂಸುಗಳು ತೀರಿಕೊಂಡರೆ ಇಲ್ಲಿ ಹೂತು, ಮಣ್ಣು ಮುಚ್ಚಿದ ನಂತರ ದಿಬ್ಬಕ್ಕೆ ಒಂದು ಬಣ್ಣದ ಬಟ್ಟೆ

ಹೊದಿಸಿ ಒಂದಷ್ಟು ಹೂವುಗಳನ್ನು ಹರಡಿ ಮುಳ್ಳುನೆಟ್ಟಿ ಮುಚ್ಚುತ್ತಿದ್ದರು. ಬಹುಶಃ ಪ್ರಾಣಿಗಳು ಕೆದುಕುವುದು, ಶೋಧಿಸುವುದು, ನೆಲಕೆರೆಯುವುದು ಮಾಡದಿರಲಿ ಎಂದಿರಬಹುದು. ನಾವಂತೂ ಈ ಕೆಲಸ ಮಾಡುವ ಜನರನ್ನು ಎಂದೂ ಪ್ರತ್ಯಕ್ಷ ನೋಡಿರಲಿಲ್ಲ. ಅದ್ಯಾವಾಗ ಬಂದು ಹೂತು ಹೋಗುತ್ತಿದ್ದರೋ ದೇವರೇ ಬಲ್ಲ. ನಾವು ಕಾಲೇಜಿಗೆ ಓಡಾಡುವ ಸಮಯದಲ್ಲಂತೂ ಇಂತಹ ಯಾವುದೇ ಚಟುವಟಿಕೆಗಳು ಇರುತ್ತಿರಲಿಲ್ಲ. ಹೊಸ ಗುಂಡಿ ಕಾಣಿಸಿದರೆ ಒಂದು ಹದಿನೈದು ದಿನ ಕಣ್ಣು ಆಚೆ ಹೋಗುತ್ತಿತ್ತಷ್ಟೇ. ನಂತರ ನಮಗೂ ಮರೆತು ಹೋಗುತ್ತಿತ್ತು.

ಅದೊಂದು ಸಂಜೆ ಆಗಲೇ 6-6.30ರ ಸಮಯವಿರಬಹುದು. ಇನ್ನೂ ಚೆನ್ನಾಗಿ ಬೆಳಕಿದ್ದ ಕಾರಣ ಹತ್ತಿರದ ಹಳ್ಳದ ದಾರಿ ಹಿಡಿದು ಮನೆಗೆ ಹೊರಟಿದ್ದೆವು. ಹಳ್ಳದ ಆಚೆಯ ಬಡಾವಣೆಯೊಂದರ ನೆಂಟರ ಮನೆಗೆ ಶುಕ್ರವಾರದ ಗೌರಿಯ ಅರಿಶಿಣ-ಕುಂಕುಮಕ್ಕೆ ಹೋಗಿದ್ದವರು ಮನೆಗೆ ವಾಪಸ್ಸು ಬರುತ್ತಿದ್ದೆವು. ಅಮ್ಮ ಮತ್ತು ನಾನು ಕೈ ಕೈ ಹಿಡಿದು ಹಳ್ಳ ದಾಟಿ ಬರುವಾಗ ತೀರ ನನ್ನ ವಯಸ್ಸಿನವಳೇ ಆಗಿದ್ದ 18-20 ವರ್ಷದ ಹುಡುಗಿ ಯೊಬ್ಬಳು ಹೆಣ ಹೂತ ಹೊಸ ಗುಂಡಿಯ ಎದುರಿಗೆ ತೀರಾ ಮೌನವಾಗಿ ಕುಳಿತಿರುವುದು ಕಾಣಿಸಿತು. ಸೀರೆಯ ಸೆರಗಿನಿಂದ ಕಣ್ಣೀರು ಒರೆಸಿಕೊಳ್ಳುತ್ತಾ, ಬೀಸುತ್ತಿದ್ದ ಗಾಳಿಗೆ ಸೆರಗು ಹಾರದಂತೆ ಬಾಯಲ್ಲಿ ಕಚ್ಚಿ ಹಿಡಿದು ಶಬ್ದ ಮಾಡದೆ ಅಳುತ್ತಿದ್ದಳು. ತೀರಾ ಬಗ್ಗಿ ಕುಳಿತ ಆಕೆಯ ಎರಡೂ ಕೈಗಳು ನೆಲವನ್ನು ಗುಂಡಗೆ ಸವರುತ್ತಿದ್ದವು. ಬಹುಶಃ ಎದೆ ಬಡಿದು ಅಳಲಾಗದೆ ಕುಳಿತ ನಿಸ್ಸಹಾಯಕ ಸ್ಥಿತಿಯ ಕ್ರಿಯೆ ಎನಿಸಿತು. ನೆಲವನ್ನು ತಡವುತ್ತಿದ್ದ ಕೈಗಳಲ್ಲಿ ಅದಾವುದೋ ತೀರದ ಹತಾಶ ಹುಡುಕಾಟ, ಏನಾದರೂ ಸಿಕ್ಕೇಬಿಟ್ಟೀತು ಎಂಬ ಹುಕಿಯ ಕೈಗಳ ಸರಿದಾಟ ಇತ್ತು. ದೃಶ್ಯವನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಾ ಮನೆ ಸೇರಿ, ನಂತರ ಮರೆತೇಹೋದೆ.

ಶನಿವಾರ ಕಾಲೇಜಿನ ಒಂದೇ ಪಿರಿಯಡ್ ಇತ್ತು. ಆಯ್ತುಲ್ಲ, ಮಾಸ್ ಬಂಕ್ ಎಂದು ಮಾತಾಡಿಕೊಂಡಿದ್ದೆವು. ಇನ್ನು ಸೋಮವಾರವೇ ಕಾಲೇಜಿಗೆ ಹೋಗುವುದೆಂದಾಗಿತ್ತು.

ಭಾನುವಾರ ಬೆಳಗ್ಗೆ ಎಂದಿನಂತೆ ಸೊಪ್ಪಿನ ಯಮುನವ್ವ ಬುಟ್ಟಿ ಇಳಿಸಿ ಅಜ್ಜಿಯನ್ನು ಕರೆದಳು. ಅಜ್ಜಿಯಿಂದ ತಿನ್ನಲು ವೀಳ್ಯದೆಲೆ ಕೇಳಿ ಪಡೆದು ಸಂಚಿ ಬಿಡಿಸಿ ಎಲೆ, ಅಡಿಕೆ, ಕಾಚು ಹೊಂದಿಸಿ ಬಾಯಿಗಿಟ್ಟು ಮಾತಿಗಿಳಿದಳು. ಯಮುನವ್ವ ಬಂದರೆ ಊರಿನ ಎಲ್ಲಾ ಹಳ್ಳ, ಝರಿ, ತೋಡು, ಬಾವಿ, ಬುಗ್ಗೆಯ ಸುದ್ದಿಗಳು ಸೇರಿಕೊಂಡು, ಬಣ್ಣ ಪಡೆದು ಮಾತಿನಲ್ಲಿ ಹರಿದು ಬಂದವೆಂದೇ ಲೆಕ್ಕ. ಅಜ್ಜಿ ಸೊಪ್ಪು ಖರೀದಿಸಿ ಕಟ್ಟುಗಳನ್ನು ಒಳ ತೆಗೆದುಕೊಂಡು ಹೋಗಲು ನನ್ನನ್ನು ಕರೆದರು. ಅಲ್ಲಿಗೆ ಬಂದ ನನ್ನನ್ನು ನೋಡಿದ ಆಕೆ, "ಪಾಪಣ್ಣಿ, ಕಾಲೇಜಿಗೆ ನೀನು ಈ ಕೆಳಗಿನ ಹಳ್ಳದ ದಾರಿಯಲ್ಲೆ ಹೋಗ್ತಿಯಾ ಅಲ್ವಾ? ಆ ಕಡೆ ಒಂದು ನಾಲ್ಕು ದಿನ ಓಡಾಡಬೇಡವ್ವ. ಆ ಸುಣ್ಣದ ಭಟ್ಟಿಯ ಮನೆಯವರು ಅವರ ಕೊನೆಯ ಮಗಳ ಹಾದರದ ಕೂಸನ್ನು ಆ ಹಳ್ಳದ ಬದಿಗೆ ಜೀವಂತ ಹೂತಿದಾರಂತೆ ನೋಡವ್ವ, ಕರ್ಮಗೇಡಿಗಳು. ಶಿವಶಿವಾ... ಹುಷಾರು ಕಣವ್ವಾ" ಎಂದು ಗಲ್ಲ ಬಡಿದುಕೊಂಡಳು.

ಯಾಕೋ, ಆಕೃತಿಯೊಂದು ನೆಲ ಗೆಬರುತ್ತಾ ಬಯಲಲ್ಲಿ ಧೂಳೆಬ್ಬಿಸಿ ಭೋರಿಟ್ಟು ಅತ್ತ ಶಬ್ದ ಕೇಳಿದಂತಾಗಿ, ಕಿವಿ ಬೆಚ್ಚಗೆನಿಸಿ ಅದುರಿ ಬಿದ್ದೆ. ಆ ಹುಡುಗಿಯ ಜೀವಂತ ಕೂಸನ್ನು ಹೂತು ಬಿಟ್ಟರೇ???

ನನಗದು ಕಾಲೇಜಿನ ದಾರಿ . ಆದರೆ ಆ ಹುಡುಗಿಗೆ ??!!

***

ಅದೇ ತಿಂತೀನಿ ಕದಾ ತೆಗೀ

– ಸರಸ್ವತಿ ನಟರಾಜ್

ಭಾಗೀರಥಿ ಈಚೆಗೆ ದುಂಬಾಲು ಬಿದ್ದಿದ್ದಾಳೆ ಗಂಡನ ಹತ್ತಿರ. ನಮ್ಮ ಮನೆಗೂ ವೈಫೈ ಹಾಕಿಸಿ ಅಮೆಜಾನ್ ಪ್ರೈಮ್ ಹಾಕ್ಸಿ, ನೆಟ್ ಫ್ಲಿಕ್ಸ್ ಹಾಕ್ಸಿ ಅಂತ. ಮನೆಗೆ ಸ್ಮಾರ್ಟ್ ಟಿವಿ ಅಂತೂ ಬಂದು ಎರಡು ವರ್ಷಗಳಾದ್ವು. ಕಳೆದ ಸಲ ಮಗ ಬಂದಾಗಲೇ ಹಳೆ ಟಿವಿ 21 ಇಂಚಿನ 20 ವರ್ಷದ ಹಿಂದಿನ ಒನಿಡಾ ಟಿವಿ ಕೆಟ್ಟು ಕೂತಿತ್ತು. ಆಗಲೇ ಲಾಕ್‌ಡೌನ್ ತೆಗೆದಿದ್ದರೂ ಜನರೆಲ್ಲ ಭಯಭೀತರಾಗಿ ಲಾಕ್ ಮಾಡಿಕೊಂಡೆ ಮನೆಯೊಳಗೆ ಕೂತ್ಕೊಂಡು, ಆರಾಮವಾಗಿ ಬೇಕಾದ್ದು ಮಾಡಿಕೊಂಡು ತಿಂದು, ಮೈ ಭಾರ ಹೆಚ್ಚಿಸಿಕೊಳ್ಳುತ್ತಿದ್ದ ಕಾಲ. ರಸ್ತೆಗಳಿದ್ರೆ ಯಾರಾದ್ರೂ ಎದುರಿಗೆ ಸಿಕ್ಕು ಬಿಟ್ರೆ? ಅವರಿಗೆನಾದರೂ ಕೆಮ್ಮು ನೆಗಡಿಯೋ ಇದ್ರೆ? ರಾಮ ರಾಮ ಬೇಡಪ್ಪ ತೆಪ್ಪಗೆ ಮನೆಯಲ್ಲಿ ಇರೋಣ, ಮನೆಯೊಳಗೆ ಟಿವಿ ಇಲ್ವೆ, ಇಡೀ ದಿನ ಒಂದಲ್ಲ ಒಂದು ಚಾನಲ್ನಲ್ಲಿ ಧಾರವಾಹಿ ಬರಲ್ವೇ? ಸಿನಿಮಾ ಬರಲ್ವೇ? ಸಂಜೆ ಆದರೆ ಒಂಚೂರು ಅಕ್ಕಪಕ್ಕದವರು ಒಳಗೆ ಇರೋ ಸಮಯದಲ್ಲಿ ಟೆರೇಸ್ ಹತ್ತಿ, ಯಾಕಂದ್ರೆ ಆ ವೈರಸ್ ಗಾಳೀಲೂ ಬಂದು ಅಟ್ಯಾಕ್ ಮಾಡುತ್ತೇರಿ. ಒಂದು ಮನೆಗೆ ಇನ್ನೊಂದು ಮನೆಗೆ ಮಧ್ಯ ಖಾಲಿ ಜಾಗ ಬಿಟ್ಟಿರೋದೇ ಮೂರು ಅಡಿ. ಅಕಸ್ಮಾತ್ ಪಕ್ಕದವರೂ ಹತ್ತಿ, ಯೋಗಾಯೋಗದಿಂದ ಅದೇ ಸಮಯಕ್ಕೆ, ಅವರೇನಾದರೂ ಕೆಮ್ಮಿದ್ರೆ ಸೀನಿದರೆ ಏನ್ ಗತಿ! ರಾಮ ರಾಮ ಅಂತ ಆದಷ್ಟು ಮನೆಯೊಳಗೆ ಕೂತು, ಅಡುಗೆ ಮನೆಯಲ್ಲಿ ಒಲೆ ಮುಂದೆ ನಿಂತು ಅಥವಾ ಹಾಲಿನಲ್ಲಿ ಟಿವಿ ಮುಂದೆ ಕೂತ್ರೆ ಆಗಲ್ವೇ.

ಎರಡು ವರ್ಷದ ಕೆಳಗೆ ಮಗ ಬಂದಿದ್ದ. ಅಮ್ಮ ಅಪ್ಪ ಇನ್ನೂ ಹಳೆ ಟಿವೀ, ತಾನು ಹೈಸ್ಕೂಲಿನಲ್ಲಿ ಇದ್ದಾಗ್ಲಿಂದ ನೋಡಿದ್ದನ್ನೇ ಇನ್ನೂ ಇಟ್ಕೊಂಡಿದ್ದಾರಲ್ಲ ಅನಿಸಿತು, ಟಿವಿ ಕೆಟ್ಟೂ ಕೂತಿತ್ತು. ಸಾಕಷ್ಟು ದುಡ್ಡು ಸೇರಿತ್ತು. ತಕ್ಷಣ ಅಮೆಜಾನ್‌ನಲ್ಲಿ ಹುಡುಕಾಡಿ ಜಾಲಾಡಿ ಒಂದು 42 ಇಂಚಿನ ಟಿವಿಯನ್ನು ಆರ್ಡರ್ ಮಾಡಿದ. ಕಂಪನಿಯವರೇ ಬಂದು ಫಿಕ್ಸ್ ಮಾಡಿ ಆಯ್ತು. ಟಾಟಾ ಸ್ಕೈ ಇದ್ದೇ ಇತ್ತು. ಆಹಾ 21 ಇಂಚಿನ ಟಿವಿಯಲ್ಲಿ ನೋಡುತ್ತಿದ್ದ ಕನ್ನಡ ಧಾರಾವಾಹಿಗಳ ನಾಯಕಿ ನಾಯಕಿಯರು, ಖಳನಾಯಕಿಯರು, ಅವರ ಚೇಲಾಗಳನ್ನು ಈ ದೊಡ್ಡ ಪರದೆಯಲ್ಲಿ ನೋಡೋದು ಎಂಥ ಮಜಾ ಅಂತ ಖುಷಿಯಾಗೆ ಇದ್ಲು. ಮಗ ಮತ್ತೆ ವಾಪಸ್ ಹೋಗಿ ಆಯ್ತು.

ಈಗ ಮೈ ಚಳಿ ಬಿಟ್ಟು ಆಚೆ ಹೋಗಿ ಪಾರ್ಕಿನಲ್ಲಿ ಒಂದಷ್ಟು ಹೊತ್ತು ಕಾಲ ಕಳೆದು, ಲಲಿತಾ ಸಹಸ್ರನಾಮ ಪಾರಾಯಣಕ್ಕೆ ವಾರದಲ್ಲಿ ಒಂದೊಂದು ದಿನ ಒಬ್ಬೊಬ್ಬರ ಮನೆಯಲ್ಲಿ ಸೇರಿ ಪಾರಾಯಣ, ಪ್ರಸಾದ ಆದಮೇಲೆ ಒಂದಿಷ್ಟು ಹೊತ್ತು ಕುಳಿತಾಗ ತನಗಿಂತ ಚಿಕ್ಕವರಾದ ಶುಭ ನಳಿನ ಅವರೆಲ್ಲ ಪ್ರೈಮ್‌ನಲ್ಲಿ ಅದು ನೋಡಿದ್ದೀಯಾ? ನೆಟ್‌ಫ್ಲೆಕ್ಸಲ್ಲಿ ಇದು ಬಂದಿದೆ ಎಂದೆಲ್ಲ ಅವಳಿಗರ್ಥವಾಗದ ಯಾವುದ್ಯಾವುದೋ ಟೈಟಲ್ ಬಗ್ಗೆ ಮಾತಾಡಿಕೊಳ್ತಾ ಇದ್ದಾಗ ಇವಳ ಕಿವಿಗೆ ಬಿತ್ತು. ಇವಳೇನೋ ತಾನು ವೀಕ್ಷಿಸಿದ ಧಾರಾವಾಹಿ ಬಗ್ಗೆ ಮಾತಾಡಿದ್ರೆ ನಾನಂತೂ ಕನ್ನಡ ಧಾರಾವಾಹಿ ನೋಡಲ್ಲ, ಅಲ್ಲೇನಿರುತ್ತೆ ಅಂತ ಮೂತಿ ತಿರುಗಿಸಿದ್ರು. ಇವಳಿಗೆ ಪೆಚ್ಚಾಯಿತು, ತಾನೇನು ಇನ್ನು ಯಾವ ಕಾಲದಲ್ಲೋ ಇದ್ದೀನಿ ಅನಿಸಿಬಿಟ್ಟಿತು. ಮನೆಗೆ ಬಂದು ನಮ್ಮನೆಗೂ ಕನೆಕ್ಷನ್ ತಗೋಳಿ ಅಂತ ದುಂಬಾಲು. ಕೊನೆಗೆ ಇವಳ ಹಟ ತಡೆಯಲಾರದೆ ಹಾಕಿಸಿದ್ದಾಯಿತು.

ಹಾಗೂ ಹೀಗೂ ನೆಟ್ ಫ್ಲಿಕ್ಸ್‌ನಲ್ಲಿ ಏನೇನೋ ಹುಡುಕತೊಡಗಿದಳು. ಯಾವ ಯಾವ ದೇಶದ್ದೋ ಚಿತ್ರಗಳು ಧಾರಾವಾಹಿಗಳು. ಕೊನೆಗೆ ಕೊರಿಯನ್ ಭಾಷೆ ಧಾರವಾಹಿ ಒಂದು ಕಣ್ಣಿಗೆ ಬಿತ್ತು. ಯಂಗ್ ಲೇಡಿ ಅಂಡ್

ಜಂಟಲ್ಮನ್. ಟೈಟಲ್ ಓದ್ತಾನೆ ಅರ್ಥವಾಗಿಬಿಡ್ತಲ್ಲಾ, ಖುಷಿ ಆಯ್ತು. ನೋಡೋಣ ಎಂದು ಪ್ರಾರಂಭಿಸಿದಳು. ಕೆಳಗೆ ಸಬ್ ಟೈಟಲ್ ಇತ್ತಲ್ಲ, ಕಣ್ಣಲ್ಲಿ ಕಣ್ಣಿಟ್ಟು ಬೇಗ ಬೇಗ ಓದಬೇಕು, ಅವರ ರಾಗವಾಗಿ ಎಳೆದು ಹಾಕುತ್ತಿದ್ದ ಕೆಲವೊಂದು ಮಾತುಗಳು ಕಿವಿಗೆ ಬಿದ್ದು ತಮಾಷೆ ಅನ್ನಿಸಿತು.

ಕಥೆ ಒಬ್ಬಳು ತರುಣಿಯ ಮತ್ತು ಮಧ್ಯ ವಯಸ್ಕನ ನಡುವಿನ ಪ್ರೇಮ ಕಥೆ. ನಾಲ್ಕಾರು ಕಂತುಗಳು ಬಿಡದೆ ನೋಡಿದಳು.

ಅರೆ, ಎಷ್ಟು ದೊಡ್ಡ ಮನೆ! ದೊಡ್ಡ ಕಂಪನಿಯ ಚೇರ್ಮನ್, ಮಧ್ಯ ವಯಸ್ಕ, ಮೂರು ಮಕ್ಕಳ ತಂದೆ. ಹೆಂಡತಿ ಇಲ್ಲ. ಮಕ್ಕಳಿಗಾಗಿ ಪಾಠ ಕಲಿಸಲು ತರುಣಿ ಒಬ್ಬಳು ಬರುತ್ತಾಳೆ. ಅವಳ ಮನೆಯದು ಇನ್ನೊಂದು ಕಥೆ. ತಾಯಿ ಗಂಡನನ್ನು, ತೀರ ಎಳೆಯ ಮಗುವನ್ನು ಬಿಟ್ಟು ಮಹತ್ವಾಕಾಂಕ್ಷೆಯಿಂದ ಏನೋ ಸಾಧಿಸಲು ಅಮೆರಿಕೆಗೆ ಹೋಗಿರುತ್ತಾಳೆ. ಮಗುವಿನೊಂದಿಗೆ ಒದ್ದಾಡುತ್ತಿದ್ದ ತಂದೆಗೆ ಪಕ್ಕದ ಮನೆಯ ಗಂಡು ಮಗುವಿದ್ದ ಗಂಡನಿಲ್ಲದ ತರುಣಿಯ ಸಹಾಯ ಸಿಗುತ್ತದೆ. ಇಬ್ಬರೂ ಜೀವನ ಶುರು ಮಾಡುತ್ತಾರೆ. ಮಗಳ ಬಳಿ ತಾಯಿ ಸತ್ತಿದ್ದಾಳೆಂದೇ ಹೇಳಿರುತ್ತಾನೆ. ಸಾಕು ತಾಯಿ ಒಳ್ಳೆಯವಳಾದರೂ, ಏನೇನೋ ವೈಮನಸ್ಸಿನಿಂದ ಮಗಳು ಮನೆ ಬಿಟ್ಟು ಶ್ರೀಮಂತನ ಮನೆಯಲ್ಲಿ ಕೆಲಸಕ್ಕೆ ಸೇರುತ್ತಾಳೆ. ಸ್ವಲ್ಪ ದಿನದಲ್ಲೇ ತಂದೆ ಕೆಲಸ ಕಳೆದುಕೊಂಡು ಡ್ರೈವರ್ ಕೆಲಸಕ್ಕೆ ಎಂದು ಇದೇ ಸಾಹುಕಾರನ ಮನೆಯ ಔಟ್ ಹೌಸ್‌ನಲ್ಲಿ ಸೇರುತ್ತಾನೆ. ಇದ್ದ ಮನೆಯನ್ನು ತಮ್ಮನ ದೆಸೆಯಿಂದ ಬಿಡಬೇಕಾಗಿ ಬಂದು ಅವನ ಹೆಂಡತಿ ಎರಡನೇ ಹೆಂಡತಿಯು ಕದ್ದು ಮುಚ್ಚಿ ಇಲ್ಲಿ ಬಂದು ಸೇರಿಕೊಳ್ಳುತ್ತಾಳೆ. ಇತ್ತ ದೊಡ್ಡ ಕಂಪನಿಯ ಸಾಹುಕಾರನ ಮನೆಯಲ್ಲಿ ಗ್ರಹ ನಿರ್ವಹಣಾಧಿಕಾರಿ ಕೆಲಸ ಮಾಡುತ್ತಿದ್ದ ನಡು ವಯಸ್ಸಿನ ಮಹಿಳೆಯ ಮಗು ಚೇರ್ಮನ್‌ನ ಮೂರನೇ ದತ್ತು ಮಗುವಾಗಿ ಬೆಳೆಯುತ್ತಿರುತ್ತದೆ ಹೇಗಾದರೂ ಚೇರ್ಮನ್ ಅನ್ನು ಮದುವೆಯಾದರೆ ತನ್ನ ಮಗುವನ್ನು ಶಾಶ್ವತವಾಗಿ ಇಲ್ಲೇ ಇದ್ದುಕೊಂಡು ಸಾಕಬಹುದೆಂದು ಆ ಮಹಿಳೆ ಹತ್ತಾರು ರೀತಿಯಲ್ಲಿ ಪ್ರಯತ್ನ ಪಡುತ್ತಿರುತ್ತಾಳೆ. ಅವಳಿಗೆ ಜೊತೆಯಾಗಿ ಚೇರ್ಮನ್‌ನ ತಂದೆಯ ಇಡುಹೆಣ್ಣಾಗಿ, ಹೆಂಡತಿಯ ಸ್ಥಾನ ಸಿಗದ ದುರಾಶೆಯವಳು ಅವಳಿಗೊಬ್ಬಳು ಮಗಳು, ಮಗಳಿಗೆ ಮದುವೆ ಆದ ಮೇಲೆ ಮಾತ್ರ ಕಂಪನಿಯ ಶೇರುಗಳು ಸಿಗುತ್ತದೆ ಎಂದು ಮಗಳಿಗೆ ಮದುವೆ ಮಾಡಲು ಶ್ರೀಮಂತರ ಹಿಂದೆ ಹೋಗುವ ತಾಯಿ. ಮಗಳು ಇಷ್ಟ ಪಡುತ್ತಿರುವ ಹುಡುಗ ಮನೆಯ ಕಾರು ಚಾಲಕನ-ಬಲಮಗ ಎಂದು ಗೊತ್ತಾಗಿ ತಾಯಿ ಖಳನಾಯಕಿಯಂತೆ ಅವರನ್ನು ಹೀಯಾಳಿಸಿ ಹುಡುಗನ ತಾಯಿಯ ಜುಟ್ಟು ಹಿಡಿದು ಎಳೆದಾಡಿ ಮನೆ ಬಿಟ್ಟು ಓಡಿಸುವುದು, ಇವೆಲ್ಲದರ ನಡುವೆ ಮನೆಪಾಠದ ತರುಣಿ ಹಾಗೂ ಚೇರ್ಮನ್ ನಡುವೆ ಪ್ರೇಮಾಂಕುರ. ಅದನ್ನು ಹಾಳುಮಾಡಲು ನಾಯಕನ ಬಲತಾಯಿ ಮತ್ತು ಖಳನಾಯಕಿ ಗೃಹ ನಿರ್ವಹಣಾಗಾತಿಯ ಏನೇನೋ ಸಂಚುಗಳು, ಇದರ ನಡುವೆ ಚೇರ್ಮನ್ ತಲೆಗೆ ಪೆಟ್ಟು ಬಿದ್ದು ಅವನ ನೆನಪು 22 ವರ್ಷಕ್ಕೆ ಹಿಂತಿರುಗಿ, ಟಾಮ್ ಬಾಯ್ ಥರಾ ವರ್ತಿಸಿ, ತನಗೆ ಮದುವೆಯೇ ಆಗಿಲ್ಲ ಇನ್ನು ಮಕ್ಕಳನ್ನು ತನ್ನವರು ಅಂತ ಒಪ್ಪಲು ನಿರಾಕರಿಸುವುದು, ಮಕ್ಕಳ ಮನೆಪಾಠದ ತರುಣಿಯನ್ನು ಪ್ರೀತಿಸಿದ್ದು ಮರೆತು, ಸಂಚಿಗೆ ಒಳಗಾಗಿ ಅವನಿಂದಲೇ ಗರ್ಭಿಣಿ ಆಗಿದ್ದಾಳೆ ಎಂದು ನಂಬಿಸಿದ, ಖಳನಾಯಕಿಯನ್ನು ಮದುವೆ ಆಗಲು ಒಪ್ಪುವುದು, ತಾಯಿಯ ಫೋಟೋವನ್ನೂ ನೋಡದ ಟ್ಯೂಟರ್‌ಗೆ ಚೇರ್ಮನ್‌ನ ರಾಣಿ ತಂಗಿಯೇ ತನ್ನ ತಾಯಿ ಎಂದು ಗೊತ್ತಾಗಿ ತಂದೆಯ ಜೊತೆ ಜಗಳ, ಮಕ್ಕಳು ತಮ್ಮ ನೆಚ್ಚಿನ ಟ್ಯೂಟರ್‌ನೇ ತಂದೆ ಮದುವೆಯಾಗಲಿ ಅಂತ ಹಲವು ವಿಧದ ಸಾಹಸ ಮಾಡುವುದು. ಇವೆಲ್ಲದರ ಮಧ್ಯೆ ನೂರಾರು ಘಟನೆಗಳು, ಅಯ್ಯೋ. ಶ್ರೋತೃಗಳೇ, ಕೇಳ್ತಾ ಕೇಳ್ತಾ ನಿಮಗೇ ಬೇಜಾರಾಗಿರಬೇಕು ಅಲ್ವಾ, ಭಾಗೀರಥಿಗೆ ಏನಾಯಿತು

ಗೊತ್ತಾ? ಎಂಟಡಿ ದೂರದ ಸೋಫಾದಲ್ಲಿ ಕುಳಿತು, ಮಧ್ಯೆ ಮಧ್ಯೆ ಓಡಾಡಿಕೊಂಡು ಧಾರಾವಾಹಿ ನೋಡುತ್ತಿದ್ದವಳು, ಈಗ ಸರಿಯಾಗಿ ಸ್ಮಾರ್ಟ್ ಟಿವಿಯ ಮೂರಡಿ ಮುಂದೆ ಒಂದು ಖುರ್ಚಿ ಇಟ್ಟುಕೊಂಡ್ಳು. ಅಡಿಬರಹ ಓದಬೇಕಲ್ಲಾ. ದೂರ ಕೂತ್ರೆ ಸರಿಯಾಗಿ ಕಾಣಲ್ಲ. ಕಾಣದಿದ್ದರೆ ಅರ್ಥ ಆಗಲ್ಲ. ಎರಡು ಕಡ್ಡಿಗಳಲ್ಲಿ ಉದ್ದದ ನೂಡಲ್ಸ್ ಅನ್ನು ಬಾಯಿಗೆ ಎಳೆದುಕೊಳ್ಳೋದನ್ನು ಕಣ್ಣರಳಿಸಿ ನೋಡಿದಳು. ಡೈನಿಂಗ್ ಟೇಬಲ್ ಮೇಲೆ ಇದ್ದ ಹತ್ತಾರು ಪ್ರಾಣಿಗಳ ಮಾಂಸಾಹಾರವನ್ನು ಅವರುಗಳು ಚಪ್ಪರಿಸುವುದನ್ನು ನೋಡಿ ಬೆರಗಾದಳು. ಮೊದಲೆಲ್ಲಾ ಗಂಡ ಕಾಫಿ ಅಂತ ಕೇಳ್ತಿದ್ದ ಹಾಗೆ ಬ್ರೇಕ್‌ನಲ್ಲಿ ಎದ್ದು ಬೇಗ ಕಾಫಿ ಬಿಸಿ ಮಾಡಿ ತರ್ತಿದ್ದವಳು ಈಗ ಬ್ರೇಕಿಲ್ಲದೇ ಕಿವಿಕಣ್ಣುಗಳೆರಡನ್ನೂ ಎದುರಿನ ಪರದೆಗೆ ಕೊಟ್ಟುಬಿಟ್ಟಿದ್ದಾಳೆ. ಆಕಡೆ ತಿರುಗಿದರೆ ಧಾರಾವಾಹಿನ ಹಿಂದೆ ತಿರುಗಿಸಬೇಕು. ಗಂಡ ತಲೆ ಚಚ್ಚಿಕೊಂಡು ತಾವೇ ಅಡುಗೆ ಮನೆಗೆ ಹೋಗ್ತಾರೆ.

ಈ ಕಡೆ ಭಾಗೀರಥಿ ಕೊರಿಯನ್‌ನಲ್ಲಿ ಕೆಲವೊಂದು ಮಾತುಗಳ ಈ.. ಊ.. ಊ ಅಂತ ಧೀರ್ಘವಾಗಿ ರಾಗವಾಗುವುದನ್ನು ಕೇಳಿದಳು. ನೋಡ್ತಾ ನೋಡ್ತಾ ಅರೆ, ಇದೇ ಥರಾ ತರುಣಿಯೊಬ್ಬಳು ಮಕ್ಕಳ ತಂದೆ ಮಧ್ಯ ವಯಸ್ಕನನ್ನು ಪ್ರೀತಿಸೋ ಧಾರಾವಾಹಿನ ಕನ್ನಡದಲ್ಲೇ ನೋಡಿದ್ನಲಾ, ಈ ಬಲತಾಯಿಯ ಥರಾನೇ ಇನ್ನೊಂದು ಧಾರಾವಾಹಿಯಲ್ಲಿ ಪಾಪದ ನಾಯಕಿಯ ವಿರುದ್ಧ ಸಂಚು ಮಾಡ್ತಾ ಇದ್ಲಲ್ಲಾ, ಅವಳ ನೆನಪು ಬಂತು. ಶ್ರೀಮಂತ ಮನೆತನ ಬಡಕುಟುಂಬದ ತಿಕ್ಕಾಟ, ಒಳ್ಳೆಯವರು ಕಷ್ಟಪಡೋದು, ದುಷ್ಟರು ವಿಚಿತ್ರವಾಗಿ, ಅತಿಯಾಗಿ ಅಲಂಕಾರ ಮಾಡ್ಕೊಂಡು ಯಾವಾಗಲೂ ತಮ್ಮ ಚೇಲಾಗಳ ಜೊತೆ ಬೈಠಕ್ ಮಾಡೋದು ಇದೇ ಅಲ್ವಾ ಇಲ್ಲೂ ತೋರಿಸೋದು. ಇದನ್ನ ಅರ್ಥಮಾಡಿಕೊಳ್ಳಲು ಕಣ್ಣಲ್ಲಿ ಕಣ್ಣಿಟ್ಟು ಓದ್ಬೇಕು, ಅರ್ಥ ಆಗದಿದ್ರೆ ಮತ್ತೆ ಹಿಂದೆ ಹಿಂದೆ ಹೋಗ್ಬೇಕು, ಟಿವಿಯ ತೀರಾ ಮುಂದೆ ಕೂತು ಕೂತು ಕಣ್ಣು ಹಾಳಾಗ್ತಿದೆ.

"ರೀ, ನಂಗೇನೂ ಇದು ಬೇಡ , ತೆಗೆಸಿ ಬಿಡ್ರೀ"

"ಏನೇ ಏನು ತೆಗೆಸ್ಬೇಕು."

"ಅದೇರೀ, ನಂಗೇ ಟಾಟಾ ಸ್ಕೈನೇ ಸಾಕು. ಇವೆರಡನ್ನೂ ತೆಗೆಸಿಬಿಡಿ." ಯಜಮಾನರು ಪಕ ಪಕ ನಗ ತೊಡಗಿದರು.

ಭಾಗೀರಥಿ "ಯಾಕ್ರೀ" ಅಂತ ಸಿಟ್ಟಾಗಿ ಯಜಮಾನರ ಮುಖ ನೋಡಿದಳು.

'ಅದೇ ತಿಂತೀನಿ ಕದಾ ತೆಗೀ ಅಂತ ನಮ್ಮಮ್ಮ ಗಾದೆ ಹೇಳ್ತಿದ್ಲು ಅದು ನೆನಪಿಗೆ ಬಂತು" ಅಂತ ನಗೆ ತಡೆಯುವ ಪ್ರಯತ್ನ ಮಾಡಿದ್ರು.

"ಗೊತ್ತು, ನಮ್ಮಮ್ಮಾನೂ ಹೇಳ್ತಾ ಇದ್ಲು ಅದೇ ಗಾದೇನಾ. ನಿಮ್ಮಮ್ಮನದೇನು ಹೆಚ್ಚುಗಾರಿಕೆ" ಅಂತ ಗುರಾಯಿಸಿದಳು. ಗಾದೆ ಅರ್ಥ ಆಯ್ತೋ ಅಥವಾ ಬಿದ್ರೂ ಮೀಸೆ ಮಣ್ಣಾಗಲಿಲ್ಲ ಅಂತ ಶೋ ಮಾಡ್ತಾ ಇದಾಳಾ ಅಂತ ಯಜಮಾನರು ಇನ್ನೂ ಯೋಚಿಸ್ತಾ ಇದಾರೆ.

***

ಆಟೋ ಪುರಾಣ ಮತ್ತು ಮಲ್ಲಮ್ಮನ ಪವಾಡ

– ವೆಂಕಟ ಕಾಮತ್

ಭಾಗ 1

ಇಂದಿನ ನಿತ್ಯಜೀವನದಲ್ಲಿ ಆಟೋರಿಕ್ಷಾ ಒಂದು ಅವಿಭಾಜ್ಯ ಅಂಗ. ಇಂದು ನಾವು ಎಷ್ಟೊಂದು ಸಲ ನಮ್ಮ ಮನೆಗೆ ಯಾರಾದರೂ ಬರುತ್ತೇವೆ.. ಹೇಗೆ ಬರಲಿ.. ಎಂದೆಲ್ಲಾ ಅಂದರೆ ಕೂಡಲೇ ನೀವು ಉಡುಪಿಲಿ ಎಲ್ಲಿಯೇ ಒಂದು ಆಟೋ ಹತ್ತಿ ನಿಮ್ಮ ಮೊಬೈಲಿಂದ ಕರೆ ಮಾಡಿ ಆ ಮೊಬೈಲನ್ನು ಆಟೋ ಚಾಲಕನಿಗೆ ಕೊಡಿ ನಾವು ಹೇಳಿದೊಡನೆ ಆತ ಸೀದಾ ನಿಮ್ಮನ್ನು ನಮ್ಮ ಗೇಟಿನ ಬಳಿ ತಂದುಬಿಡುತ್ತಾನೆ ಅಥವಾ ನಾ ಪರಿಚಯದ ಆಟೋ ಕಳಿಸುತ್ತೇನೆ.. ಎಂದು ಈ ಆಟೋ ಮೇಲೆ ಪೂರ್ಣ ಭರವಸೆ ಇಟ್ಟಿದ್ದೇವೆ.

ಆಟೋ ನೆನಪುಗಳು ಬಹಳ. ನಾವು ಪ್ರೈಮರಿ ಶಾಲೆಗೆ ಹೋಗುವಾಗ ಇವುಗಳು ಇದ್ದ ನೆನಪಿಲ್ಲ. ನಮ್ಮ ಸಂಬಂಧಿಕರು ಬಿಳಿ ಅಂಬಾಸೆಡರ್ ಕಾರುಗಳಲ್ಲಿ ಬಂದ ನೆನೆಪು. 1969ರಲ್ಲಿ ಜಯನಗರದ 4ನೇ ಬ್ಲಾಕ್ ಪೂರ್ವದಲ್ಲಿ ನಮ್ಮದೇ ಎಂದು ಒಂದು ಮನೆ ಕಟ್ಟುವಾಗ ನಮ್ಮ ಅಮ್ಮ ಆಗಾಗ್ಗೆ ಆಟೋದಲ್ಲಿ ಮಕ್ಕಳನ್ನು ಜಯನಗರದಿಂದ ಕಲಾಸಿಪಾಳ್ಯಂ ಹೊಸ ಬಡಾವಣೆ ಎಂಬಲ್ಲಿ ಇದ್ದ ಬಾಡಿಗೆ ಮನೆಗೆ ಕರೆತರುತ್ತಿದ್ದರು. ಸಾಮಾನ್ಯವಾಗಿ ನಾವೆಲ್ಲಾ ಸರಕಾರಿ ಕೆಂಪು ಹಳದಿ ಬಿಟಿಎಸ್ ಬಸ್ಸುಗಳಲ್ಲೇ ತಿರುಗಾಡುವುದಿತ್ತು.

ಒಮ್ಮೆ ಮಡಿಕೇರಿಯಲ್ಲಿ ರಾಜಾ ಬಂಗಲೆ ಕಟ್ಟಿಸಿದ, ಬಹಳ ಪ್ರೀತಿಯಿಂದಿದ್ದ ಸಂಬಂಧಿಕರ ಗೃಹಪ್ರವೇಶಕ್ಕೆ ಹೋದ ತಂದೆತಾಯಿ ಅವರ ಮನೆಯ ವ್ಯಭವದಿಂದ ಬೆರಗಾಗಿ ಅವರ ಊಟೋಪಚಾರ ಆತಿಥ್ಯ ಸ್ವೀಕರಿಸಿ ಸಮಾರಂಭಕ್ಕೆ ಬರದೇ ಮನೆಯಲ್ಲಿ ಉಳಿದುಕೊಂಡಿರುವ ಮಕ್ಕಳು ಮತ್ತಿತರರಿಗೆಂದು ತುಂಬಿ ತುಂಬಿ ಕೊಟ್ಟ ಸಿಹಿ ತಿನಿಸು ಮತ್ತಿತರ ಸಾಮಗ್ರಿಗಳು ತುಂಬಿದ ಒಂದು ರಟ್ಟಿನ ಪೆಟ್ಟಿಗೆಯನ್ನು ಆಟೋರಿಕ್ಷಾದಲ್ಲಿ ಸೀಟಿನ ಹಿಂದೆ ಇಟ್ಟು, ಇಳಿಯುವಾಗ ಮರೆತು ಈಗ 50 ವರುಷ ಕಳೆದರೂ ನಮಗೆ ಸೀಟಿನ ಹಿಂಭಾಗದಲ್ಲಿ ಏನನ್ನಾದರೂ ಇಡುವಾಗ ಆಗಾಗ್ಗೆ ಈ ನೆನಪು.

ಆ ಡಬ್ಬದಲ್ಲಿದ್ದ ಸಕ್ಕರೆ ಗೋಡಂಬಿಯನ್ನು ಕಳೆದುಕೊಂಡ ದುಃಖ ಇಂದು ಮದುವೆಮುಂಜಿಗಳಲ್ಲಿ ಲೆಕ್ಕಮಾಡಿ 2-3 ಬಡಿಸುವ ಈ ಬಿಳಿ ಸಕ್ಕರೆ ಪಾಕದಲ್ಲಿ ಅದ್ದಿ ತಯಾರಿಸಿದ ಗೋಡಂಬಿ ಸಕ್ಕರೆ ಕಾಯಿಲೆಯವರಿಗೆ ಹೆಚ್ಚು ಪ್ರಿಯವೇನೋ ಎಂದು ತಿನ್ನುವಾಗೆಲ್ಲಾ ಈ ಆಟೋ ಕಥೆ ನೆನಪಾಗುತ್ತದೆ .

ಈ ಆಟೋ ಬಗ್ಗೆ ತಿಳಿದುಕೊಳ್ಳೋಣಾ ಎಂದು ಅಲ್ಲಿ ಇಲ್ಲಿ ಗೂಗಲ್ ವೈಕೀ ಎಂದೆಲ್ಲಾ ಹುಡುಕಿದಾಗ ಕೆಲವು ಮಾಹಿತಿಗಳು ನನ್ನ ಗಮನ ಸೆಳೆದವು.

ಈ ನಮ್ಮ ಪ್ರೀತಿಯ ಆಟೋರಿಕ್ಷಾ ಮೊದಲ ಬಾರಿಗೆ ಓಡಿದ್ದು 1950ರ ಡಿಸೆಂಬರ್ ತಿಂಗಳನಲ್ಲಿ. ಈ ಮೊದಲ ಆಟೋ ಒಂದು ವಿಸ್ತರಿಸಿದ ಸ್ಕೂಟರಿನಂತೆ ಇದ್ದು ಅದಕ್ಕೊಂದು ಬೋಗಿ ಜೋಡಿಸಿದಂತೆ ಇದ್ದು ಕ್ರಮೇಣ ಈ ದಶಕಗಳಲ್ಲಿ ಬಣ್ಣ, ಆಕಾರ, ಇಂಧನ ಬಳಕೆ ಎಲ್ಲವೂ ಕಾಲಕ್ಕೆ ತಕ್ಕಂತೆ ಬದಲು ಬದಲಾಗಿ ಹೊಸ ರೂಪವನ್ನು ತಾಳಿದೆ.

1950ರ ನವೆಂಬರಿನಲ್ಲಿ ಬೆಂಗಳೂರಿನ ಮೊದಲ ಚುನಾಯಿತ ಮೇಯರ್ ಎನ್. ಕೇಶವರವರ ಕಾರ್ಪೋರೇಶನ್ ಬಳೀಯ ಚೆಂಬರಿನಲ್ಲಿ ಕೆಲವು ಮಂದಿ ಮೋಟಾರು ನಿಯಂತ್ರಿತ ಆಟೋರಿಕ್ಷಾ ಆರಂಭಿಸುವ ಬಗ್ಗೆ ಪ್ರಸ್ತಾವವೊಂದನ್ನು ಇಟ್ಟಾಗ ಜಟಕಾಬಂಡಿ ಓಡಿಸುವವರು ಇದನ್ನು ಖಂಡಿಸಿದರು. ಜಟಕಾ ಕುದುರೆ ಕಟ್ಟಿದ ಗಾಡಿಗಳು ಅಂದಿನ ಬಡಮಧ್ಯಮ ವರ್ಗಕ್ಕೆ ತಿರುಗಾಡಲು ಪುಡಿಗಾಸಿಗೆ ಸಿಗುವ ವಾಹನವಾಗಿತ್ತು.

ಬದುಕು ಜಟಕಾ ಬಂಡಿ ಎಂದೆವೆ ಹೊರತು ಎಪ್ಪತ್ತು ವರುಷ ಕಳೆದರೂ ಬದುಕೊಂದು ಆಟೋರಿಕ್ಷಾ ಎಂದು ಯಾವ ನವ್ಯ ಕವಿಯೂ ವರ್ಣಿಸಲಿಲ್ಲ.

ಮಧ್ಯಮ ವರ್ಗದವಿರಿಗೆ ಸಿಗುವ ಸೌಲಭ್ಯಗಳನ್ನು ವಿವರಿಸಿ ಮೊಟ್ಟಮೊದಲಿಗೆ 10 ಆಟೋರಿಕ್ಷಾಗಳಿಗೆ ಲೈಸನ್ಸ್ ನೀಡುವ ಮೂಲಕ ರಿಕ್ಷಾ ಪುರಾಣದ ಶುಭಾರಂಭದ ಘಳಿಗೆ ಚರಿತ್ರೆಯ ಪುಟವನ್ನು ಸೇರಿತು. ಅಂದಿನ ಮೇಯರ್ ಕೇಶವರವರ "ಕೇಶವ್, ನನ್ನ ಆತ್ಮಕಥೆ" 1950ರಲ್ಲಿ ಅವರ ಜಟಕಾಬಂಡಿ ಮಾಲಿಕರೊಡನೆ ನಡೆದ ಮಾತುಕತೆ, ತೆಗೆದುಕೊಂಡ ನಿಲುವು, ನಿರ್ಧಾರಗಳ ಬಗ್ಗೆ ಉಲ್ಲೇಖಿಸಲಾಗಿದೆ. 1950ರ ಡಿಸೆಂಬರ್‌ನ ಒಂದು ದಿನ ಮೇಯರ್ ಖುದ್ದಾಗಿ ರಿಕ್ಷಾ ಮಾಲೀಕ ಮತ್ತು ಆತನ ಇಟಲಿ ದೇಶದ ಪತ್ನಿಯನ್ನು ತನ್ನ ನಿವಾಸದಿಂದ ಅವರು ವಾಸಿಸುತ್ತಿದ್ದ ಬಳೇಪೇಟೆಯ ಬಂಗಲೆಯವರೆಗೆ ಬೆಂಗಳೂರಿನ ರಸ್ತೆಗಳ ಮೇಲೆ ಓಡಿಸುವುದರೊಂದಿಗೆ ಬೆಂಗಳೂರಿನ ರಿಕ್ಷಾ ಓಡಾಟಗಳು ಪ್ರಾರಂಭವಾದವು.

ಮೊದಲ 10 ರಿಕ್ಷಾಗಳೊಡನೆ 1951ರಲ್ಲಿ ಮತ್ತೆ 45 ರಿಕ್ಷಾಗಳು ನಗರದ್ಲಿ ಸೇರಲ್ಪಟ್ಟವು. ಅಂದಿನ ದಿನಗಳಲ್ಲಿ 60, 70, 80, 90ರ ದಶಕದಲ್ಲಿ ರಿಕ್ಷಾ ಬಹಳ ಜನಪ್ರಿಯವಾಗಿರಲಿಲ್ಲ. ಅಂದಿನ ಜನ ಸರ್ಕಾರಿ ಕೆಂಪು ಬಸ್ಸುಗಳಲ್ಲಿ ತಿರುಗಾಡುವುದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು.. 1970ರವರೆಗೆ ಮೀಟರ್ ದರ ಬಳಕೆಯಲ್ಲಿರಲಿಲ್ಲ. .

ಕನ್ನಡ ಚಲನಚಿತ್ರಗಳಲ್ಲಿ ನಾಯಕ ನಟ ಶಂಕರನಾಗ, ವಿಷ್ಣುವರ್ಧನ್ ಮುಂತಾದವರು ರಿಕ್ಷಾ ಓಡಿಸಿ ಜನರಲ್ಲಿ ಆಟೋ ರಿಕ್ಷಾ ಜನಪ್ರಿಯತೆಯನ್ನು ಹೆಚ್ಚಿಸಿದರು

1990ರವರೆಗೆ ಪೆಟ್ರೋಲಿನಂದಲೇ ಓಡಿಸಲಾಗುತ್ತಿದ್ದ ರಿಕ್ಷಾಗಳು, ಮನೆಯ ಅಡಿಗೆಗೆ ಬಳಸಲಾಗುತ್ತಿದ್ದ ಇಂಧನದಿಂದ ಪ್ರಾಯೋಗಾತ್ಮಕವಾಗಿ ಚಲಾಯಿಸಿದವರಿಗೆ ಶಿಕ್ಷೆ ದಂಡವನ್ನು ವಿಧಿಸಲಾಗಿತ್ತು. ಬದಲಾವಣೆ ಗಳೊಂದಿಗೆ 2004ರಲ್ಲಿ ಎಸ್.ಎಂ.ಕೃಷ್ಣರ ಸರ್ಕಾರ 5000 ಎಲ್‌ಪಿಜಿ ಪರ್ಮಿಟ್ಟುಗಳನ್ನು ಆಟೋ ಚಾಲಕರಿಗೆ ಒಂದು ಪ್ರಯೋಗಾತ್ಮಕ ನಿಟ್ಟಿನಲ್ಲಿ ಕೊಡುವುದರೊಂದಿಗೆ ಒಂದು ಹೊಸ ಅಧ್ಯಾಯದ ಆರಂಭವಾಯಿತು. ಇಂದು ಆಟೋರಿಕ್ಷಾಗಳು ಪೆಟ್ರೋಲ್, ಡೀಸೆಲ್ ಎಲ್‌ಪಿಜಿ ಮತ್ತು ಸಿಎನ್‌ಜಿ ಬಳಸುತ್ತವೆ.. ಇತ್ತೀಚಿಗೆ 2020ರಲ್ಲಿ ಇಲೆಕ್ಟ್ರಿಕ್ ಆಟೋಗಳು ಬಳಕೆಗೆ ಬಂದಿವೆ.

10 ಮತ್ತೆ 45 ಹೀಗೆ ಮೊದಲ ಹೆಜ್ಜೆಗಳನ್ನಿಟ್ಟ ನಮ್ಮ ಆಟೋರಿಕ್ಷಾ ಇಂದು 73 ವರುಷಗಳ ನಂತರ 2.5 ಲಕ್ಷ ಸಂಖ್ಯೆಯಲ್ಲಿ ಜನರ ಮೆಚ್ಚಿನ ವಾಹನವಾಗಿ ಓಡಾಡುತ್ತಿವೆ ...

ಭಾಗ 2 ರಲ್ಲಿ ಮುಕ್ತಾಯ

***

ಮರೆಯಲ್ಲಿಹನು ದೇವರು

– ಮಾನಸ ಕೆ.ಕೆ.

ದೇವರಿದ್ದಾನೆ
ಮರೆಯಲಿ
ಕಂದನ ನಗುವಿನಲಿ
ಸದಾ ನಗುವ, ಅಳುವಿನ ಜೊಲ್ಲಿನ ಹನಿಯಲಿ ...
ಸಹೃದಯದ ಮನದಂಗಳದ
ನಗೆಯಲಿ

ಭಾವ ಚಿಗುರ ಪೈರಿನ ಎಳೆಯಲಿ
ನರಳಿಪ ನರನ ನರನಾಡಿಯಲಿ
ನೆತ್ತರ ಕಣಕಣದ ಕುಯಿಲಿನಲಿ
ಮೃದು ನುಡಿಯ ಮೆದು ಸದ್ದಿನಲಿ
ಆತ್ಮದೊಳು ಐಕ್ಯವಾಗಿಹ
ಜೊತೆ ಇರದ ಜೀವದಲಿ.
ಮದ, ಮೋಹ, ಮತ್ಸರ
ತೊರೆದವರ ಆತ್ಮದಲಿ..

ನನ್ನಲ್ಲಿ ನಿನ್ನಲ್ಲಿ..
ಹುಡುಕುವೆ ಅವನ
ನೀ ಎಲ್ಲೆಲ್ಲಿ,
ನಿನ್ನೊಳಗೂ ಇಹನು ನೋಡಿಲ್ಲಿ..
ಕಂಗೆಟ್ಟಾಗ ಕರಗಳ
ಚಾಚಿ ಅಪ್ಪಿದ ಮೌನ ಮನದಲ್ಲಿ,

ತೃಪ್ತ ದೇಹ, ಮನಸ
ಆವರಿಸಿ ನಿಶ್ಚಿಂತೆಯತ್ತ
ಸಾಗಿಸಿದವನ(ಳ)ಲ್ಲಿ.,.

ಎಕಾಂತದಿ ನಾನಿರುವೆ
ಎಂದು ಒಳಗರ್ಭದ
ಯಾವುದೋ ಶಕ್ತಿಯ
ರೂಪದಲ್ಲಿ..
ಹಣ ಗುಣದ ಮಿಶ್ರಣದ
ಅಂಚಿನಲ್ಲಿ ..

ಹೊಳೆವ ಜ್ಞಾನದ ಕಿಂಡಿಯಲಿ
ಒಲವ ತೋರಣವ ಕಟ್ಟಿದ
ಸರಮಾಲೆಗಳಲ್ಲಿ,

ಎಚ್ಚರಿಸಬೇಕಿನ್ನು
ಮನದ ಗುಡಿಗಂಟಾನಾದವಾ
ಅರಿವ ಮೂಡಿಸುತ್ತಾ
ಹೃನ್ಮನ ತೆರೆದರೆ
ಗೋಚರಿಸುವುದು
ಸರ್ವರೆದೆಯಲಿ
ನಗುತಿಹನು ಸದಾ ದೇವರು
ಈ ಜಗದಲಿ ......

***

ಆಟದ ಸಾಮಾನು

– ಲಕ್ಷ್ಮೀ ವಿಠಲ್

ಅಮೇರಿಕೆಯಿಂದ ಬರುವಾಗ ಅನಘಾ ತನ್ನೊಡನೆ ಟ್ಯಾಬ್ ಜೊತೆಗೆ ಅತಿ ಮುಖ್ಯವಾದ ಸ್ಟಫಿ ಒಂದನ್ನು ತಂದುಕೊಂಡಿದ್ದಳು. ಹಾಗೇ ನೋಡಿದರೆ ಅವಳ ಹತ್ತಿರವಿರುವ ಸ್ಟಫಿಗಳು ಅಷ್ಟಿಷ್ಟಲ್ಲ. ಇನ್ನು ಇತರ ಆಟದ ಸಾಮಾನುಗಳು ಅತಿರೇಕವೆನ್ನುವಷ್ಟು ಹೆಚ್ಚು. ಆದರೂ ಈ ಸ್ಟಫಿಗಳೆಂದರೆ ಅವಳಿಗೆ ಜೀವ. ಮಲಗುವಾಗ 7/8 ಸ್ಟಫಿಯನ್ನು ಹಾಸಿಗೆಮೇಲೆ, ಹೊದಿಕೆಯೊಳಗೆ ತುಂಬಿಸಿ ತಬ್ಬಿ ಮಲಗಿದರೆ ಅವಳಿಗೆ ಸುಖ ನಿದ್ರೆ.

ಎಷ್ಟೋಬಾರಿ ರಾತ್ರಿಯಲ್ಲಿ ಕೆಮ್ಮಿ ಕೆಮ್ಮಿ ಸುಸ್ತಾಗುತ್ತಿತ್ತು ಮಗು. ಎಲ್ಲಾ ರೀತಿಯಿಂದ ಚೆನ್ನಾಗಿರುವ ಮಗು, ಒಮ್ಮೆಮ್ಮೆ ರಾತ್ರಿ ಏಕೆ ಇಷ್ಟು ಕೆಮ್ಮುತ್ತಿದೆ ಎಂದು ಚಿಂತಿಸಿದೆ. ಕೊನೆಗೂ ಅರಿವಾಯ್ತು. ಸ್ಟಫಿಗಳ ಮೃದು ರೋಮ ಅವಳಿಗೆ ಕೆಮ್ಮು ತರುತ್ತಿದೆ ಎಂದು. ನಾನೂ, ವಿಠಲ್‌ರೂ ಬಹಳ ಸಾಹಸಮಾಡಿ ಅವಳಿಗೆ ತಿಳಹೇಳಿ ಒಂದು ಸ್ಟಫಿ ಇಟ್ಟುಕೊಂಡು ಮಲಗಲು ಒಪ್ಪಿಸಿದೆವು. ಗಲಾಟೆ ಮಾಡಿ ಆ ಗೊಂಬೆಗಳಿಲ್ಲದೆ ಹೋದರೆ ತನಗೆ ನಿದ್ದೆಯೇ ಬರುವುದಿಲ್ಲವೆಂದು ಅತ್ತು ಸೊರಗಿದ ಮಗು ಕೊನೆಗೂ ನಮ್ಮ ಪ್ರೀತಿಯ, ಆಗ್ರಹದ ಮಾತಿಗೆ ಮಣಿಯಿತು.

ಒಂದೇ ಗೊಂಬೆಯೊಡನೆ ನಿದ್ರಿಸಲು ಅಭ್ಯಾಸ ಮಾಡಿಕೊಂಡಿತು. ಬಲಗೈಲಿ ಸ್ಟಫಿ, ಎಡಗೈಯಲ್ಲಿ ತನ್ನ ಕೈ ಸೇರಿಸಿ ನಿದ್ದೆ ಮಾಡುತಿತ್ತು. ಊರಿಗೆ ಹೊರಡುವಾಗ ಅದೇ ಸ್ಟಫಿಯನ್ನು ಟ್ಯಾಬ್ ಜೊತೆಗೆ ಸೇರಿಸಿಕೊಂಡು, ಅದರೊಡನೆ ಒಂದು ಹೊದಿಕೆ ಎಲ್ಲವನ್ನೂ ಅವಳ ಮಿಂಚುವ ಬ್ಯಾಗಿನಲ್ಲಿ ಜೋಪಾನ ಮಾಡಿತು

ಹಲವೆಂಟು ಲಗೇಜ್, ಪುಟ್ಟ ಅವಳ ಮಕ್ಕಳು, ಇನ್ನೊಂದು ಮಗುವೇ ಆದ 7ರ ಅನಘಾ, ನಾವಿಬ್ಬರು, ಸ್ಮಿತಾ ಎಲ್ಲರೂ ಮಯಾಮಿ ಏರ್‌ಪೋರ್ಟ್ ತಲುಪಿ, ಚೆಕ್ ಇನ್, ಸೆಕ್ಯೂರಿಟಿ ಚೆಕ್‌ನ್ನು ಆತುರಾತುರವಾಗಿ ಮುಗಿಸಿ ಫ್ಲೈಟ್ ಬೋರ್ಡ್ ಮಾಡುವಾಗ ಎಲ್ಲರಿಗೂ ಸುಸ್ತೋ ಸುಸ್ತು. ಪುಟ್ಟ ಮಕ್ಕಳು ಅಗಾಧವಾದ ಏರ್‌ಪೋರ್ಟ್, ಅಲ್ಲಿನ ಜನ ನೋಡಿ ಬೆರಗುಗೊಂಡು, ನಗುತ್ತಲೇ ಇದ್ದವು. ಎಲ್ಲರನ್ನು ಕೈಬೀಸಿ ತಮ್ಮತ್ತ ಸೆಳೆಯುತ್ತಿದ್ದರು. ಆಯಾಸದ ನಡುವೆ ಮಕ್ಕಳ ಹರ್ಷ ನಮಗೆ ನೆಮ್ಮದಿ ನೀಡಿತ್ತು.

ವಿಮಾನದೊಳಗೆ ಸೇರಿ ನಮ್ಮ ಜಾಗವನ್ನು ಖಾತ್ರಿಪಡಿಸಿಕೊಂಡು ಕುಳಿತವಷ್ಟೇ, ಅನಘಾ ತನ್ನ ಮಿಂಚು ಬ್ಯಾಗಿಂದ ಹೊದಿಕೆ ಹೊರತೆಗೆದಳು. ಸಾಕು ಸಾಕೆನಿಸುವಷ್ಟು ಆಯಾಸಗೊಂಡಿದ್ದ ನಮಗೆ ಇದೇನಪ್ಪ ಈ ಮಗು ಈಗಲೇ ಇಷ್ಟು ದೊಡ್ಡ ಹೊದಿಕೆಯನ್ನು ಎಳೆದಾಡಿಕೊಂಡು ಮೈಮೇಲೆ ಹಾಕಿಕೊಳ್ಳುತ್ತಿದೆಯಲ್ಲ ಎನಿಸಿ, ಮಗಳಿಗೆ ಪ್ರಶ್ನಿಸಿದರೆ, ಸುಮ್ಮನಿರಮ್ಮ ಆ ಹೊದಿಕೆ ಇದ್ದರೆ ಅವಳು ನೆಮ್ಮದಿಯಾಗಿ ಕೂತು, ನಿದ್ದೆ ಮಾಡುತ್ತಾಳೆ ಎಂದಳು. ಹಾಗೇ ಸ್ಟಫಿಯೂ ಒಂದು ಕೈಲಿ ಭದ್ರವಾಗಿ ಕುಳಿತಿತ್ತು. ಮಧ್ಯೆ ಮಧ್ಯೆ, ಊಟ ತಿಂಡಿಗೆ ಆ ಗೊಗ್ಗಯ್ಯನ ಅವತಾರದಲ್ಲೇ ಸವರಿಸಿಕೊಂಡು ತಿಂಡಿ ತಿನ್ನುವುದು, ಊಟ ಮಾಡಿಕೊಳ್ಳುವುದು ನೋಡಿ ನಗುವೂ ಬರುತ್ತಿತ್ತು.

ದುಬೈ ಬಂದಿತು. ವಿಮಾನ ಬದಲಾವಣೆ ಮಾಡಬೇಕಿತ್ತು. ಸಮಯ ಕಡಿಮೆ, ಅನಘಾ ತಾನು ಹೊದ್ದಿದ್ದ ಹೊದಿಕೆಯನ್ನು ಎರ್ರಾಬಿರ್ರಿ ತನ್ನ ಬ್ಯಾಗಿಗೆ ತುರುಕಿಕೊಂಡು, ಸ್ಟಫಿಯನ್ನು ಒಳಗೇ ಸೇರಿಸಿ ಸಿದ್ಧವಾದಳು. ಕಿರಿಯರು ನಗುನಗುತ್ತಲೇ ಇದ್ದವು.

ಮತ್ತದೇ ಅನುಭವ, ದುಬೈಯಿಂದ ಬೆಂಗಳೂರಿಗೆ ಬರುವಾಗಲೂ. ಅಂತೂ ಅಸಾಧ್ಯ ಪರಿಶ್ರಮದೊಂದಿಗೆ, ಕ್ಷೇಮವಾಗಿ ಮೈಸೂರು ತಲುಪಿದೆವು.

ಮನೆಯ ಎಲ್ಲಾ ಮೂಲೆ ಮೂಲೆಗಳನ್ನು ಅನಘಾ ಪರಿಚಯ ಮಾಡಿಕೊಂಡಿತು. ವಿಮಾನದಲ್ಲಿ ಅವಳಿಗೆ ಕೊಟ್ಟಿದ್ದ ಬ್ಯಾಗು, ಪುಟ್ಟುಗಳಿಗೆ ಕೊಟ್ಟ ಆಟದ ಸಾಮಾನು ಅವಳನ್ನು ಆಕರ್ಷಿಸಲಿಲ್ಲ. ತುಂಟತನದಿಂದ ಎಲ್ಲರಿಂದಲೂ ಜೋರು ಮಾಡಿಸಿಕೊಳ್ಳುತಿತ್ತು. ಮೇನ್ ರೋಡಿನಲ್ಲಿ ಮನೆ, ಗೇಟ್ ತೆರೆದರೆ ವಾಹನಗಳ ಓಡಾಟ, ಇವಳಿಗೆ ಗೇಟ್ ಹತ್ತಿ ಕುಣಿದರೇ ಸಂತಸ ಸಮಾಧಾನ. ಎಲ್ಲಿ ಬಿದ್ದು ಏಟು ಮಾಡಿಕೊಳ್ಳುವಳೋ ಎನ್ನುವ ನಮ್ಮ ಆತಂಕ ಅವಳಿಗೆ ಲೆಕ್ಕಕ್ಕಿಲ್ಲ. ಸದಾ ಕುಣಿದು ಕುಪ್ಪಳಸುವ ಕಂದ ನಮ್ಮ ಜೋರಿಗೆ, ಬೈಗಳಿಗೆ, ಅಮ್ಮನ ಏಟಿಗೆ ಕ್ಯಾರೇ ಎನ್ನಲಿಲ್ಲ, ತುಂಟಾಟ ನಿಲ್ಲಿಸಲೂ ಇಲ್ಲ.

ಅವರಮ್ಮನಿಗೆ ಹೇಗಪ್ಪಾ ಇವಳನ್ನು ಕಂಟ್ರೋಲ್ ಮಾಡುವುದು ಎನ್ನಿಸಿ, ಚಿಂತೆಗೊಳಗಾದಳು. ಅರ್ಕಿಮಿಡಿಸ್‌ನ ಯುರೇಕಾದಂತೆ ಏನೋ ನೆನಪಿಗೆ ಬಂತು. ತಕ್ಷಣ ಮಗುವನ್ನು ಕರೆದು, ನೀನು ಹೊರಗೆ ಹೋಗದೇ ಇಲ್ಲೇ ಕೂತ್ಕೊಂಡು ಪೈಂಟ್ ಮಾಡು ಎಂದಳು. ಮಗುವಿನ ಆನಂದ ಹೇಳಲಸಾಧ್ಯ, ತಕ್ಷಣವೇ ಪುಟ್ಟ ಬಟ್ಟಲುಗಳಿಗೆ ಬೇಡಿಕೆ ಇಟ್ಟಿತು. ಬಣ್ಣವನ್ನು ನೀರಿನಲ್ಲಿ ಹೊಂದಿಸಿಕೊಂಡು ಪೈಂಟ್ ಮಾಡಬೇಕಾದ ಘನಕಾರ್ಯ ಅವಳಿಗಿತ್ತಲ್ಲ, ಅದಕ್ಕೆ. ನಾನು ಕೊಟ್ಟ ಸ್ಟೀಲ್ ಬಟ್ಟಲು ಸರಿಯಾಗಲಿಲ್ಲ. ಬಂದಿತು ಅಡಿಗೆ ಮನೆಗೆ, ಧಾಳಿಯಿಟ್ಟಿತು, ತನಗೆ ಬೇಕಾದ ಬಟ್ಟಲು ಸಿಗುವುದೇ ಎಂದು. ಉಂಹುಂ ಇಲ್ಲಾ. ಏನು ಮಾಡುವುದು, ಕಿಚನ್ ಡ್ರಾ ಎಳೆದಾಗ ಕಂಡದ್ದು ಎರಡು ಐಸ್‌ಕ್ರೀಂ ಉಪಯೋಗಿಸಿ ತೊಳೆದಿಟ್ಟ ಡಬ್ಬಿಗಳು. ಗಟ್ಟಿಯಾಗಿ ಚೆನ್ನಾಗಿದ್ದ ಬಟ್ಟಲು ಉಪಯೋಗಕ್ಕೆ ಬರುವುದೆಂದು ತೆಗೆದಿರಿಸಿದ್ದೆ.

ಅಜ್ಜೀ ಈ ಡಬ್ಬಿ ತೆಗೆದುಕೊಳ್ಳಲಾ ಪೈಂಟ್ ಮಾಡಬೇಕಲ್ಲ ಅದಕ್ಕೆ ಎಂದು ಪರ್ಮಿಷನ್ ಬೇರೆ ಕೇಳಿತು. ಅಜ್ಜಿ ಕರಗಿ ನೀರಾಗಿ, ಅಯ್ಯೋ ನಿನಗಲ್ಲದೆ ಮತ್ಯಾರಿಗೆ, ತಗೋ ಚೆನ್ನಾಗಿ ಪೈಂಟ್ ಮಾಡು ಎಂದು ಹೇಳಿ ಕೊಟ್ಟೆ.

ಅವಳು ಬೆಳಗಾವಿಗೆ ತನ್ನ ಇನ್ನೊಂದು ಅಜ್ಜನ (ಅಳಿಯನ ತಂದೆ) ಮನೆಗೆ ಹೋಗುವವರೆಗೆ ತನ್ನ ಇಷ್ಟವಾದ ಪೇಂಟಿಂಗ್ ಮಾಡಿಕೊಂಡು ಖುಷಿಯಾಗಿತ್ತು. ಹಾಗಂತ ಗೇಟ್ ಹತ್ತುವುದು, ಗ್ರಿಲ್ ಮೇಲೆ ಹತ್ತಿ ಕುಣಿಯುವುದನ್ನು ಬಿಡಲೇ ಇಲ್ಲ.

ಅಜ್ಜನ ಮನೆಗೆ ಹೊರಡುವ ತಯಾರಿ ಎಲ್ಲಾ ಆಯ್ತು. ಕೊನೆಯದಾಗಿ ಈ ಎರಡು ಡಬ್ಬಗಳನ್ನೂ ಮಿಂಚಿನ ಬ್ಯಾಗಿನಲ್ಲಿ ಸೇರಿಸಿಕೊಂಡಿತು. ನಾನು ನೋಡುತ್ತಲೇ ಇದ್ದೆ. ಮಗು ಮುಗ್ಧವಾಗಿ ನುಡಿಯಿತು ಅಜ್ಜೀ, ನಾನು ಬೆಳಗಾಂನಿಂದ ವಾಪಸ್ ತರ್ತೇನೆ. ಒಕೇ ನ ಅಂತು.

ಮನಕ್ಕೆ ಕಸಿವಿಸಿಯಾಯ್ತು, ಸಂತಸವೂ ಆಯ್ತು. ನಾನು ನನ್ನ ವಸ್ತುಗಳ ಮೇಲೆ ಹೆಚ್ಚಿನ ಸ್ವಾಧೀನ ತೋರಿಸಿದೆನಾ, ಮಗು ಅದನ್ನು ಅರಿಯಿತೇ ಎಂದು ಕಸಿವಿಸಿಯಾದರೆ, ಬೇರೆಯವರ ವಸ್ತು ಹಿಂತಿರುಗಿಸುವ ಅವಳ ಬುದ್ಧಿಗೆ ಸಂತಸವೂ ಆಯ್ತು.

ಒಂದು ತಿಂಗಳು ಕಳೆದು ಅಳಿಯನೊಂದಿಗೆ ಎಲ್ಲರೂ ಮೈಸೂರಿಗೆ ಬಂದರು. ಒಂದು ವಾರದಲ್ಲೇ ಮಕ್ಕಳ ನಾಮಕರಣ. ಶುಭಕಾರ್ಯದಲ್ಲಿ ಎಲ್ಲರೂ ತಲ್ಲೀನರಾಗಿ ಸಮಯ ಸರಿದುದೇ ತಿಳಿಯಲಿಲ್ಲ. ಸಂಭ್ರಮದ ನಾಮಕರಣ ಮುಗಿದ ನಾಲ್ಕು ದಿನಕ್ಕೆ ಎಲ್ಲರೂ ಮರಳಿ ಅಮೇರಿಕಾಗೆ ಹೊರಟರು. ಮನೆಯೆಲ್ಲಾ, ಮಕ್ಕಳ ನಗುವಿನಿಂದ, ಅನಘಳ ಚೇಷ್ಟೆಯಿಂದ ಸ್ವರ್ಗವಾಗಿದ್ದು, ಈಗ ಶೂನ್ಯವಾಗಿದೆ. ಬದುಕು ಇಷ್ಟೇನಾ ಅನ್ನಿಸಿದೆ.

ವಿಡಿಯೋಕಾಲ್‌ನಲ್ಲಿ ಮಕ್ಕಳನ್ನು ನೋಡಿ ಮಾತಾಡಿಸಿ ಸಂತೋಷಪಡಬೇಕಾಗಿದೆ.

ಇಂದು ಬೆಳಗ್ಗೆ ಕಾಫಿ ಕುಡಿಯುವಾಗ ಊಟದ ಮೇಜಿನ ಮೇಲೆ ಈ ಡಬ್ಬಿಗಳು ಕಾಣಿಸಿದವು. ಅನಘಾ ಹಿಂತಿರುಗಿ ತಂದಿದ್ದ ಡಬ್ಬಿಗಳು ಅಜ್ಜನ ಕಣ್ಣಿಗೆ ಬಿದ್ದು, ಮೇಜಿನ ಮೇಲೆ ಇಟ್ಟಿದ್ದರು ಎನಿಸುತ್ತೆ.

ಕೊಟ್ಟ ಮಾತಿನಂತೆ ಅನಘಾ ಡಬ್ಬಿ ಹಿಂತಿರುಗಿಸಿದಳು. ಅದರೊಂದಿಗೆ ಅವಳ ನೆನಪು ಹಸಿರಾಗಿಸಿ, ಮನ ತುಂಬಿ, ಕಣ್ಣೀರು ಹರಿಯಿತು.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 210 – ಸಂಚಿಕೆಯ ಬಿಡುಗಡೆ ದಿನಾಂಕ: 25 ಮಾರ್ಚ್ 2023 – ಶನಿವಾರ

ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ 210 – 11.02.2023
ಅಧ್ಯಕ್ಷರ ಅನಿಸಿಕೆಗಳು

– ಪೋಲೇನಹಳ್ಳಿ ಎಸ್. ರಮೇಶ್

ಸ ಸ ಕ ಸ ವೇದಿಕೆಯ ಎಲ್ಲ ಸದಸ್ಯರಿಗೂ, ಸಾಹಿತ್ಯಾಸಕ್ತರಿಗೂ ನನ್ನ ನಮಸ್ಕಾರಗಳು ಮತ್ತು ನನಗೆ ಈ ಅವಕಾಶ ಕೊಟ್ಟ ಸಂಚಾಲಕರಿಗೆ ಧನ್ಯವಾದಗಳು. ನಾನು ಹೇಳುವುದನ್ನು ತಾಳ್ಮೆಯಿಂದ, ಸಹಿಸಿಕೊಂಡು ಕೇಳಲಿರುವ ನಿಮಗೆಲ್ಲರಿಗೂ ಸಹ ಮೊದಲೇ ಧನ್ಯವಾದಗಳನ್ನು ತಿಳಿಸುತ್ತೇನೆ.

ಸಾಹಿತ್ಯದಲ್ಲಿ ಹೆಚ್ಚಿನ ಪರಿಶ್ರಮ ಇಲ್ಲದ, ಶಿಷ್ಟ ರೀತಿಯಲ್ಲಿ ಸಾಹಿತ್ಯ ಅಭ್ಯಾಸ ಮಾಡಿರದ ನನ್ನಂತಹವನು ನುರಿತ ಸಾಹಿತಿಗಳ ಮುಂದೆ ಕುಳಿತು ಮಾತನಾಡುವುದು ಆಭಾಸವೇ ಸರಿ. ಶ್ರೀ ಮಹಾಬಲರಂತಹ ಮಹಾನ್ ಭಲರು ಸೂಚಿಸಿದಾಗ ಸಬೂಬು ಹೇಳಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವಾಯಿತು. ಒಪ್ಪಿಕೊಂಡೆ. ಒಟ್ಟಿಗೆ ಸಹಿಸೋಣ!

ಇನ್ನು ಇಂದಿನ ಪ್ರಸ್ತುತಿಗಳ ಬಗ್ಗೆ ಮಾತನಾಡುವಲ್ಲಿ, ನನ್ನ ಮಬ್ಬು ಕಣ್ಣಿಗೆ ಪ್ರಸ್ತುತಿಗಳಲ್ಲಿನ ಕೆಲವು ಮಿನುಗು, ಹೊಳಹುಗಳು ಕಾಣದೆ ಹೋಗಿದ್ದರೆ ಕ್ಷಮೆಯಿರಲಿ. ನಾನು ತಾರೆಗಳ ಬೆಳಕನ್ನು ನಿಬ್ಬೆರಗಿನಿಂದ ನೋಡುವವನೇ ಹೊರತು ಪ್ರಕಾಶವನ್ನು ಅಳೆಯುವ ಕಾರ್ಯ ಮಾಡಲಾರೆ.

1. ಶ್ರೀಮತಿ ನಾಗರತ್ನ ಚಂದ್ರಶೇಖರ್ ಅವರ "ಎರಡು ಆತಂಕಕಾರಿ ಪ್ರಸಂಗಗಳು"

ನಗೆಲೇಪ ಹೊತ್ತ ಒಂದು ಸುಂದರ ಲಲಿತ ಪ್ರಬಂಧ ಇದು. ಪ್ರಯಾಣದ ಸಮಯದಲ್ಲಿ ಎದುರಾದ ಎರಡು ನಿಜ ಘಟನೆಗಳನ್ನು ಕುರಿತು ಬರೆದಿದ್ದಾರೆ. ಸಂಭವಿಸಬಹುದಾದ ಆಘಾತದ ಕಲ್ಪನೆಯೇ ಈ ಲೇಖನದ ತಿರುಳು. ಅವಘಡ ಸಂಭವಿಸಬಹುದು ಎನ್ನುವಾಗ ಮನಸ್ಸು ಏನೆಲ್ಲವನ್ನು ಕಲ್ಪಿಸಿಕೊಳ್ಳುತ್ತದೆ ಎಂಬುದು ಸ್ವಾರಸ್ಯಕರ. ಅದನ್ನು ಬರೆಯುವಾಗಲೂ ತಮ್ಮಲ್ಲಿರುವ ಹಾಸ್ಯ ಪ್ರಜ್ಞೆಯನ್ನು ಅವರು ಮರೆಯುವುದಿಲ್ಲ. ದಾಖಲಿಸುವ ಆತಂಕದ ನಡುವೆಯೂ ಕಾಣಬರುವ ತಿಳಿಹಾಸ್ಯ ಲೇಖನವನ್ನು ಓದಿಸಿಕೊಳ್ಳುತ್ತದೆ.

"ಯಾವುದಕ್ಕೂ ಇರಲಿ ಎಂದು ವಿಡಿಯೋ ಮಾಡಿಟ್ಟೆ' ಎನ್ನುವಾಗ, "ಪ್ಯಾಂಟು ಶರಟು ಧರಿಸಿದ್ದ ನಾವು ಅವರಿಗೆ ಗಟ್ಟಿಮುಟ್ಟಾದವರಂತೆ ಕಂಡಿರಬಹುದು" ಎನ್ನುವಾಗ ಲೇಖಕಿಯ ಮನಸ್ಸಿನಲ್ಲಿ ತುಂಬಿರುವ ನೈಜ ಹಾಸ್ಯ ಎದ್ದುಕಾಣುತ್ತದೆ. ಶ್ರೀಮತಿ ನಾಗರತ್ನಾ ಮೂರ್ತಿಯವರು ಇಂತಹ ನವಿರು ಹಾಸ್ಯದ ಲೇಖನಗಳನ್ನು ಇನ್ನಷ್ಟು ಕೊಡಲಿ ಎಂದುಆಶಿಸೋಣ. ಅವರಿಗೆ ಧನ್ಯವಾದಗಳು.

2. ಶ್ರೀ ಕೆ.ಎನ್. ಮಹಾಬಲ ಅವರ "ಮುನ್ನುಡಿಯೆಂಬ ಮುಳ್ಳಿನ ಹಾದಿ"

ತಿಳಿಹಾಸ್ಯಕ್ಕೆ ಉತ್ತಮ ಉದಾಹರಣೆಗಳು ಶ್ರೀ ಮಹಾಬಲ ಅವರ ಬರಹಗಳು. ಕವಿ, ವಿಮರ್ಶಕ ಎಲ್ಲವೂ ಆಗಿರುವ ಇವರು ಮನ್ನುಡಿ ಬರೆಸಿಕೊಳ್ಳಲು ಕವಿಯೊಬ್ಬ ಬಹುಶಃ ಹೆಣಗಬೇಕಾದ ಕಷ್ಟವನ್ನು ಈ ಲಘು ಪ್ರಬಂಧದಲ್ಲಿ ಸುಂದರವಾಗಿ ನಿರೂಪಿಸಿದ್ದಾರೆ. ಇಲ್ಲಿ ಅವರ ಕವಿಮಿತ್ರನ ಬವಣೆ, ಪಜೀತಿ ಒಂದೊಂದಾಗಿ ಬಿಚ್ಚಿಗೊಳ್ಳುತ್ತವೆ. ಇಲ್ಲಿ ಯಾರದೂ ತಪ್ಪಿಲ್ಲ. ಆದರೂ ಅವರ ಮಿತ್ರನಿಗೆ ಮುನ್ನುಡಿ ದೊರೆಯುವುದಿಲ್ಲ! ಇಲ್ಲಿ ಯಾರೂ ದೂಷಣೆಗೆ ಗುರಿಯಾಗುವುದಿಲ್ಲ. ಇಲ್ಲಿ ಕಾಣುವ ಹಾಸ್ಯ ಅತೀ ಸುಂದರ. ಒಂದು ರೀತಿಯಲ್ಲಿ ನೋಡಿದರೆ ಎಲ್ಲ ಲೇಖಕರೂ ಆರಂಭದಲ್ಲಿ ಎದುರಿಸುವ ಸಮಸ್ಯೆ ಎಂದರೆ ತಮ್ಮ ಕೃತಿಗೆ ಹಿರಿಯ ಕವಿಯೊಬ್ಬರಿಂದ ಮುನ್ನುಡಿ ಪಡೆಯುವುದು.

"ಹಾಯದ ಒದೆಯದ ಸಹೃದಯ ವಿಮರ್ಶಕರನ್ನು ಕೇಳಬೇಕಿತ್ತು" ಎನ್ನುವಾಗ, "ಬಿಡುವಿಲ್ಲ ನನಗೆ. ಒಮ್ಮೆ ಮನೆಗೆ ಬಂದು ಮುದ್ದು ಮೊಮ್ಮಗಳನ್ನು ನೋಡಿ ಹರೆಸಿ" ಎನ್ನುವ ವಿಮರ್ಶಕರೊಬ್ಬರ ಮಾತುಗಳು ನಗೆ ತರಿಸುತ್ತವೆ. ವಾಸ್ತವಕ್ಕೆ ಹತ್ತಿರವಾದ ಮಾತುಗಳು. ಸಬೂಬು ಕೊಡಲು ಬಾರದ ಮುನ್ನುಡಿ ಲೇಖಕರಿಗೆ ಈ ಲೇಖನ ಬಹಳ ಉಪಯುಕ್ತವೂ ಆಗಬಹುದೇನೋ !

3. ಶ್ರೀಮತಿ ರಾಧಿಕಾ ವಿ ಗುಜ್ಜಾರ್ ಅವರ " ನನಗದು ಕಾಲೇಜಿನ ದಾರಿ. ಆ ಹುಡುಗಿಗೆ?? "

ಶ್ರೀಮತಿ ಗುಜ್ಜಾರ್ ಅವರು ಒಳ್ಳೆಯ ಕವಿ. ಅವರ ಕವನಗಳಲ್ಲಿ ಅವರದೇ ನುಡಿಗಟ್ಟು, ಛಾಪು ಗುರುತಿಸಬಹುದು. ನಿಧಾನ ಹರಿವ ನದಿ ಆಳವಿರುತ್ತದೆ ಎನ್ನುತ್ತಾರೆ ತಿಳಿದವರು. ಇಂದು ಇವರು ಪ್ರಸ್ತುತ ಪಡಿಸಿದ ಕತೆ ಎರಡು ಕಾಲೇಜುಗಳುಳ್ಳ ನಾಗರೀಕ ಎನ್ನಬಹುದಾದ ಪಟ್ಟಣದಲ್ಲಿ ನಡೆದ ಘಟನೆಯ ಬಗ್ಗೆ. ಕಾಲೇಜಿಗೆ ಎರಡು ದಾರಿಗಳಿವೆ ಎಂದು ಆರಂಭವಾಗುವ ಕತೆ, ದಾರಿಗಳ ನಡುವಿನ ವ್ಯತ್ಯಾಸವನ್ನು ಸವಿವರ ಬೇಕೆಂದೇ ಚಿತ್ರಿಸುತ್ತಾ ಹೊರಟು ಕೊನೆಯಲ್ಲಿ ನಾಗರೀಕ ಸಮಾಜದಲ್ಲಿ ಇರಬಹುದಾದ ಕ್ರೌರ್ಯ ರಪ್ಪನೆ ಕಣ್ಣಿಗೆ ರಾಚುವಂತೆ ಮಾಡುತ್ತಾರೆ.

'ಹಾದರಕ್ಕೆ ಹುಟ್ಟಿದ ಮಗುವನ್ನು ಜೀವಂತ ಹೂತರು' ಎನ್ನುವಾಗ ಸರಾಗ ಹರಿದ ನದಿ ಜಲಪಾತದಲ್ಲಿ ಸಿಕ್ಕಹಾಗೆ ಭಾಸವಾಗುತ್ತದೆ. 'ಕೆಲವು ದಿನ ಆ ಕಾಲುದಾರಿಯಲ್ಲಿ ಹೋಗಬೇಡಿ' ಎಂದು ಸೊಪ್ಪಿನ ಹೆಂಗಸು ಸೂಚಿಸುವಾಗ ನಮ್ಮ ಸಮಾಜ ವ್ಯವಸ್ಥೆಯಲ್ಲಿರುವ ಕ್ರೌರ್ಯವನ್ನು ನಾವು ತಣ್ಣಗೆ ಒಪ್ಪಿಕೊಂಡಂತೆ ಭಾಸವಾಗುತ್ತದೆ. ಸಣ್ಣ ಕತೆಯ ಯಶಸ್ಸು ಅದನ್ನು ಓದಿ ಮುಗಿಸಿದ ಮೇಲೆ ಓದುಗ ದಿಗ್ಭ್ರಾಂತನಾಗಿ ಮೌನ ತಳೆಯುವಂತಾದರೆ ಸಾಕು. ಸಾರ್ಥಕ. ಇಂತಹ ಕತೆ ಹೇಳಿದ ಶ್ರೀಮತಿ ಗುಜ್ಜಾರ್ ಅವರಿಗೆ ಅಭಿನಂದನೆಗಳು.

4. ಶ್ರೀ ವಿಠ್ಠಲ್ ಇಜ್ಜೇರಿಯವರ "ಚಮತ್ಕಾರಿ ಮಹಿಳೆ" ಕತೆ

ಇದು ಒಳ್ಳೆಯ ಅನುವಾದಿತ ಕತೆ. "ಮಹಿಳೆಯ ನಿಜವಾದ ಬೇಡಿಕೆ ಏನು?" ಇದು ಕಥಾನಾಯಕ ಆರ್ಥರ್ ಮುಂದಿರುವ ಪ್ರಶ್ನೆ. ಕತೆ ಜಾನಪದ ರೀತಿಯಲ್ಲಿ ಸಾಗುತ್ತದೆ. ಪ್ರಾಣ ಪಣಕ್ಕಿಟ್ಟು ಉತ್ತರ ಹುಡುಕ ಹೊರಡುತ್ತಾನೆ

ಆರ್ಥರ್. ಮತ್ತೆ ಅಲ್ಲೊಂದು ದ್ವಂದ್ವ; ಸ್ನೇಹಿತನ ಸುಖ ಹೆಚ್ಚೋ ತಾನು ಉತ್ತರ ಹುಡುಕಿ ಬದುಕುಳಿಯುವುದು ಹೆಚ್ಚೋ ಎಂಬ ಪ್ರಶ್ನೆ.

ಕೊನೆಗೂ ಜಾನಪದ ಕತೆಗಳಂತೆ ಸುಖಾಂತ. ಕುರೂಪಿ ಮಾಟಗಾತಿ ಸುಂದರಿಯಾಗುತ್ತಾಳೆ. ಅದೂ ಅವಳು ಇಷ್ಟಪಟ್ಟರೆ ಹಗಲುವೇಳೆ ಇಲ್ಲವೇ ಇರುಳು. ಆಯ್ಕೆ ಅವಳಿಗೆ ಬಿಟ್ಟದ್ದು. ನಾಯಕ ಹುಡುಕ ಹೊರಟ ಪ್ರಶ್ನೆಯ ಉತ್ತರವೂ ಸಹ ಅದೆ– "ಹೆಣ್ಣು ತನ್ನ ಒಡೆತನ ತಾನೆ ಹೊಂದುವುದು" ಎಂಬ ಸತ್ಯ.

ಇದು ಹೆನ್ರಿ ಸಹೋದರರ ಮೂಲ ಕತೆ. ಕೊನೆಯವರೆವಿಗೂ ಕುತೂಹಲ ಉಳಿಸಿಕೊಳ್ಳುವ ಕಲೆ ಎಲ್ಲ ಜಾನಪದ ಕತೆಗಳ ಮೂಲದ್ರವ್ಯ. ಇದು ಶ್ರೀ ಇಜ್ಜೇರಿಯವರ ಈ ಕತೆಯಲ್ಲಿ ಚನ್ನಾಗಿ ಮೂಡಿ ಬಂದಿದೆ. ಶ್ರೀ ಇಜ್ಜೇರಿಯವರಿಗೆ ಧನ್ಯವಾದಗಳು.

5. ಶ್ರೀ ಗಣಪತಿ ಹೆಗ್ಗಡೆ ಅವರ "ಛಂದಸ್ಸು ಹಾಗೂ ಮಾತ್ರೆಗಳು "

ಶ್ರೀ ಗಣಪತಿ ಹೆಗ್ಗಡೆಯವರು ಪ್ರತಿಬಾರಿ ವೇದಿಕೆಯಲ್ಲಿ ವ್ಯಾಕರಣ, ಛಂದಸ್ಸುಗಳ ಬಗ್ಗೆ ಬಹಳ ಸೂಕ್ತವಾದ, ಉಪಯುಕ್ತವಾದ ಬೆಳಕನು ಚೆಲ್ಲುತ್ತಾ ಬಂದಿದ್ದಾರೆ. ಈ ಬಾರಿಯೂ ಛಂದೋಬದ್ಧ ಕಾವ್ಯರಚನೆಯ ಬುನಾದಿಯಾದ ಛಂದಸ್ಸಿನ ನಿಯಮಗಳನ್ನು ತಿಳಿಸಿದ್ದಾರೆ. ಗಣಗಳು, ಈ ಗಣಗಳಲ್ಲಿನ ಹ್ರಸ್ವ, ದೀರ್ಘ ಅಕ್ಷರಗಳ ಬಗ್ಗೆ ಆರಂಭಿಸಿ ವಿವಿಧ ಗಣಗಳ ಭಗ್ಗೆ ಸವಿವರ ಚರ್ಚಿಸಿದ್ದಾರೆ. ಭಾಮಿನಿ ಷಟ್ಪದಿ, ವಾರ್ದಕ ಷಟ್ಪದಿಗಳ ಲಕ್ಷಣಗಳನ್ನು ಎಲ್ಲರಿಗು ಅರ್ಥವಾಗುವಂತೆ ತಿಳಿಸಿದ್ದಾರೆ. ಇದು ಗೀತ ರಚನೆಯಲ್ಲಿ ತೊಡಗಿದವರಿಗೆ ಅಷ್ಟೇ ಅಲ್ಲ ಎಲ್ಲರಿಗೂ ಉಪಯುಕ್ತ. ಶ್ರೀ ಗಣಪತಿ ಹೆಗ್ಗಡೆಯವರಿಗೆ ಧನ್ಯವಾದಗಳು.

6. ಶ್ರೀಮತಿ ಲಕ್ಷ್ಮೀ ವಿಠಲ್ ಅವರ "ಆಟದ ಸಾಮಾನು"

ಇದು ಶ್ರೀಮತಿ ಲಕ್ಷ್ಮೀ ವಿಠಲ್ ಅವರ ಭಾವ ಪ್ರಬಂಧ. ಅವರು ತಮ್ಮ 7 ವರ್ಷದ ಮೊಮ್ಮಗಳು, ಅಮೇರಿಕಾ ಸಂಜಾತೆ ಬಗ್ಗೆ ಬರೆಯತ್ತಾರೆ. ಅಮೇರಿಕಾದಿಂದ ಭಾರತಕ್ಕೆ ಮೊಮ್ಮಕ್ಕಳ ಜೊತೆ ವಿಮಾನ ಪ್ರಯಾಣ ಮಾಡುತ್ತಾರೆ. ಮುಖ್ಯವಾಗಿ ಆ ಮಗು ಇಷ್ಟಪಡುವ ಆಟದ ಸಾಮಗ್ರಿಗಳನ್ನು ಜೋಪಾನ ನೋಡಿಕೊಳ್ಳುವ ಪರಿಯನ್ನು ಚಿತ್ರಿಸುತ್ತಾರೆ. ಅಮೇರಿಕಾ ಮಗು ಎಂದ ಮೇಲೆ ಸ್ಟಫಿಗಳ (ಮೃದು ಆಟಿಕೆ, cuddly ಟಾಯ್ಸ್, ಸ್ಟಫ್ಡ್ ಟಾಯ್ಸ್) ಬಗ್ಗೆ ಒಲವು ಇರಲೇಬೇಕು.

ಈಗಿನ ಕಾಲದ ಮಕ್ಕಳ ಪ್ರತಿನಿಧಿಯಾಗಿ ಕಾಣುವ ಅಮೋಘ, ತನ್ನ ವಸ್ತುಗಳ ಬಗ್ಗೆ ತೋರುವ ಸಹಜ ಕಾಳಜಿ, ಎಚ್ಚರ, ಮಾಲಿಕತ್ವ (ಪೊಸೇಸೀವ್ ನೆಸ್) ಚನ್ನಾಗಿ ಚಿತ್ರಿತವಾಗಿದೆ. ತನ್ನದು ತನ್ನದೆ, ತನ್ನದಲ್ಲದ್ದು ತನಗೆ ಬೇಡ – ಇದು ಇಂದಿನ ಮಕ್ಕಳ ಲೆಕ್ಕಾಚಾರದ ಯೋಚನೆ. ಸ್ವತಂತ್ರ ಚಿಂತನೆ. ಅಮೋಘ ಕೊನೆಯಲ್ಲಿ ತಾನು ಆಡಲು ಪಡೆದಿದ್ದ ಎರಡು ಬಟ್ಟಲುಗಳನ್ನು ಅಜ್ಜಿಗೆ ಹಿಂದಿರುಗಿಸಿ ಹೊರಟಾಗ ಲೇಖಕಿಯ ಕಣ್ಣು ಒದ್ದೆಯಾಗುತ್ತದೆ. "ಹೆಚ್ಚಿನ ಸ್ವಾಧೀನ ತೋರಿದೆನಾ?" ಎಂದು ಕೇಳಿಕೊಳ್ಳುತ್ತಾರೆ. ಇಂತಹ ಪ್ರಬಂಧ ಕೊಟ್ಟ ಶ್ರೀ ಲಕ್ಷ್ಮೀ ವಿಠ್ಠಲ್ ಅವರಿಗೆ ಧನ್ಯವಾದಗಳು.

7. ಶ್ರೀಮತಿ ಶೀಲಾ ಅರಕಲಗೂಡು ಅವರ "ಓ ಮುದ್ದು ಮಗುವೇ" ಋತು ಕಾವ್ಯ

ಶ್ರೀಮತಿ ಶೀಲಾ ಅರಕಲಗೂಡು ಅವರು ಇಂದು "ಓ ಮುದ್ದು ಮಗುವೇ" ಎಂಬ ದೀರ್ಘವಾದ "ಋತು ಕಾವ್ಯ" ಪ್ರಸ್ತುತಿ ಮಾಡಿದ್ದಾರೆ. ಹೊರನೋಟಕ್ಕೆ, ಮಗುವನ್ನು ಉದ್ದೇಶಿಸಿ ಹೇಳುವ ಕವನ ಇದು. "ನಿನ್ನ ಕಂಡರೆ ಪ್ರೀತಿ

ಸೃಷ್ಟಿಗೂ ಮಗುವೆ", "ಕೆಲವೊಂದು ವಿಷಯಗಳ ತಿಳಿಸುವೆ ನಾ ನಿನಗೆ" ಎನ್ನುತ್ತಾ ಪ್ರತಿ ಋತುವಿನ ವಿಶೇಷವನ್ನು, ಸಂಭ್ರಮವನ್ನು ತಿಳಿಸುತ್ತಾರೆ. ಇಲ್ಲಿ ಎಲ್ಲ ಋತುಗಳಲ್ಲೂ ಒಂದಿಲ್ಲೊಂದು ವಿಶೇಷವನ್ನು, ಒಳಿತನ್ನು ತಿಳಿಸುತ್ತಾರೆ. "ಸೃಷ್ಟಿಯೇ ಗುರು ನಿನಗೆ ಸೃಷ್ಟಿ ಚೈತನ್ಯ ಸೆಲೆ" ಎಂದವರು, "ಸೃಷ್ಟಿ ಮರೆತರೆ ನೀನು ಅಮ್ಮನನು ಮರೆತಂತೆ" ಎಂದೂ ಕಟುವಾಗಿ ಎಚ್ಚರಿಸುತ್ತಾರೆ.

ಇವರು ಪದಗಳನ್ನು ಹುಡುಕಿ ಹೊರಡುವುದಿಲ್ಲ. ಪದಗಳೇ ಚಂದ ಬಂದು ತಮ್ಮ ತಮ್ಮ ಸಾಲುಗಳಲ್ಲಿ ಕೂರುತ್ತವೇನೋ ಎನಿಸುವಷ್ಟು ಸುಲಲಿತವಾಗಿ ಕವನ ಕಟ್ಟಿಬಿಡುತ್ತಾರೆ. ಕ್ಲಿಷ್ಟತೆ ಇಲ್ಲ. ಸಂದೇಶ ಮಾತ್ರ ದೊಡ್ಡದು. ನಾಲ್ಕು ಸಾಲುಗಳ ಪ್ರಾಸಬದ್ಧವಾಗಿ ರಚಿತವಾದ ಕವನ. ಹಾಡುವವರಿಗೆ ಹಬ್ಬ. ಇವರ ಕವನ ಓದಿದಾಗ ಕೆ.ಎಸ್.ಎನ್ ಅವರ "ಋತು ವೈಭವ" ಕವನ ನೆನಪಾಯಿತು. ಇಲ್ಲಿ ಕವಿಯತ್ರಿ ಋತುಗಳ, ಪ್ರಕೃತಿಯ ಧನಾತ್ಮಕ ಚಿತ್ರ ಮಗುವಿಗೆ ಕೊಡುತ್ತ ಹೋಗುತ್ತಾರೆ. ಕವಿಗೆ ಧನ್ಯವಾದಗಳು.

8. ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರ "ಬೇಡಿಕೆ", "ಮಾತು ಮೌನ" –ಎರಡು ಕವನಗಳು.

ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರು ಕುಟುಂಬದಲ್ಲಿನ ಪ್ರೀತಿ, ಅನ್ಯೋನ್ಯತೆಗಳ ಭಾವಪೂರ್ಣ ಚಿತ್ರಗಳನ್ನು ಕವನಗಳಲ್ಲಿ ಕಟ್ಟುವ ಪ್ರಯತ್ನಮಾಡುತ್ತಾ ಬಂದಿದ್ದಾರೆ. ಅವರ "ಬೇಡಿಕೆ" ಕವನ ಮನಮುಟ್ಟುತ್ತದೆ. ಮಗುವಿನೊಡನೆ ಮಾತನಾಡುತ್ತಿರುವ ಅಜ್ಜಿಯ ಮನದಾಳದ ಮಾತು, ಇಂಗಿತ ಇಲ್ಲಿ ಕವನವಾಗಿವೆ. ಸಹಜ ಪ್ರೀತಿ, ಆತಂಕ ಎರಡೂ ಸಹ ಕಾಣುತ್ತವೆ. ಭಾವನೆಗಳನ್ನು ಎರಕಹೊಯ್ಯಲು ಸರಳ ಸೂಕ್ತ ಪದಗಳ ಬಳಕೆಯಾಗಿದೆ.

ಅವರ ಎರಡನೆಯ ಕವನ "ಮಾತು– ಮೌನ"ದಲ್ಲಿ ಮನಸ್ಸು ಮೌನವನ್ನು ಅರೆಸುತ್ತದೆ. ಜಗತ್ತಿನ ಎಲ್ಲ ತತ್ವ ಬೋಧನೆಗಳನ್ನು ಕೇಳಿದ ಮೇಲೂ ಅನ್ಯಥಾ ಮಾತುಗಳ ಮಥನ ನಡೆದೇ ಇರುತ್ತದೆ. ಗೊಂದಲ ಕಡಿಮೆಯಾಗುವುದಿಲ್ಲ. ಮನಸ್ಸು 'ಶಬ್ದ, ಸ್ಪರ್ಶ, ರಸ ಗಂಧಗಳ ಸೆಳೆತದಿಂದ ಹೊರ ಬಂದು ಅರಿವು ಮೂಡಿ ಮೌನವಾಗಿ ಅಂತರಾಳದ ತಾಳ ಆಲಿಸಲಿ' ಎಂದು ಬಯಸುತ್ತಾರೆ. ಅಂತಃಕರಣವಷ್ಟೇ ರಚಿಸಬಲ್ಲ ಕವನಗಳು. ಕವಿಗೆ ಧನ್ಯವಾದಗಳು.

9. ಶ್ರೀಮತಿ ಶಾಂತಿ ವಾಸು ಅವರ "ಬಾಲ್ಯ ಕಾಣಿಸದ ಕನ್ನಡಿ"

ಇದು ಲವಲವಿಕೆಯಿಂದ ಪುಟಿಯುವ ಲೇಖನ. ಶೀರ್ಷಿಕೆಯೇ ಎಲ್ಲವನ್ನೂ ಹೇಳಿಬಿಡುತ್ತದೆ. ಮನೆಯ ಕನ್ನಡಿ ಇಲ್ಲಿ ಸೌಂದರ್ಯ ದಾಖಲಿಸುವ ಒಂದು ನಿಷ್ಪಕ್ಷಪಾತ ವ್ಯಕ್ತಿಯ ಸಂಕೇತವಾಗುತ್ತದೆ. ಇದು 4 ದಶಕಗಳ ಹಿಂದಿನ ಮಧ್ಯಮ ವರ್ಗದ ಸಂಪ್ರದಾಯವಾದಿ, ತುಂಬು ಕುಟುಂಬದ ಚಿತ್ರ. ಮನೆಯಲ್ಲಿ ಇರುವವರು ಬಾಡಿಗೆದಾರರನ್ನೂ ಸೇರಿಸಿ ಬರಿ ಹೆಣ್ಣುಮಕ್ಕಳೇ. ಹೆಣ್ಣುಮಕ್ಕಳ ಹಾಸ್ಟೆಲ್‌ನಂತೆ ಮನೆ ಇತ್ತು ಎನ್ನುತ್ತಾರೆ ನಿರೂಪಕಿ. ಬಾಲ್ಯದ ತನ್ನ ಸೌಂದರ್ಯವನ್ನು ನೋಡಿಕೊಳ್ಳಲು ಕನ್ನಡಿಯ ಅವಶ್ಯಕತೆ ಇದೆ. ಆದರೆ ಇರುವ ಮನೆಯ ವಾತಾವರಣದಲ್ಲಿ ಅದು ಅವಳಿಗೆಎಟುಕುತ್ತಿಲ್ಲ! ಏಳು ವರ್ಷದ ಹುಡುಗಿಯೊಬ್ಬಳಲ್ಲಿ ಇರಬಹುದಾದ ಸ್ವಪ್ರೀತಿ, ಆರೋಗ್ಯಕರ ಮತ್ತು ಸಹಜ ಈರ್ಷೆ, ಹುಡುಗಾಟಿಕೆ, ಚೇಷ್ಟೆ ಲೇಖನದಲ್ಲಿ ಕಾಣಬರುತ್ತವೆ. "ನಮ್ಮ ಮನೆ ಕನ್ನಡಿ ನಮ್ಮ ಅಪ್ಪ ನೋಡಿಕೊಳ್ಳಲು ಮಾತ್ರ ಇದ್ದದು", "ಬೇರೆಯವರ ಬಣ್ಣದ ಬಟ್ಟೆಗಳನ್ನು ನೋಡಿದಾಗ ಅವು ಚಂದ ಅನ್ನಿಸುತ್ತಿದ್ದವು" ಎಂದುಕೊಳ್ಳುತ್ತಾರೆ ನಿರೂಪಕಿ.

4-5 ದಶಕಗಳ ಹಿಂದಿನ ವಠಾರಗಳಲ್ಲಿ ಕೊಟ್ಟು-ಕೊಳ್ಳುವ ಸಂಸ್ಕೃತಿ ಬಹಳ ಅಪ್ಯಾಯಮಾನವಾಗಿತ್ತು. ಮನೆ ಮನೆಗಳ ನಡುವೆ ಗೋಡೆಗಳಲ್ಲದ, ಒಬ್ಬರ ಬಟ್ಟೆಬರೆ ಮತ್ತೊಬ್ಬರು ಧರಿಸುವ ವಾಡಿಕೆ ಇಂದಿನ ತಲೆಮಾರಿಗೆ ಆಶ್ಚರ್ಯ ತರಬಹುದು. ಓದಿಸಿಕೊಂಡು ಹೋಗುವ ಲೇಖನ ಇದು. ಲೇಖಕಿಗೆ ಧನ್ಯವಾದಗಳು.

10. ಶ್ರೀ ಬೆಂ.ಶ್ರೀ. ರವೀಂದ್ರ ಅವರ ಕವನ "ಒಡಲ ಪ್ರೀತಿ"

ಶ್ರೀ ರವೀಂದ್ರರವರ ಈ ಕವನ ಒಂದು ಸಂಕೀರ್ಣ ಮತ್ತು ಗಟ್ಟಿ ಕವನ. ನಿಘಂಟು ತೆರೆದು ನೋಡಬೇಕಾಗಿ ಬಂತು ಕೆಲವು ಪದಗಳ ಅರ್ಥಕ್ಕಾಗಿ. ಸುಲಭಕ್ಕೆ ಗುಟ್ಟು ಬಿಟ್ಟುಕೊಡುವುದಿಲ್ಲ ಕವನ. ನಾಲ್ಕಾರು ಬಾರಿ ಓದಿದ ಮೇಲೆ ಸ್ವಲ್ಪ ಗವಾಕ್ಷಿ ಸರಿದಂತಾಯಿತು. ಕವನದಲ್ಲಿ ಒಡಲ ಪ್ರೀತಿ ಅರುಹಲು ಸಾಧ್ಯವಾಗದೆ ಹೋದ ಹತಾಶೆ ಕಾಣುತ್ತದೆ. ಆದರೂ ಹೇಳಲೇಬೇಕೆನ್ನುವ ಅಧಮ್ಯ ಅಸೆ ಇದೆ. ಸಾಂಪ್ರದಾಯಿಕ ಸಂವಹನ ರೀತಿಗಳು ದಕ್ಕುತ್ತಿಲ್ಲ - 'ಕರಕಾಗಿವೆ, ಸರಕಾಗಿವೆ, ಗಿಲೀಟುಗಳಾಗಿವೆ' ಎನ್ನುತ್ತಾರೆ ಕವಿ. ರಾಶಿ ರಾಶಿ ಕೋರಿ ಕಾಗದ ಬಿದ್ದಿವೆ; ಅದೂ ಸಾಲದಾಗುವುದಿಲ್ಲ. ಕೊನೆಗೆ ಚಚಿತ್ರ ಪರದೆ ಬೇಡುತ್ತಾರೆ. ಓಲೈಕೆಯ ಓಲೆ ಎನ್ನುವಾಗ ಪನ್ ಇದೆ. ಮಾತುಗಳು ಹಾಲೆಯ ಕೆಳಗೆ ಓಲಾಡುವ ಜುಮಕಿ ಎನ್ನುತ್ತಾರೆ. ಜುಮಕಿ ಶೋಕಿಗಾಗೇ ಇರುವುದು. ಈ ಹಂತದಲ್ಲಿ ಓದಿಕೊಳ್ಳಬೇಕಾದ ಸಾಲು. "ನಿನ್ನೆದೆಯ ಗೂಡಿನಲ್ಲಿ ಮಿಡಿವ ಒಳಧ್ವನಿ ಮೊರೆತ ಕೇಳು ಸುಳ್ಳಾಡದೆ" "ಹರಿಸಿಬಿಡು ನನ್ನೆದೆಯ ಪಸೆಗೆ ಮತ್ತಷ್ಟು ಜೀವರಸ" ಈ ಸಾಲುಗಳು ಇಡೀ ಕವನದ ಆಶಯ ಹಿಡಿದಿಡುತ್ತವೆ. ಕವನ ಜೋರಾಗಿ ಓದಿಕೊಂಡರೆ ಅದರಲ್ಲಿರುವ ಆಡುಮಾತಿನ ಲಯ, ಬಿಗಿ, ಪ್ರಾಸ, ಆರ್ದ್ರತೆ ಅರಿವಾಗುತ್ತದೆ. ಈ ಬಿಗಿ ಕವನದಲ್ಲಿ "ಈಗೆಲ್ಲ ಜಟ್ಪಟ್ ಅಂತ ಸೆಟ್ ಆಗೋ ಕಾಲ" ಎನ್ನುವ ಆಂಗ್ಲ ಭಾಷೆಯ ಸಾಲು ಬೇಡವಿತ್ತಲ್ಲವೇ ? ಇಷ್ಟು ಒಳ್ಳೆ ಕವನ ಕೊಟ್ಟ ಕವಿಗೆ ಧನ್ಯವಾದಗಳು.

11. ಶ್ರೀಮತಿ ರೇಣುಕಾ ದೇಸಾಯಿಯವರ "ಜೀರ್ಣೋದ್ಧಾರ" ಪ್ರಬಂಧ

ಇವರ 'ಜೀರ್ಣೋದ್ಧಾರ' ಪ್ರಬಂಧ ಹಲವು ವಿವರಗಳಿಂದ ತುಂಬಿದೆ. ಗಮಕ ರೂಪಕ ಪರಂಪರೆಯನ್ನು ಪರಿಣಾಮಕಾರಿಯಾಗಿ ಪ್ರಯೋಗ ಮಾಡುತ್ತಿರುವ "ಗಾನ ಧಾಮ' ಸಂಸ್ಥೆಯ ಸಂಸ್ಥಾಪಕಿ ವಿದುಷಿ ಶ್ರೀಮತಿ ಜಯರಾಮ್ ಅವರ ಬಗ್ಗೆ ಬರೆದ ಲೇಖನ. ಹರಿಶ್ಚಂದ್ರ ಕಾವ್ಯ ಮುಂತಾದ ಗಮಕ ರೂಪಕಗಳನ್ನು ಅವರು ಸಿದ್ಧಗೊಳಿಸಿ ಪ್ರದರ್ಶನ ಮಾಡಿದ ಸಂಗತಿ ಇಲ್ಲಿನ ವಸ್ತು. ಇಲ್ಲಿ ಕಲಾವಿದರ ಹಾಡುಗಾರಿಕೆ, ಸಾಹಿತ್ಯ ವಾಚನ, ಕಂಠದ ಹಾವಭಾವ ಮುಖ್ಯವಾಗುತ್ತವೆ ಎನ್ನುತ್ತಾರೆ ಲೇಖಕಿ.

ಹೆಚ್ಚು ಜನಪ್ರಿಯವಲ್ಲದ ಒಂದು ಕಲಾ ಪ್ರಕಾರದ ವಿಷಯಗಳನ್ನು ಎಚ್ಚರದಿಂದ ಕಲೆಹಾಕಿ ಇಲ್ಲಿ ಪ್ರಸ್ತುತ ಪಡಿಸಿದ್ದಾರೆ. ಅವರಿಗೆ ಧನ್ಯವಾದಗಳು.

12. ಶ್ರೀಮತಿ ಸರಸ್ವತಿ ನಟರಾಜ್ ಅವರ "ಅದೇ ತಿಂತೀನಿ ಕದಾ ತೆಗಿ"

ಈ ಲೇಖನದಲ್ಲಿ ತಾಜಾತನ ಕಾಣುತ್ತದೆ - "ಅದೇ ತಿಂತೀನಿ ಕದಾ ತೆಗಿ" ಕುತೂಹಲ ಹುಟ್ಟಿಸುವ ಶೀರ್ಷಿಕೆ. ಓದುತ್ತಾ ಓದುತ್ತಾ ಕೊನೆಗೆ ಶೀರ್ಷಿಕೆಯ ಗುಟ್ಟು ತಿಳಿಯುತ್ತದೆ. ಕನ್ನಡದ ಸೀರಿಯಲ್‌ಗಳನ್ನ ನೋಡಿ ನೋಡಿ ಬೇಸತ್ತು, ಅವರಿವರ ಮೂದಲಿಕೆ ಮಾತುಗಳನ್ನು ಕೇಳಿದ ಮೇಲೆ ನೆಟ್ ಫ್ಲಿಕ್ಸ್ ಹಾಕಿಸಿಕೊಂಡ ನಿರೂಪಕಿಗೆ ಜಗತ್ತಿನ ಬೇರೆಬೇರೆ ದೇಶಗಳ ಸಿನೆಮಾ ಕತೆಗಳ ಅನಾವರಣ ಆಗುತ್ತದೆ. ಕೋರಿಯನ್ ಟಿವಿ ಸೀರಿಯಲ್ ನೋಡುವ ಪುಣ್ಯ

ಲಭ್ಯವಾಗುತ್ತದೆ! ಅಲ್ಲಿನ ಪಾತ್ರಗಳು, ಅಲ್ಲಿನ ಗೊಂದಲಮಯ ಸಂಬಂಧಗಳು, ಕ್ರಾಸ್ ಕನೆಕ್ಷನ್ನುಗಳು, ಆಸಾಂಸಾರಿಕ ಎನ್ನಬಹುದಾದ ದುರಂತ ಪರಿಸ್ಥಿತಿಯ ಚಿತ್ರಗಳು. ಇದರ ಮೇಲೆ, ಕಲಸು ಮೇಲೋಗರ ಸಂಸಾರಗಳ ಒಳಗುಟ್ಟುಗಳನ್ನು ಅರಿತುಕೊಳ್ಳಲು ಸಬ್ ಟೈಟಲ್‌ಗಳನ್ನು ಎಚ್ಚರದಿಂದ ಓದಿ ತಿಳಿದುಕೊಳ್ಳಬೇಕಾದ ಕಷ್ಟ ಇವೆಲ್ಲವನ್ನು ಚನ್ನಾಗಿ ಮನದಟ್ಟು ಮಾಡಿಸುತ್ತಾರೆ .ಲೇಖನ ಹಲವು ಕಾರಣಗಳಿಗೆ ಎರಡೆರಡು ಬಾರಿ ಓದಿಸಿಕೊಳ್ಳುತ್ತದೆ. ಇದು ಲೇಖಕಿ ಬೇಕೆಂದೇ ಸೃಷ್ಟಿಸುವ ತಂತ್ರ ಎಂದು ತಿಳಿಯುತ್ತೇನೆ.

ಕೊನೆಗೆ ಜ್ಞಾನೋದಯ. ಹೊರಜಗತ್ತಿನ ಕಥೆಗಳಲ್ಲೂ ದೋಸೆ ತೂತೆ. ಇಲ್ಲಿನಂತೆಯೇ ಅವು ಸಹ ಪೊಳ್ಳು, ಈರ್ಷೆ, ಅಸೂಯೆ, ದ್ವೇಷ ತುಂಬಿದ ಕೊಡಗಳು. ಇವೆಲ್ಲ ಬೇಡವೇ ಬೇಡ ಎಂದು ಅರಿವಾಗುವಲ್ಲಿ "ಕದ ತೆಗಿ" ಎಂಬ ಮಾತು ಬರುತ್ತದೆ. ಇಂತಹ ಸಂದಿಗ್ದ ಚಿತ್ರಗಳನ್ನು ಬರೆಯುವುದು ಕಷ್ಟವೇ. ಬಹಳ ಎಚ್ಚರದಿಂದ ಬರೆದು ತಾವು ಪಟ್ಟ ಕಷ್ಟಗಳನ್ನು ಸಮರ್ಥವಾಗಿ ಓದುಗರಿಗೆ ರವಾನಿಸುತ್ತಾರೆ ಲೇಖಕಿ. ಇಂತಹ ಪ್ರಹಸನ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

13. ಶ್ರೀಮತಿ ಶ್ರವಣಕುಮಾರಿ ಅವರ " ಬದುಕು-ಬರಹ' ಕತೆ

ಶ್ರೀಮತಿ ಶ್ರವಣಕುಮಾರಿ ಅವರು ನುರಿತ ಕತೆಗಾರ್ತಿ. ಅವರು ಭಾಷೆಯನ್ನು ಸಮರ್ಥ ದುಡಿಸಿಕೊಳ್ಳುವದನ್ನು ಈ ವೇದಿಕೆ ನೋಡಿದೆ. ಇಂದಿನ "ಬದುಕು-ಬರಹ" ಅವರ ಎಲ್ಲ ಕತೆಗಳಂತೆ ಸರಾಗ ಓದಿಸಿಕೊಂಡು ಹೋಗುತ್ತಾ ಸಾಗುವ ಕತೆ. ಕೊನೆಯಲ್ಲಿ ಏನಾಗುವುದು ಎಂಬ ಕುತೂಹಲವನ್ನು ಹಾಗೆಯೇ ಉಳಿಸಿಕೊಳ್ಳುತ್ತದೆ. ಕತೆಯಲ್ಲಿನ ನಿರೂಪಕಿ ದೊಡ್ಡ ಲೇಖಕಿ. ಅವಳಿಗೆ ಸಿಗುವ ವಿಶೇಷ ಸನ್ಮಾನ ಕಾರ್ಯಕ್ರಮಕ್ಕೆ ಬಾರದೆ ಹೊಗುವ ಅವಳ ಪತಿರಾಯ. ವಿಜೃಂಭಣೆಯಿಂದ ಸನ್ಮಾನಿತಳಾದವಳು ಕೊನೆಗೆ ನೊಂದು ಬೆಂದು ಕುಪಿತಳಾಗಿ ಆಟೋ ಹುಡುಕಿ ಮನೆ ಸೇರಬೇಕಾಗುವ ಪಜೀತಿ. ಕತೆಯಲ್ಲಿ ನವ ದಂಪತಿಗಳ ನಡುವಿನ ಸಹಜ ಪ್ರೀತಿ, ಕಿತ್ತಾಟ, ವಿರಸ ಎಲ್ಲ ಇವೆ. ಈ ಎಲ್ಲ ಚಿತ್ರಗಳನ್ನು ಬರೆಯುವಾಗಲು ಪ್ರತಿ ದೃಶ್ಯವನ್ನು ಅಚ್ಚುಕಟ್ಟಾಗಿ ಸವಿವರಗಳಿಂದ ಕಣ್ಣಿಗೆ ಕಟ್ಟುವಂತೆ ವ್ಯವಧಾನದಿಂದ ಬಿಡಿಸಿ ಹೇಳುತ್ತಾರೆ ಲೇಖಕಿ. ಇದು ಗಮನೀಯ.ಒಳ್ಳೆಯ ಕತೆ ಕೊಟ್ಟ ಶ್ರೀಮತಿ ಶ್ರವಣಕುಮಾರಿ ಅವರಿಗೆ ಧನ್ಯವಾದಗಳು.

14. ಶ್ರೀ ಕೆ.ಎನ್. ಭಗವಾನ್ ಅವರ "ನಾಮದ ಬಲ"

"ನಾಮದ ಬಲ" ಒಂದು ಪ್ರಹಸನ. ನಾಮದ ಬಲದಿಂದ ಅನಿರೀಕ್ಷಿತವಾಗಿ ಕೆಲವೊಮ್ಮೆ ಬಹಳಷ್ಟು ಸಾಧ್ಯವಾಗಿ ಬಿಡುತ್ತವೆ ಎಂದು ಉದಾಹರಣೆಗಳಿಂದ ಹೇಳುವ ಲೇಖನ. ಕೇವಲ ಇನಿಷಿಯಲ್ ಕಾಕತಾಳೀಯವಾಗಿ ತನ್ನ ಬಾಸ್ ಹೆಸರಿನೊಂದಿಗೆ ತನ್ನ ಹೆಸರು ತಾಳೆಯಾಗಿ, ಅದರಿಂದ ಇಲಾಖೆಯ ಇತರರು ಇವರನ್ನು ನೋಡುವ ದೃಷ್ಟಿಯೇ ಬದಲಾಗುತ್ತದೆ. ಗೌರವ, ಸಂಶಯ, ಗುಮಾನಿ ಎಲ್ಲವೂ ಕಾಣುತ್ತವೆ. ಉತ್ತಮ ಲೇಖನಕ್ಕಾಗಿ ಧನ್ಯವಾದಗಳು.

15. ಶ್ರೀ ಹು.ವಾ. ಶ್ರೀಪ್ರಕಾಶ್ ಅವರ ಪ್ರಬಂಧ "ಮ್ಯಾಡಿಸನ್ ಎಂಬ ಹುಡುಗಿ"

ಶ್ರೀ ಪ್ರಕಾಶ್ ಅವರು ತಮ್ಮ ಮೊಮ್ಮಗಳ ಓರಿಗೆಯವಳಾದ ಮ್ಯಾಡಿಸನ್ ಎಂಬ ಏಳು ವರ್ಷದ ಕೆನಡಿಯನ್ ಹುಡುಗಿ ಬಗ್ಗೆ ಬರೆಯುತ್ತಾರೆ. ಇದು ಆ ಮಗುವಿನ ಸುತ್ತ ಆತ್ಮೀಯತೆಯಿಂದ ಬೆರಗಿನಿಂದ ಹೆಣೆದ ಭಾವಪೂರ್ಣ ಲೇಖನ. ಆ ಮಗುವಿಗೆ ಉದ್ದ ಲಂಗ, ಬಳೆ ಸಹ ಭಾರತದಿಂದ ಕೊಂಡೊಯ್ಯುತ್ತಾರೆ. ಲೇಖನ ಆಹ್ಲಾದಕರವಾಗಿ ಓಡಿಸಿಕೊಂಡು ಹೋಗುತ್ತದೆ. ಹಾಗೆ ಬರೆಯುತ್ತ ಪ್ರಾಸಂಗಿಕವಾಗಿ ಕೆನಡಾ ಜೀವನ ಶೈಲಿಯ ಬಗ್ಗೆ ಸಹ ವಿವರಣೆ

ನೀಡುತ್ತಾರೆ. ಮ್ಯಾಡಿಸನ್ ಹುಡುಗಿ ಕೊನೆಗೆ ಕೇರಂ ಆಡುತ್ತ "ಅಜ್ಜಾ" ಎಂದಾಗ ಇವರು ಕರಗಿ "ಅವಳ ಅಪ್ಪಿಕೊಂಡೆ"ಎನ್ನುವಲ್ಲಿ ಹೇಗೆ ಭಿನ್ನ ಸಂಸ್ಕೃತಿಯಲ್ಲಿ ಬೆಳೆದ ಮಕ್ಕಳು ಹಿರಿಯರ ಮನಸ್ಸನ್ನು ಗೆಲ್ಲುತ್ತಾರೆ ಎನ್ನುವುದಕ್ಕೆ ಸಾಕ್ಷಿಯಾಗುತ್ತದೆ ಲೇಖನ. ಶ್ರೀ ಪ್ರಕಾಶ್ ಅವರಿಗೆ ಧನ್ಯವಾದಗಳು.

16. ಶ್ರೀಮತಿ ಮಾಧುರಿ ಕೃಷ್ಣ ಅವರ "ನಾನೂ ನನ್ನ ಸಹಪಾಠಿ ಮಿತ್ರನೂ"

ಶ್ರೀಮತಿ ಮಾಧುರಿ ಕೃಷ್ಣ ಅವರು ತಮ್ಮ 5 ದಶಕಗಳ ಹಿಂದಿನ ಸಹಪಾಠಿಯನ್ನು ಭೇಟಿ ಮಾಡಿದ ವಿವರಗಳನ್ನು ಬಿಡಿಸಿಡುತ್ತಾರೆ. ಸುಲಲಿತ ಓದಿಸಿಕೊಳ್ಳುವ ಲವಲವಿಕೆಯ ಲೇಖನ ಇದು. ಕೆಲವೊಮ್ಮೆ ಘಟನೆಗಳಿಗಿಂತ ಅವುಗಳ ನೆನಪು ಹೆಚ್ಚು ಚೇತೋಹಾರಿಯಾಗುತ್ತದೆ. ನಿರ್ಭಾವುಕರಾಗಿ ಮತ್ತದೇ ಘಟನೆಯಲ್ಲಿ ಮಾನಸಿಕವಾಗಿ ಪಾಲುಗೊಳ್ಳುವುದು ಇಷ್ಟವಾಗುತ್ತದೆ. ಏಕೆಂದರೆ ಅ ಘಟನೆ ಹೇಗೆ ಅಂತ್ಯಗೊಳ್ಳುತ್ತದೆ ಎಂದು ನಮಗೆ ತಿಳಿದಿರುತ್ತದೆ. ಇಲ್ಲಿ ಲೇಖಕಿ ಸಹಪಾಠಿಯ ಮನೆಗೆ ಹೋಗಿ ಕುಶಲೋಪರಿ ಮುಗಿಸಿ ಹಿಂದಿನ ಘಟನೆಯೊಂದನ್ನು ಅನಾವರಣ ಮಾಡುತ್ತಾರೆ. ಮತ್ತದೇ ಹಿಂದಿನ ಸಲಿಗೆಯ ಮಾತುಗಳು ಮುದ ತರುತ್ತವೆ. ಲೇಖಕಿಗೆ ಧನ್ಯವಾದಗಳು.

17. ವೆಂಕಟೇಶ್ ಕಾಮತ್ ಅವರ "ಆಟೋ ಪುರಾಣ"

ಶ್ರೀ ವೆಂಕಟೇಶ್ ಕಾಮತ್ ಅವರು "ಆಟೋ ಪುರಾಣ"ದ ಮೊದಲ ಭಾಗ ಪ್ರಸ್ತುತಿಮಾಡಿದ್ದಾರೆ. ಈ ಆಟೋ ರಿಕ್ಷಾಗಳು ನಮ್ಮ ಬದುಕಿನಲ್ಲಿ ಪ್ರವೇಶ ಮಾಡಿದ ಹಂತಗಳನ್ನು ಹೆಕ್ಕಿ ತೆಗೆದು ಹಂಚಿಕೊಂಡಿದ್ದಾರೆ. 1950 ರಲ್ಲಿ ಮೊದಲ ಆಟೋ ಬೆಂಗಳೂರಿನಲ್ಲಿ ರಸ್ತೆಗಿಳಿಯಿತು ಎನ್ನುತ್ತಾರೆ. ಬಡ, ಮಧ್ಯಮ ವರ್ಗಕ್ಕೆ ಮೀಸಲಾದ ವಾಹನ ಇದು. ಆಟೋಗಳಿಗೆ ಶಂಕರನಾಗ್ ಅಂತಹ ಸಿನೆಮಾ ನಟರುಗಳು ಬ್ರಾಂಡ್ ಅಂಬಾಸಿಡರ್‌ಗಳಾದರು. ಆದರೂ ಏಕೋ ಆಟೋಗಳು ಇಂದಿಗೂ ಹಾಗೆಯೇ ಉಳಿದಿವೆ. ಲೇಖಕರು ಮುಂದಿನ ಭಾಗದಲ್ಲಿ ಈ ಬಗ್ಗೆಹೆಚ್ಚು ಕುತೂಹಲಕರ ವಿಷಯಗಳನ್ನು ಹೊರತರಬಹುದು ಎಂದು ಆಶಿಸಬಹುದು.

18. ಡಾ. ಶುಭಶ್ರೀ ಪ್ರಸಾದ್ ಅವರ "ಮುದ್ದಣ ಮನೋರಮೆಯರು ಮುದ್ದೆ ತಿರುವಿದ್ದು"

ಡಾ. ಶುಭಶ್ರೀ ಪ್ರಸಾದ್ ಅವರ "ಮುದ್ದಣ ಮನೋರಮೆಯರು ಮುದ್ದೆ ತಿರುವಿದ್ದು" ಇದು ಮುದ್ದೆ ಪ್ರಕರಣದ ಬಗ್ಗೆ ಬರೆದ ಲಲಿತ ಪ್ರಬಂಧ. ಅನ್ಯೋನ್ಯ ಗಂಡ ಹೆಂಡಿರ ನಡುವೆ ನಡೆಯುವ ಸರಸ, ವಾಕ್ಯುದ್ಧಗಳು ಪ್ರಬಂಧದ ತುಂಬಾ ನವಿರಾಗಿ ಹೆಣೆದುಕೊಂಡಿವೆ. ಇವರ ಅನ್ಯೋನ್ಯತೆಯನ್ನು ನೋಡಿಯೇ ಮನೆಯವರಿಂದ ಇವರಿಗೆ "ಮುದ್ದಣ ಮನೋರಮೆ" ಎನ್ನುವ ಗುಣವಾಚಕ ಸೇರಿಕೊಳ್ಳುತ್ತದೆ. ರಟ್ಟೆ ಮುರಿದು ದುಡಿಯುವ ಮಂಡ್ಯದ ಮಂದಿಗೆ ಮುದ್ದೆ ಸಾರು, ಉಪ್ಪೆಸರು, ತಂಪು ಮಜ್ಜಿಗೆ ಇರಲೇಬೇಕು ಎನ್ನುತ್ತಾರೆ ಲೇಖಕಿ. ಅಷ್ಟೇ ಅಲ್ಲ, ಮುದ್ದೆ ಮಾಡುವುದನ್ನು ಕಲಿಯದಿದ್ದರೆ ಹೇಗೆ? ಆರಂಭಿಸಿಯೇ ಬಿಡುತ್ತಾರೆ. ದಂಪತಿಗಳಿಗೆ ಮುದ್ದೆ ಮಾಡುವ ಉತ್ಸಾಹ ಬಂದ ಕೂಡಲೇ, ಸಂಶೋಧನೆ ನಡೆದು ಕೊನೆಗೊಮ್ಮೆ ಅಡುಗೆ ಮನೆಯಲ್ಲಿ ಇಬ್ಬರೂ ಜೊತೆಗೂಡಿ ಮುದ್ದೆ ಮಾಡುವ ಪ್ರಯೋಗ ಸಹ ನಡೆಯುತ್ತದೆ.

ಮುದ್ದೆ ಮಾಡುವುದು ಸುಲಭ, ಸರಿಯಾಗಿ ಕಲಿತ ಮೇಲೆ. ಸ್ವಲ್ಪ ಅಳತೆ ತಪ್ಪಿದರೂ ಕೆಡುತ್ತದೆ ಪಾಕ. ಇಲ್ಲಿ ನಡೆಯುವುದೂ ಅದೇ. ಗಮನ ಕೊಡಲಿಲ್ಲ ಎಂದು ನಮ್ಮ ಮುದ್ದೆ ಮಹಾಶಯ ಸೆಟೆದು ಮುಖ ಮೈಯೆಲ್ಲಾ ಗಂಟು ಮಾಡಿಕೊಂಡು ಕೂತಿದ್ದ" ಎನ್ನುತ್ತಾರೆ. ಇಡೀ ಪ್ರಬಂಧ ತೆಳು ಹಾಸ್ಯದಲ್ಲಿ ಸಾಗುತ್ತದೆ. ಲೇಖಕಿಗೆ ಧನ್ಯವಾದಗಳು.

19. ಶ್ರೀಮತಿ ಮಾನಸ ಕೆ.ಕೆ. ಅವರ ಕವನ "ಮರೆಯಲ್ಲಿಹನು ದೇವರು"

ದೇವರು ಎಲ್ಲೆಡೆ ಇದ್ದಾನೆ ಎನ್ನುವ ವಿಚಾರವನ್ನು ಸರಳ ಮಾತುಗಳಲ್ಲಿ ಹೇಳುತ್ತಾ ಹೋಗುತ್ತಾರೆ. ಕವನ ಹೆಚ್ಚಿನ ಅರ್ಥ ಹೊತ್ತಿದೆ. "ಎಚ್ಚರಿಸಬೇಕಷ್ಟೆ ಮನದ ಗುಡಿ ಗಂಟಾನಾದವ" ಎನ್ನುತ್ತಾರೆ ಕೊನೆಗೆ. ಕವನ ಇನ್ನು ಬಿಗಿಯಾಗಬಹುದು. ಕವನದಲ್ಲಿ ಬಳಸಿದ –ನರಳಾಪ, ಸಹೃದಯದ, ಏಕಾಂತಿದಿ ಪದಗಳು ಆತುರದಲ್ಲಿ ಸೇರಿಕೊಂಡಂತೆ ಕಾಣುತ್ತವೆ. ಕವಯಿತ್ರಿಗೆ ಧನ್ಯವಾದಗಳು.

ಇನ್ನು ಮಾತು ಮುಗಿಸುವ ಮುನ್ನ ಎರಡು ಮಾತು. ಈ ವೇದಿಕೆಯಲ್ಲಿ ಎಲ್ಲ ರೀತಿಯ ಸಾಹಿತ್ಯ ಪ್ರಕಾರಗಳನ್ನು ಕಂಡಿದ್ದೇನೆ. ಆನಂದಿಸಿದ್ದೇನೆ. ಇದು ಮಿನಿ ವಿಶ್ವವಿದ್ಯಾಲಯದಂತೆ ನನಗೆ ಕಂಡಿದೆ. ಗದ್ಯ ಪದ್ಯ, ವಿದ್ವತ್ ಲೇಖನಗಳು, ವಿಮರ್ಶೆ, ಹಾಸ್ಯ ಲೇಖನಗಳು ಮಿಳಿತವಾಗಿವೆ. ಛಂದೋಬದ್ಧ ರಚನೆಗಳು; ನವೋದಯ, ನವ್ಯ ಪ್ರಕಾರದ ರಚನೆಗಳು ಸಹ ಇಲ್ಲಿವೆ. ಪಾರಮಾರ್ಥಿಕ ಚಿಂತನೆಗಳು, ಸೌಂದರ್ಯೋಪಾಸನೆಯ, ಬದುಕಿನ ಸುಂದರ ಕ್ಷಣಗಳನ್ನು ಹೆಕ್ಕಿ ಆರಾಧಿಸುವ ಕವನ, ಲೇಖನಗಳು ದೊರೆತಿವೆ. ನಿಸರ್ಗ ಚೆಲುವಿನ ಆರಾಧನೆಯ, ಆನಂದ ಕೊಡುವ ರಚನೆಗಳು ಸಹ ಹೇರಳ.

ಮತ್ತೊಂದೆಡೆ ನೋವು–ನಲಿವು, ಬಡವ–ಶ್ರೀಮಂತ, ಮೇಲು–ಕೀಳು, ಗಂಡು–ಹೆಣ್ಣು ಹೀಗೆ ಹಲವು ಜಿಜ್ಞಾಸೆಗಳ ಸುತ್ತ ಹೆಣೆದ ಸಮಾಜಮುಖಿ ರಚನೆಗಳು ಕಂಡಿವೆ. ಎಲ್ಲವನ್ನು ಪ್ರಶ್ನಿಸುವ, ವಿಶ್ಲೇಷಿಸುವ ಮನೋಧರ್ಮದ, ಎಲ್ಲ ಸಂವೇದನೆಗಳಿಗೆ ಸ್ಪಂದಿಸುವ ರಚನೆಗಳನ್ನು ಓದಿ ಆನಂದಿಸಿದ್ದೇನೆ. ಮನುಷ್ಯನ ಅತಿಸೂಕ್ಷ್ಮ ಭಾವನೆಗಳು ಅಭಿವ್ಯಕ್ತಗೊಂಡಿವೆ.

ನವ್ಯ ಕಾವ್ಯ, ಕವಿಗೆ ತನ್ನಲ್ಲಿರುವ ಹೊಳಹನ್ನು ಹೊರತರುವ ಪ್ರಯತ್ನದಲ್ಲಿ ಸಫಲತೆ ತಂದು ಕವಿಯ ಮನಸ್ಸನ್ನು ಹಗುರ ಮಾಡಿದರೆ, ನವೋದಯ ಕಾವ್ಯ, ಪ್ರಾಸ, ಲಯದ ಜೊತೆಗೆ ಗೇಯತೆಯ ಕಡೆಗೂ ಗಮನವಿಟ್ಟುಕೊಂಡು ಹೆಚ್ಚು ಜನರ ನಾಲಗೆಯಲ್ಲಿ ಕವಿತೆ ಗುನುನುಣಿಸುವಂತೆ ಮಾಡುತ್ತದೆ. ಭಾಷೆ ಉಳಿಯಬೇಕೆಂದರೆ ನವೋದಯ ಶೈಲಿ ಮತ್ತೆ ಬೇಕೇನೋ. ಮನದ ಅಳಲುಗಳನ್ನು ಬಣ್ಣ ಹಚ್ಚದೆ ಹೊರಗೆಡವಲು, ಆತ್ಮಸಂವಾದಕ್ಕೆ ನವ್ಯವೇ ಬೇಕೇನೋ.

ಈ ಎರಡೂ ಮನೋಧರ್ಮದ ರಚನೆಗಳು ವೇದಿಕೆಯ ಕುಲುಮೆಯಲ್ಲಿ ಇನ್ನೂ ಹೆಚ್ಚಿ ವೇದಿಕೆಗೆ ಹೆಚ್ಚಿನ ಬೆಳಕು ತರುತ್ತವೆಂದು ಆಶಿಸೋಣ. ನನಗೆ ಅವಕಾಶ ಮಾಡಿಕೊಟ್ಟ ಸಂಚಾಲಕರಿಗೆ, ಕೇಳಿದ ನಿಮಗೆ ಧನ್ಯವಾದಗಳನ್ನು ಹೇಳುತ್ತೇನೆ.

ಜೈ ಹಿಂದ್ ಜೈ ಕರ್ನಾಟಕ

***